ಕೆ.ಎ. ಕೃಷ್ಣಸ್ವಾಮಿ ಅಯ್ಯರ್‌ರವರ

# ವೇದಾಂತ ಲೇಖನಗಳು



ಕೆ.ಎ. ಕೃಷ್ಣಸ್ವಾಮಿ ಅಯ್ಯರ್‌ರವರು


**ಅಧ್ಯಾತ್ಮಪ್ರಕಾಶ ಕಾರ್ಯಾಲಯ**

ಹೊಳೆನರಸೀಪುರ - 573 211

ದೂರವಾಣಿ: 08175-273820

ಬೆಂಗಳೂರುಶಾಖೆ :

ನಂ. 68, (ಹೊಸ ನಂ. 6), ಎ.ಪಿ.ಕೆ. ರಸ್ತೆ,

2ನೇ ಬ್ಲಾಕ್, ತ್ಯಾಗರಾಜನಗರ, ಬೆಂಗಳೂರು - 28.

ದೂರವಾಣಿ : 080-2676 5548

2015

# ಸಂಸ್ಥಾಪಕರ ಸ್ಮರಣೆ



ವೇದಧರ್ಮದ ಪುನರುತ್ಥಾನ ಮತ್ತು ವೇದಾಂತಕ್ಕೊಂದು ನವಚೇತನ ತುಂಬಿದ ಮಹತ್ಕಾರ್ಯದಿಂದ ಶ್ರೀ ಶಂಕರ ಭಗವತ್ಪಾದರು ಸರ್ವದಾ ಸ್ಮರಣೀಯರು. ಬ್ರಹ್ಮೀಭೂತ ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳು (ಪೂರ್ವಾಶ್ರಮದ ಶ್ರೀಯಲ್ಲಂಬಳಸೆ ಸುಬ್ರಹ್ಮಣ್ಯ ಶರ್ಮರು - ವೈ. ಸುಬ್ಬರಾಯರು, ಜನನ 5.1.1880) ಶ್ರೀಶಂಕರವೇದಾಂತ ಸರಣಿಯಿಂದ ಆಕರ್ಷಿತರಾಗಿ, ಆಳವಾದ ಅಧ್ಯಯನ, ಚಿಂತನ-ಮಂಥನಗಳಿಂದ, ತಮ್ಮ ವಿಶಿಷ್ಟ ಸಂಶೋಧನಾಪ್ರವೃತ್ತಿಯನ್ನು ಬಳಸಿ, ಶಂಕರರ ಅಮೋಘವಾದ ಪ್ರಸ್ಥಾನತ್ರಯಭಾಷ್ಯಗಳಿಗೆ ಹತ್ತಿದ್ದ ಕೊಳೆಯನ್ನು, ಮುತ್ತಿದ್ದಧೂಳನ್ನು ತೊಡೆದು ಶಾಂಕರ ವೇದಾಂತದ ನೈಜತಿರುಳನ್ನು ಕಂಡುಕೊಂಡರು. ಶಾಂಕರವೇದಾಂತಕ್ಕೆ 20ನೇ ಶತಮಾನದ ಅಧಿಕೃತ ವಕ್ತಾರರಾದರು, ಅಭಿನವಶಂಕರರಾದರು.

'ಬೆಳಿಗ್ಗೆ ಎದ್ದಾಗಿನಿಂದ ಮಲಗುವವರೆಗೂ ಹಾಗೂ ಹುಟ್ಟಿನಿಂದ ಬದುಕಿರುವವರೆಗೂ ವೇದಾಂತ ಚಿಂತನೆಯಿಂದಲೇ ಕಾಲವನ್ನು ಕಳೆಯಬೇಕು' ಎಂಬ ಅಭಿಯುಕ್ತರ ವಚನಕ್ಕೆ ಪ್ರತ್ಯಕ್ಷ ಉದಾಹರಣೆಯಾಗಿದ್ದ ಶ್ರೀ ಶ್ರೀಗಳವರು ತಮ್ಮ ಬಾಲ್ಯದಿಂದ 96ನೆಯ ವಯಸ್ಸಿನವರೆಗೂ ವೇದಾಂತಗ್ರಂಥ ಪಠನ, ಚಿಂತನ, ಪ್ರವಚನ, ಲೇಖನಗಳಲ್ಲಿ ತತ್ಪರರಾಗಿದ್ದ ಪುರುಷ ಸರಸ್ವತೀ ಎಂಬ ಅನ್ವರ್ಥ ನಾಮವನ್ನು ಹೊಂದಿದ್ದರು. ಅವರ ಕನ್ನಡ, ಇಂಗ್ಲಿಷ್, ಸಂಸ್ಕೃತ ಭಾಷೆಗಳ ಇನ್ನೂರಕ್ಕೂ ಮೀರಿದ ಕೃತಿಗಳು ವೇದಾಂತಪ್ರಪಂಚದಲ್ಲಿ ಅವರನ್ನು ಅಮರರನ್ನಾಗಿಸಿವೆ. ಸಂಸ್ಕೃತ ಬಾರದ ಅಧ್ಯಾತ್ಮ ವಿಚಾರದ ಜಿಜ್ಞಾಸುಗಳಿಗೆ ಒಂದು ವರಪ್ರದಾನವಾಗಿದೆ.

ಶಾಲಾ ಉಪಾಧ್ಯಾಯರಾಗಿ ಸೇವೆ ಸಲ್ಲಿಸುವಾಗಲೇ ಅಧ್ಯಾತ್ಮದ ಒಲವಿನಿಂದ ಸಂಸ್ಕೃತ ಕಲಿತು ಸಾಧಕರಾದರು. ಆ ಸಮಯದಲ್ಲಿ ಶ್ರೀ ಹೊಸಕೆರೆ ಚಿದಂಬರಯ್ಯನವರ, ಶ್ರೀ ಮಹಾಭಾಗವತರಸಂಪರ್ಕ, ಅಧ್ಯಾತ್ಮಬಾಂಧವ್ಯ, ಆತ್ಮೀಯತೇ, ಅನಂತರ ಶ್ರೀಗೋಂದಾವಳಿ ಮಹಾರಾಜರಲ್ಲಿ ಶ್ರೀರಾಮತಾರಕ ಮಂತ್ರೋಪದೇಶ, ಶೃಂಗೇರಿ ಜಗದ್ಗುರುಗಳಾದ ಶ್ರೀಸಚ್ಚಿದಾನಂದಶಿವಾಭಿನವನೃಸಿಂಹಭಾರತಿ ಮಹಾಸ್ವಾಮಿಗಳವರಿಂದ ಭಾಷ್ಯಶಾಂತಿಪಾಠಗಳು ಅವರ ಶ್ರದ್ಧಾಕಾರ್ಯತತ್ಪರತೆಗೆ ಮೆರಗನ್ನು ನೀಡಿದವು.

1937ರಲ್ಲಿ ಹೊಳೆನರಸೀಪುರದಲ್ಲಿ ನೆಲೆಸಿದ ಮೇಲೆ ತಮ್ಮನ್ನು ಪೂರ್ಣವಾಗಿ ಶಾಂಕರವೇದಾಂತಕ್ಕೆ ಅರ್ಪಿಸಿಕೊಂಡರು. 1948ರಲ್ಲಿ ಸಂನ್ಯಾಸಸ್ವೀಕಾರ ಮಾಡಿದರು. ಶುದ್ಧತತ್ತ್ವಾನ್ವೇಷಣೆ, ನಿಖರವಾದ ಬರವಣಿಗೆ, ಆಚಾರನಿಷ್ಠೆ ಮತ್ತು ಕಠೋರನಿಯಮಪಾಲನೆಗೆ ಶ್ರೀ ಶ್ರೀಗಳವರು ಹೆಸರಾದವರು. ಅವರು ಸ್ಥಾಪಿಸಿರುವ (1920) ಅಧ್ಯಾತ್ಮಪ್ರಕಾಶಕಾರ್ಯಾಲಯವು ಈಗಲೂ ನಿಜವಾದ ಅಧ್ಯಾತ್ಮವಿದ್ಯಾಪ್ರಸಾರ ಕೇಂದ್ರವಾಗಿದೆ.

ಪೂಜ್ಯರು 1975ನೇ ಆಗಸ್ಟ್ 5ರಂದು ಬ್ರಹ್ಮೀಭೂತರಾದರು. ಇವರ ಮಹಾಸಮಾಧಿ ಪೀಠವು ಹೊಳೆನರಸೀಪುರದಲ್ಲಿದೆ. ಇಂದಿಗೂ ಚೈತನ್ಯಸ್ವರೂಪಿಗಳಾಗಿ ಕಾರ್ಯಾಲಯದ ಮೂಲ ಶಕ್ತಿಯಾಗಿದ್ದಾರೆ.

ಈಚೆಗೆ 28.07.2008ರಂದು ಪ್ರತಿಷ್ಠೆಗೊಂಡ ಶ್ರೀ ಶ್ರೀಗಳವರ ಅಮೃತಶಿಲಾವಿಗ್ರಹವು ಹೊಳೆನರಸೀಪುರದ ಸಮಾಧಿಮಂದಿರದಲ್ಲಿ ರಾರಾಜಿಸುತ್ತಿದೆ.

**H. N. PURA : e-mail: secretary@adhyatmaprakasha.org. / www.adhyatmaprakasha.org.**
**BANGALORE : email: shankara.bhaskar@gmail.com / www.adhyatmaprakasha.blogspot.com**

ಕೆ.ಎ. ಕೃಷ್ಣಸ್ವಾಮಿ ಅಯ್ಯರ್‌ರವರ

# ವೇದಾಂತ ಲೇಖನಗಳು


ಬರೆದವರು :

ಕೆ.ಎ. ಕೃಷ್ಣಸ್ವಾಮಿ ಅಯ್ಯರ್



ಕ್ರಮಾಂಕ : 265

ಅಧ್ಯಾತ್ಮಪ್ರಕಾಶಕಾರ್ಯಾಲಯ, ಹೊಳೆನರಸೀಪುರ-573211

ದೂರವಾಣಿ : 08175-273820

www.adhyatma prakasha.org

email: secretary@adhyatmaprakasha.org

ಬೆಂಗಳೂರು ಶಾಖೆ :

ನಂ. 68, (ಹೊಸ ನಂ.6), ಎ.ಪಿ.ಕೆ. ರಸ್ತೆ, 2ನೇ ಬ್ಲಾಕ್,

ತ್ಯಾಗರಾಜನಗರ, ಬೆಂಗಳೂರು - 28. ದೂರವಾಣಿ : 080-26765548

email: shankara.bhaskara@gmail.com

2015

**VEDANTA LEKHANAGALU** - Written by **K.A. Krishnaswamy Iyer,** Published in **Adhyatma Prakasha Magzines;** Now Collected & Published by **Adhyatma Prakasha Karyalaya, Holenarasipura - 573211, India.**

Phone : 08175-273820
website : www.adhyatma prakasha.org
email : secretary@adhyatmaprakasha.org

ಇದರ ಹಕ್ಕುಗಳೆಲ್ಲವೂ ಅಧ್ಯಾತ್ಮಪ್ರಕಾಶಕಾರ್ಯಾಲಯದವು

All Rights Reserved

ಮೊದಲನೆಯ ಮುದ್ರಣ : **2015 - 1,000** ಪ್ರತಿಗಳು

ಮುದ್ರಣ ಕಾಗದ : **70 GSM NS Maplitho**

ಪುಟಗಳು : **12+102 =114**

ಬೆಲೆ : **ರೂ. 30/-**

*ಪ್ರತಿಗಳು ದೊರೆಯುವ ಸ್ಥಳ :*

**ಅಧ್ಯಾತ್ಮಪ್ರಕಾಶಕಾರ್ಯಾಲಯ**
**ಹೊಳೆನರಸೀಪುರ-573211**
**ದೂರವಾಣಿ : 08175-273820**
**ಬೆಂಗಳೂರು ಶಾಖೆ :**
ತ್ಯಾಗರಾಜನಗರ, ಬೆಂಗಳೂರು-560 028.
ದೂರವಾಣಿ : 080-26765548

*ಅಕ್ಷರ ಜೋಡಣೆ ಮತ್ತು ಮುದ್ರಣ ಸ್ಥಾನ :*

ಶ್ರೀರಾಮ ಪ್ರಿಂಟರ್ಸ್,
ನಂ. 25, 15ನೇ ಕ್ರಾಸ್, 5ನೇ ಮೇನ್, ಶ್ರೀನಿಧಿ ಲೇಔಟ್,
ಬೆಂಗಳೂರು-62. **ಮೊಬೈಲ್ : 98453 46197**

# ಪ್ರಕಾಶಕರ ಮುನ್ನುಡಿ

ಶ್ರೀ ಕೆ.ಎ. ಕೃಷ್ಣಸ್ವಾಮಿಅಯ್ಯರ್‌ರವರು ಭಾರತದ ಒಬ್ಬ ಮಹಾನ್ ವೇದಾಂತಿಗಳು. ಹಳೆಯ ಮೈಸೂರು ಸಂಸ್ಥಾನ(ಈಗ ಕರ್ನಾಟಕ) ದಲ್ಲಿ ಹೈಸ್ಕೂಲು ಮುಖ್ಯೋಪಾಧ್ಯಾಯರಾದಾಗ್ಯೂ ಅವರಿಗೆ ಪೌರ್ವಾತ್ಯ ವೇದಾಂತದಲ್ಲಿ ಅದರಲ್ಲಿಯೂ ಶ್ರೀಶಾಂಕರ ವೇದಾಂತದಲ್ಲಿ ಅಭಿರುಚಿ ಮತ್ತು ಪರಿಶ್ರಮವಿತ್ತು. ಪಂಚದಶಿ, ಭಾಮತಿ, ಮತ್ತು ವಿವರಣ ಪ್ರಸ್ಥಾನಗಳನ್ನೊಳಗೊಂಡ ಶಾಂಕರಭಾಷ್ಯವು ಆಚಾರ್ಯ ಶಂಕರರ ಮೂಲೋದ್ದೇಶಕ್ಕೆ ವಿರುದ್ಧವಾಗಿರುತ್ತದೆ ಎಂಬುದು ಅವರ ನಿಶ್ಚಿತ ಅಭಿಪ್ರಾಯವಾಗಿತ್ತು. ಶ್ರೀಶ್ರೀಸಚ್ಚಿದಾನಂದೇಂದ್ರ ಸರಸ್ವತೀಸ್ವಾಮಿಗಳು ತಮ್ಮ ಪೂರ್ವಾಶ್ರಮದಲ್ಲಿ ಶ್ರೀಅಯ್ಯರ್ ರವರ ವಿಚಾರಗಳಿಗೆ ಒಪ್ಪಿ ಅವರನ್ನು ಗುರುಗಳನ್ನಾಗಿ ಸ್ವೀಕರಿಸಿ, ಅವರ ಅಪ್ಪಣೆಯಂತೆ ಬರೆದ ಗ್ರಂಥವೇ **ಮೂಲಾವಿದ್ಯಾನಿರಾಸಃ**. ಶ್ರೀಶ್ರೀಗಳವರು ಅನಂತರ ಬರೆದ ಗ್ರಂಥಗಳೆಲ್ಲಾ ಶ್ರೀಶಂಕರರ ಮೂಲೋದ್ದೇಶವನ್ನಿಟ್ಟುಕೊಂಡೇ ಪ್ರಕಟವಾಗಿವೆ.

ಶ್ರೀ ಅಯ್ಯರ್‌ರವರು ಪೌರ್ವಾತ್ಯ ವೇದಾಂತದಲ್ಲಿ ಪರಿಶ್ರಮ ಹೊಂದಿದ್ದಂತೆಯೇ ಪಾಶ್ಚಿಮಾತ್ಯ ವೇದಾಂತದಲ್ಲಿಯೂ ಪರಿಶ್ರಮಹೊಂದಿದ್ದರು. ಪೌರ್ವಾತ್ಯ ವೇದಾಂತಗಳನ್ನೂ ಪಾಶ್ಚಿಮಾತ್ಯ ವೇದಾಂತಗಳನ್ನೂ ಪ್ರಪಂಚಕ್ಕೆ ಹೊರತಂದವರಲ್ಲಿ ಅವರೂ ಒಬ್ಬ ಪ್ರಮುಖರಾದವರು. ಮಿಕ್ಕವರು ರಾಷ್ಟ್ರಪತಿ ರಾಧಾಕೃಷ್ಣನ್‌ರವರು, ವಿದ್ಯಾಲಂಕಾರ ಎಸ್.ಕೆ. ರಾಮಚಂದ್ರರಾಯರು ಮತ್ತು ಶ್ರೀ ಶ್ರೀಗಳವರು. ಶ್ರೀ ಅಯ್ಯರ್ ರವರು ಬರೆದ Vedanta or The Science of Reality (ವೇದಾಂತವೆಂಬ ಪರಮಾರ್ಥ ವಿಜ್ಞಾನಶಾಸ್ತ್ರ)ಗ್ರಂಥವನ್ನು ಶ್ರೀಶ್ರೀಗಳವರು ಕೊಂಡಾಡಿ, ಈ ಗ್ರಂಥರತ್ನವಂತೂ ವೇದಾಂತ ಚಕ್ರವರ್ತಿಯ ಕಿರೀಟದಲ್ಲಿ ಶೋಭಿಸುತ್ತಿರುವ ರತ್ನದಂತೆ ಇರುತ್ತದೆ ಎಂದಿದ್ದಾರೆ.

ಶಾಂಕರಸಿದ್ಧಾಂತವನ್ನು ಭದ್ರವಾದ ಯುಕ್ತ್ಯನುಭವಗಳ ಬುನಾದಿಯ ಮೇಲೆ ನಿಲ್ಲಿಸಲು ಶ್ರೀ ಅಯ್ಯರವರು ಮಾಡಿರುವ ಸಾಹಸವು ಮನನಶೀಲರಾದ ಜಿಜ್ಞಾಸುಗಳು ಹಲವು ಶತಮಾನಗಳವರೆಗೆ ಕೃತಜ್ಞತೆಯಿಂದ ಕೊಂಡಾಡತಕ್ಕದ್ದಾಗಿರುತ್ತದೆಂದು ಶ್ರೀಶ್ರೀಗಳು ಮೆಚ್ಚಿ ತಿಳಿಸಿದ್ದಾರೆ. ಶ್ರೀ ಅಯ್ಯರ್‌ರವರು ಬರೆದ ಬಾಕಿ ಲೇಖನಗಳನ್ನು Collected Works of Sri. K.A. Krishnaswamy Iyer ಎಂಬ ಪುಸ್ತಕದಲ್ಲಿ ಕಾಣಬಹುದು. ಕಾರ್ಯಾಲಯದಲ್ಲಿ ಮಾರಾಟಕ್ಕೆ ದೊರೆಯುತ್ತವೆ

ಪ್ರಸ್ತುತ ಶ್ರೀ ಯಲ್ಲಂಬಳಸೆ ಸುಬ್ಬರಾಯರು (ಶ್ರೀಶ್ರೀಗಳವರ ಪೂರ್ವಾಶ್ರಮದ ಹೆಸರು.) 1923ರಲ್ಲಿ ಪ್ರಾರಂಭಮಾಡಿದ ''ಅಧ್ಯಾತ್ಮಪ್ರಕಾಶ'' ಮಾಸಪತ್ರಿಕೆ (1ನೇ ಸಂಪುಟ 1ನೇ ಸಂಚಿಕೆಯಿಂದ ಪ್ರಾರಂಭಮಾಡಿ 4ನೇ ಸಂಪುಟ 12ನೇ ಸಂಚಿಕೆ ಯವರೆಗೆ) ಶ್ರೀ ಅಯ್ಯರ್‌ರವರು ಬರೆದ ಇಲ್ಲಿರುವ ಒಟ್ಟು 10 ಲೇಖನಗಳಲ್ಲಿ ಮೊದಲೆರಡರ ಲೇಖಕರು ಸಚ್ಚಿದಾನಂದೇಂದ್ರ ಸರಸ್ವತೀಸ್ವಾಮಿಗಳೇ ಆಗಿದ್ದಾರೆ. ಶ್ರೀ ಶ್ರೀ ಗಳವರು ಮೊದಲನೆಯ ಲೇಖನ ತಮ್ಮ ಗುರುಗಳಾದ ಕೃಷ್ಣಸ್ವಾಮಿಅಯ್ಯರ್ ಅವರನ್ನು ಕುರಿತದ್ದಾಗಿದೆ. ಮತ್ತೊಂದು ಪರಮಗುರು ಅನಂತಪ್ಪಮಹಾರಾಜರನ್ನು ಕುರಿತದ್ದಾಗಿದೆ.

ಈ ಗ್ರಂಥಕ್ಕೆ ಮೈಸೂರಿನ ಡಾ||ಕೆ.ಅನಂತರಾಮು ಅವರು ವಿವರವಾದ **'ಮೊದಲ ಮಾತು'** ಬರೆದುಕೊಟ್ಟು ಈ ಗ್ರಂಥದ ಘನತೆಯನ್ನು ಹೆಚ್ಚಿಸಿದ್ದಾರೆ. ಹತ್ತು ಲೇಖನಗಳನ್ನು ಒಳಗೊಂಡ ಈ ಪುಟ್ಟ ಗ್ರಂಥ **''ವೇದಾಂತ ಲೇಖನಗಳು''** ಎಂಬುದನ್ನು ಅಧ್ಯಾತ್ಮ ಚಿಂತಕರ ಚಿಂತನೆಗಾಗಿ ಪ್ರಕಟಿಸಲಾಗಿದೆ.

ಶ್ರೀಯುತರುಗಳಾದ 1) ಸದ್ದೀಕ್ಷಾ ಪಬ್ಲಿಕ್ ಛಾರಿಟಬಲ್ ಟ್ರಸ್ಟ್, ಬೆಂಗಳೂರು. 2) ಹೆಚ್.ಎನ್. ವೈದ್ಯನಾಥನ್ ಬೆಂ. 3) ಕೆ.ವಿ. ಶ್ರೀನಿವಾಸ್ ಬೆಂ, 4) ಕೆ.ಎನ್. ದತ್ತಾತ್ರಿ, ಚಿಕ್ಕಮಗಳೂರು. 5) ಎಸ್.ವಿ. ಗಿರೀಶ್ ಬೆಂ. 6) ಶ್ರೀಮತಿ ನಾಗಮ್ಮ, ಮೈಸೂರು. 7) ಸಜ್ಜನಗಡ ರಾಮಸ್ವಾಮಿ, ಪೀಠಾಪುರ, ಎ.ಪಿ. 8) ಎಮ್.ವಿ. ಶ್ರೀಧರ್, ಮೈ. 9) ನಾಗರತ್ನಮ್ಮ-ವಿಶ್ವನಾಥಶ್ರೇಷ್ಠಿ, ತಿಪಟೂರು, 10) ಅನುಸೂಯಾ -ಮೂರ್ತಿ, ಬೆಂ. ಇವರುಗಳು ಈ ಗ್ರಂಥ ಪ್ರಕಟನೆಗೆ ಉದಾರವಾಗಿ ಧನ ಸಹಾಯಮಾಡಿರುತ್ತಾರೆ. ಕಾರ್ಯಾಲಯದ ಪರವಾಗಿ ಕೃತಜ್ಞತಾ ಪೂರ್ವಕವಾದ ವಂದನೆಗಳು. ಭಕ್ತಾದಿಗಳು ಎಂದಿನಂತೆ ಇದನ್ನು ಸ್ವೀಕರಿಸಿ ಮುಂದೆಯೂ ಸಹ ಇತರ ಗ್ರಂಥಗಳಿಗೆ ಸಹಾಯ ಮಾಡಿ ಪ್ರೋತಾಹನೀಡುವರೆಂಬ ಅಭಿಲಾಷೆಯನ್ನು ಕಾರ್ಯಾಲಯವು ವ್ಯಕ್ತಪಡಿಸುತ್ತದೆ.

ಮನ್ಮಥ ಸಂವತ್ಸರ
ಆಷಾಢ ಬಹುಳ ತ್ರಯೋದಶಿ **ಪ್ರಕಾಶಕರು**
(ಸದ್ಗುರುಗಳ ಆರಾಧನೆ)
**ತಾ.12.08.2015**

# ಮೊದಲ ಮಾತು

"ವೇದಾಂತ ಲೇಖನಗಳು" ಎಂಬೀ ಕೃತಿಯು, ವೇದಾಂತರಂಗದಲ್ಲೊಂದು ಅಪೂರ್ವವಾದ ಮೈಲಿಗಲ್ಲು. ಇಲ್ಲಿ ವೇದಾಂತವನ್ನು ವಿವಿಧ ಕಥಾಪ್ರಸಂಗಗಳೊಡನೆ ಹೆಣೆಯಲಾಗಿದೆ; ಕಲ್ಪನಾಲೋಕದಲ್ಲಿ ಜಿಜ್ಞಾಸುಗಳು ವಿಹರಿಸುವಂತೆ ಮಾಡಲಾಗಿದೆ; ಸರಸವೂ ಬೋಧಪ್ರದವೂ ಆದ ಶೈಲಿಯಲ್ಲಿ ವೇದಾಂತದ ಆಳವಾದ ವಿಚಾರಗಳನ್ನು ಮುನ್ನಡೆಸಲಾಗಿದೆ. ಈ ಕಾರಣಗಳಿಂದಾಗಿ ಈ ಗ್ರಂಥದ ಹಿರಿಮೆ ಮಾತಿಗೆ ಮೀರಿದ್ದಾಗಿದೆ.

"ಅಧ್ಯಾತ್ಮಪ್ರಕಾಶ" ಮಾಸಪತ್ರಿಕೆಯಲ್ಲಿ 1923-1943ರ ಅವಧಿಯಲ್ಲಿ ಪ್ರಕಟವಾಗಿದ್ದ ಬಿಡಿಬಿಡಿಯಾಗಿದ್ದ ಲೇಖನಗಳನ್ನು ಇಲ್ಲಿ ಇಡಿಯಾಗಿಸಿ ಗ್ರಂಥ ರೂಪವನ್ನು ಕೊಡಲಾಗಿದೆ. ಇನ್ನೆಂಟು ವರ್ಷಗಳು ಗತಿಸಿಹೋದರೆ, ಈ ಲೇಖನ ಗಳು ಶತಮಾನೋತ್ಸವದ ಸಂಭ್ರಮವನ್ನು ಕಾಣುತ್ತವೆ. ವೇದಾಂತವಲ್ಲದೆ ಅನ್ಯ ಜ್ಞಾನವಿಚಾರ ಗಳಿಗೆ ಈ ಲೇಖನಗಳು ಸಂಬಂಧಿಸಿದಂಥವಾಗಿದ್ದರೆ ತಮ್ಮ ಉಪಯುಕ್ತತೆಯನ್ನು ಇದುವರೆಗೆ ಕಾಯ್ದುಕೊಳ್ಳುವುದು ಸಾಧ್ಯವಿರಲಿಲ್ಲ. ವೇದಾಂತದ ವಿಚಾರಗಳು ಕಾಲದೇಶಗಳ ಎಲ್ಲೆಕಟ್ಟುಗಳನ್ನು ಮೀರಿ ಎಲ್ಲ ಕಾಲಕ್ಕೂ ಉಪಾದೇಯವಾಗಿರುತ್ತವೆ ಯಾದ್ದರಿಂದ ಇಲ್ಲಿನ ಲೇಖನಗಳೆಲ್ಲ ಇಂದಿಗೂ ಹೊಚ್ಚ ಹೊಸದಾಗಿಯೇ ಇವೆ. ತಮ್ಮ ಘನತೆಯನ್ನೂ ತಮ್ಮ ಉಪಯುಕ್ತತೆಯನ್ನೂ ಪರಿಪೂರ್ಣವಾಗಿ ಕಾಪಾಡಿಕೊಂಡಿವೆ.

ಎಷ್ಟೇ ಪುರಾತನವಾದರೂ ಓದಿದಾಗಲೆಲ್ಲ ಹೊಚ್ಚಹೊಸದೆನಿಸಿಕೊಳ್ಳುವ ಗ್ರಂಥ ಸಮುದಾಯವನ್ನು ನಮ್ಮ ಹಿರಿಯರು 'ಪುರಾಣ' ಎಂಬ ಹೆಸರಿನಿಂದ ಕರೆದಿದ್ದಾರೆ. ಈ ಪರಿಭಾಷೆಯು ವೇದಾಂತವಿಚಾರಕ್ಕೂ ಅನ್ವಯಿಸುತ್ತದೆ. ಹೀಗಾಗಿ ಇಲ್ಲಿನ ಲೇಖನ ಗಳೆಲ್ಲ ಕಾಲಪುರುಷನ ಅಂಕೆಯನ್ನು ಮೆಟ್ಟಿನಿಂತು ನವನವೀನವಾಗಿ ಕಂಗೊಳಿಸುತ್ತಿವೆ. ಇಲ್ಲಿನ ಲೇಖನಗಳ ಸಾರವನ್ನೆಲ್ಲ ಒಂದೇ ಉಸುರಿಗೆ ಹೇಳಿ ಬಿಡುತ್ತೇನೆಂದು ಹೊರಡುವವನಿಗೆ ಎಂಟೆದೆಯೇ ಬೇಕು. ಅಷ್ಟರಮಟ್ಟಿಗೆ ಇಲ್ಲಿನ ಲೇಖನಗಳು ವೈವಿಧ್ಯಪೂರ್ಣವಾದ ವೇದಾಂತವಿಚಾರಗಳನ್ನು ತಮ್ಮ ಒಡಲಿನಲ್ಲಿ ತುಂಬಿಕೊಂಡಿವೆ.

ಪ್ರಸ್ತುತ ಗ್ರಂಥದಲ್ಲಿ ಹತ್ತು ಲೇಖನಗಳಿದ್ದು ಅವು ಶ್ರೇಷ್ಠರತ್ನಗಳಂತೆ ಪ್ರಕಾಶಮಾನವಾಗಿವೆ; ನವನವೀನವೂ ನವನವೋನ್ಮೇಷಶಾಲಿಯೂ ಆಗಿ ಜಿಜ್ಞಾಸುಗಳ ಹೃದಯಕಮಲಗಳನ್ನು ಅರಳಿಸುವಂತಿವೆ. ಕೃಷ್ಣಸ್ವಾಮಿಅಯ್ಯರ್ ಮತ್ತು ಅನಂತಪ್ಪ ಮಹಾರಾಜರನ್ನು ಕುರಿತಂತಿರುವ ಎರಡು ಲೇಖನಗಳು ಮಾತ್ರ ಸಚ್ಚಿದಾನಂದೇಂದ್ರ ಸರಸ್ವತೀಸ್ವಾಮಿಗಳಿಂದ ರಚಿತವಾಗಿದ್ದು, ಅವು ಮಿಕ್ಕ ಲೇಖನಗಳಿಗೆ ಪೂರಕವಾಗಿವೆ. ಮಿಕ್ಕಲೇಖನಗಳೆಲ್ಲವೂ ಕೃಷ್ಣಸ್ವಾಮಿಅಯ್ಯರ್ ಅವರಿಂದ ರಚಿತವಾಗಿವೆ.

ಸಚ್ಚಿದಾನಂದೇಂದ್ರಗುರುಗಳು ಅಧ್ಯಾತ್ಮದ ಹಾದಿಯಲ್ಲಿ ಮುಂದೆ ಮುಂದೆ ಸಾಗಲು ಪ್ರೇರಣೆನೀಡಿದವರಲ್ಲಿ ಕೃಷ್ಣಸ್ವಾಮಿಅಯ್ಯರ್ ಅವರೂ ಒಬ್ಬರು ಎಂಬುದು ಗಮನಿಸಬೇಕಾದ ಸಂಗತಿ.

ಕೃಷ್ಣಸ್ವಾಮಿಅಯ್ಯರ್ ಅವರು ಬೆಂಗಳೂರಿನಲ್ಲಿ ನೆಲೆಸಿದ್ದು, ಅತ್ಯಂತ ಪ್ರತಿಭಾ ಸಂಪನ್ನಪುರುಷರಾಗಿದ್ದರು. ಸಂಸ್ಕೃತ, ತಮಿಳು, ತೆಲುಗು, ಇಂಗ್ಲಿಷು, ಕನ್ನಡ ಮುಂತಾದ ಭಾಷೆಗಳಲ್ಲಿ ಪ್ರವೀಣರಾಗಿದ್ದರು. ಹಲವು ಶಾಸ್ತ್ರಗಳಲ್ಲಿ ಪ್ರವೇಶ ಪಡೆದಿದ್ದರು. ಅವರು ವೇದಾಂತವನ್ನು ತಲಸ್ಪರ್ಶಿಯಾಗಿ ಅರಿತವರಾಗಿದ್ದರು. ಆ ಕ್ಷೇತ್ರದಲ್ಲಿ ಅವರು ರಚಿಸಿರುವ **''Vedanta or The Science of Reality'** ಎಂಬ ಗ್ರಂಥ ಇಂದಿಗೂ ಜಿಜ್ಞಾಸುಗಳ ಮೆಚ್ಚುಗೆಗೆ ಪಾತ್ರವಾಗಿದೆ. ಆ ಗ್ರಂಥವನ್ನು ಸಚ್ಚಿದಾನಂದೇಂದ್ರ ಗುರುಗಳು 'ಗ್ರಂಥರತ್ನ'ವೆಂದು ಎತ್ತಿಹಿಡಿಯುತ್ತ ''ಇದಂತೂ ವೇದಾಂತಚಕ್ರವರ್ತಿಯ ಕಿರೀಟದಲ್ಲಿ ಶೋಭಿಸುವ ಅನರ್ಘ್ಯವಾದೊಂದು ವಜ್ರದಂತೆ ಇರುತ್ತದೆ. ಶಾಂಕರ ಸಿದ್ಧಾಂತವನ್ನು ಭದ್ರವಾದ ಯುಕ್ತ್ಯನುಭವಗಳ ತಳಗಟ್ಟಿನ ಮೇಲೆ ನಿಲ್ಲಿಸುವುದಕ್ಕೆ ಶ್ರೀಕೃಷ್ಣಸ್ವಾಮಿಅಯ್ಯರ್‌ರವರು ಮಾಡಿರುವ ಸಾಹಸವು ಮನನಶೀಲರಾದ ಜಿಜ್ಞಾಸುಗಳು ಹಲವು ಶತಮಾನಗಳವರೆಗೆ ಕೃತಜ್ಞತೆಯಿಂದ ಕೊಂಡಾಡತಕ್ಕದ್ದಾಗಿರುವದೆಂಬುದು ಅದೊಂದು ಗ್ರಂಥದಿಂದಲೇ ಸುಸ್ಪಷ್ಟವಾಗುತ್ತದೆ'' ಎಂದು ಮುಕ್ತಕಂಠದಿಂದ ಪ್ರಶಂಸಿಸಿದ್ದಾರೆ. ಅಯ್ಯರ್ ಅವರು ಮುಕ್ತರಾದ ತರುವಾಯದಲ್ಲಿ ಅವರಿಗೊಂದು ಶ್ರದ್ಧಾಂಜಲಿಯನ್ನರ್ಪಿಸುವ ಹಿನ್ನಲೆಯಲ್ಲಿ ಈ ಲೇಖನವು ರೂಪುಗೊಂಡಿದೆ. ಅಯ್ಯರ್ ಅವರ ಉದಾರತೆ, ಬಹುಜ್ಞತೆ, ಕಿರಿಯರನ್ನು ಪ್ರೋತ್ಸಾಹಿಸುವ ಗುಣ - ಮುಂತಾದುವನ್ನೆಲ್ಲ ಸಚ್ಚಿದಾನಂದೇಂದ್ರ ಗುರುಗಳು ಹೃದ್ಯವಾಗಿ ಬಣ್ಣಿಸಿದ್ದಾರೆ.

ಸಚ್ಚಿದಾನಂದೇಂದ್ರಗುರುಗಳು ಅನಂತಪ್ಪಮಹಾರಾಜರನ್ನು ಕುರಿತಂತೆ ಬರೆದಿರುವ ಲೇಖನವಂತೂ ಅತ್ಯಂತ ಹೃದಯಸ್ಪರ್ಶಿಯಾಗಿದೆ. ಅನಂತಪ್ಪ ಮಹಾರಾಜರು ಅನಂತಚತುರ್ದಶಿಯ ಪುಣ್ಯಪರ್ವದಂದು ಅವತರಿಸಿ, ವೇದಾಂತ ಲೋಕಕ್ಕೊಂದು ಹೊಸ ಬೆಳಕನ್ನೇ ತುಂಬಿಸಿದ ಮಹಾತ್ಮರು. ಹದಿಮೂರನೆಯ ವಯಸ್ಸಿಗೇ ಅವರ ಮದುವೆ ನಡೆದುಹೋಯಿತು. ಆದರೂ ಬ್ರಹ್ಮಮಾರ್ಗದಿಂದ ಚ್ಯುತರಾಗದೆ ಪುರಾಣಶ್ರವಣ, ಪುರಾಣಪಠಣ, ಪೂಜೆ, ಭಜನೆಗಳಿಗೆ ಮನಸ್ಸು ಕೊಟ್ಟು, ಭಗವತ್ಪ್ರೇಮವನ್ನು ಹೃದಯಕ್ಕೆ ತುಂಬಿಕೊಂಡರು. ಚಿದಂಬರದೀಕ್ಷಿತರೆಂಬ ಯೋಗಿವರ್ಯರ ಅನುಗ್ರಹಕ್ಕೆ ಪಾತ್ರರಾಗಿ, ಚಿತ್ತದ ಏಕಾಗ್ರತೆಯನ್ನು ಗೆದ್ದುಕೊಂಡರು. ತಂದೆಯ ಮರಣಾನಂತರ ಪರಂಪರಾಗತವಾಗಿ ಬಂದಿದ್ದ ರೇಷ್ಮೆನೂಲಿನ ವ್ಯವಹಾರವನ್ನು ಅನಂತಪ್ಪನವರೇ ಮಾಡಬೇಕಾಗಿ ಬಂತು. ಆದರೆ ಭಗವಂತನ ಸಾಕ್ಷಾತ್ಕಾರ ಪಡೆದುಕೊಳ್ಳಬೇಕೆಂಬ ಉತ್ಕಂಠೆಯೇ ತೀವ್ರವಾಗಿ ಹೇಳಕೇಳದೆ ಮನೆಮಠಗಳನ್ನು ತೊರೆದು ಪುಣ್ಯತೀರ್ಥವಾದ ಪಂಡರಾಪುರದತ್ತ ನಡೆದುಬಿಟ್ಟರು.

ಪಂಡರಾಪುರದಲ್ಲಿ ವಿಠಲಪಂತರೆಂಬ ಭಕ್ತಶಿರೋಮಣಿಗಳ ಶಿಷ್ಯರಾಗಿ ಅನಂತಪ್ಪಮಹಾರಾಜರು ಆ ಸದ್ಗುರುವಿಗೇ ತಮ್ಮನ್ನು ಸಮರ್ಪಿಸಿಕೊಂಡುಬಿಟ್ಟರು. ಭಗವಂತನನ್ನು ಕಾಣಲು ಏನೇನು ಸಾಧನೆಗಳನ್ನು ಮಾಡಬೇಕೋ ಅವೆಲ್ಲವನ್ನೂ ಅಲ್ಲಿ ಮಾಡುವ ಭಾಗ್ಯ ಅನಂತಪ್ಪನವರಿಗೆ ಅಲ್ಲಿ ದೊರೆಕೊಂಡಿತು. ಪುತ್ರವಿರಹದಿಂದ ಕಂಗೆಟ್ಟ ಅನಂತಪ್ಪನವರ ತಾಯಿಯವರು ಮಗನನ್ನು ಹುಡುಕುತ್ತಲಿದ್ದರು. ಪಂಡರಪುರಕ್ಕೆ ಬಂದು ಭಕ್ತರ ತಂಡದವರು ಹೇಗೋ ಪತ್ತೆಮಾಡಿಬಿಟ್ಟರು. ಪಂತ ಗುರುಗಳ ಆಜ್ಞೆಯಂತೆ ಅನಂತಪ್ಪನವರು ಬೆಂಗಳೂರಿಗೇ ಮರಳಿಬಂದು ತಮ್ಮ ಸಾಧನೆಯನ್ನು ಮುಂದುವರಿಸಿದರು. ತಮ್ಮ ಮನೆಗೆ ಸಮೀಪದ ವಿಠೋಬನಮಂದಿರವೇ ಅವರ ಸಾಧನೆಗೆ ಆಶ್ರಯಸ್ಥಾನವಾಯಿತು. ಮಧುಕರೀ ಭಿಕ್ಷೆಯಿಂದ ಕಾಲಯಾಪನೆ ಮಾಡುತ್ತ, ತಾವು ನೆಲೆಸಿದ್ದ ಸುತ್ತಮುತ್ತಲಿನ ಪರಿಸರವನ್ನೆಲ್ಲ ಭಕ್ತಿರಂಜಿತ ಭೂಮಿಯನ್ನಾಗಿ ಮಾಡಿಬಿಟ್ಟರು. ಮುಂದಕ್ಕೆ ಭಕ್ತರೆಲ್ಲ ಕೂಡಿ ಅವರಿಗೊಂದು ಪ್ರತ್ಯೇಕ ಮಠವನ್ನೇ ನಿರ್ಮಿಸಿದರು.

'ಅವಸ್ಥಾತ್ರಯ' ಎಂದು ಕರೆಯುವ, ವೇದಾಂತದ ಪ್ರಕ್ರಿಯೆಯೊಂದರ ಬಲದಿಂದ ಅನಂತಪ್ಪಮಹಾರಾಜರು ವೇದಾಂತದ ಅನೇಕ ಜಟಿಲವಿಚಾರಗಳನ್ನು ತಿಳಿಗೊಳಿಸಿ ತಿಳಿಸಿಕೊಡುವ ಹೆಚ್ಚಿನ ಸಾಮರ್ಥ್ಯವನ್ನು ತಮ್ಮದಾಗಿಸಿಕೊಂಡಿದ್ದರು. ನಾವು ಈ ಮೊದಲೇ ಸ್ಮರಿಸಿಕೊಂಡಿರುವ, ಪ್ರಸ್ತುತ ಗ್ರಂಥದ ಲೇಖಕರೂ, ಆದ, ಕೃಷ್ಣಸ್ವಾಮಿ ಅಯ್ಯರ್ ಅವರು ಯೋಗಾಯೋಗವೆಂಬಂತೆ ಅನಂತಪ್ಪ ಮಹಾರಾಜರ ಸನ್ನಿಧಿಗೆ ಬಂದು, ಅವರ ಕೃಪಾಶೀರ್ವಾದಗಳಿಗೆ ಪಾತ್ರರಾಗಿ, ತಮ್ಮ ಜೀವನವನ್ನು ಉಜ್ಜೀವನವಾಗಿಸಿಕೊಂಡುಬಿಟ್ಟರು. ಬೆಂಗಳೂರಿಗೆ ಪ್ಲೇಗುರೋಗವು ತಟ್ಟಿದಾಗ, ಅನಂತಪ್ಪ ಮಹಾರಾಜರು ಅದರಲ್ಲಿಯೇ ತಮ್ಮ ಕಾಯವನ್ನು ಕಳಚಿಬಿಟ್ಟರು. ಈ ದಿವ್ಯ ಚರಿತಾಮೃತವನ್ನೆಲ್ಲ ಸಚ್ಚಿದಾನಂದೇಂದ್ರಗುರುಗಳು ಭಕ್ತರ ಮನಸ್ಸಿಗೆ ಆಪ್ಯಾಯಮಾನವಾಗುವಂತೆ ಬಿತ್ತರಿಸಿದ್ದಾರೆ.

ಪ್ರಸ್ತುತ ಗ್ರಂಥದಲ್ಲಿರುವ ಕೃಷ್ಣಸ್ವಾಮಿಅಯ್ಯರ್‌ಅವರ ಮಿಕ್ಕ ಎಂಟು ಲೇಖನಗಳು ಕೂಡ ಅತ್ಯಂತ ಮನಮೋಹಕವಾಗಿವೆ. 'ಶ್ರೀಶಂಕರಭಗವತ್ಪಾದರವರು' ಎಂಬ ಲೇಖನ, ವೇದಾಂತದ ತತ್ತ್ವವೊಂದನ್ನು ಶಂಕರರು ಹೇಗೆ ಸ್ಫುಟಗೊಳಿಸಿ ಕೊಟ್ಟಿದ್ದಾರೆ ಎಂಬುದರತ್ತ ಸಾಗಿದೆ. ಜೀವ, ಜಗತ್ತು ಮತ್ತು ಬ್ರಹ್ಮ ಎಂಬ ಮೂರು ವಸ್ತುಗಳನ್ನು ವೇದಾಂತದಲ್ಲಿ ವಿಚಾರಮಾಡಲು ಕೈಗೆತ್ತಿಕೊಳ್ಳುವುದು ಸಹಜವೇ ಆಗಿದೆ. ಈ ಜಗತ್ತು ಈಶ್ವರಾಧಿಷ್ಠಿತವಾಗಿದೆಯೋ ಅಥವಾ ತನ್ನಷ್ಟಕ್ಕೆ ತಾನು ಸ್ವತಂತ್ರವಾಗಿದೆಯೋ; ಈ ಜಗತ್ತಿಗೂ ಅದರಲ್ಲಿ ಜೀವಿಸುತ್ತಿರುವ ಜೀವನಿಗೂ ಏನು ಸಂಬಂಧ; ಈಶ್ವರನಿಗೂ ಜೀವನಿಗೂ ಏನು ಸಂಬಂಧ- ಎಂಬೀ ಮೂರು ಪ್ರಶ್ನೆಗಳನ್ನು ಮುಂದಿಟ್ಟುಕೊಂಡು ಅಯ್ಯರ್‌ರವರು, ಅದಕ್ಕೆ ಶಂಕರಾಚಾರ್ಯರ ನಿರೂಪಣೆಯ ಮೂಲಕ ಹೇಗೆ

ಸಮಾಧಾನವನ್ನು ಕಂಡುಕೊಳ್ಳಬಹುದು ಎಂಬುದನ್ನು ಬಹಳ ಪರಿಷ್ಕಾರವಾಗಿ ತಿಳಿಸಿಕೊಟ್ಟಿದ್ದಾರೆ.

'ಅಪ್ಪಂಭಟ್ಟರೂ ರಾಮುವೂ' ಎಂಬುದು ಹಾಸ್ಯರಸವನ್ನು ಹರಿಸುತ್ತಲೇ ವೇದಾಂತದತ್ತ ನಮ್ಮನ್ನು ಕರೆದೊಯ್ಯುವ ಲೇಖನ. ರಾಮುವು ಅಪ್ಪಂಭಟ್ಟರ ಮಗ ನಾದ ತಿಮ್ಮಭಟ್ಟನಿಗೆ ಹೈಕೋರ್ಟುನ್ಯಾಯಾಧೀಶರ ಮಗಳನ್ನು ಕೊಟ್ಟು ಮದುವೆ ಮಾಡಿಸುವ ಯೋಜನೆಯೊಂದನ್ನು ಮುಂದಿಟ್ಟುಕೊಂಡು ಅವರ ಮನೆಗೆ ಹೋದನು. ಆ ಹೊತ್ತಿನಲ್ಲಿ ಅಪ್ಪಂಭಟ್ಟರು ರಾಮುವನ್ನು ಕುರಿತು ''ನನಗೆ ತರ್ಕವಾಚಸ್ಪತಿ ಎಂಬ ಬಿರುದು ಕೊಟ್ಟಿದ್ದಾರೆ ನನ್ನೊಂದಿಗೆ ಈಗ ತುಂಟಾಟ ಸಲ್ಲದು. ಮರ್ಯಾದೆಯಿಂದ ನಡೆದುಕೊಳ್ಳಬೇಕು'' ಎಂದು ತಾಕೀತು ಮಾಡಿದರು. ಆಗ ರಾಮುವು ''ಹಾಗೆಯೇ ಆಗಲಿ'' ಎನ್ನುತ್ತ ''ತಕ್ರ ಎಂದಿರಲ್ಲ, ಬೃಹಸ್ಪತಿ ಎಂದಿರಲ್ಲ, ಹಾಗಂದರೇನು?'' ಎಂದು ತರ್ಕವಾಚಸ್ಪತಿ ಎಂಬ ಮಾತಿನ ಮೇಲೆ ತನ್ನ ಹಾಸ್ಯವನ್ನೇ ಹರಿಯಬಿಟ್ಟನು. ಹಾಗೆ ಹಾಸ್ಯದ ಅಂಗಣದಲ್ಲಿಯೇ ಇರುತ್ತ ಪದಾರ್ಥ ಎಂಬುದಕ್ಕೆ ಲಕ್ಷಣವೇನು; ಅಭೀಧೇಯತ್ವವೆಂದರೇನು?'' ಮುಂತಾಗಿ ವಿಚಾರಗಳನ್ನು ಕೆಣಕಿ, ಅಪ್ಪಂಭಟ್ಟರಿಂದ ಸೂಕ್ತವಾದ ಉತ್ತರಗಳನ್ನು ಪಡೆದುಕೊಂಡನು.

'ಗೋಪಾಲಶೆಟ್ಟರ ಮನೆಯಲ್ಲಿ ಮದುವೆ' ವಿಶಿಷ್ಟ ಕಲ್ಪನೆಗಳಿಂದ ಕೂಡಿದ ಲೇಖನ. ಸಿರಿವಂತರಾದ ಗೋಪಾಲಶೆಟ್ಟರು ತಮ್ಮ ಮಗಳ ಮದುವೆಯನ್ನು ಅತ್ಯಂತ ವಿಜೃಂಭಣೆಯಿಂದ ಸಂಪನ್ನಗೊಳಿಸಿದರು. ಹೋಮಾದಿಗಳೇನು, ಸಂಗೀತ ನೃತ್ಯಾದಿ ಗಳೇನು! ಅವುಗಳ ಜೊತೆಗೆ ಹಿರಿಯ ವಿದ್ವಾಂಸರು ಒಂದೆಡೆ ಕಲೆತು ವೇದಾಂತ ಚರ್ಚೆಯನ್ನೂ ನಡೆಸುತ್ತಿದ್ದರು. ಅದರಲ್ಲಿ ಅಪ್ಪಂಭಟ್ಟರು ಮಾತ್ರವಲ್ಲದೆ ಶ್ರೀನಿವಾಸಾಚಾರ್ಯರು, ತಿರುಮಲಾಚಾರ್ಯರು, ನರಸಿಂಹಯ್ಯಂಗಾರರು, ವ್ಯಾಸ ಶಾಸ್ತ್ರಿಗಳು ಮೊದಲಾದ ಘಟಾನುಘಟಿಗಳೆಲ್ಲ ಪಾಲ್ಗೊಂಡಿದ್ದರು. ಪೂರ್ವಪಕ್ಷ ವಹಿಸಿದವರು, ಮಧ್ಯಸ್ಥರು ಅವರುಗಳಲ್ಲಿಯೇ ಇದ್ದರು. ವಿನೋದಪ್ರಿಯನಾದ ರಾಮುವೂ ಇದ್ದನು. ಪ್ರಾಮಾಣ್ಯವಾದವನ್ನು ಕುರಿತ ಚಿಂತನೆ ನಡೆಯಿತು. ಸ್ವತಸ್ತ್ವ ಪರತ್ತಸ್ತ್ವ, ಬುದ್ಧಿವೃತ್ತಿ ಎಂಬೀ ವಿಚಾರಗಳೆಲ್ಲ ಮಥಿತವಾದುವು. ಕೊನೆಗೆ ನಿರೂಪಕನು ''ಇದೆಲ್ಲ ನಾನು ಕನಸಿನಲ್ಲಿ ಕಂಡದ್ದು ನಾನೊಬ್ಬನೇ ಎಲ್ಲವೂ ಆಗಿ ಪರಿಣಮಿಸಿದ್ದೆ'' ಎಂದು ಕನಸಿನ ವೈಚಿತ್ರ್ಯವನ್ನು ಕೊಂಡಾಡಿ ವಿರಮಿಸಿದನು.

'ವೃಷಭಾಲಯ' ಎಂಬ ಲೇಖನದಲ್ಲಿ ಕೃಷ್ಣಸ್ವಾಮಿಅಯ್ಯರ್ ಅವರು ಬೆಂಗಳೂರು ನಗರದ ಬಸವನಗುಡಿಯನ್ನು ಸಂಸ್ಕೃತೀಕರಣ ಮಾಡಿ ವೃಷಭಾಲಯ ಎಂದು ಕರೆದು, ವೇದಾಂತಚಿಂತನೆಗೆ ಅದನ್ನೊಂದು ವೇದಿಕೆಯಾಗಿಸಿಕೊಂಡಿದ್ದಾರೆ. ಒಂದು ದಿನ ಕೆಲವು ಜಿಜ್ಞಾಸುಗಳು ಅಲ್ಲಿ ಕುಳಿತು ಬಸವನ ಮಹಿಮೆ, ಅವನು ರಾತ್ರಿಯ

ವೇಳೆಯಲ್ಲಿ ಜೀವದುಂಬಿದವನಾಗಿ ಆ ಉಪನಗರದಲ್ಲೆಲ್ಲ ಸುತ್ತಾಡುತ್ತ ಭಕ್ತರನ್ನು ರಕ್ಷಿಸುವುದು. ಅಲ್ಲಿ ನಡೆಯುವ ಕಡಲೆಕಾಯಿಪರಿಷೆ - ಮುಂತಾದುವನ್ನು ಕುರಿತು ಚರ್ಚಿಸುತ್ತಿದ್ದರು. ಬಸವನು ಶಿಲೆಯಾದ್ದರಿಂದ ಅವನು ಜೀವದುಂಬಿ ಓಡಾಡುವುದು, ಮಾತಾಡುವುದು ಪ್ರತ್ಯಕ್ಷಪ್ರಮಾಣಕ್ಕೆ ವಿರುದ್ಧವಲ್ಲವೇ ಎಂಬುದಾಗಿಯೂ ಅವರು ವಿಚಾರಮಾಡುತ್ತಿದ್ದರು. ಆ ಹೊತ್ತಿಗೆ ಸರಿಯಾಗಿ ಯತಿಗಳೊಬ್ಬರು ಅಲ್ಲಿ ಇದ್ದಕ್ಕಿದ್ದಂತೆ ಪ್ರತ್ಯಕ್ಷರಾಗಿ ಜಿಜ್ಞಾಸುಗಳು ನಡೆಸುತ್ತಿದ್ದ ಚರ್ಚೆಯಲ್ಲಿ ಪಾಲ್ಗೊಂಡರು. ಬಸವನ ವಿಚಾರವಾಗಿ ಅವರ ಮನಸ್ಸಿನಲ್ಲಿ ಎದ್ದುಕೊಂಡಿದ್ದ ಸಂದೇಹಕ್ಕೆ ತಕ್ಕ ಉತ್ತರವನ್ನು ಆ ಮಹಾತ್ಮರು ನೀಡಿದರು. ಪ್ರತ್ಯಕ್ಷಕ್ಕೆ ಪ್ರಾಮಾಣ್ಯ ಹೇಳುವುದು ಅಶಕ್ಯವೆಂದು ಅವರು ವಿವರಿಸಿದರು. ಅವರು ಕೊಟ್ಟ ದೃಷ್ಟಾಂತಗಳು ಮನೋಹಾರಿಯಾಗಿದ್ದುವು. ಆಮೇಲೆ ಅವರು ದೇವರ ದರ್ಶನಕ್ಕೆಂದು ಬಸವನಗುಡಿಯೊಳಕ್ಕೆ ಹೋದವರು ಮತ್ತೆ ಮರಳಲೇ ಇಲ್ಲ. ಸಾಕ್ಷಾತ್ ಬಸವನೇ ಹಾಗೆ ಯತಿರೂಪವನ್ನು ತಾಳಿ ತಮ್ಮ ಸಂಶಯವನ್ನು ಪರಿಹರಿಸಿದನು ಎಂದು ನಿರೂಪಕರು ಭಾವಿಸಿಕೊಂಡರು.

'ರೈಲು ಪ್ರಯಾಣ' ಎಂಬ ಲೇಖನ, ರೈಲಿನಲ್ಲಿ ಪ್ರಯಾಣಮಾಡುವಾಗಲೇ ಮೂಡಿಬಂದ ಸ್ವರೂಪದಲ್ಲಿದೆ. ಕ್ಷಣಭಂಗುರವಾದ ಈ ಸಂಸಾರಕ್ಕೆ ರೈಲು ಪ್ರಯಾಣವೊಂದು ಸಾಮ್ಯ ಎಂದು ಲೇಖಕರು ಸೊಗಸಾಗಿ ಹೋಲಿಸಿದ್ದಾರೆ. ಆ ಬೋಗಿಯಲ್ಲಿಯೇ ಕುಳಿತು ಪ್ರಯಾಣ ಮಾಡುತ್ತಿದ್ದ ವಾಲ್ಮೀಕಿಶಾಸ್ತ್ರಿಗಳ ಬದುಕಿನ ಒಳನೋಟಗಳ ಮನಮುಟ್ಟುವ ಚಿತ್ರಣ ಈ ಲೇಖನದಲ್ಲಿದೆ. ದೇವರ ಇರುವಿಕೆಯ ಬಗ್ಗೆಯೂ ಆ ಪ್ರಯಾಣಕಾಲದಲ್ಲಿ ಚರ್ಚೆ ನಡೆಯುತ್ತದೆ. ಪ್ರಪಂಚಕರ್ತನೊಬ್ಬನಿದ್ದಾನೆ, ನಾಸ್ತಿಕ್ಯಕ್ಕೆ ಎಡೆಯಿಲ್ಲ , ಪಾಪಪುಣ್ಯಗಳೂ ಉಂಟು ಎಂಬ ನಿರ್ಣಯಗಳು ಆ ಹೊತ್ತಿನಲ್ಲಿ ಮೂಡಿಬರುತ್ತವೆ. ಆತ್ಮಸಿದ್ಧಿಗೆ ವೇದೋಕ್ತ ಮಾರ್ಗವು ಸಾಧಕವಾಗಿದೆ ಎಂಬುದೂ ಆ ಸನ್ನಿವೇಶದಲ್ಲಿ ಮನವರಿಕೆಯಾಗುತ್ತದೆ.

'ಗವೀಪುರದ ಮಾಹಾತ್ಮ್ಯ' ಎಂಬುದು ಅತ್ಯಂತ ರೋಮಾಂಚಕಾರಿಯಾದ ಲೇಖನ. ಚಿಂತಲರಾಮಶೆಟ್ಟಿ ಎಂಬ ಶುಭಚರಿತ್ರನೂ ದೈವಭಕ್ತನೂ ಆದ ಶ್ರೇಷ್ಠಿ ಯೊಬ್ಬನು ಸಾಲಬಾಧೆಗೆ ಸಿಲುಕಿ, ಬೆಂಗಳೂರಿನ ಗವಿಗಂಗಾಧರೇಶ್ವರನ ಗುಡಿ ಯಲ್ಲಿರುವ ಗವಿಯನ್ನು ಹೊಕ್ಕು ಪ್ರಾಣಾಪಾಯಕ್ಕೆ ಸಿಲುಕಿದನು. ಕೊನೆಗೆ ಆ ಪರಮೇಶ್ವರನಿಂದಲೇ ರಕ್ಷಿತನಾಗಿ ದುಃಖದಿಂದ ಬಿಡುಗಡೆಗೊಂಡನು ಎಂಬ ಕಥಾ ಹಂದರವು ಇಲ್ಲಿನ ವೇದಾಂತಚಿಂತನೆಗೆ ಆಶ್ರಯಸ್ಥಾನವಾಗಿದೆ. ಗಂಗಾಧರೇಶ್ವರನ ಕೃಪೆಯಿಂದ ಬದುಕುಳಿದ ಚಿಂತಲರಾಮಶೆಟ್ಟಿಯು ಆ ಗುಹಾಮಾರ್ಗದಿಂದಲೇ ಕೈಲಾಸವನ್ನು ಹೊಕ್ಕು ಅಲ್ಲಿ ದೇವತೆಗಳನ್ನೂ ಋಷಿಮುನಿಗಳನ್ನೂ ಮುಕ್ತರನ್ನೂ ಕಂಡನು. ಅಲ್ಲಿ ಆಸೀನರಾಗಿದ್ದ ವೇದವ್ಯಾಸಮುನಿಗಳನ್ನು ಶ್ರೇಷ್ಠಿಯು ಮೊರೆಹೊಕ್ಕು ಬೇಕಾದಷ್ಟು

ತತ್ತ್ವವಿಚಾರಗಳನ್ನು ಅರಿತುಕೊಂಡನು. ವೇದಪ್ರಾಮಾಣ್ಯವನ್ನು ಕುರಿತಂತೆ, ವೇದೋಕ್ತ ರೀತಿಯಿಂದ ಕರ್ಮಗಳನ್ನು ಮಾಡುವುದಕ್ಕೆ ವೈಶ್ಯರಿಗೆ ಅಧಿಕಾರವಿದೆಯೆ ಎಂಬುದನ್ನು ಕುರಿತಂತೆ, ಅವಸ್ಥಾತ್ರಯಸ್ವರೂಪವನ್ನು ಕುರಿತಂತೆ ಶ್ರೇಷ್ಠಿಯು ತನ್ನ ಮನದಾಳದ ಸಂದೇಹಗಳನ್ನು ವೇದವ್ಯಾಸರ ಮುಂದಿಟ್ಟು ತಕ್ಕ ಉತ್ತರಗಳನ್ನು ಕಂಡುಕೊಂಡನು. ಕನಸು, ಎಚ್ಚರ ಎಂಬುದು ಎರಡೂ ಆಯಾ ಕಾಲದಲ್ಲಿ ಎಚ್ಚರವಾಗಿಯೂ ಸತ್ಯ ವಾಗಿಯೂ ತೋರುತ್ತದೆ ಎಂಬುದನ್ನು ಮನವರಿಕೆ ಮಾಡಿ ಕೊಂಡನು. ಶೀಲ, ಸತ್ಯ, ಯಶಸ್ಸು ಎಂಬಿವು ಚಿಂತಲರಾಮಶೆಟ್ಟಿಯ ಪೂರ್ವಜನ್ಮದ ಬಂಧುಗಳಾಗಿದ್ದು ಶರೀರಧಾರಣೆ ಮಾಡಿಕೊಂಡು ಅಲ್ಲಿಗೆ ಬಂದಿದ್ದ ವಿಚಿತ್ರವನ್ನು ಶ್ರೇಷ್ಠಿಯು ಕಂಡನು. ಆ ಬಳಿಕ ಶ್ರೇಷ್ಠಿಯು ಜಮದಗ್ನಿ ಋಷಿಗಳ ದರ್ಶನ ಪಡೆದುಕೊಂಡು, ಅವರಿಂದ ಜನ್ಮಾಂತರ ರಹಸ್ಯವನ್ನು ತಿಳಿದುಕೊಂಡನು. ಕೊನೆಗೆ ಮಾರ್ಗದರ್ಶಿಯೊಬ್ಬನು ಸೃಷ್ಟಿಸ್ಥಿತಿಲಯಗಳು ನಡೆಯುವ ದಿವ್ಯಭವನವೊಂದಕ್ಕೆ ಕರೆದೊಯ್ದು ಅಲ್ಲಿನ ವೈಚಿತ್ರ್ಯಗಳನ್ನೆಲ್ಲ ತೋರಿಸಿದನು. ಅಲ್ಲಿ ಶ್ರೇಷ್ಠಿಯು ಆತ್ಮಜ್ಯೋತಿಯೇ ಪರಂಜ್ಯೋತಿ ಎಂಬುದನ್ನು ಅರ್ಥಮಾಡಿಕೊಂಡನು.

'ಮನೋರಾಜ್ಯ' ಎಂಬ ಲೇಖನದಲ್ಲಂತೂ ಅಪೂರ್ವವಾದ ಲೋಕ ವೊಂದನ್ನು ಕೃಷ್ಣಸ್ವಾಮಿಅಯ್ಯರ್ ಅವರು ಸೃಷ್ಟಿಸಿದ್ದಾರೆ. ಒಂದು ದಿನ ಲೇಖಕರು ಯಾವುದೋ ಕಾರಿನಲ್ಲಿ ಕುಳಿತು ತಾವು ಕಂಡುಕೇಳರಿಯದ ದಿವ್ಯವಾದ ಪ್ರದೇಶ ವೊಂದನ್ನು ಆಕಸ್ಮಾತ್ ಹೊಕ್ಕರು. ಅಲ್ಲೊಂದ ಅದ್ಭುತವಾದ ಲೀಲಾಮಂಟಪವಿತ್ತು. ಜಗತ್ತಿನಲ್ಲಿರುವ ಸುಂದರ ಪದಾರ್ಥಗಳನ್ನೆಲ್ಲ ಅಲ್ಲಿ ಒಂದೇಕಡೆ ತಂದು ಜೋಡಿಸಿ ದ್ದಾರೆಯೋ ಎಂಬಂತೆ ಅದು ಕಂಗೊಳಿಸುತ್ತಿತ್ತು. ಸಕಲಮತ ಸಾಮಂಜಸ್ಯವನ್ನೂ ಸಾಮರಸ್ಯವನ್ನೂ ಉಂಟುಮಾಡುವುದಕ್ಕೆಂದು ಆ ಪುಣ್ಯಭೂಮಿಯನ್ನು ಪುಣ್ಯಾತ್ಮರು ಕೂಡಿ ನಿರ್ಮಿಸಿದ್ದರು. ಅಲ್ಲೊಂದು ವಿಶಾಲವಾದ ಗ್ರಂಥಾಲಯವಿತ್ತು. ಅದರಲ್ಲಿ ಜಗತ್ತಿನ ಸಕಲಧರ್ಮಗಳಿಗೂ ಸಂಬಂಧಿಸಿದ ಅಸಂಖ್ಯಾತ ಗ್ರಂಥಗಳಿದ್ದುವು. ಜಾತಿ ಮತಗಳ ಭೇದವಿಲ್ಲದೆ, ಸ್ತ್ರೀಪುರುಷರೆಂಬ ಭೇದವಿಲ್ಲದೆ, ಸಕಲರೂ ಅಲ್ಲಿ ಅಧ್ಯಯನ ಶೀಲರಾಗಿದ್ದರು. ಮಧ್ವಾಚಾರ್ಯರು ಉಲ್ಲೇಖಿಸಿರುವ, ಆದರೆ ಸದ್ಯಕ್ಕೆ ಎಲ್ಲಿಯೂ ಲಭ್ಯವಿಲ್ಲದ 'ಬ್ರಹ್ಮತರ್ಕ' ಎಂಬ ಗ್ರಂಥವೂ ಅಲ್ಲಿತ್ತು. ಅನ್ನಾಹಾರಗಳಿಗೆ ತಕ್ಕ ಏರ್ಪಾಟು ಅಲ್ಲಿತ್ತು. ವಿಹಾರಕ್ಕೆ ಯೋಗ್ಯವಾದ ರತ್ನಖಚಿತ ಸೋಪಾನಘಟ್ಟಗಳಿಂದ ಕೂಡಿದ ದಿವ್ಯವಾದ ನದಿಯೊಂದು ಸನಿಹದಲ್ಲಿಯೇ ಹರಿಯುತ್ತಿತ್ತು. ನಮ್ಮ ಲೇಖಕರು ಅಲ್ಲಿ ಅನೇಕ ವಿದ್ವಾಂಸರನ್ನು ಕಂಡು ವೇದಾಂತ ವಿಚಾರಗಳನ್ನು ಚರ್ಚಿಸಿದರು. ವ್ಯಾವಹಾರಿಕ - ಪಾರಮಾರ್ಥಿಕ ಎಂಬ ಭೇದ ವಿಚಾರ; ಮುಖ್ಯಾರ್ಥ-ಅಮುಖ್ಯಾರ್ಥ ಎಂಬ ಚರ್ಚೆ; ''ಸರ್ವಂ ಖಲ್ವಿದಂ ಬ್ರಹ್ಮ'' ಎಂಬ ವಾಕ್ಯದ ಸಾರ್ಥಕತೆ- ಮುಂತಾದುವನ್ನೆಲ್ಲ ಅಲ್ಲಿ

ಚಿಂತಿಸಿದರು. ತರುವಾಯ ಲೇಖಕರು ಅಲ್ಲಿಯೇ ರಾಮ ರಾಜ್ಯವೋ ಎನ್ನುವಂತಹ ಅಪೂರ್ವ ಗ್ರಾಮವೊಂದನ್ನು ಕಂಡು ಮರಳಿಬಂದರು.

ಕೊನೆಯ ಲೇಖನವು ಶ್ರೀರಾಮಾನುಜಾಚಾಯರರ ವಿಶಿಷ್ಟಾದ್ವೈತ ಸಿದ್ಧಾಂತ ದಲ್ಲಿರುವ ತೊಡಕುಗಳನ್ನು ಚರ್ಚಿಸುವ ಅತ್ಯಂತ ವಿದ್ವತ್ಪೂರ್ಣವಾದ ಪ್ರಬಂಧವಾಗಿದೆ. ಅದು ಕೃಷ್ಣಸ್ವಾಮಿಅಯ್ಯರ್ ಅವರು ಶಂಕರಸಿದ್ಧಾಂತದೊಡನೆ ರಾಮಾನುಜರ ಸಿದ್ಧಾಂತವನ್ನು ಅದಷ್ಟು ಸಮರ್ಥವಾಗಿ ತೂಗಿನೊಡಬಲ್ಲವರಾಗಿದ್ದರು ಎಂಬುದಕ್ಕೆ ಸಾಕ್ಷಿಯಾಗಿದೆ.

ಅಪೂರ್ವವಾದ ಲೋಕಗಳಲ್ಲಿ ವೇದಾಂತಪ್ರಿಯರನ್ನು ಯಾತ್ರೆ ಮಾಡಿಸುತ್ತ ವೇದಾಂತದ ವಿಶಿಷ್ಟ ತತ್ತ್ವವಿಚಾರಗಳನ್ನು ಮನಮುಟ್ಟಿಸುವ ಇಲ್ಲಿನ ಚಮತ್ಕಾರ ವಿನೂತನವಾದುದು. ಅದೆಷ್ಟೋ ಪಾತ್ರಗಳ, ಅದೆಷ್ಟೋ ಘಟನಾವಳಿಗಳ, ವಿವಿಧ ರಸಗಳ ಸುಳಿಯಲ್ಲಿ ವೇದಾಂತವು ತಿರುತಿರುಗುತ್ತ ಜಿಜ್ಞಾಸುಗಳಿಗೆ ರಂಜನೆಯನ್ನುಂಟು ಮಾಡುತ್ತದೆ. ಇಲ್ಲಿ ನಾಟಕೀಯ ಗುಣವಿದೆ; ಲೇಖಕರೇ ಸೃಷ್ಟಿಸಿರುವ ಹೊಸದೊಂದು ಆಪ್ಯಾಯಮಾನ ಜಗತ್ತಿನ ದೃಶ್ಯಾವಳಿಗಳಿವೆ; ಭೂಮಿಯನ್ನೂ ಸ್ವರ್ಗವನ್ನೂ ಬೆಸೆಯುವ ಕಲ್ಪನಾವಿಲಾಸವಿದೆ; ವೇದಾಂತ ವಿಚಾರಗಳನ್ನು ತಿಳಿಸಿಕೊಡಲು ಕೃಷ್ಣಸ್ವಾಮಿಅಯ್ಯರ್ ಅವರು ಸೃಷ್ಟಿಸಿಕೊಂಡಿರುವ ವೇದಿಕೆಗಳೆಲ್ಲ ಒಂದಕ್ಕಿಂತೊಂದು ವಿಭಿನ್ನವಾಗಿದ್ದು ನಿರೂಪಣೆಯ ಕುತೂಹಲವನ್ನು ಉದ್ದಕ್ಕೂ ಕಾಯ್ದುಕೊಳ್ಳುತ್ತವೆ. ಈ ಪರಿಯ ವೇದಾಂತ ಚಿಂತನೆ ಕನ್ನಡಕ್ಕೆ ಹೊಸತೆಂದೂ ಅದರಲ್ಲಿ ಅಯ್ಯರ್‌ರವರು ಯಶಸ್ವಿಯಾಗಿದ್ದಾರೆಂದೂ ಹೇಳಲು ನಾನು ಸಂತೋಷಪಡುತ್ತೇನೆ.

ಯಾರ ಆಸ್ವಾದನೆಗೂ ಲಭಿಸದೆ, 'ಅಧ್ಯಾತ್ಮಪ್ರಕಾಶ'ದ ಸಂಪುಟಗಳಲ್ಲೇ ಉಳಿದು, ಜನಮಾನಸದಿಂದ ಮರೆಯಾಗಿಬಿಡಬಹುದಾಗಿದ್ದ ಇಂತಹ ಉಪಯುಕ್ತ ಲೇಖನಗಳಿಗೆ ಗ್ರಂಥರೂಪವನ್ನು ಕೊಟ್ಟು, ಅದನ್ನು ಈ ಹೊಸ ಶತಮಾನಕ್ಕೆ ತಂದಿಟ್ಟ ಅಧ್ಯಾತ್ಮಪ್ರಕಾಶಕಾರ್ಯಾಲಯದ ಎಲ್ಲ ಪದಾಧಿಕಾರಿಗಳನ್ನೂ ಈ ಸಂದರ್ಭದಲ್ಲಿ ಮನಸಾರೆ ಕೊಂಡಾಡಲೇಬೇಕು. ನೀವು ಈ ಗ್ರಂಥಕ್ಕೆ ನಾಲ್ಕು ಮಾತು ಬರೆಯಬೇಕು ಎಂದು ಕಾರ್ಯಾಲಯದವರು ಹೇಳಿದ್ದೇ ಕಾರಣವಾಗಿ, ಕೃಷ್ಣಸ್ವಾಮಿಅಯ್ಯರ್ ಅವರಂತಹ ಗಣ್ಯವೇದಾಂತಿಯೊಬ್ಬರ ಬರೆಹಗಳನ್ನು ಆಸ್ವಾದಿಸುವ ಭಾಗ್ಯ ನನ್ನ ದಾಯಿತು. ಕನ್ನಡ ನಾಡಿನ ವೇದಾಂತಪ್ರಿಯರು ಈ ಗ್ರಂಥವನ್ನೋದಿ ಆನಂದ ಪಡುತ್ತಾರೆಂಬುದರಲ್ಲಿ ಸಂದೇಹವೇ ಇಲ್ಲ.

ಮೈಸೂರು ವಿಶ್ವವಿದ್ಯಾಲಯ, ಮೈಸೂರು | **ಕೆ. ಅನಂತರಾಮು**
**24-6-2015** | ನಿವೃತ್ತ ಕನ್ನಡ ಪ್ರಾಧ್ಯಾಪಕ

# ವಿಷಯಾನುಕ್ರಮಣಿಕೆ


| ಸಂಖ್ಯೆ | ವಿಷಯ | ಲೇಖಕರು | ಪುಟ |
|---|---|---|---|
| 1. | ಕೆ.ಎ.ಕೃಷ್ಣಸ್ವಾಮಿ ಅಯ್ಯರ್‌ರವರು | ಶ್ರೀಶ್ರೀಸಚ್ಚಿದಾನಂದೇಂದ್ರ ಸರಸ್ವತೀ ಸ್ವಾಮಿಗಳು | 1 |
| 2. | ಅನಂತಪ್ಪ ಮಹಾರಾಜರು | ———— ,, ———— | 8 |
| 3. | ಶಂಕರಭಗವತ್ಪಾದರವರು | ಕೆ.ಎ. ಕೃಷ್ಣಸ್ವಾಮಿಅಯ್ಯರ್ | 23 |
| 4. | ಅಪ್ಪಂಭಟ್ಟರೂ ರಾಮುವೂ | ———— ,, ———— | 27 |
| 5. | ಗೋಪಾಲಶೆಟ್ಟರ ಮನೆಯಲ್ಲಿ ಮದುವೆ | ———— ,, ———— | 31 |
| 6. | ವೃಷಭಾಲಯ | ———— ,, ———— | 38 |
| 7. | ರೈಲುಪ್ರಯಾಣ | ———— ,, ———— | 46 |
| 8. | ಗವೀಪುರದ ಮಾಹಾತ್ಮ್ಯ | ———— ,, ———— | 58 |
| 9. | ಮನೋರಾಜ್ಯ | ———— ,, ———— | 74 |
| 10. | ಶ್ರೀ ರಾಮಾನುಜಾಚಾರ್ಯರ ಸಿದ್ಧಾಂತ | ———— ,, ———— | 89 |


(ವಿ. ಸೂ.) ಅಧ್ಯಾತ್ಮ ಪ್ರಕಾಶಪತ್ರಿಕೆಯಲ್ಲಿ ಪ್ರಕಟಿತವಾದ ಲೇಖನಗಳ ವಿವರಗಳನ್ನು ಕೊನೆಯಲ್ಲಿ ಪರಿಶಿಷ್ಟದಲ್ಲಿ ಸೂಚಿಸಿದೆ.

# ಕೆ.ಎ. ಕೃಷ್ಣಸ್ವಾಮಿ ಅಯ್ಯರ್‌ರವರು

## (ಶ್ರೀಸಚ್ಚಿದಾನಂದೇಂದ್ರಸರಸ್ವತೀ ಸ್ವಾಮಿಗಳು)

ಈ ಚಿತ್ರಭಾನುಸಂವತ್ಸರದ ಶುಕ್ಲತೃತೀಯೆಯ ಭಾನುವಾರದ(ತಾ/7-2-43)ರ ದಿನ ಭರತಖಂಡದ ಜೀವಜ್ಯೋತಿಗಳಲ್ಲೊಂದರ ಪ್ರಖ್ಯಾತಪ್ರಭೆಯು ಅವ್ಯಕ್ತವಾಯಿತು. ಆ ಜ್ಯೋತಿಯ ಬೆಳಕಿನ ಆಶ್ರಯದಲ್ಲಿ ತಮ್ಮ ವ್ಯಾಪಾರವನ್ನು ಹಾಯಾಗಿ ನಡೆಯಿಸುತ್ತಿದ್ದ ಅನೇಕರ ಹೃದಯದಲ್ಲಿ ಈಗ ಶ್ರೀಕೃಷ್ಣನು ಪರಂಧಾಮಕ್ಕೆ ತೆರಳಿದ ಬಳಿಕ ಆತನ ಭಕ್ತರ ಅಂತರಂಗದಲ್ಲುಂಟಾದಂತಹ ಕಳವಳವು ಎದ್ದುಕೊಂಡಿರುತ್ತದೆ. ಶ್ರೀ ಕೆ.ಎ.ಕೃಷ್ಣಸ್ವಾಮಿ ಅಯ್ಯರ್‌ರೆಂಬ ನಾಮರೂಪಗಳ ಸಂಸ್ಮರಣೆಯೊಂದೇ ಈಗ ಅವರಿಗೆ ಉಳಿದುಕೊಂಡಿರುವ ಚಿತ್ತ ಸಮಾಧಾನೋಪಾಯವಾಗಿರುತ್ತದೆ.

ಅಯ್ಯರ್‌ರವರನ್ನು ನಾನು ಮೊದಲು ಕಂಡದ್ದು 1901ರಲ್ಲಿ. ಸೆಂಟ್ರಲ್ ಕಾಲೇಜಿನಲ್ಲಿ ಓದಬೇಕೆಂಬ ಆಸೆಯಿಂದ, ಅವರ ಸಹಾಯವನ್ನು ಬಯಸಿ ಒಂದು ಪರಿಚಯ ಪತ್ರವನ್ನು ಅವರಿಗೆ ಅಂದು ತಂದುಕೊಟ್ಟೆನು. ಮಿತ್ರಮಂಡಲಿಯ ನಡುವೆ ಕುಳಿತು ವಿನೋದದಿಂದ ಪಿಟೀಲು ಬಾರಿಸುತ್ತಾ ನಡುನಡುವೆ ರಸಹಾಸ್ಯದ ಮಾತುಗಳನ್ನು ಆಡುತ್ತಿದ್ದ ಅವರಿಗೂ ನನಗೂ ಮುಂದೆ ನಿಕಟಸಂಬಂಧವುಂಟಾದೀತೆಂಬ ಸೂಚನೆಯಾವದೂ ಆಗ ತೋರಲಿಲ್ಲ. ''ಬೇಕಾದರೆ ನಮ್ಮ ಮನೆಗೂ ಒಂದು ವಾರ ಊಟಕ್ಕೆ ಬಾರಪ್ಪ'' ಎಂದು ಉದಾಸೀನಭಾವದಿಂದ ಅವರು ನನಗೆ ಹೇಳಿದ ಉತ್ತರವಂತೂಅವರ ವಿಷಯದಲ್ಲಿ ನನಗೆ ಹೆಚ್ಚಿನ ಭಾವನೆಯುಂಟಾಗುವದಕ್ಕೆ ಯಾವ ಪ್ರೋತ್ಸಾಹವನ್ನೂ ಕೊಡಲಿಲ್ಲ. ಆದರೂ ದೈವಘಟನೆಯು ವಿಚಿತ್ರವಾದದ್ದು, ಅಂದಿನಿಂದಲೇ ಅವರಿಗೆ ನನ್ನ ಮೇಲೆ ಒಂದು ಬಗೆಯ ಅವ್ಯಾಜಪ್ರೇಮವುಂಟಾಯಿತೆಂದು ಈಗ ಹೇಳಬೇಕಾಗಿದೆ. ವಿದ್ಯಾರ್ಥಿಯ ದೆಶೆಯಲ್ಲಿ ನನಗೆ ಅವರು ಓದು ಬರಹ, ನಡೆನುಡಿ- ಮುಂತಾದವುಗಳ ತಿದ್ದುಪಡಿಗೆ ಮೇಲುಪಂಕ್ತಿ ಯಾದದ್ದಲ್ಲದೆ ಸದ್ಯಕ್ಕೆ ನನ್ನ ಜೀವನದ ಉಸಿರಾಗಿಬಿಟ್ಟಿರುವ ವೇದಾಂತಚಿಂತನೆ ಯಲ್ಲಿ ಅಭಿರುಚಿಯನ್ನು ಬೆಳೆಯಿಸಿ ಕ್ರಮವಾದ ದಾರಿಗೆ ಬಿಡುವದಕ್ಕೂ ಮುಖ್ಯ ಕಾರಣರಾದರು !

ಅನಾರೋಗ್ಯವೇ ಮುಂತಾದ ಕಾರಣಗಳಿಂದ ನಾನು ಬೆಂಗಳೂರಿನಲ್ಲಿ ಓದುವದಕ್ಕಾಗದೆ ಹೊಟ್ಟೆಯಪಾಡಿಗಾಗಿ ಸರಕಾರಿಯ ಕೆಲಸಕ್ಕೆ ಸೇರಿಕೊಂಡೆನು.

ನನಗೂ ಅವರಿಗೂ ಅಗಲಿಕೆಯಾಗಿ ಕೆಲವು ವರ್ಷಗಳಾದರೂ ಅವರು ನನ್ನನ್ನು ತಮ್ಮ ಕುಟುಂಬದಲ್ಲೊಬ್ಬನನ್ನಾಗಿ ಭಾವಿಸಿ ತೋರಿಸಿದ್ದ ಪ್ರೇಮವು ಮಾತ್ರ ನನ್ನ ಕೃತಜ್ಞತೆಯನ್ನು ಸೆರೆಹಿಡಿದಿತ್ತು. ಮುಂದೆ ನಾನು ಕುರ್ತಕೋಟಿಯ ಶ್ರೀಮಹಾ ಭಾಗವತರೆಂಬ ಸಾಧುಗಳ ಆಸರೆಯಲ್ಲಿ ಕೆಲಕಾಲವಿದ್ದಾಗ ಅವರ ಉಪನ್ಯಾಸವೊಂದನ್ನು ಇಂಗ್ಲಿಷಿನಲ್ಲಿ ಬರೆದು ಭಾಷೆಯ ತಿದ್ದುಪಡಿಗಾಗಿ ಅಯ್ಯರ್‌ರವರ ನೆರವನ್ನು ಕೋರುವ ಸಮಯವು ಬಂತು. ಆಗ ಅವರು ಚಿಕ್ಕಬಳ್ಳಾಪುರದ ಹೈಸ್ಕೂಲಿನ ಮುಖ್ಯೋಪಾಧ್ಯಾಯರಾಗಿದ್ದರು. ಆ ಸಂದರ್ಭದಲ್ಲಿ ನನಗೆ ಅವರ ಜೀವನದ ಮತ್ತೊಂದು ಪಾರ್ಶ್ವದ ದರ್ಶನವಾಯಿತು. ಕೃಷ್ಣಸ್ವಾಮಿಅಯ್ಯರ್‌ರವರು ಮನೆಯಲ್ಲಿ ಆದರ್ಶ ಕುಟುಂಬಿಗಳೂ ಸ್ಕೂಲಿನಲ್ಲಿ ಆದರ್ಶವಿದ್ಯಾಗುರುಗಳೂ ಆಗಿದ್ದದ್ದಲ್ಲದೆ ಊರಿನಲ್ಲಿ ಜನರ ಪೂರ್ಣಾನುರಾಗವನ್ನು ತಮ್ಮ ಕಡೆಗೆ ಸೆಳೆದು ಕೊಂಡಿದ್ದರು. ಚಿಕ್ಕಬಳ್ಳಾಪುರದ ಲಾಯರುಗಳು, ವರ್ತಕರುಗಳು-ಮುಂತಾದವರು ಇವರಲ್ಲಿ ಮಿಗಿಲಾದ ಗೌರವವನ್ನಿಟ್ಟುಕೊಂಡಿದ್ದರು. ಅದಕ್ಕೆ ಕಾರಣವು ಅಯ್ಯರ್‌ರವರ ದಿವ್ಯ ಸಂಭಾಷಣೆಯಿಂದ ಜನರಿಗೆ ಸಿಕ್ಕುತ್ತಿದ್ದ ಪರಮಲಾಭವೇ ಆಗಿತ್ತು. ಆ ಊರಿನ ರಾಮಮಂದಿರದಲ್ಲಿ ಜನರು ಮಾಡುತ್ತಿದ್ದ ಸತ್ಕಾಲಕ್ಷೇಪಕ್ಕೆ ಅವರಿಂದ ಒಂದು ಹೆಚ್ಚಿನ ಕಳೆ ಬಂದಿತ್ತು. ಆ ಮಂದಿರದಲ್ಲಿ ನನ್ನಿಂದ ಒಂದು ಚಿಕ್ಕ ಉಪನ್ಯಾಸವನ್ನು ಮಾಡಿಸಿ ಅವರು ಕಂಡ ಅಲ್ಪ ಗುಣವನ್ನೇ ಪ್ರಶಂಸೆಮಾಡಿ ವೇದಾಂತ ವಿಚಾರದಲ್ಲಿ ಮತ್ತೊಂದು ಹೆಜ್ಜೆಯನ್ನು ಮುಂದಿಡುವದಕ್ಕೆ ಪ್ರೋತ್ಸಾಹವನ್ನು ಕೊಟ್ಟರು.

ಆಮೇಲೆ ನಾನು ಅವರನ್ನು ಕಂಡದ್ದು ತುಮಕೂರಿನಲ್ಲಿ. ಇಷ್ಟು ಹೊತ್ತಿಗೆ ನನಗೆ ವೇದಾಂತವಿಚಾರದಲ್ಲಿ ಸ್ವಲ್ಪ ಹೆಚ್ಚಿನ ಕುತೂಹಲವುಂಟಾಗಿತ್ತು. ಭಾಷ್ಯವನ್ನು ತಕ್ಕಮಟ್ಟಿಗೆ ಓದಿಕೊಂಡು ಚತುಸ್ಸೂತ್ರೀಭಾಗವನ್ನು ಕನ್ನಡಿಸಬೇಕೆಂದು ತವಕಿಸುತ್ತಿದ್ದೆನು. ಆದರೆ ಕೃಷ್ಣಸ್ವಾಮಿ ಅಯ್ಯರ್‌ರವರು ಅದನ್ನು ಆಗಲೆ ಅನುವಾದ ಮಾಡಿರುತ್ತಾರೆಂದು ಕೇಳಿ ಆ ಅನುವಾದವು ಯಾವ ಭಾಷೆಯಲ್ಲಿದೆ ಎಂಬುದನ್ನು ತಿಳಿಯಬೇಕೆಂಬ ಇಚ್ಛೆಯಿಂದ ಅವರಲ್ಲಿಗೆ ಬಂದೆನು. ಅಯ್ಯರ್‌ರವರ ಮನೆಯವರು ಆಗತಾನೆ ಕೋಲಾರದಿಂದ ಬಂದಿಳಿದಿದ್ದರು. ಸಾಮಾನನ್ನು ಇಳಿಸಿಕೊಳ್ಳುವ ಗಡಿಬಿಡಿಯಲ್ಲಿದ್ದರೂ ಅವರು ಬಹು ಸಂತೋಷದಿಂದ ಬರಮಾಡಿಕೊಂಡು ತಾವು ಬೆಂಗಳೂರು ಮಿಥಿಕ್ ಸೊಸೈಟಿಯಲ್ಲಿ ಓದಿದ್ದ *"Fundamentals of Vedanta"* (ವೇದಾಂತದ ಅಡಿಗಟ್ಟು) ಎಂಬ ಇಂಗ್ಲಿಷ್ ಭಾಷಣದ ಪ್ರತಿಯನ್ನು ನನಗೆ ತೋರಿಸಿದರು.

ಆದರಲ್ಲಿದ್ದ ವಿಚಾರಸರಣಿಯು ನನ್ನನ್ನು ಮುಗ್ಧನನ್ನಾಗಿ ಮಾಡಿಬಿಟ್ಟಿತು. ಶ್ರೀಗೌಡಪಾದ ರವರ ಮಾಂಡೂಕ್ಯಕಾರಿಕೆಯಲ್ಲಿದ್ದ ಅವಸ್ಥಾತ್ರಯ ಪರೀಕ್ಷೆಯ ಫಲಿತಾಂಶವನ್ನು ಪಾಶ್ಚಾತ್ಯ ವಿದ್ಯಾಸಂಸ್ಕಾರವುಳ್ಳವರಿಗೆ ತಕ್ಕ ಆಧುನಿಕ ಭಾಷೆಯಲ್ಲಿ ಇಷ್ಟು ಸ್ವಲ್ಪದರಲ್ಲಿ ಅತ್ಯಂತ ಸ್ಫುಟವಾಗಿ ವಿವರಿಸಿರುವ ಅಯ್ಯರ್‌ರವರು ಸಾಮಾನ್ಯ ವ್ಯಕ್ತಿಯಲ್ಲವೆಂಬುದು ನನ್ನ ಮನಸ್ಸಿನಲ್ಲಿ ಚೆನ್ನಾಗಿ ಮೂಡಿತು.

ನಾನು ಮತ್ತೊಂದು ಸಲ ಅಯ್ಯರ್‌ರವರ ದರ್ಶನವನ್ನು ತೆಗೆದುಕೊಂಡದ್ದು ಬೆಂಗಳೂರಿನಲ್ಲಿ. ಈಗ ನಾನು ಅವರ ಸಿಫಾರಸ್ಸಿನ ಫಲವಾಗಿ ಬೆಂಗಳೂರಿನಲ್ಲಿ ಒಂದು ಮಿಡಲ್‌ಸ್ಕೂಲಿನಲ್ಲಿ ಉಪಾಧ್ಯಾಯನಾಗಿ ಬಂದಿದ್ದೆನು. ಈಗ ನನಗೆ ಕೃಷ್ಣಸ್ವಾಮಿ ಅಯ್ಯರ್‌ರವರ ನಾನಾ ಮುಖವಾದ ಪಾಂಡಿತ್ಯವೂ ಪ್ರತಿಭೆಯೂ ದಾನಧರ್ಮ ಪರೋಪಕಾರ ಬುದ್ಧಿಗಳೂ ಜನಾನುರಾಗವೂ ವಿದ್ಯಾಪಕ್ಷಪಾತಿತ್ವವೂ ಅನಿತರ ಸಾಧಾರಣವಾದ ವೇದಾಂತ ವಿಚಾರ ನೈಪುಣ್ಯವೂ ಒಂದೊಂದಾಗಿ ಮನಸ್ಸಿಗೆ ಮಿಂಚಿದವು.

ಸಂಸ್ಕೃತ, ತಮಿಳು, ತೆಲುಗು, ಇಂಗ್ಲಿಷು- ಈ ನಾಲ್ಕು ಭಾಷೆಗಳಲ್ಲಿ ಅವರಿಗೆ ಉತ್ತರೋತ್ತರವಾಗಿ ಹೆಚ್ಚಿನ ಪ್ರಾವೀಣ್ಯವಿತ್ತಲ್ಲದೆ ಕನ್ನಡದಲ್ಲಿ ಪ್ರೇಮವೂ ಆದರವೂ ಇತ್ತು. ಮನೆಯಲ್ಲಿ ಬಿಡುವಿದ್ದಾಗಲೆಲ್ಲ ಅವರು ಪಂಡಿತರೊಡನೆ ಗ್ರಂಥಕಾಲಕ್ಷೇಪವನ್ನು ಮಾಡುತ್ತಲೂ ರಸವತ್ತಾದ ಸಂಭಾಷಣೆಯನ್ನು ಮಾಡುತ್ತಲೂ ಹೊಸ ಲೇಖಕರು ಗಳಿಗೆ ಯಥೋಚಿತವಾಗಿ ಉತ್ತೇಜನವನ್ನೂ ಪ್ರೋತ್ಸಾಹವನ್ನೂ ಕೊಡುತ್ತಲೂ ಇದ್ದರು. ಅವರಿರುವ ಸ್ಥಳವೇ ಒಂದು ವಿದ್ಯಾಸಭಾಮಂಟಪವೆಂಬಂತೆ ಶೋಭಿಸುತ್ತಿತ್ತು. ಜ್ಯೋತಿಷ್ಯ, ಸಾಮುದ್ರಿಕ, ಆಯುರ್ವೇದ, ವೇದಾಧ್ಯಯನ, ವ್ಯಾಕರಣಾಲಂಕಾರ- ಮುಂತಾದ ವಿಷಯಗಳಲ್ಲಿ ನಿಪುಣರಾದವರೊಡನೆ ಸಂಭಾಷಣೆ ಮಾಡುವದು, ಅವರಿಗೆ ತಕ್ಕ ಸಹವಾಸವನ್ನೂ ಸಲಕರಣೆಯನ್ನೂ ಒದಗಿಸಿಕೊಡುವದು- ಮುಂತಾದ ರೀತಿಗಳಿಂದ ಪ್ರೋತ್ಸಾಹಿಸುವದೂ ಅವರಿಗೆ ಮೆಚ್ಚಿನ ಕಾರ್ಯಗಳಾಗಿರುತ್ತಿದ್ದವು. ದೃಶ್ಯಕಾವ್ಯ, ಶ್ರಾವ್ಯಕಾವ್ಯ- ಎರಡರಲ್ಲಿಯೂ ಅವರಿಗೆ ಅಭಿರುಚಿ, ಅವುಗಳಲ್ಲಿ ತಾವೂ ಲೇಖನಿಯನ್ನಾಡಿಸಿದವರಾದ್ದರಿಂದ ಬರಹಗಾರರೆಂದರೆ ಅವರಿಗೆ ಬಲು ಅಕ್ಕರೆ.

ಅಯ್ಯರ್‌ರವರು ಸಂಗೀತಕ್ಕೆ ತವರುಮನೆ. ಪಿಟೀಲು ಕೃಷ್ಣಸ್ವಾಮಿಅಯ್ಯರ್‌ರೇ ಮೇ ಹಲವರು ಇಂದಿಗೂ ಅವರನ್ನು ಕರೆಯುವರು. ಅವರ ಮನೆಯಲ್ಲಿ ವೀಣೆ, ಕೊಳಲು, ಮೃದಂಗ- ಮುಂತಾದ ವಾದ್ಯಗಳ ಮತ್ತು ಚಿತ್ತಾಕರ್ಷಕದ ಗಾನದ ಕಂಪಿನ ಧ್ವನಿಯು ಕಿವಿಗೆ ಕೇಳದಿರುವ ದಿನವೇ ಅಪೂರ್ವ. ಈ ವಿಷಯಕ್ಕೆ ಅವರ ಮನೆತನದವರೆಲ್ಲರೂ ಗಂಧರ್ವಾಂಶದವರೆಂದೇ ಹೇಳಬಹುದಾಗಿರುತ್ತದೆ. ಅವರು ಉತ್ತಮ ಸಂಗೀತ ವಿದ್ವಾಂಸರುಗಳ ಪರಿಚಯವುಳ್ಳವರಾಗಿದ್ದರೆಂಬುದೂ ಸಂಗೀತಗಾರರಿಗೆ ಬಗೆಬಗೆಯಿಂದ ಪ್ರೋತ್ಸಾಹವನ್ನು ಕೊಡುತ್ತಿದ್ದರೆಂಬುದೂ ಅನೇಕರಿಗೆ ತಿಳಿದಿರುವ ವಿಷಯಗಳು.

ತತ್ತ್ವಶಾಸ್ತ್ರವಿಚಾರವೆಂದರೆ ಅಯ್ಯರ್‌ರಿಗೆ ಪರಮಾದರ. ಪಾಶ್ಚಾತ್ಯತತ್ತ್ವ ಶಾಸ್ತ್ರವನ್ನು ಚಿಕ್ಕವಯಸ್ಸಿನಿಂದಲೂ ಅವರು ಅಭ್ಯಾಸಮಾಡುತ್ತಿದ್ದರೆಂದು ತಿಳಿಯಬಂದಿದೆ. ಚಾಯ್ಸನ್ ಎಂಬ ವಿದ್ವಾಂಸನು ಬರೆದಿರುವ *Elements of Metaphysics* (ಅತಿಭೌತಿಕವಿಚಾರಗಳ ಮೂಲತತ್ತ್ವಗಳು) ಎಂಬ ಗ್ರಂಥದ ವಿಮರ್ಶೆಯಾಗಿ ಬರೆದಿದ್ದ *Critical Reflections* (ವಿಮರ್ಶಾತ್ಮಕವಿಚಾರಗಳು) ಎಂಬ ಲೇಖನವನ್ನು ಆ ಗ್ರಂಥಕರ್ತನೇ ಓದಿ ಮೆಚ್ಚಿಕೆಯ ಉತ್ತರಪತ್ರವೊಂದನ್ನು ಅವರಿಗೆ ಬರೆದಿರುತ್ತಾನೆ. ವೇದಾಂತಶಾಸ್ತ್ರವೆಂಬುದಂತೂ ಅವರ ಹೃದಯವು. ವೇದಾಂತವನ್ನು ಅವರು ನಮ್ಮಗಳಂತೆ ಸಂಪ್ರದಾಯಗ್ರಂಥಗಳಿಂದ ಕ್ರಮಕ್ರಮವಾಗಿ ಓದಿ ಅಭ್ಯಾಸ ಮಾಡಿದವರಲ್ಲ; ಅವರ ವಿಚಾರದ ರಾಶಿಯು ಸಾರ್ವತ್ರಿಕಾನುಭವವೆಂಬ ಭದ್ರವಾದ ತಳಗಟ್ಟಿನ ಮೇಲೆ ನಿಂತಿರುವಂಥದ್ದು. ಅವರು ತಮಗೆ ಆಗಾಗ ಹೊಳೆದ ವೇದಾಂತ ಭಾವನೆಗಳನ್ನು ಗ್ರಂಥಗಳಲ್ಲಿಯೂ ದಿನಚರಿಯ ಪುಸ್ತಕಗಳಲ್ಲಿಯೂ ಬರೆದಿಟ್ಟಿರುತ್ತಾರೆ. ಆ ಲೇಖನರಾಶಿಯೊಂದು ತಿಳಿವಳಿಕೆಯ ಗನಿಯೆಂದರೆ ಅತ್ಯುಕ್ತಿಯಲ್ಲ. ಪುಸ್ತಕ ವೇದಾಂತಿಗಳೊಡನೆಯೂ ಅನುಭವವೇದಾಂತಿಗಳೊಡನೆಯೂ ಚರ್ಚೆಮಾಡಿ ತತ್ತ್ವ ನಿರ್ಧಾರಣೆಮಾಡುವ ಉತ್ತಮಮಾರ್ಗವನ್ನು ಅವರು ಅವಲಂಬಿಸಿದ್ದರು. ಸ್ವಪ್ನದಲ್ಲಿ ತಮಗೆ ಶ್ರೀಶಂಕರಾಚಾರ್ಯರವರೇ ತತ್ತ್ವೋಪದೇಶವನ್ನು ಮಾಡಿದರೆಂದು ಅವರ ನಂಬಿಕೆಯಿತ್ತು. ಬೆಂಗಳೂರಿನಲ್ಲಿ ಸುಪ್ರಸಿದ್ಧ ವಿದ್ವಾಂಸರಾಗಿದ್ದ ಶ್ರೀ॥ಮೋಟಗಾನಹಳ್ಳಿ ಶಂಕರಶಾಸ್ತ್ರಿಗಳೊಡನೆ ಬಹುಕಾಲ ವಿಚಾರಗೋಷ್ಠಿಯ ಸುಖವನ್ನನುಭವಿಸುತ್ತಿದ್ದರೆಂದೂ ಸಾಧುಶ್ರೇಷ್ಠರಾದ ಅನಂತಪ್ಪ ಮಹಾರಾಜರವರ ಉಪದೇಶಗಳನ್ನು ಪೂಜ್ಯಬುದ್ಧಿಯಿಂದ ಸ್ವೀಕರಿಸಿದ್ದರೆಂದೂ ಅವರ ಹೇಳಿಕೆಯಿಂದಲೂ ಬರವಣಿಗೆಯಿಂದಲೂ

ತಿಳಿಯಬಂದಿರುತ್ತದೆ. ಶಾಂಕರ ವೇದಾಂತದಲ್ಲಿ ಮೂಲಾವಿದ್ಯಾವಾದವನ್ನು ವ್ಯಾಖ್ಯಾನಕಾರರು ಹೊಸದಾಗಿ ಸೇರಿಸಿರುವರೆಂಬುದನ್ನು ನನ್ನ ಲಕ್ಷ್ಯಕ್ಕೆ ತಂದವರು ಅಯ್ಯರ್‌ರವರೇ; ಅವರೊಡನೆ ಮಾಡಿದ ಚರ್ಚೆಯ ಫಲಿತವಾಗಿಯೇ ನಾನು ಭಾಷ್ಯವನ್ನೂ ವ್ಯಾಖ್ಯಾನ ಗ್ರಂಥಗಳನ್ನೂ ವಿಮರ್ಶನಾ ದೃಷ್ಟಿಯಿಂದ ಓದಿ ಅವರ ಪ್ರೇರಣೆಯಿಂದಲೇ "**ಮೂಲಾವಿದ್ಯಾನಿರಾಸ ಅಥವಾ ಶಂಕರ ಹೃದಯ**" ಎಂಬ ಗ್ರಂಥವನ್ನು ಸಂಸ್ಕೃತದಲ್ಲಿ ಬರೆದೆನು. ನಮ್ಮಿಬ್ಬರಿಗೂ ಆದ ಚರ್ಚೆಯಲ್ಲಿ ಎಷ್ಟೋ ವಿಷಯಗಳು ಅಯ್ಯರ್‌ರವರ ಮುಖದಿಂದ ನನಗೆ ಮನವರಿಕೆಯಾದ ಬಳಿಕವೇ ಭಾಷ್ಯದಲ್ಲಿಯೂ ಅವು ಇರುವವೆಂಬುದು ನನಗೆ ತಿಳಿಯಬರುತ್ತಿತ್ತು. ಸ್ವಾನುಭವದಿಂದಲೇ ಭಾಷ್ಯದ ಹಲವು ವಿಷಯಗಳನ್ನು ಹೊರಗೆಡಹುತ್ತಿದ್ದ ಅವರನ್ನು ನಾನು ಋಷಿ ಸಮಾನರೆಂದು ಭಾವಿಸಿದ್ದರೆ ಆಶ್ಚರ್ಯವೇನು?

**ಅಧ್ಯಾತ್ಮ ಪ್ರಕಾಶ ಮಾಸಪತ್ರಿಕೆಯ** ಮೊದಲನೆಯ ಎರಡನೆಯ ಸಂಪುಟಗಳಲ್ಲಿ ಅವರು ಬರೆದಿರುವ ಹಲವುಲೇಖನಗಳಲ್ಲಿ ಅವರ ಕನ್ನಡ ಶೈಲಿಯ ಲಾಲಿತ್ಯವೂ ಗಂಭೀರವಾದ ವಿಷಯಗಳನ್ನು ಹೃದಯಂಗಮವಾದ ಕಥೆಯ ಅಥವಾ ಸಂಭಾಷಣೆಯ ಅನುಪಾನದಿಂದ ಸವಿಗಟ್ಟಾಗಿ ಮಾಡುವ ಚಾತುರಿಯೂ ಎದ್ದು ಕಾಣುವವು. ಇಂಗ್ಲಿಷಿನ ವೇದಾಂತಕೇಸರಿಯಲ್ಲಿ ಅವರ ಅನೇಕ ತತ್ತ್ವವಿಚಾರದ ಪ್ರೌಢಲೇಖನಗಳು ಬಂದಿರುತ್ತವೆ. ಶ್ರೀರಾಮಕೃಷ್ಣ ಪರಮಹಂಸರವರ ಶತಮಾನೋತ್ಸವದ ಸ್ಮಾರಕವಾಗಿ ಪ್ರಕಾಶವಾಗಿರುವ *The Cultural Heritage of India* (ಭರತಖಂಡದ ಸಂಸ್ಕೃತಿ ಪಿತ್ರಾರ್ಜಿತ) ಎಂಬ ಮಹಾ ನಿಬಂಧ ಮಾಲೆಯಲ್ಲಿ *The Philosophy of Advaita or Nondualism* (ಅದ್ವೈತ ಸಿದ್ಧಾಂತ) ಎಂಬ ಹೆಸರಿನ ಒಂದು ಉತ್ತಮ ನಿಂಬಂಧವಿರುತ್ತದೆ. *"The Drumbear of Angels"* (ದೇವತೆಗಳ ಡಂಗುರ) *"Uma's Mirror"* (ಉಮಾದರ್ಶನ) ಎಂಬ ಎರಡು ಇಂಗ್ಲಿಷು ಕಾವ್ಯಗಳು ಅಚ್ಚಾಗಿವೆ. ಡಾಕ್ಟರು ಎಂ. ಶ್ರೀನಿವಾಸರಾಯರೊಡನೆ ಅವರು ಇಂಗ್ಲೀಷಿನಲ್ಲಿ ಪ್ರಕಟಿಸಿರುವ **ಪಂಚದಶಿಯಲ್ಲಿರುವ** ಅಮೋಘವಾದ ಟಿಪ್ಪಣಿಗಳು ಅವರ ವಿಚಾರದ ಪ್ರೌಢಿಮೆಯನ್ನು ವ್ಯಕ್ತಗೊಳಿಸುತ್ತವೆ. ಎಲ್ಲಕ್ಕೂ ಮೇಲಾಗಿ *Vedanta or TheScience of Reality* -(ವೇದಾಂತವೆಂಬ ಪರಮಾರ್ಥ ವಿಜ್ಞಾನಶಾಸ್ತ್ರವು) ಎಂಬ ಗ್ರಂಥರತ್ನವಂತೂ ವೇದಾಂತ ಚಕ್ರವರ್ತಿಯ ಕಿರೀಟದಲ್ಲಿ ಶೋಭಿಸುವ ಅನರ್ಘ್ಯವಾದೊಂದು ವಜ್ರದಂತೆ ಇರುತ್ತದೆ. ಶಾಂಕರಸಿದ್ಧಾಂತವನ್ನು ಭದ್ರವಾದ

ಯುಕ್ತ್ಯನುಭವಗಳ ತಳಗಟ್ಟಿನಮೇಲೆ ನಿಲ್ಲಿಸುವುದಕ್ಕೆ ಶ್ರೀಕೃಷ್ಣಸ್ವಾಮಿಅಯ್ಯರ್‌ರವರು ಮಾಡಿರುವ ಸಾಹಸವು ಮನನ ಶೀಲರಾದ ಜಿಜ್ಞಾಸುಗಳು ಹಲವು ಶತಮಾನಗಳವರೆಗೆ ಕೃತಜ್ಞತೆಯಿಂದ ಕೊಂಡಾಡ ತಕ್ಕದ್ದಾಗಿರುವದೆಂಬುದು ಆದೊಂದು ಗ್ರಂಥದಿಂದಲೇ ಸುಸ್ಪಷ್ಟವಾಗುತ್ತದೆ.

ಇಂಥ ಮಹಾವಿಭೂತಿಗಳ ಜೀವನಚರಿತ್ರೆಯನ್ನು ವಿಸ್ತಾರವಾಗಿ ಬರೆದು ಪ್ರಕಟಿಸುವದು ಅವರಲ್ಲಿ ಪ್ರೇಮಾದರವುಳ್ಳ ಅನುಬಂಧಿಗಳು ಮತ್ತು ಶಿಷ್ಯರ ಅವಶ್ಯಕರ್ತವ್ಯವಾಗಿರುತ್ತದೆ. ಹಾಗೆ ಮಾಡುವದರಿಂದ ನಮ್ಮ ದೇಶದ ಯುವಕರಿಗೆ ಒಂದು ಉತ್ತಮವಾದ ಜೀವನಧ್ಯೇಯವನ್ನು ದೊರಕಿಸಿಕೊಟ್ಟ ಪುಣ್ಯವೂ ಲಭಿಸುತ್ತದೆ. ಆದ್ದರಿಂದ ಈ ಮಂಗಲಚರಿತ್ರೆಯ ವಿಶೇಷಾಂಕಗಳು ಯಾರು ಯಾರಿಗೆ ಎಷ್ಟೆಷ್ಟು ತಿಳಿದಿದ್ದರೂ ಅಷ್ಟಷ್ಟನ್ನು ತಿಳಿಸಿಕೊಟ್ಟು ಉಪಕಾರ ಮಾಡಬೇಕೆಂದು ಸೆರಗೊಡ್ಡಿ ಬೇಡಿಕೊಳ್ಳುತ್ತೇನೆ. ಅಯ್ಯರ್‌ರವರು ಕುಟುಂಬದವರಿಗೆಲ್ಲರಿಗೂ ಅವರ ಅಗಲಿಕೆ ಯಿಂದಾಗಿರುವ ದುಃಖವನ್ನು ತಡೆದುಕೊಳ್ಳುವ ಶಕ್ತಿಯನ್ನು ಪರಮೇಶ್ವರನು ಅನುಗ್ರಹಿಸಲಿ. ಅವರು ಬರೆದಿಟ್ಟಿರುವ ಗ್ರಂಥಗಳನ್ನು ಪ್ರಕಟಿಸುವದಕ್ಕೂ ಅಚ್ಚು ಮಾಡಿಸಿರುವ ಪುಸ್ತಕಗಳನ್ನು ಪ್ರಚಾರಮಾಡುವದಕ್ಕೂ ಅವರ ಮೆಚ್ಚಿಗೆಯ ಶಿಷ್ಯರಿಗೂ ಇಷ್ಟಮಿತ್ರರಿಗೂ ಆ ಭಗವಂತನು ಪ್ರೇರಣೆಯನ್ನುಂಟುಮಾಡಲಿ ! ಆ ಮಹನೀಯರು ವೇದಾಂತವಿಚಾರಕ್ಕೆ ಉಂಟುಮಾಡಿರುವ ವಿಚಾರಪ್ರಚೋದನೆಯ ಫಲವು ವೇದಾಂತಿಗಳ ಹೃದಯದಲ್ಲಿ ಸ್ಥಿರವಾಗಿ ನೆಲಸಲಿ !

**ವಿದ್ಯಾಮರ್ಥಂ ಚ ದಾರಾನ್ ಸುಕೃತಮಪಿ ಗೃಹಂ ಪುತ್ರಪೌತ್ರಾಭಿವೃದ್ಧಿಂ**
**ಸಂಪಾದ್ಯೈವಂ ಸ್ವಧರ್ಮಾಚರಣಮಥ ವಿಭೋರರ್ಚನಂ ಸಂವಿಧೇಯಮ್ ॥**

**ದಾನಂ ದಾನ್ತಿರ್ದಯೈವಂ ನಿಜಪರಸಮತಾಬುದ್ಧಿರಪ್ಯೇವಮೇವಂ**
**ಸ್ವಾಚಾರೇಣೈವ ದೇಷ್ಟಾ ಬತ ಕಥಮಿಹ ನೋ ದೃಶ್ಯತಾಮೇತಿ ಕೃಷ್ಣಃ ॥1॥**

**ಭಾವಾರ್ಥ** : ವಿದ್ಯೆಯನ್ನೂ ಅರ್ಥವನ್ನೂ ಹೆಂಡತಿ, ಪುಣ್ಯಕರ್ಮ, ಮನೆ, ಮಕ್ಕಳ ಮೊಮ್ಮಕ್ಕಳ ಅಭಿವೃದ್ಧಿ, ಇದೆಲ್ಲವನ್ನೂ ಹೀಗೆ ಸಂಪಾದನೆಮಾಡಿ ಸ್ವಧರ್ಮಾಚರಣೆ ಯನ್ನು ಪರಮೇಶ್ವರ ಪೂಜೆಯಾಗಿ ಮಾಡಬೇಕು. ದಾನವೆಂದರೆ ಹೀಗೆ, ದಾಂತಿ ಯೆಂದರೆ ಹೀಗೆ. ಮನೆಯೆಂದರೆ ಹೀಗೆ, ತನ್ನವರಲ್ಲಿಯೂ ಮತ್ತೊಬ್ಬರಲ್ಲಿಯೂ ಸಮತ್ವಬುದ್ಧಿ ಯನ್ನಿಡುವದು ಹೀಗೆ- ಎಂದೀ ಪರಿಯಲ್ಲಿ ತನ್ನ ಆಚಾರದಿಂದಲೇ ಉಪದೇಶಮಾಡುವ ಕೃಷ್ಣನು, ಅಯ್ಯೋ, ನಮಗೆ ಇಲ್ಲಿ ಹೇಗೆ ದೃಶ್ಯವಾಗುವನು?

ಕಾವ್ಯ ನಾಟಕ ಸಂಗೀತತತ್ತ್ವಶಾಸ್ತ್ರಾಬ್ಧಿಚನ್ದ್ರಮಾಃ ।
ಸಂಸ್ಕೃತದ್ರಾವಿಡಾನ್ಧ್ರಾಙ್ಗ್ಲಭಾಷಾಭೂಷಣಭಾರತೀ ॥2॥

ನಿತ್ಯಾನನ್ದಪ್ರದಾದ್ವೈತ ವೇದಾನ್ತಾಬ್ಜವಿಭಾವಸುಃ ।
ಕೃಷ್ಣಾರ್ಯೋ ವಿಷ್ಣುಪದವೀಂ ಪ್ರಾಪ್ತಃ ಕೃಷ್ಣ ಇವಾಪರಃ ॥3॥

ಭಾವಾರ್ಥ : ಕಾವ್ಯ, ನಾಟಕ, ಸಂಗೀತ, ತತ್ತ್ವಶಾಸ್ತ್ರ- ಎಂಬ ಕಡಲನ್ನುಕ್ಕೇರಿಸುವ ಸಂಸ್ಕೃತ, ತಮಿಳು, ತೆಲುಗು, ಇಂಗ್ಲಿಷ್- ಎಂಬ ಭಾಷೆಗಳೆಂಬ ಅಲಂಕಾರ ಗಳಿಂದೊಪ್ಪುವ ಸರಸ್ವತಿಯೂ ನಿತ್ಯಾನಂದವನ್ನು ಕೊಡುವ ವೇದಾಂತ ಕಮಲವನ್ನ ರಳಿಸುವ ಸೂರ್ಯನೂ ಆದ ಕೃಷ್ಣಾರ್ಯನು ಮತ್ತೊಬ್ಬ ಕೃಷ್ಣನೋ ಎಂಬಂತೆ ವಿಷ್ಣುಪದವಿಯನ್ನು ಪಡೆದಿರುತ್ತಾನೆ.

*****

# ಅನಂತಪ್ಪ ಮಹಾರಾಜರವರು

## (ಶ್ರೀಸಚ್ಚಿದಾನಂದೇಂದ್ರಸರಸ್ವತೀ ಸ್ವಾಮಿಗಳು)

"ಯಾವಾತನನ್ನು ಸಾಧುವೆಂದಾಗಲಿ ಅಸಾಧುವೆಂದಾಗಲಿ ಓದದವನೆಂದಾಗಲಿ ಬಹಳ ಕಲಿತವನೆಂದಾಗಲಿ ಯಾರೂ ಅರಿಯರೋ ಆತನೇ ಬ್ರಾಹ್ಮಣನು."

ಮಹಾಭಾರತ

ಭೂಲೋಕದಲ್ಲಿರುವ ಅನೇಕ ಮಹಾವ್ಯಕ್ತಿಗಳನ್ನು ಜನರು ಸ್ವಲ್ಪವೂ ಅರಿಯದೆಯೇ ಇರುವರು. ದೊಡ್ಡವರ ಒಂದು ವಿಲಕ್ಷಣಸ್ವಭಾವವೇನೆಂದರೆ ತಮ್ಮ ವ್ಯಕ್ತಿತ್ವದ ನೆರಳು ಯಾರ ಮೇಲೂ ಬೀಳದೆಯೇ ಎಲ್ಲರಿಗೂ ಉಪಕಾರವನ್ನು ಮಾಡುತ್ತಿರುವದು. ಆ ಉಪಕಾರವು ಶಾಶ್ವತವಾದ ಫಲವನ್ನುಂಟುಮಾಡುವಂತೆ ನಡೆದುಕೊಳ್ಳುವದು. ಇಂಥ ಮಹಾಮಹಿಮರ ಗುಂಪಿಗೆ ಸೇರತಕ್ಕವರು, ಬೆಂಗಳೂರಿನ ಶ್ರೀ ಅನಂತಪ್ಪ ಮಹಾರಾಜರವರು. ಈಗ ಬೆಂಗಳೂರಿನಲ್ಲಿ ಅಣ್ಣಮ್ಮನ ಗುಡಿಯ ಬೀದಿಯಲ್ಲಿ ಅವರ ಹೆಸರಿನಲ್ಲಿ ಒಂದು ಮಠವಿದೆ. ಸಾಧುಸಂತರುಗಳು ಆಗಾಗ್ಗೆ ಅಲ್ಲಿಗೆ ಬಂದು ಇಳಿದುಕೊಳ್ಳುತ್ತಾರೆ. ವಿಚಾರಗಳನ್ನೂ ಪ್ರವಚನವನ್ನೂ ನಡೆಯಿಸುತ್ತಾರೆ. ಆದರೆ ಅವರ ಶಿಷ್ಯಮಂಡಳಿಗೆ ಸೇರಿದ ಕೆಲವರಿಗೆ ಹೊರತು ಮಿಕ್ಕವರಿಗೆ ಅನಂತಪ್ಪಮಹಾರಾಜರೆಂದರೆ ಯಾರೆಂಬುದೇ ತಿಳಿಯದು.

ನನಗೆ ಆ ಮಹನೀಯರ ಹೆಸರು ಕಿವಿಗೆ ಬಿದ್ದದ್ದು ಹೀಗೆ : ಕೆ.ಎ. ಕೃಷ್ಣಸ್ವಾಮಿ ಅಯ್ಯರ್‌ರವರು ಬರೆದಿರುವ 'ವೇದಾಂತ ಅಥವಾ ಪರಮಾರ್ಥಸತ್ಯ ಶಾಸ್ತ್ರ' *(Vedanta or the Science of Reality)* ಎಂಬ ಇಂಗ್ಲಿಷು ಪುಸ್ತಕದ ಪೀಠಿಕೆಯಲ್ಲಿ ಒಂದು ಮಹಾವಾಕ್ಯವಿದೆ; 'ಅವಸ್ಥಾತ್ರಯ ವಿಚಾರದ ಪ್ರಾಮುಖ್ಯವು ನನ್ನ ಮನಸ್ಸಿಗೆ ಹತ್ತಿದ್ದು ಮೂವತ್ತುವರ್ಷಗಳ ಹಿಂದೆ; ಅತ್ಯಂತ ಯುಕ್ತಿ ಪ್ರಧಾನವಾಗಿರುವ ಪ್ರಕ್ರಿಯೆಯಿಂದ ಬೋಧಿಸುತ್ತಿದ್ದ ಇಬ್ಬರು ಮಹಾಶಯರ ಸಹವಾಸದಿಂದ ನನಗೆ ಈ ಲಾಭವಾಯಿತು. ಅವರಲ್ಲಿ ಒಬ್ಬರು ಕೀರ್ತಿಶೇಷ ರಾಗಿರುವ ಬೆಂಗಳೂರಿನ ಶ್ರೀ ಅನಂತಪ್ಪಮಹಾರಾಜರವರು, ಇನ್ನೊಬ್ಬರು ಮೋಟಗಾನಹಳ್ಳಿಯ ಶಂಕರಶಾಸ್ತ್ರಿಗಳವರು. ಅವರಿಬ್ಬರೂ ನನ್ನ ಪಾಲಿಗೆ ಜಗದ್ಗುರು ಶ್ರೀಶಂಕರಾಚಾರ್ಯರವರ ಜೀವಂತ ಪ್ರತಿನಿಧಿಗಳಾಗಿರುತ್ತಿದ್ದರು.' ಈ ವಾಕ್ಯವನ್ನು ಓದುತ್ತಲೂ ನನ್ನ ಹೃದಯದಲ್ಲಿ 'ಈ ಅನಂತಪ್ಪಮಹಾರಾಜರೆಂಬುವರು ಯಾರು? ಇದನ್ನು ಕೇಳಿ ತಿಳಿದುಕೊಳ್ಳಬೇಕು'

ಎಂಬ ಕುತೂಹಲವು ಮೊಳಕೆಯಾಯಿತು. ಅದರ ಫಲವಾಗಿ ಶ್ರೀ ಕೆ.ಎ. ಕೃಷ್ಣಸ್ವಾಮಿ ಅಯ್ಯರ್‌ರವರ ಮೂಲಕ ದೊರೆತ ವಿಷಯಗಳಿವು; ಇವನ್ನು ನಾನು ಅಮೃತಬಿಂದುಗಳೆಂದೇ ಭಾವಿಸುತ್ತೇನೆ. ಆದರೆ ಅನಂತಪ್ಪನವರ ಜೀವಿತದ ಪುಣ್ಯಚರಿತ್ರೆಯನ್ನು ಕೇಳಬೇಕೆಂದು ನನ್ನ ಮನಸ್ಸಿನ ಹಸಿವು ಇಷ್ಟರಿಂದಲೇ ಅಡಗುವಹಾಗಿಲ್ಲ. ಹೆಚ್ಚು ತಿಳಿದಿರುವ ಯಾರಾದರೂ ಮಹನೀಯರು ಅವರ ಪೂರ್ಣಪರಿಚಯವನ್ನು ಮಾಡಿಕೊಟ್ಟರೆ ತುಂಬ ಕೃತಜ್ಞನಾಗಿರುವೆನು. ಸದ್ಯಕ್ಕೆ ನಾನು ಶ್ರೀ ಅಯ್ಯರ್‌ರವರ ಮಾತುಗಳಿಂದ ದೊರೆತ ಕೆಲವು ಸಂಗತಿಗಳನ್ನೇ ಇಲ್ಲಿ ವಾಚಕರಿಗೆ ಸಮರ್ಪಿಸುತ್ತೇನೆ.

'ನಾನು ಅರಳೇಪೇಟೆಯಲ್ಲಿದ್ದಾಗ ಒಂದು ದಿನ ಒಬ್ಬ ಬ್ರಾಹ್ಮಣರು ನಮ್ಮ ಮನೆಗೆ ಉಪಾದಾನಕ್ಕೆ ಬಂದರು. ಹೊಸದಾಗಿ ಬಿ.ಎ. ಪರೀಕ್ಷೆಯನ್ನು ಮಾಡಿ ಆಧುನಿಕ ವಿಚಾರಧಾರೆಯ ಭಾವನೆಗಳಿಂದ ತುಂಬಿತುಳುಕುತ್ತಿದ್ದ ನನಗೆ ಬ್ರಾಹ್ಮಣರು ಹೀಗೆ ಸೋಮಾರಿತನದಿಂದ ಕಾಲವನ್ನು ಕಳೆಯುವದು ಯುಕ್ತವಲ್ಲವೆಂದು ತೋರಿತು. ಸ್ವಲ್ಪ ಬಿರುಸಾದ ಮಾತುಗಳಿಂದಲೇ ''ಏಕಪ್ಪ, ಏನಾದರೊಂದು ವೃತ್ತಿಯನ್ನವಲಂಬಿಸಬಾರದೆ? ಕೈಕಾಲು ಗಟ್ಟಿಯಾಗಿರುವವರೂ ಹೀಗೆ ಭಿಕ್ಷಕ್ಕೆ ಹೊರಟರೆ ಹೇಗೆ?'' ಎಂದೆನು. ಅವರು ಸಾತ್ತ್ವಿಕಸ್ವಭಾವದವರಾದ್ದರಿಂದ ''ಸ್ವಾಮಿ ತಮಗೆ ಇಷ್ಟು ಕೋಪವೇಕೆ? ನಾನೇನೋ ಈಗ ಯಾವ ಉದ್ಯೋಗವನ್ನು ಮಾಡುವ ಹಾಗಿಲ್ಲ. ಪುಣ್ಯವಶದಿಂದ ಒಬ್ಬ ಸದ್ಗುರುಗಳು ದೊರೆತಿದ್ದಾರೆ. ಅವರಲ್ಲಿ ಸದ್ವಿಚಾರಮಾಡಿಕೊಂಡು ಹೀಗೆ ಉಪಾದಾನದಿಂದ ಕಾಲಕ್ಷೇಪವನ್ನು ಮಾಡಿಕೊಂಡಿದ್ದೇನೆ. ತಮಗೆ ಇದು ಸರಿಯಲ್ಲವೆಂದು ಕಂಡರೆ ತಾವು ಉಪಾದಾನವನ್ನು ಹಾಕಬೇಕಾದ್ದೇ ಇಲ್ಲವಲ್ಲ!'' ಎಂದರು. ನನಗೆ ಸ್ವಲ್ಪ ಕುತೂಹಲವಾಯಿತು. 'ಆ ಗುರುಗಳು ಯಾರು? ನಾನೂ ಅವರ ಬಳಿಗೆ ಬಂದು ಮಾತನಾಡಬಹುದೆ' ಎಂದು ಮುಂತಾಗಿ ವಿಚಾರಿಸಿದೆನು. ಅವರು ಅನಂತಪ್ಪಮಹಾರಾಜರವರ ವಿಚಾರವನ್ನು ತಿಳಿಸಿದರು. ಇದೇ ನನಗೆ ಆ ಮಹಾತ್ಮರ ಪ್ರಥಮ ದರ್ಶನಕ್ಕೆ ಕಾರಣವಾಯಿತು.

'ಸಾಯಂಕಾಲಕ್ಕೆ ಹೋಗಿ ನೋಡುವಲ್ಲಿ ಗುರುಮಹಾರಾಜರವರು ಕೆಲವರು ಶಿಷ್ಯರೊಡನೆ ಒಂದು ಕಡೆ ಕುಳಿತಿದ್ದರು. ನೋಡುವದಕ್ಕೇನೂ ವೇಷ ಭಾಷೆಗಳಲ್ಲಿ ಆಡಂಬರವಿರಲಿಲ್ಲ. ಒಂದು ಕೌಪೀನವನ್ನು ಹಾಕಿಕೊಂಡು, ಒಂದು ಪಂಚೆಯನ್ನು ಕಂಕುಳ ಕೆಳಗೆ ಬರುವಂತೆ ಹೊದೆದುಕೊಂಡಿದ್ದರು. ಮುಖವನ್ನು ನೋಡಿದರೆ ಬಹಳ ಓದಿದವರೆಂದಾಗಲಿ ಪಂಡಿತರೆಂದಾಗಲಿ ತೋರುತ್ತಿರಲಿಲ್ಲ; ಆದರೂ ಈ ಸಾಧಾರಣ ವ್ಯಕ್ತಿಯ ಶಾಂತತೆಯು ನನ್ನನ್ನು ಒಂದಿಷ್ಟು ತನ್ನ ಕಡೆಗೆ ಸೆಳೆದುಕೊಂಡಿತು. ಶಿಷ್ಯರುಗಳು

ತೋರಿಸುತ್ತಿದ್ದ ಗೌರವದಿಂದ ಅವರಲ್ಲಿ ಒಂದು ಬಗೆಯ ಪೂಜ್ಯಬುದ್ಧಿಯೂ ತೋರಿಕೊಂಡಿರಬಹುದು. ಅಲ್ಲಿ ನಡೆಯುತ್ತಿರುವ ವೇದಾಂತವಿಚಾರವೇ ಮುಂತಾದವುಗಳನ್ನು ಕಂಡು ಬೆಳಗ್ಗೆ ಆ ಬ್ರಾಹ್ಮಣನನ್ನು ಅನ್ಯಾಯವಾಗಿ ಗದರಿಸಿದೆನಲ್ಲ ! - ಎಂಬ ಪಶ್ಚಾತ್ತಾಪವುಂಟಾಯಿತು. ಆದರೆ ನೋಡಿದರೆ ನಾನು ಆ ದಿನ ಮಾಡಿದ್ದೇ ಸರಿಯಾಯಿತೆಂದು ಹೇಳಬೇಕಾಗಿದೆ. ಇಲ್ಲದಿದ್ದರೆ ಆ ಅಭುಕ್ತಮೂಲೆಯಲ್ಲಿ ಇಂಥ ಒಬ್ಬ ಮಹಾತ್ಮರು ಇರುವರೆಂದು ನನಗೆ ಹೇಗೆ ತಾನೆ ಗೊತ್ತಾಗುತ್ತಿತ್ತು?

'ಸರಿ, ಅಂದಿನಿಂದ ನನಗೆ ಅವರಿದ್ದ ಸ್ಥಳಕ್ಕೆ ಹೋಗಿಬರಬೇಕೆಂಬ ಆಶೆಯು ಮೂಡಿಕೊಂಡಿತು. ಅವರು ನನ್ನನ್ನು ಬೇರೆಬೇರೆ ಪ್ರಶ್ನೆಗಳಿಂದ ಪರೀಕ್ಷಿಸಿ ನನಗೆ ಎಷ್ಟರಮಟ್ಟಿಗೆ ತಿಳಿವಳಿಕೆಯಿದೆ ಎಂಬುದನ್ನು ಬಲುಬೇಗನೆ ತಿಳಿದುಕೊಂಡು ಬಿಟ್ಟರು; ನಾನು ಇನ್ನೂ ತಿಳಿದುಕೊಳ್ಳಬೇಕಾದದ್ದು ಇದೆ ಎಂಬುದನ್ನೂ ನನಗೆ ಬಲು ಬೇಗನೆ ಮನಗಾಣಿಸಿಕೊಟ್ಟುಬಿಟ್ಟರು.[1] ಆಮೇಲೆ ಪ್ರತಿದಿನವೂ ಸಾಯಂಕಾಲ ನಾನು ಉದ್ಯೋಗಮಾಡುತ್ತಿದ್ದ ಕಾಲೇಜಿನಿಂದ ಹಿಂತಿರುಗುವಾಗ ಗಾಡಿಯು ಅನಂತಪ್ಪಮಹಾರಾಜರವರ ಮಠಕ್ಕೇ ನೇರಾಗಿ ಹೋಗುತ್ತಿತ್ತು. ನಾನು ಸುಮಾರು ೪ ಘಂಟೆಯಿಂದ ೭ ಘಂಟೆಯವರೆಗೂ ಅಲ್ಲಿಯೇ ಪಾಠವು ನಡೆಯುವದನ್ನು ಕೇಳುತ್ತಲೋ ವಿಚಾರಮಾಡುತ್ತಲೋ ಆ ಗುರುವರ್ಯರ ಸನ್ನಿಧಿಯಲ್ಲಿಯೇ ಕಾಲವನ್ನು ಕಳೆಯುತ್ತಿದ್ದೆನು.

'ಮಠದಲ್ಲಿ ಭಗವದ್ಗೀತೆ, ಪಂಚದಶಿ - ಮುಂತಾದವುಗಳ ಪಾಠಪ್ರವಚನವು ಪ್ರತಿದಿನವೂ ನಡೆಯುತ್ತಿತ್ತು. ಬ್ರಾಹ್ಮಣರೂ ಅಬ್ರಾಹ್ಮಣರೂ ಅನೇಕರು ಬಂದು ನೆರೆಯುತ್ತಿದ್ದರು. ಗುರುಮಹಾರಾಜರು ಎಲ್ಲರೊಡನೆಯೂ ಶಾಂತತೆಯಿಂದಲೇ ವಿಚಾರಮಾಡುತ್ತಿದ್ದರು. ಯಾರ ಮನಸ್ಸನ್ನೂ ನೋಯಿಸುತ್ತಿರಲಿಲ್ಲ; ಯಾರೊಬ್ಬರ

---

1. ಒಂದು ಸಲ ಶ್ರೀಯುತ ಅಯ್ಯರ್‌ರವರು 'ವೇದಾಂತದಿಂದ ಯಾವ ಪ್ರಯೋಜನವಾಗುತ್ತದೆ?' ಎಂದು ಕೇಳಿದರಂತೆ. ಗುರುಗಳು ಕೂಡಲೆ ಅವರ ಇಂಗಿತವನ್ನು ಅರಿತು 'ವೇದಾಂತದಿಂದ ಆಕಾಶಗಮನವೇ ಮುಂತಾದ ಸಿದ್ಧಿಗಳು ಯಾವವೂ ದೊರಕುವುದಿಲ್ಲ, ಅಣಿಮಾದಿಸಿದ್ಧಿಗಳು ಬೇಕಾದರೆ ಯೋಗಾಭ್ಯಾಸವನ್ನು ಮಾಡಬೇಕು. ಆದರೆ ಪರಮಾರ್ಥದ ಜ್ಞಾನವು ಆಗಬೇಕಾದರೆ ಮಾತ್ರ ವೇದಾಂತವನ್ನೇ ಓದಬೇಕು' ಎಂದು ಹೇಳಿದರಂತೆ. ಸಿದ್ಧಿಗಳು ದೊರಕುವದಕ್ಕಿಂತಲೂ ಜ್ಞಾನಲಾಭವು ಹೆಚ್ಚಿನದು ಎಂಬುದರ ಅರಿವು ಕೂಡಲೆ ಅಯ್ಯರ್‌ರವರ ಮನಸ್ಸಿನಲ್ಲಿ ನಾಟಿತಂತೆ. ಹೀಗೆಂದು ಅಯ್ಯರವರೇ ನಮಗೆ ಒಂದು ಸಲ ಹೇಳಿರುತ್ತಾರೆ -ಸಂ.ಅ.ಪ್ರ.

ಕುತೂಹಲವನ್ನೂ ಅಸಡ್ಡೆಮಾಡುತ್ತಿರಲಿಲ್ಲ. ಎಲ್ಲರಿಗೂ ತಿಳಿಯುವಂತೆ ತಿಳಿಗನ್ನಡದಲ್ಲಿ ವಿಷಯವನ್ನು ಪ್ರತಿಪಾದಿಸುತ್ತಿದ್ದರು. ಅವರು ಸಂಸ್ಕೃತವನ್ನೇನೂ ಹೆಚ್ಚಾಗಿ ಓದಿರಲಿಲ್ಲ; ಆದರೆ ಸಂಸ್ಕೃತಪಂಡಿತರುಗಳೂ ಅವರ ಮಾತುಗಳಿಗೆ ತಲೆದೂಗುತ್ತಿದ್ದರು. ಅವರು ಹೇಳಿದ ವಾದವು ತತ್ತ್ವಾನುಭವಕ್ಕೆ ಸರಿಯಾಗಿದ್ದದ್ದರಿಂದ ಎಂಥ ಕುಶಲಮತಿಗಳಾದರೂ ಅವರ ಮೇಲೆ ಪ್ರತಿವಾದವನ್ನು ಹೂಡುವದಕ್ಕೆ ಆಗುತ್ತಿರಲಿಲ್ಲ. ಸಂಸ್ಕೃತ ಪಂಡಿತರುಗಳು ಯಾರಾದರೂ ಬಂದರೆ ತಾವು ಗ್ರಂಥವನ್ನು ಓದದೆ ಅವರಿಂದಲೇ ಓದಿಸಿ ಅರ್ಥವನ್ನು ಹೇಳುತ್ತಿದ್ದರು. ಒಮ್ಮೆ ಒಬ್ಬ ಸಂಸ್ಕೃತಪಂಡಿತ ಮಹಾಶಯರು ಸುಮಾರು ಒಂದು ಘಂಟೆಯವರೆಗೂ ದೀರ್ಘವಾಗಿ ಸಂಸ್ಕೃತದಲ್ಲಿ ಉಪನ್ಯಾಸಮಾಡಿದರು.[1] ಕೊನೆಯಲ್ಲಿ ಅನಂತಪ್ಪಮಹಾರಾಜರವರು ಶಾಂತರೀತಿಯಿಂದ ಕೇಳಿದ ಎರಡು ಗಡುಚಾದ ಪ್ರಶ್ನೆಗಳಿಗೆ ಉತ್ತರವನ್ನು ಹೇಳಲಾರದೆ ತಮ್ಮ ವಿದ್ವತ್ತಿಗೂ ಎಲ್ಲೆಕಟ್ಟು ಉಂಟು ಎಂಬುದನ್ನೂ ಅವರು ಮನಗಂಡರು.

'ಅನಂತಪ್ಪಮಹಾರಾಜರವರಿಗೆ ಅವಸ್ಥಾತ್ರಯ ಪ್ರಕ್ರಿಯೆಯಲ್ಲಿ[2] ಹೆಚ್ಚಿನ ಆದರವಿರುತ್ತಿತ್ತು. ಯಾವ ವಿಚಾರವು ಬಂದರೂ ಹೇಗೋ ಅವಸ್ಥೆಗಳ ವಿಚಾರಕ್ಕೆ

---

**1.** ಇವರೊಬ್ಬರು ತಾರ್ಕಿಕರಾಗಿರಬಹುದೆಂದು ನಮ್ಮ ಊಹೆ. ಗುರು ಮಹಾರಾಜರನ್ನೇ ಆಕ್ಷೇಪಿಸಿದಂತೆ ಅವರು ಪ್ರಶ್ನೆಗಳನ್ನು ಹಾಕಿದಂತೆಯೂ ಆಗ ಅವರು 'ನನ್ನನ್ನು ಜಯಿಸುವದಕ್ಕಿಂತಲೂ ನಿಮ್ಮ ಮನಸ್ಸನ್ನು ಜಯಿಸುವರು ಹೆಚ್ಚಿನದಲ್ಲವೆ?'' ಎಂದು ಕೇಳಿದಂತೆಯೂ ಅಯ್ಯರ್‌ರವರು ನಮಗೆ ಹೇಳಿದ್ದರು. ಪರಮಾಣುವಾದದ ಜಳ್ಳುತನವನ್ನು ಈ ಸಂದರ್ಭದಲ್ಲಿ ಅನಂತಪ್ಪಮಹಾರಾಜರು ತೋರಿಸಿಕೊಟ್ಟರೆಂದು ಅಯ್ಯರವರು ಹೇಳಿದ ನೆನಪು ನಮಗಿದೆ. ಸಂ.ಅ.ಪ್ರ.

---

**2.** ಒಂದು ಸಲ ಅಯ್ಯರ್‌ರವರು ಡಾಯ್ಸನ್ ಎಂಬ ಪಾಶ್ಚಾತ್ಯ ವಿದ್ವಾಂಸನು ಬರೆದಿರುವ ವೇದಾಂತವಿಚಾರಕ್ರಮವನ್ನು ಕುರಿತು ಗುರುಗಳಲ್ಲಿ ಪ್ರಸ್ತಾಪಿಸಿದರಂತೆ. ಆಗ ಗುರುಗಳು ಆತನು ಆತ್ಮಸಿದ್ಧಿಯನ್ನು ಹೇಗೆ ಮಾಡಿರುತ್ತಾನೆ? ಎಂದು ಕೇಳಿದರಂತೆ. ಆತ್ಮನನ್ನು ಸಂಕಲ್ಪ *(Will)* ಶಕ್ತಿಯಾಗಿ ಭಾವಿಸಿ ಆತನು ಬರೆದಿರುವದನ್ನು ಅಯ್ಯರ್‌ರವರು ವಿವರಿಸಲು ಮಹಾರಾಜರು ತಲೆಯನ್ನು ಅಲುಗಾಡಿಸಿ 'ಉಹೂ, ಇದೆಲ್ಲ ನಡೆಯಲಾರದು, ಅವಸ್ಥಾತ್ರಯ ಮಾರ್ಗದಿಂದಲ್ಲದೆ ಇದು ಎಂದಿಗೂ ಮನಸ್ಸಿಗೆ ಒಪ್ಪಾಗಲಾರದು!' ಎಂದರಂತೆ. ಅಂದಿನಿಂದ ಅವಸ್ಥಾತ್ರಯದ ಹೆಚ್ಚುಗಾರಿಕೆಯನ್ನು ತಿಳಿದುಕೊಳ್ಳಬೇಕೆಂಬ ಕುತೂಹಲವು ತಮ್ಮನ್ನು ಪೀಡಿಸಹತ್ತಿತ್ತೆಂದು ಅಯ್ಯರ್‌ರವರು ನಮಗೆ ಹೇಳಿದ ನೆನಪಿದೆ. -ಸಂ.ಅ.ಪ್ರ.

ಬಂದುಮುಟ್ಟಿಬಿಡುತ್ತಿದ್ದರು. ಕೂಡಲೆ ಸಂಶಯಕ್ಕೆಡೆಯಾಗಿದ್ದ ವಿಷಯದ ತತ್ತ್ವವು ಪ್ರಶ್ನೆಮಾಡಿದವರಿಗೆ ಮನದಟ್ಟಾಗಿಬಿಡುತ್ತಿತ್ತು. ಅವರು ಆಗಾಗ್ಗೆ ಈ ವಿಷಯದಲ್ಲಿ ನನ್ನ ಮನಸ್ಸಿನ ಮೇಲೆ ಉತ್ತಮವಾದ ಪರಿಣಾಮವನ್ನುಂಟುಮಾಡಿರುತ್ತಾರೆ. ಈ ಪ್ರಕ್ರಿಯೆಯ ಗುಟ್ಟೆಲ್ಲ ಅವರಿಂದಲೇ ನನಗೆ ದೊರೆಯಿತೆಂದರೂ ಸಲ್ಲುತ್ತದೆ. ವಿರಕ್ತರಾಗಿ ಅವರಲ್ಲಿ ತತ್ತ್ವಚಿಂತನೆಗೆಂದು ಸೇರಿಕೊಂಡಿದ್ದ ಶಿಷ್ಯರನ್ನು ನೋಡಿ 'ಕಂಡಿರಾ, ಇವರು ಎಷ್ಟು ಬೇಗನೆ ವಿಷಯವನ್ನು ಗ್ರಹಿಸಿಬಿಡುತ್ತಾರೆ! ಗೃಹಸ್ಥರಾದ ಇವರು ತಿಳಿದುಕೊಳ್ಳುವಂತೆ ತತ್ತ್ವವಿಚಾರಕ್ಕೆಂದೇ ಬಂದಿರುವ ನೀವು ತಿಳಿದು ಕೊಳ್ಳುವದಾಗಿದ್ದರೆ ನನಗೆ ಮತ್ತಷ್ಟು ಸಂತೋಷವಾಗುತ್ತಿದ್ದಿತು, ಎಂದು ಆಗಾಗ್ಗೆ ನನಗೆ ಉತ್ತೇಜನವನ್ನು ಕೊಟ್ಟು ಮಾತಾಡುತ್ತಿದ್ದರು.

'ಗುರುಮಹಾರಾಜರು ಜಾತಿಯಲ್ಲಿ ಸ್ವಕುಳಸಾಲೆಯ ಪಂಗಡಕ್ಕೆ ಸೇರಿದವರು. ಆದರೆ ಅವರು ಬ್ರಾಹ್ಮಣರಲ್ಲಿ ವಿಶೇಷ ಗೌರವವನ್ನಿಟ್ಟಿದ್ದರು. ತಮ್ಮ ಶಿಷ್ಯಮಂಡಲಿಯವರು ಯಾರೂ ವರ್ಣಾಶ್ರಮವ್ಯವಸ್ಥೆಯನ್ನು ಸಡಿಲಿಸುವ ಪ್ರಯತ್ನವನ್ನು ಮಾಡದಂತೆ ಅವರು ನೋಡಿಕೊಳ್ಳುತ್ತಿದ್ದರು. ಆಗಾಗ್ಗೆ ಶಿಷ್ಯರುಗಳಿಗಾಗಿ ತಿಂಡಿತೀರ್ಥಗಳನ್ನು ಮಾಡಿಸುವದುಂಟು. ಅಂಥ ಸಂದರ್ಭದಲ್ಲಿ ಬ್ರಾಹ್ಮಣನಿಂದಲೇ ಅದನ್ನು ತಯಾರು ಮಾಡಿಸಿ ಅವರಿಂದಲೇ ವಿನಿಯೋಗಿಸುತ್ತಿದ್ದರು. ಅದು ಶಿಷ್ಯರಿಗೆಂದು ತೋರದಂತೆ ನಮಗೆ ಇಂಥ ತಿಂಡಿ ತಿನ್ನಬೇಕೆನ್ನಿಸಿದೆ. ಮಾಡಿಸುವಿರಾ? ಎಂದು ಪ್ರಸ್ತಾಪದಿಂದ ಹೇಳಿ ಮಾಡಿಸುತ್ತಿದ್ದರು. ಒಂದು ಸಲ ಅವರು ಬಸವನಗುಡಿಯಲ್ಲಿ ಒಂದು ದೇವತಾ ಪ್ರತಿಷ್ಠೆಯ ಕಾಲಕ್ಕೆ ದಯಮಾಡಿಸಿದ್ದರು. ಬ್ರ॥ಶ್ರೀ॥ಮೋಟಗಾನಹಳ್ಳಿ ಶಂಕರಶಾಸ್ತ್ರಿಗಳವರೂ ಅಲ್ಲಿಗೆ ಬಂದಿದ್ದರು. ಇಬ್ಬರಿಗೂ ಹೆಚ್ಚಿನ ಪರಿಚಯವಿತ್ತು. ಗುರುಮಹಾರಾಜರಲ್ಲಿ ಶಾಸ್ತ್ರಿಗಳಿಗೆ ಸದಭಿಪ್ರಾಯವೇ ಇರುತ್ತಿತ್ತು; ಇದಕ್ಕೆ ಮಹಾರಾಜರ ವಿನಯವಾದ ವರ್ತನೆಯೂ ಅವರ ಪ್ರಶಾಂತತೆಯೂ ಕಾರಣವನ್ನಬಹುದು.

'ನಾನು ಸಾಯಂಕಾಲವಾದ ಮೇಲೆ ಮನೆಗೆ ಬಂದುಬಿಡುತ್ತಿದ್ದೆನು. ಆದರೆ ಗುರುವರ್ಯರು ರಾತ್ರಿಯಾದಮೇಲೂ ಭಜನೆಯಿಂದಲೇ ಬಹುಕಾಲವನ್ನು ಕಳೆಯುತ್ತಿದ್ದರೆಂದೂ ಸ್ವಲ್ಪ ವಿಶ್ರಾಂತಿಯಾದ ಬಳಿಕ ಒಂದು ಆಸನದಲ್ಲಿ ಕೂತುಕೊಂಡೇ ಇರುತ್ತಿದ್ದರೆಂದೂ ಕೇಳಿರುತ್ತೇನೆ. ತತ್ತ್ವಚಿಂತನೆಯು ಅವರ ಜೀವನದ ಹಾಸುಹೊಕ್ಕಾಗಿರುತ್ತಿತ್ತೆಂದರೆ ಅತಿಶಯೋಕ್ತಿಯಾಗಲಾರದು. ಅವರಿದ್ದ ಬಳಿಗೆ ಆಗಾಗ್ಗೆ ತತ್ತ್ವವಿಚಾರರಸಿಕರಾದವರು ಬರುತ್ತಲೇ ಇದ್ದರು. ಹುಬ್ಬಳ್ಳಿಯಿಂದ

ಆರೂಢರ ಶಿಷ್ಯರುಗಳೂ ಬರುತ್ತಿದ್ದರು. ಅವರೂ ಮಹಾರಾಜರಲ್ಲಿ ಹೆಚ್ಚಿನ ಪೂಜ್ಯಬುದ್ಧಿಯುಳ್ಳವರಾಗಿರುತ್ತಿದ್ದರು.

'ಗುರುಮಹಾರಾಜರವರಿಗೆ ಅನೇಕರು[1] ಶಿಷ್ಯರುಗಳಿದ್ದರು. ಅವರುಗಳಲ್ಲಿ ಶ್ರೀಯುತ ಸಾಹುಕಾರ್ ರಾಮಚಂದ್ರರಾವ್‌ಸಿಂಧ್ಯರವರ ತಂದೆಗಳು ಒಬ್ಬರು. ಅವರು ಮಹಾರಾಜರಲ್ಲಿ ಭಗವದ್ಗೀತೆಯನ್ನು ಓದುತ್ತಿದ್ದರು. ಈಗಿನ ಮಠವನ್ನು ಕಟ್ಟಿಸುವದಕ್ಕೆ ಧನಸಹಾಯಮಾಡಿದವರಲ್ಲಿ ಅವರೇ ಮುಖ್ಯರೆಂದು ಕೇಳಿರುತ್ತೇನೆ.

'ಬೆಂಗಳೂರಿಗೆ ಮೊದಲನೆ ಸಲಕ್ಕೆ ಪ್ಲೇಗು ಬಂದಾಗ ಜನರಲ್ಲಿ ಪ್ರಾಣದ ಅಂಜಿಕೆಯು ಬಹಳವಾಗಿ ಹರಡಿತು. ಊರಲ್ಲೆಲ್ಲ ಆ ರೋಗದ ಹಾವಳಿಯು ತೋರುತ್ತಿತ್ತು. ಜನರು ಚಲ್ಲಾಪಿಲ್ಲಿಯಾದರು. ಆದರೂ ಮಹಾರಾಜರಲ್ಲಿ ಮಾತ್ರ ಶ್ರೋತೃವೃಂದವು ಕಡಿಮೆಯಾಗಲಿಲ್ಲ. "ಈ ರೋಗವು ಸಾಂಕ್ರಾಮಿಕವೆಂದು ಕೇಳುತ್ತೇವೆ. ಆದ್ದರಿಂದ ನೀವು ಇಲ್ಲಿಗೆ ಬಂದು ಸೇರಬಾರದು" ಎಂದು ಅವರು ಎಷ್ಟು ಹೇಳಿದರೂ ಶಿಷ್ಯರು ಕೇಳಲಿಲ್ಲ. ಕಡೆಗೆ ಮಹಾರಾಜರಿಗೂ ಜ್ವರ ಬಂದಿತು. 'ಒಬ್ಬರೂ ಇಲ್ಲಿಗೆ ಬರಕೂಡದು' ಎಂದು ಅವರು ಶಿಷ್ಯರಿಗೆ ಕಟ್ಟಪ್ಪಣೆ ಮಾಡಿ ಬಿಟ್ಟರು. ಆ ಕಾಲಕ್ಕೆ ಯಾವ ಶಿಷ್ಯರು ಉಳಿದುಕೊಂಡರೆಂಬುದು ತಿಳಿಯಲಿಲ್ಲ. ನಾನು ಮಾತ್ರ ಅವರ ಅಪ್ಪಣೆಯಂತೆ ಮನೆಯಲ್ಲಿಯೇ ಉಳಿದುಕೊಂಡುಬಿಟ್ಟೆನು. ಒಂದೆರಡು ದಿನಗಳಲ್ಲಿಯೇ ಅವರು ದೇಹವನ್ನು ಬಿಟ್ಟರೆಂದು ತಿಳಿಯಿತು.

'ಈಗ ಮಠದಲ್ಲಿ ಶ್ರೀಗುರುಮಹಾರಾಜರ ಸಮಾಧಿಯಿದೆ. ಅಲ್ಲಿ ವೇದಿಕೆಯ ಮೇಲೆ ಅವರದೊಂದು ಭಾವಚಿತ್ರವಿದೆ. ಅವರ ಶಿಷ್ಯರೂ ಇರುತ್ತಾರೆ. ವರ್ಷಕ್ಕೊಂದು ಸಲ ಆರಾಧನೆ ನಡೆಯುತ್ತಿದೆ. ಅನೇಕ ಸಾಧುಸಂತರು ಬಂದು ಹೋಗುತ್ತಾರೆ. ಆದರೆ ಅವರು ಮಾಡಿದ ತತ್ತ್ವೋಪದೇಶದ ಪ್ರತಿಷ್ಠೆಯು ಕೆಲವು ಶಿಷ್ಯರ ಹೃದಯದಲ್ಲಿ ಆಗಿರುತ್ತದೆ. ಅಂಥ ಉಪಕೃತರಲ್ಲಿ ನಾನೂ ಒಬ್ಬನು. ನಾನು ಅವರಿಗೆ ಏನೂ ಮಾಡಲಿಲ್ಲ, ಏನಾದರೂ ಮಾಡಬೇಕಾಗಿತ್ತು ಎನ್ನಿಸುತ್ತದೆ. ಆದರೆ ನಿತ್ಯತೃಪ್ತರಾದ ಆ ಮಹಾರಾಜರಿಗೆ ಯಾರಿಂದ ತಾನೇ ಏನುಬೇಕಾಗಿರುವದು? ಅವರು ಉಪದೇಶಿಸಿರುವ ಅವಸ್ಥಾತ್ರಯಪ್ರಕ್ರಿಯೆಯ ಗಾಂಭೀರ್ಯವನ್ನು ಜನರು ಕಂಡುಕೊಂಡು ಕೃತಕೃತ್ಯರಾದರೆ ಅವರ ಅವತಾರದ ಉದ್ದೇಶವು ನೆರವೇರಿದಂತೆ, ಅವರು ನಿಜವಾಗಿಯೂ ಪರಬ್ರಹ್ಮವೇ ಎಂದು ನನ್ನ ಭಾವನೆ.

---

1. ಒಬ್ಬರು ಈಚೆಗೆ ಸಂನ್ಯಾಸಿಗಳಾಗಿ ಮೈಸೂರಿನಲ್ಲಿದ್ದರೆಂದು ಕೇಳಿದ್ದೇನೆ.

ವಾಚಕಮಹಾಶಯರೆ, ವೇದಾಂತಕೇಸರಿಗಳಾದ ಶ್ರೀಯುತ ಅಯ್ಯರ್‌ರವರು ಅಧ್ಯಾತ್ಮಪ್ರಕಾಶಕ್ಕೆ ಬರೆದಿರುವ ವಿಧವಿಧವಾದ ಶ್ರೇಷ್ಠ ಲೇಖನಗಳಿಂದ ತಮಗೆಲ್ಲ ಪರಿಚಿತರೇ ಆಗಿದ್ದಾರೆ. ಅವರ ದಿವ್ಯಗ್ರಂಥವು ಅವಸ್ಥಾತ್ರಯ ಪ್ರಕ್ರಿಯೆಯನ್ನು ಎತ್ತಿ ಹಿಡಿಯುವುದರ ಮೂಲಕ ವೇದಾಂತಪ್ರಪಂಚಕ್ಕೆ ಒಂದು ನಂದದ ದಿವ್ಯಜ್ಯೋತಿಯನ್ನು ತೋರಿಸಿಕೊಟ್ಟು ಜನರನ್ನು ಚಿರಋಣಿಗಳನ್ನಾಗಿ ಮಾಡಿದೆ. ಅಯ್ಯರ್‌ರವರ ಜ್ಞಾನನಿಷ್ಠೆಯನ್ನೂ ಅವರ ವಿದ್ಯಾವೈಭವವೇ ಮೊದಲಾದ ಪೂರ್ಣಗುಣಗಳನ್ನೂ ಬರೆಯಲು ಇದು ಸಮಯವಲ್ಲ, ಅದನ್ನೇ ಬಲ್ಲವರು ಬೇರೆಯಾಗಿ ಬರೆಯತಕ್ಕದ್ದಾಗಿದೆ. ಇಂಥ ಮಹನೀಯರು ಬಾಯಿತುಂಬ ಹೊಗಳಿರುವ ಅನಂತಪ್ಪ ಮಹಾರಾಜರವರ ದೊಡ್ಡಸ್ತಿಕೆಯು ಎಷ್ಟಿರಬೇಕೆಂಬುದನ್ನು ಮಾತ್ರ ವಾಚಕರೇ ಮನಗಾಣಬೇಕು. ಎಷ್ಟೋ ವೇಳೆ ಅನಂತಪ್ಪನವರ ಹೆಸರೆತ್ತಿ ಶ್ರೀಯುತರು ಗದ್ಗದಕಂಠರಾಗಿ ಆನಂದಬಾಷ್ಪವನ್ನು ಸುರಿಸಿರುವದನ್ನು ಈ ಲೇಖಕನು ಕಣ್ಣಾರೆ ಕಂಡು ಅವರ ಗುರುಭಕ್ತಿಗೆ ಬೆರಗಾಗಿದ್ದಾನೆ.

**"ಯಾವ ಜನರು ನಿನ್ನ ಲೀಲೆಯನ್ನು ಮತ್ತೆ ಮತ್ತೆ ಕೇಳುವರೋ, ಮತ್ತೆ ಮತ್ತೆ ಹಾಡುತ್ತಾ, ಮತ್ತೆ ಮತ್ತೆ ಹೇಳುತ್ತಾ, ಮತ್ತೆ ಮತ್ತೆ ನೆನಪಿಗೆ ತಂದುಕೊಳ್ಳುತ್ತಾ ಆನಂದದಲ್ಲಿ ಮುಳುಗಿರುವರೋ, ಅವರೇ ಸಂಸಾರದ ಸೆಳೆತವನ್ನು ನಿಲ್ಲಿಸುವ ನಿನ್ನ ಚರಣಾರವಿಂದವನ್ನು ಬೇಗನೆ ಕಾಣುವರು." ಎಂದು ಭಾಗವತದಲ್ಲಿ ಹೇಳಿದೆ. ಅದರಂತೆ ನಾವು ಅನಂತಪ್ಪಮಹಾರಾಜರ ದಿವ್ಯ ಚರಿತ್ರೆಯನ್ನು ಮೇಲಿಂದ ಮೇಲೆ ಸ್ಮರಿಸುತ್ತಲೇ ಇರಬೇಕು.**

ಅನಂತಪ್ಪನವರ ತಂದೆಯವರು ಈಶ್ವರಪ್ಪನವರು. ತಾಯಿ ರುದ್ರಮ್ಮ ನವರು. ಈ ಸಾತ್ತ್ವಿಕದಂಪತಿಗಳು ಲಕ್ಷ್ಮಿಯ ಕಟಾಕ್ಷಕ್ಕೆ ಚೆನ್ನಾಗಿ ಪಾತ್ರರಾಗಿದ್ದಲ್ಲದೆ ದೈವಭಕ್ತಿಯಿಂದ ಶುಚಿರ್ಭೂತರೂ ಆಗಿರುತ್ತಿದ್ದರು. ಅಧ್ಯಾತ್ಮಯೋಗವನ್ನು ಪರಿಪೂರ್ಣಗೊಳಿಸುವದಕ್ಕೆಂದು ದೊಡ್ಡವರು ಇಂಥವರ ಮನೆಯನ್ನೇ ಆರಿಸಿಕೊಳ್ಳುವರೆಂಬುದು ಗೀತಾಚಾರ್ಯನಾದ ಭಗವಂತನ ಮತವಲ್ಲವೆ? ಅತಿಥಿಸತ್ಕಾರ ನಿರತರೂ ಪರೋಪಕಾರಿಗಳೂ ಆಗಿದ್ದ ಈಶ್ವರಪ್ಪನವರು ತಮ್ಮ ಸುಗುಣಗಳಿಂದ ಎಲ್ಲರಲ್ಲಿಯೂ ಪ್ರಖ್ಯಾತರಾಗಿದ್ದರು. ಮನೆಯಲ್ಲಿ ದೇವರಪೂಜೆ, ಭಜನೆ, ಪುರಾಣ ಮುಂತಾದವುಗಳು ತಪ್ಪದೆ ನಡೆಯುತ್ತಿದ್ದವು. ಸಾಧುಸಂತರ ಸೇವೆಯೂ ಪಂಢರಪುರಿಯ ಯಾತ್ರೆಯೂ ಅವರಿಗೆ ಬಹಳ ಮೆಚ್ಚಾಗಿದ್ದವು.

ಅನಂತಪದ್ಮನಾಭನ ಚತುರ್ದಶಿಯ ಶುಭದಿನದಲ್ಲಿ ಹುಟ್ಟಿದ್ದರಿಂದ ಅನಂತಪ್ಪನವರೆಂಬ ಹೆಸರು ನಮ್ಮ ಕಥಾನಾಯಕರಿಗೆ ಬಂದಿತು. ಆದರೆ ಇವರು ಮುಂದೆ ಅದನ್ನು ಅನ್ವರ್ಥಮಾಡಿಕೊಂಡು ಅನಂತಮಹಿಮರಾದದ್ದೊಂದು ಅವರಲ್ಲಿ ವಿಶೇಷವು. ಅನಂತಪ್ಪನವರ ಬಾಲ್ಯದ ಸಮಾಚಾರವೇನೂ ಅಷ್ಟಾಗಿ ತಿಳಿಯಬಂದಿಲ್ಲ. ಆ ಕಾಲದಲ್ಲಿ ಸರಕಾರದ ಸ್ಕೂಲುಗಳು ವಿಶೇಷವಾಗಿ ಇರಲಿಲ್ಲವಾದ್ದರಿಂದ ಸಿರಿವಂತರ ಮಕ್ಕಳಾದ ಇವರಿಗೆ ಬೇರೆಯ ಕೆಲವು ಮಕ್ಕಳೊಡನೆ ಮನೆಯಲ್ಲಿಯೇ ತಾಯ್ನುಡಿಯಾದ ಮರಾಠಿಯ ಪರಿಚಯವಾಯಿತು. ಸ್ವಲ್ಪಮಟ್ಟಿಗೆ ಕನ್ನಡವೂ ತಿಳಿಯಿತು. ವ್ಯವಹಾರಕ್ಕೆ ಸಾಕಾಗುವಷ್ಟು ಭಾಷಾಜ್ಞಾನವಾಯಿತೆನ್ನಬಹುದು. ಇವರು ವಿದ್ಯಾಭ್ಯಾಸ ಕಾಲದಲ್ಲಿ ಪಾಠಗಳನ್ನು ಶ್ರದ್ಧಾಭಕ್ತಿಗಳಿಂದ ಬೇಗಬೇಗನೆ ಕಲಿಯುತ್ತಿದ್ದರಂತೆ.

ದೊಡ್ಡವರ ಮಕ್ಕಳಾದ ಅನಂತಪ್ಪನವರಿಗೆ ಆ ಕಾಲದ ಪದ್ಧತಿಯಂತೆ ತಮ್ಮ ಹದಿಮೂರನೆಯ ವರ್ಷದಲ್ಲಿಯೇ ವಿವಾಹವಾಯಿತು. ವಯಸ್ಸು ಬಂದಂತೆಲ್ಲ ಇವರು ತಮ್ಮ ತಂದೆಯವರ ಭಾರಿಯ ರೇಶ್ಮೆವ್ಯಾಪಾರದ ಕೆಲಸಕ್ಕೆ ನೆರವಾಗಿ ಧರ್ಮದಿಂದ ವ್ಯವಹಾರವನ್ನು ಸಾಗಿಸುತ್ತಾ ಎಲ್ಲರ ಪ್ರೀತಿಗೂ ಪಾತ್ರರಾಗಿ ಮನೆಗೂ ಕುಲಕ್ಕೂ ಕೀರ್ತಿಯನ್ನು ತಂದರು.

ಇವರ ಸಾತ್ತ್ವಿಕಸ್ವಭಾವವು ಬೆಳೆಯುವದಕ್ಕೆ ಮನೆಯಲ್ಲಿ ಹಲವು ಸನ್ನಿವೇಶಗಳು ತಕ್ಕಂತೆ ಇದ್ದವೆಂದು ಮೇಲೆಯೇ ಹೇಳಿರುತ್ತೇನೆ. ಪ್ರತಿದಿನವೂ ಸಾಯಂಕಾಲ ಪಂಢರಿಮಾಹಾತ್ಮ್ಯ, ಏಕನಾಥೀಭಾಗವತ, ಭಕ್ತಿವಿಜಯ- ಮುಂತಾದ ಮರಾಠಿ ಸದ್ಗ್ರಂಥಗಳ ಪುರಾಣವು ನಡೆದಿತ್ತು. ಅನಂತಪ್ಪನವರೂ ಶ್ರದ್ಧೆಯಿಂದ ಪುರಾಣವನ್ನು ಕೇಳುತ್ತಿದ್ದರು; ಬರುಬರುತ್ತಾ ಆ ಗ್ರಂಥಗಳನ್ನು ಅವರೇ ಓದುವದು, ಮತ್ತೊಬ್ಬರು ಅರ್ಥ ಹೇಳುವದು - ಹೀಗೆ ಸಾಗುತ್ತಾ ಬಂತು. ಇಂಪಾದ ಕಂಠದಿಂದ ಭಾವಭಕ್ತಿಯುತರಾಗಿ ಓದುತ್ತಲೂ ಅರ್ಥವಿವರಣೆಯನ್ನು ಕೇಳುತ್ತಲೂ ಇದ್ದದ್ದರಿಂದ ಇವರ ಮನಸ್ಸಿನಲ್ಲಿ ಭಗವತ್ಪ್ರೇಮವು ಮೂಡುವುದಕ್ಕೆ ಎಡೆಯಾಗುತ್ತಾ ಬಂತು. ಚಿತ್ತಶುದ್ಧಿಯು ಹೆಚ್ಚುವ ಒಂದು ಪ್ರಸಂಗವೂ ಒದಗಿತು.

ಮನೆಯಲ್ಲಿ ಪುರಾಣಶ್ರವಣಮಾಡಿಸುತ್ತಿದ್ದ ಭವಾನ್‌ಸಾ ಎಂಬುವರು ಇವರ ವ್ಯಾಪಾರಕ್ಕೆ ಸಂಬಂಧಪಟ್ಟ ಬಣ್ಣದ ಕೆಲಸದಲ್ಲಿ ನೌಕರರೂ ಆಗಿದ್ದರು. ದೊಡ್ಡ ಕುಟುಂಬಿಗಳಾಗಿದ್ದ ಸಾರವರು ಆಗಾಗ್ಗೆ ಅನಂತಪ್ಪನವರ ತಂದೆಯವರಲ್ಲಿ ಹೆಚ್ಚು ಹೆಚ್ಚು ಹಣವನ್ನು ಬಳಸಿಕೊಂಡದ್ದರಿಂದ ಅವರ ಸಾಲದ ಹೊರೆಯು ಹೆಚ್ಚಾಗುತ್ತಾ ಬಂದು

ಅದನ್ನು ತೀರಿಸುವ ಬೇರೊಂದು ಹಾದಿಯನ್ನು ಕಾಣದೆ ಪೇಚಾಡುತ್ತಿದ್ದರು. ಇದನ್ನರಿತ ಈಶ್ವರಪ್ಪನವರು "ಅಯ್ಯ, ಯೋಚಿಸಬೇಡ; ನೀನು ಋಣಮುಕ್ತನಾಗುವ ಒಂದು ದಾರಿಯನ್ನು ಹೇಳುತ್ತೇನೆ. ಕೇಳು. ನೀನು ಪುರಾಣವಾದ ಮೇಲೆ ನಮ್ಮ ಮನೆಯಲ್ಲಿಯೆ ಮಲಗಿಬಿಡು; ಬೆಳಗಿನ ಜಾವದಲ್ಲಿ ಎದ್ದು ನಮ್ಮ ಅನಂತನನ್ನೂ ಎಬ್ಬಿಸಿ ಸ್ನಾನಮಾಡಿಸಿ ದೇವರಪೂಜೆ, ಸ್ತೋತ್ರಪಾಠ, ಭಜನೆ- ಇವುಗಳನ್ನು ನಿತ್ಯನಿಯಮವಾಗಿ ಅವನಿಂದ ಮಾಡಿಸು. ಹೀಗೆ ಎರಡು ವರ್ಷಗಳು ಮಾಡಿದರೆ ನಮ್ಮ ಬಾಕಿ ಮುಟ್ಟಿತೆಂದು ನಿನಗೆ ಪಾವತಿಚೀಟಿಯನ್ನು ಬರೆದು ಕೊಟ್ಟುಬಿಡುವೆನು" ಎಂದರು. ಸಾತ್ತ್ವಿಕವಾದ ಭವಾನ್‌ಸಾನ ಮುಖವು ಅರಳಿತು. ಆತನು ಈ ಕೆಲಸವನ್ನು ಬಹಳ ಶ್ರದ್ಧೆಯಿಂದ ಮಾಡಿ ತಾನೂ ಋಣಮುಕ್ತನಾದದ್ದಲ್ಲದೆ ಅನಂತಪ್ಪನವರಿಗೂ ಸಂಸಾರಋಣದಿಂದ ಮುಕ್ತನಾಗುವ ಉಪಾಯವನ್ನು ಕಲ್ಪಿಸಿಕೊಟ್ಟನು. ತಮ್ಮ ಮಗನಿಗೆ ಹಣಕ್ಕಿಂತಲೂ ದೈವಿಕಸಂಪತ್ತೇ ಹೆಚ್ಚಿನದೆಂದು ಬಗೆದ ಈಶ್ವರಪ್ಪನವರು ಎಂಥ ಧನ್ಯರು?

ಕೆಲವು ವರ್ಷಗಳು ಹೀಗೆ ನಡೆಯಲು ಅನಂತಪ್ಪನವರ ಚಿತ್ತವು ಉದಾರವಾಯಿತು. ಅವರ ವ್ಯವಹಾರದ ಕಾರ್ಯಗಳು ಹೆಚ್ಚು ಹೆಚ್ಚು ಸಾತ್ತ್ವಿಕವಾದವು. ದಾನಧರ್ಮಪರೋಪಕಾರಗಳು ದಿನಸ್ವಭಾವವಾದವು. ಚಿತ್ತವು ಶುದ್ಧಿಯಾಗಿ ಕರ್ಮಯೋಗದ ಫಲವನ್ನು ಅವರಿಗೆ ತಂದುಕೊಟ್ಟಿತು. ಇಷ್ಟು ಹೊತ್ತಿಗೆ ಸರಿಯಾಗಿ ಅವರಿಗೆ ಚಿದಂಬರದೀಕ್ಷಿತರೆಂಬ ಒಬ್ಬ ಯೋಗಿವರ್ಯರ ಅನುಗ್ರಹವು ದೊರೆಯಿತು. ಅವರ ಉಪದೇಶದಿಂದ ಅನಂತಪ್ಪನವರು ಯೋಗ ನಿರತರಾಗಿ ಪೂರ್ವಜನ್ಮವಾಸನೆಯಿಂದ ಬಲುಬೇಗ ಚಿತ್ತೈಕಾಗ್ರತೆಯನ್ನು ಅಳವಡಿಸಿಕೊಂಡರು.

ಯೋಗಿಗಳಲ್ಲೆಲ್ಲ ಭಗವಂತನಲ್ಲಿ ಶ್ರದ್ಧಾತಿಶಯದಿಂದ ಆಗುವ ಭಕ್ತಿಯುಳ್ಳಾತನೇ ಮಿಗಿಲಾದವನೆಂದು ಗೀತೋಕ್ತಿಯಿದೆಯಲ್ಲವೆ? ಅದಕ್ಕನುಗುಣವಾಗಿ ಅನಂತಪ್ಪನವರಿಗೆ ತೀವ್ರ ವೈರಾಗ್ಯವು ಉಂಟಾಗಿ ಭಗವಂತನ ಕಡೆಗೇ ಮನಸ್ಸು ಒಲಿಯುವದಕ್ಕೆ ಮೊದಲಾಯಿತು. ತಂದೆಯವರ ಮರಣಾನಂತರದಲ್ಲಿ ವ್ಯವಹಾರವೆಲ್ಲ ಇವರ ಕೈಗೇ ಬಂದಿತ್ತು. ಆದರೆ ಈಗ ಅವರಿಗೆ ವ್ಯವಹಾರದಲ್ಲಿ ಆಸಕ್ತಿಯು ಸಡಿಲವಾಗಿಬಿಟ್ಟಿತು; ವಿಷಯಸುಖಗಳು ತೀರ ಸಪ್ಪೆಯಾಗಿ ಕಂಡವು; ಭಗವಂತನನ್ನು ಸಾಕ್ಷಾತ್ಕಾರಮಾಡಿಕೊಳ್ಳಬೇಕೆಂಬ ಹಂಬಲವು ದಿನದಿನಕ್ಕೂ ಹೆಚ್ಚುತ್ತಾ ಬಂತು.

ಒಂದು ದಿನ - ಅದನ್ನು ಶುಭದಿನವೆಂದು ಕರೆಯೋಣ - ರಾತ್ರಿ ಪುರಾಣದಲ್ಲಿ "ಮನುಷ್ಯಜನ್ಮದ ಗುರಿಯು ಭಗವಂತನ ಭವ್ಯದರ್ಶನವೇ; ಅದಕ್ಕೆ ಸಾಧನವೆಂದರೆ ವೈರಾಗ್ಯ ಮತ್ತು ಗುರ್ವನುಗ್ರಹ - ಇವೇ "ಎಂಬ ಮಹತ್ತ್ವದ ಸಂಗತಿಗಳು

ಮೇಲಿಂದ ಮೇಲೆ ಬಂದು ಅನಂತಪ್ಪನವರ ಹೃದಯವನ್ನು ಸೂರೆಗೊಂಡವು. ಅವರ ಮನಸ್ಸನ್ನು ತೀವ್ರವಾದ ಮುಮುಕ್ಷುತೆಯು ಆವರಿಸಿಕೊಂಡು ಭಗವಂತನ ದರ್ಶನಕ್ಕಾಗಿ ಸರ್ವಸಂಗಪರಿತ್ಯಾಗವನ್ನು ಮಾಡಿಬಿಡಬೇಕೆಂದು ಅವರು ಆ ದಿನ ಕಟ್ಟಕಡೆಯ ನಿರ್ಧಾರವನ್ನು ಮಾಡಿದಂತೆ ಕಾಣುತ್ತದೆ. ಅಂದು ಅವರಿಗೆ ಅಶ್ರುಧಾರೆಯು ಒಂದೇ ಸಮನೆ ಸುರಿದು ರೋಮಾಂಚನವಾಯಿತು. ಗದ್ಗದ ಕಂಠರಾಗಿ ಪುರಾಣವನ್ನು ಓದುವದಕ್ಕೆ ಕೂಡ ಅಸಮರ್ಥರಾದರು. ಮಂಗಳಾರತಿ ಯಾದಮೇಲೆ ಅವರು ಎಲ್ಲಿಯೂ ಕಾಣಬರಲಿಲ್ಲ!

ಅದೇ ರಾತ್ರಿಯೇ ಅವರು ಇಷ್ಟದೈವವಾದ ಪಂಢರಿನಾಥನ ದರ್ಶನದ ಬಯಕೆಯಿಂದ ಪಂಢರಪುರಕ್ಕೆ ಹೊರಟಿದ್ದರು. ದಾರಿ ಇಂಥದ್ದೆಂದು ತಿಳಿಯದಿದ್ದರೂ ಮುಂದುಮುಂದಕ್ಕೆ ಹೋಗುತ್ತಲೇ ಇದ್ದರು. ಆ ದಯಾಮಯನು ತನ್ನ ಮಡಿಲಿಗೆ ಬಿದ್ದವರನ್ನು ಬಿಡುವನೆ? ದಾರಿಯಲ್ಲಿ ಅವರಿಗೆ ಒಬ್ಬ ತೇಜಸ್ವಿಯಾದ ವಟುವಿನ ಸಂಗ ದೊರೆಯಿತು; ಅವನ ಸಹಾಯದಿಂದ ದಾರಿಯು ಸುಗಮವಾಗಿ ಸಾಗಿ ಪಂಢರಿಯನ್ನು ಸೇರಿದರು. ಭಗವಂತನೇ ಆ ವಟುರೂಪದಿಂದ ಅವರನ್ನು ಕರೆದುಕೊಂಡು ಹೋದನೆಂದು ಭಾವಿಕರ ನಂಬಿಕೆ, ಏಕಾಗಬಾರದು? ಭಗವಂತನಿಗೇನು ಅದೊಂದು ದೊಡ್ಡಮಾತೆ? ಅಥವಾ ಯಾವ ರೂಪವು ತಾನೆ ಆ ಮಹಾಮಹಿಮನದಲ್ಲ?

ಪಂಢರಪುರದಲ್ಲಿ ವಿಠಲಮೂರ್ತಿಯ ದರ್ಶನವಾಯಿತು; ಭಗವದ್ಭಕ್ತರ ಭಾವಭಜನೆಯನ್ನು ಕಂಡು ಸಂತಸದಲ್ಲಿ ಮುಳುಗಿದ್ದೂ ಆಯಿತು. ಅಲ್ಲಿಯ ಭಕ್ತ ಮಹಾಶಯರಲ್ಲಿ ವಿಠ್ಠಲಪಂತರೆಂಬ ಸಾಧುಗಳೊಬ್ಬರ ಭಕ್ತಿಭಾವವೂ ಪಾಂಡಿತ್ಯವೂ ಶಾಂತಿಯೂ ಅಮೃತವಾಣಿಯೂ ದಯಾದೃಷ್ಟಿಯೂ ಅನಂತಪ್ಪನವರ ಮನಸ್ಸನ್ನಾ ಕರ್ಷಿಸಿದ್ದರಿಂದ ಅವರು ಆ ಮಹನೀಯರ ಪಾದಸೇವಕರಾಗಿ ನಿಂತರು. ಆ ಸಾಧುವರ್ಯರು ಬಹಳ ನಿಷ್ಠರು. ಬೆಳಗಿನ ಜಾವದಿಂದ ಕಣ್ಣಿಗೆ ನಿದ್ರೆ ಬರುವ ವರೆಗೂ ಭಗವಂತನ ಸೇವೆಯಲ್ಲಿಯೇ ಇರುತ್ತಿದ್ದರು. ಪೂಜೆ, ಆರತಿ, ಜಪ, ಧ್ಯಾನ, ಭಜನೆ, ಸದ್ಗ್ರಂಥಾವಲೋಕನ, ಅತಿಥಿಸತ್ಕಾರ, ಸರ್ವಭೂತಪ್ರೇಮ- ಇವು ಅವರ ನಿತ್ಯ ನಿಯಮವಾಗಿದ್ದವು. ಏಕಾದಶಿಯದಿನ ಜಾಗರಣ, ಹರಿಕೀರ್ತನ - ಇವನ್ನು ತಪ್ಪದೆ ಮಾಡುತ್ತಿದ್ದರು. ಇಂಥ ಸಾಧುಗಳ ಹೃದಯದಲ್ಲಲ್ಲದೆ, ಭಗವಂತನು ಪ್ರಕಟನಾಗಿರುವದು? ಅನಂತಪ್ಪನವರು ಅವರ ಸೇವೆಮಾಡುತ್ತಾ ಅವರ ದಿವ್ಯಮುಖದಿಂದ ಹೊರಸೂಸುವ ಭಕ್ತಿಜ್ಞಾನವೈರಾಗ್ಯಗಳ ಅಮೃತವಾಕ್ಕುಗಳನ್ನು ಎಷ್ಟು ಪಾನಮಾಡಿದರೂ ತೃಪ್ತಿಯಿಲ್ಲದೆ ಇರುತ್ತಿದ್ದರು. ಅವರ ಜೊತೆಯಲ್ಲಿ ಭಜನೆಮಾಡಿ

ತಲ್ಲೀನರಾಗುತ್ತಿದ್ದರು. ಹೀಗೆ ಭಗವದುಪಾಸನಾಪರರಾಗಿ ಇವರು ಪಂಢರಿಯಲ್ಲಿಯೇ ಗುರುಸಾನ್ನಿಧ್ಯದಲ್ಲಿ ಕೆಲವು ವರ್ಷಗಳು ನಿಂತುಬಿಟ್ಟರು, ಭಗವನ್ಮಯರಾದರು.

ಸಾಧಾರಣವಾಗಿ ಲೋಕದಲ್ಲಿ ಐಶ್ವರ್ಯವೂ ವೈರಾಗ್ಯವೂ ಪರಸ್ಪರ ವಿರುದ್ಧವಾಗಿರುತ್ತವೆ. ಇವು ಒಂದೇಕಡೆ ಸೇರುವದು ಅಪರೂಪ. ನಮ್ಮ ಅನಂತಪ್ಪನವರ ವಿಷಯದಲ್ಲಿ ಮಾತ್ರ ಇವು ಒಟ್ಟುಗೂಡಿದವು. ಲಕ್ಷ್ಮೀಪುತ್ರರಾದ ಇವರು ಸರ್ವಸಂಗಪರಿತ್ಯಾಗಮಾಡಿ ಗುರುಸೇವಾತತ್ಪರರಾಗಿ ಭಕ್ತರಾದದ್ದು ಒಂದು ವಿಶೇಷವೇ ಸರಿ.

ಅನಂತಪ್ಪನವರು ಹೀಗೆ ಭಕ್ತವಾರಿಧಿಯಲ್ಲಿ ಆನಂದಾಮೃತವನ್ನು ಪಾನ ಮಾಡುತ್ತಾ ಇದ್ದುಬಿಟ್ಟರಷ್ಟೆ. ಇತ್ತಲಾಗಿ ಬೆಂಗಳೂರಿನಲ್ಲಿ ಅವರ ತಾಯಿಯವರಿಗೂ ಮನೆಯವರಿಗೂ ಇತರ ಇಷ್ಟಬಾಂಧವರಿಗೂ ಅವರ ವಿಯೋಗದುಃಖವು ಅಸಹನೀಯವಾಯಿತು. ಯಾರಿಗೂ ಅವರ ಸಮಾಚಾರದ ಸುಳಿವೇ ಆಗಲಿಲ್ಲ. ಅವರ ಸದ್ಗುಣಗಳನ್ನು ಸ್ಮರಿಸಿಕೊಂಡು ಅವರ ಶೋಧನೆಯಲ್ಲಿಯೇ ಇರುತ್ತಿದ್ದರು.

ಆಷಾಢ ಶುದ್ಧ ಏಕಾದಶಿಯು ಪಂಢರಪುರದಲ್ಲಿ ಬಹಳ ಪವಿತ್ರ ದಿನ. ಆಗ ಸಾವಿರಾರು ಭಕ್ತರು ಅಲ್ಲಿ ನೆರೆದು ಭಗವದ್ಭಜನಕೀರ್ತನಗಳಲ್ಲಿ ಮಗ್ನರಾಗಿ ಇರುವರು. ಇಂಥ ಸುಸಮಯವನ್ನುಪಯೋಗಿಸಿಕೊಳ್ಳಬೇಕೆಂದು ಬೆಂಗಳೂರಿನ ಕೆಲವು ಭಾವಿಕರು ಒಂದು ಸಲ ಪಂಢರಪುರಕ್ಕೆ ಬಂದರು. ಅನಂತಪ್ಪನವರು ವಿಠ್ಠಲ ಭಕ್ತರಾಗಿದುದ್ದು. ಎಲ್ಲರಿಗೂ ಗೊತ್ತಿದ್ದದ್ದರಿಂದ ಅಲ್ಲೇನಾದರೂ ಅವರು ಸಿಕ್ಕಿ ಯಾರೆಂಬ ನಿರೀಕ್ಷಣೆ ಅವರಿಗೆ. ಈ ಯಾತ್ರಿಕರಲ್ಲಿ ಥಗೆಮನೆತನಕ್ಕೆ ಸೇರಿದ ಬಹಳ ಭಾವಿಕರಾದ ಗಂಗಮ್ಮನೆಂಬ ವೃದ್ಧ ಹೆಂಗಸೊಬ್ಬರಿದ್ದರು. ಆಕೆಗೆ ಅನಂತಪ್ಪನವರನ್ನು ಕಂಡರೆ ಪ್ರಾಣ. ಅವರನ್ನು ಏನಾದರೂ ಮಾಡಿ ಅಲ್ಲಿ ಕಂಡುಹಿಡಿಯಬೇಕೆಂದು ಹುಡುಕುತ್ತಿದ್ದರು.

ಒಂದು ದಿನ ಚಂದ್ರಭಾಗಾನದಿಯಲ್ಲಿ ಇವರು ಸ್ನಾನಮಾಡುತ್ತಿದ್ದಾಗ ಗಡ್ಡವನ್ನು ಬಿಟ್ಟು ಬೈರಾಗಿಯಂತಿದ್ದ ಯಾರೋ ಒಬ್ಬರು ಭಗವನ್ನಾಮ ಸ್ಮರಣೆಮಾಡುತ್ತಾ ಅತ್ತಿತ್ತ ನೋಡದೆ ಒಂದು ಕುಕ್ಕೆ ತುಂಬ ಇದ್ದ ದೇವರ ಪೂಜಾ ಪಾತ್ರಾದಿಗಳನ್ನು ಬಹಳ ಶ್ರದ್ಧೆಯಿಂದ ಬೆಳಗುತ್ತಿದ್ದದ್ದು ಗಂಗಮ್ಮನವರ ಕಣ್ಣಿಗೆ ಬಿತ್ತು. ಆತನ ಕಾರ್ಯ ತತ್ಪರತೆಯೂ, ಪ್ರಸನ್ನಮುಖಮುದ್ರೆಯೂ ಕಿವಿಗಿಂಪಾದ ಧ್ವನಿಯೂ ಆಕೆಯ ಮನಸ್ಸನ್ನು ತಮ್ಮ ಕಡೆಗೆ ಸೆಳೆದವು. ಆಕೆಯು ಕುತೂಹಲದಿಂದ ಹತ್ತಿರಕ್ಕೆ ಹೋಗಿ ಕಣ್ಣಿಟ್ಟು

ನೋಡಿದಾಗ, ಆ ಬೈರಾಗಿಯು ಅನಂತಪ್ಪನವರಾಗಿರಬಹುದೆಂಬ ಸಂಶಯಬಂತು. ಈ ವಿಷಯವನ್ನು ಆಕೆಯು ಇತರ ಬೆಂಗಳೂರಿನವರಿಗೆ ತಿಳಿಸಲು ಅವರೆಲ್ಲರೂ ಅವರ ಗುರುಮಂದಿರವನ್ನು ಹೇಗೋ ಕಂಡುಕೊಂಡು, ಅಲ್ಲಿ ಅನಂತಪ್ಪನವರನ್ನು ಗುರುತಿಸಿ, ಗುರುಗಳಿಗೆ ಎಲ್ಲಾ ಸಮಾಚಾರವನ್ನೂ ತಿಳಿಸಿ ಅನಂತಪ್ಪನವರನ್ನು ಹಿಂದಕ್ಕೆ ಕಳುಹಿಸಿಕೊಡಬೇಕೆಂದು ಬೇಡಿಕೊಂಡರು. ಅನಂತಪ್ಪನವರು ಹಿಂದಕ್ಕೆ ಹೊರಡಲು ಒಪ್ಪಲಿಲ್ಲ. ಆದರೆ ದಯಾಮಯರಾದ ಆ ಗುರುವರ್ಯರು ಜನರ ಪ್ರಾರ್ಥನೆಯನ್ನು ಅಂಗೀಕರಿಸಿ ಅನಂತಪ್ಪನವರಿಗೆ ಹೇಳಬೇಕಾದ ಬುದ್ಧಿವಾದವನ್ನು ಹೇಳಿ ಕರುಣೆಯಿಂದ ತಮ್ಮ ಪೂಜೆಯೊಳಗಿನ ಒಂದು ಪವಿತ್ರಸಾಲಿಗ್ರಾಮವನ್ನೇ ಅವರಿಗೆ ಅನುಗ್ರಹಿಸಿ ತಮ್ಮಂತೆಯೇ ಉಪಾಸನಾಮಾರ್ಗವನ್ನು ಬೆಂಗಳೂರಿನಲ್ಲಿಯೂ ಅನುಸರಿಸುತ್ತಾ ಪ್ರತಿ ಆಷಾಢ ಶುದ್ಧ ಏಕಾದಶಿಗೂ ಪಂಢರಿಗೆ ಬರುವಂತೆ ಅಪ್ಪಣೆ ಮಾಡಿ ಕಳುಹಿಸಿಕೊಟ್ಟರು.

ಅನಂತಪ್ಪನವರಿಗೆ ಗುರುವರ್ಯರ ಸೇವೆಯನ್ನು ಬಿಟ್ಟು ಹಿಂದಿರುಗಲು ಮನಸ್ಸು ಒಪ್ಪಲಿಲ್ಲವಾದರೂ ಗುರುವಿನ ಅಪ್ಪಣೆಯನ್ನು ಪ್ರತಿಯಾಡದೆ ನಡೆಸಲೇಬೇಕಾಯಿತು. ಬೆಂಗಳೂರಿನವರಿಗೇನೋ ಅವರನ್ನು ಕಂಡು ಆನಂದವಾಯಿತು. ಅವರು ಇಲ್ಲಿಗೆ ಬಂದ ಮೇಲೆ ಯಾವ ಪ್ರಾಪಂಚಿಕವ್ಯವಹಾರಕ್ಕೂ ಕೈಹಾಕದೆ ತಮ್ಮ ಮನೆಯ ಒಂದು ಭಾಗದಲ್ಲಿ ತಮ್ಮ ಗುರುಗಳ ಕ್ರಮದಂತೆಯೇ ಪೂಜೆ, ಭಜನೆ, ಪುರಾಣ- ಮೊದಲಾದ ನಿತ್ಯನಿಯಮಗಳನ್ನು ಸಾಗಿಸತೊಡಗಿದರು. ಪ್ರತಿ ದಿನವೂ ಹತ್ತಿರವೇ ಇದ್ದ ವಿಠೋಬ ದೇವಸ್ಥಾನಕ್ಕೆ ಹೋಗಿಬರುವ ಪದ್ಧತಿಯಿಟ್ಟರು. ಮನೆಯಲ್ಲಿ ಇವರಿಗೆ ಛಳಿಜ್ವರ ಬರಲಾರಂಭಿಸಿತು. ನಿದ್ರೆ ಹತ್ತದಾಯಿತು. ದಿನ ದಿನಕ್ಕೆ ಕೃಶರಾಗುತ್ತಾ ಬಂದರು. ಆದೇನು ದೈವವಿಲಾಸವೋ ಅವರಿಗೆ ದೇವಸ್ಥಾನದ ದೇವರ ನೈವೇದ್ಯವು ಮಾತ್ರ ಸೇರಹತ್ತಿತು. ಅಲ್ಲಿ ಮಲಗಿದರೆ ನಿದ್ರೆಯೂ ಬರುತ್ತಿತ್ತು. ಮನೆಗೆ ಬಂದೊಡನೆ ಪುನಃ ಕಾಯಿಲೆ ! ಇದನ್ನು ನೋಡಿದ ಅವರ ತಾಯಿಯವರು "ನೀನು ಸುಖವಾಗಿದ್ದರೆ ಸಾಕು, ದೇವಸ್ಥಾನದಲ್ಲಿಯೇ ಇರಪ್ಪ !" ಎಂದು ಅವರನ್ನು ದೇವಸ್ಥಾನಕ್ಕೇ ಕಳುಹಿಸಿಕೊಟ್ಟು ಬಿಟ್ಟರು. ಹೆತ್ತತಾಯಿಯ ಪ್ರೀತಿಯೇ ಇಂಥದ್ದು !

ದೇವಸ್ಥಾನದಲ್ಲಿ ವಾಸಮಾಡುತ್ತಾ ಬಂದಮೇಲೆ ಅನಂತಪ್ಪನವರಿಗೆ ದಿನ ದಿನಕ್ಕೆ ಆರೋಗ್ಯ ಹೆಚ್ಚಿತು. ಅಲ್ಲಿ ಅವರು ಪಂಢರಿಯ ಉಪಾಸನಾ ಪದ್ಧತಿಗಳನ್ನೆಲ್ಲಾ ಚಾಚೂ ತಪ್ಪದಂತೆ ನಡೆಸುತ್ತಿದ್ದರು. ಮಧುಕರಿಮಾಡಿ ದೇವರಿಗೆ ಅರ್ಪಿಸಿದ ನೈವೇದ್ಯವೇ ಇವರ ಊಟ. ಇವರ ಸತ್ಕಾರ್ಯಪ್ರಭಾವದಿಂದ ಅಲ್ಲಿಯ ಸುತ್ತ ಮುತ್ತಣ ಜನರ ಮನೋಭಾವನೆಯೂ ಗುಣಗಳೂ ಆಚರಣೆಯೂ ಬದಲಾವಣೆಯಾದವು.

ಅನೇಕರು ಇವರೊಂದಿಗೆ ಭಜನೆಗೆ ಸೇರಿದರು. ಇವರು ಪ್ರತಿ ಸಾಯಂಕಾಲವೂ ನಡೆಸುತ್ತಿದ್ದ ಭಾವಾರ್ಥರಾಮಾಯಣ, ಏಕನಾಥೀ ಭಾಗವತ ಮುಂತಾದ ಸದ್ಗ್ರಂಥಗಳಪುರಾಣ ಶ್ರವಣಕ್ಕೆ ಅನೇಕರು ನೆರೆದು ಆನಂದಾನುಭವವನ್ನು ಹೊಂದುತ್ತಿದ್ದರು. ಇವರ ಭಕ್ತಿಪ್ರಭಾವವು ಬೆಂಗಳೂರಿನ ಇತರ ಭಾಗಗಳಲ್ಲಿಯೂ ಹರಡಿತು. ದರ್ಜಿಪೇಟೆ, ದೇವಾಂಗದ ಪೇಟೆ- ಮುಂತಾದ ಕಡೆಗಳಿಂದಲೂ ಜನರು ಬರಲು ಮೊದಲಿಟ್ಟರು. ಸಂಸಾರ ದುಃಖ ದಿಂದ ಬೆಂದು ಬೆಂಡಾಗಿದ್ದವರ ಹೃದಯಕ್ಕೆ ಅನಂತಪ್ಪನವರ ವಾಣಿಯು ಅಮೃತ ವೃಷ್ಟಿಯಾದಂತಾಯಿತು. ಜನಮಂಡಲಿಯಲ್ಲಿ ಭಗವದ್ಭಕ್ತಿಯೂ ಸರ್ವಭೂತ ಪ್ರೇಮವೂ ಮೊಳೆಯತೊಡಗಿದವು.

ಅನಂತಪ್ಪನವರು ಪ್ರತಿವರ್ಷವೂ ತಪ್ಪದೆ ಪಂಢರಿಗೆ ಹೋಗಿ ಗುರು ದರ್ಶನವನ್ನು ಮಾಡಿಕೊಂಡು ಬರುತ್ತಿದ್ದರು. ಅವರ ಜತೆಯಲ್ಲಿ ಅನೇಕ ಜನರು ಹೋಗಿಬರುತ್ತಾ ಭಕ್ತಿಮಾರ್ಗಾವಲಂಬಿಗಳಾದರು. ಅನಂತಪ್ಪನವರು ಬೆಂಗಳೂರಿನಲ್ಲಿ ಮರಾಠೆದೇಶದ ಸಾಧುವರ್ಯರಾದ ತುಕಾರಾಮ, ಏಕನಾಥ, ಜ್ಞಾನದೇವ - ಮೊದಲಾದ ಮಹಾಪುರುಷರ ಪುಣ್ಯತಿಥಿಯ ಸಪ್ತಾಹಮಹೋತ್ಸವಗಳನ್ನು ನೆರವೇರಿಸುತ್ತಿದ್ದರು. ಆಗ ಅಖಂಡನಾಮಭಜನೆ, ಪುರಾಣಪುಣ್ಯ ಕಥೆಗಳು ಮುಂತಾದ ಸೇವೆಗಳ ಏರ್ಪಾಡಾಗಿತ್ತು. ಅನಂತಪ್ಪನವರು ಕೆಲವು ವೇಳೆ ಬರಿಯ ಹಾಲಿನ ಮೇಲೆಯೇ ಇರುತ್ತಾ ಭಾಗವತಸಪ್ತಾಹಗಳನ್ನು ನಡೆಸುತ್ತಿದ್ದರು. ಸಪ್ತಾಹದ ಕೊನೆಯಲ್ಲಿ ಮಂಗಳವಾಗಿ ಸಂತರ್ಪಣೆ, ಉತ್ಸವ - ಇವುಗಳು ನೆರವೇರುತ್ತಿದ್ದವು. ಜನರು ಈ ಸತ್ಕಾರ್ಯಗಳಿಗೆಲ್ಲ ನೆರವಾಗುತ್ತಾ ಬಂದರು.

ಇವರ ಕೀರ್ತಿಲತೆಯು ಚೆನ್ನಾಗಿ ಹಬ್ಬುತ್ತಾ ಬಂತು. ಜನರು ಬಂದು ಹೋಗುವದೂ ಹೆಚ್ಚಿತು. ಇವರ ಕಾರ್ಯಕಲಾಪಗಳಿಗೆ ವಿಠೋಬದೇವಸ್ಥಾನವು ಸಾಲದಾಯಿತು. ಢಗೆಯವರು ಪಕ್ಕದಲ್ಲಿ ಒಂದು ಮನೆಯನ್ನು ಕೊಟ್ಟರು. ಆಮೇಲೆ ಒಂದು ವಿಸ್ತಾರವಾದ ಮಹಡಿಯನ್ನು ಕಟ್ಟಿಸಿಕೊಟ್ಟರು. ಇವರ ಏಕಾದಶಿ ಉಪವಾಸ, ಜಾಗರಣೆ, ದ್ವಾದಶಿಯ ಹರಿಕಥೆ- ಇವೇ ಮುಂತಾದ ಮನೋ ವಾಕ್ಕಾಯಗಳ ತಪಸ್ಸನ್ನು ಜನರೂ ಅನುಸರಿಸಿ ದೇಹಾತ್ಮಬುದ್ಧಿಯನ್ನು ದೂರ ಗಳಿಸಿಲು ಯತ್ನಿಸಿದರು. ಹರಿಕಥೆಗಳನ್ನು ಮಾಡುವಾಗ ಅನಂತಪ್ಪನವರ ಮಧುರವಾದ ಕಂಠದಿಂದ ಹೊರಸೂಸುವ ಇಂಪಾದ ಗಾನವೂ ಭಕ್ತ್ಯಾವೇಶಪೂರಿತವಾದ ವಾಣಿಯೂ ಜನರ ಮನಸ್ಸನ್ನಾಕರ್ಷಿಸಿ ಭಗವಚ್ಚಿಂತನೆಯಲ್ಲಿಯೇ ಮಗ್ನರಾಗುವಂತೆ ಮಾಡಿದವು. ಈ

ಜಗತ್ತು ಮೂರು ಗಳಿಗೆಯ ಬಾಳೆಂಬುದು ಚೆನ್ನಾಗಿ ಮನವರಿಕೆಯಾಯಿತು. ಅಹಂಮಮಕಾರಗಳನ್ನು ತೊರೆದು ರಾಗದ್ವೇಷರಹಿತರಾಗಿ ಭಗವದ್ದೃಷ್ಟಿಯಿಂದಲೇ ಸರ್ವಭೂತಪ್ರೇಮವನ್ನಾಚರಿಸುತ್ತ ಭಗವದ್ಭಕ್ತರಾಗಬೇಕೆಂಬುದು ಅನಂತಪ್ಪನವರ ಶುದ್ಧವಾದ ಆಚರಣೆಯಿಂದಲೂ ದಿವ್ಯವಾದ ಬೋಧೆಯಿಂದಲೂ ಜನರ ಮನಸ್ಸಿಗೆ ಚೆನ್ನಾಗಿ ಗೋಚರವಾಯಿತು. ಸತ್ಯವೂ ಸ್ವಾಭಾವಿಕವೂ ಆದ ಅವರ ಮಾತುಗಳಿಂದಲೇ ಎಷ್ಟೋ ಜನರ ಇಷ್ಟಾರ್ಥಗಳು ಕೈಗೂಡಿದವು. ಅವರ ದರ್ಶನವೇ ಮನಶ್ಶಾಂತಿಗೆ ಕಾರಣವಾಯಿತು.

ಉಪಾಸನಾ ಮಾರ್ಗದಲ್ಲಿ ಹೀಗೆ ಮುಂದುವರಿಯುತ್ತಿದ್ದ ಅನಂತಪ್ಪ ನವರಿಗೆ ಎಂತಹ ಪ್ರಸಂಗಗಳಲ್ಲಿಯೂ ತಮ್ಮ ಸಮಾಧಾನವನ್ನು ಕಳೆದುಕೊಳ್ಳದೆ ಶಾಂತರಾಗಿಯೇ ಇರುವ ಸ್ವಭಾವವು ಮೈಗೂಡಿಕೊಂಡಿತು. ಇದು ಅವರಲ್ಲಿ ಎದ್ದುಕಾಣಿಸಿದ ಒಂದು ಸಂದರ್ಭವನ್ನು ವಾಚಕಮಹಾಶಯರ ಅವಗಾಹನೆಗಾಗಿ ಈ ಕೆಳಗೆ ಕೊಟ್ಟಿದೆ :

ದತ್ತಂಭಟ್ಟರೆಂಬ ಒಬ್ಬ ಮಹನೀಯರ ಸಹವಾಸದಿಂದ ಅನಂತಪ್ಪನವರು ಪ್ರತಿಗುರುವಾರವೂ ದತ್ತಾತ್ರೇಯರ ಪಾದುಕೆಗಳ ಉತ್ಸವವನ್ನು ನಡೆಸತೊಡಗಿದ್ದರು. ಇದಕ್ಕೆ ಗುರುವಾರದ ನಿಯಮವೆಂದು ಹೆಸರಾಗಿತ್ತು. ಆಗ ಗುರುಮಹಿಮ ಸ್ತೋತ್ರವೂ ದತ್ತನ ಭಜನೆಯೂ ಆಗುತ್ತಿದ್ದವು. ಉತ್ಸವದ ಸಂಗಡ ಅನಂತಪ್ಪನವರು ಇತರ ಭಕ್ತಮಂಡಲಿಯೊಡನೆ ಹೊರಟು ಭಕ್ತ್ಯುದ್ರೇಕಪರವಶರಾಗಿ ''ಸದ್ಗುರು ವಾಚೂನಿ ಸಾಪಡೇನ ಸೋಯ, ಧರಾವೇ ತೇ ಪಾಯ್ ಆದಿ ಆದಿ, ಆಪಣಾ ಸಾರೀಖೆ ಕರಿತಿ ತತ್ಕಾಳ್'' [ಸದ್ಗುರು ಹೊರತು ಮುಕ್ತಿ ಮಾರ್ಗವು ಸಿಕ್ಕುವದಿಲ್ಲ, ಅವರು ಶಿಷ್ಯರನ್ನು ಕೂಡಲೆ ತನ್ನಂತೆಯೇ ಮಾಡಿಕೊಳ್ಳುತ್ತಾರೆ. (ಆಪಣಾ ಸಾರೀಖೆ ಕರಿತಿ ಮೊದಲು ಅವರ ಪಾದಗಳಿಗೆ ಶರಣು ಹೋಗು)] ಎಂಬ ಪದವನ್ನು ಹಾಡಿಕೊಂಡು ಒಂದು ಗೊತ್ತಾದ ಸ್ಥಳದವರೆಗೂ ಹೋಗಿ ಹಿಂತಿರುಗುವಾಗ ''ದತ್ತ! ದತ್ತ!'' ಎಂದು ದತ್ತಾತ್ರೇಯರ ಭಜನೆ ಮಾಡಿಕೊಂಡು ಬರುವದು ಪದ್ಧತಿಯಾಗಿತ್ತು. ಈ ಉತ್ಸವ ಹೊರಡುವ ದಾರಿಯಲ್ಲಿಯೇ ಇದ್ದ ಒಂದು ಮನೆಯಲ್ಲಿ ಲೋಭಿಯಾದ ಅಪ್ಪಣ್ಣನೆಂಬ ಒಬ್ಬ ಐಶ್ವರ್ಯವಂತನಿದ್ದನು. ಈತನು ಪರಮಾರ್ಥದ ಗಂಧವನ್ನೇ ಅರಿಯದ ಶುದ್ಧಲೌಕಿಕ. ಇವನಿಗೆ ಮಕ್ಕಳಿರಲಿಲ್ಲ; ದತ್ತು ಮಾಡಿಕೊಂಡಿದ್ದ. ಗುರುಗುರುವಾರವೂ ಇವನ ಕಿವಿಗೆ ಬೀಳುತ್ತಿದ್ದ, ಅಪಣಾ ಸಾಂಖೇ, ''ದತ್ತ ದತ್ತ'' ಎಂಬ ಶಬ್ದಗಳು ಇವನ ಕಿವಿಗಳಿಗೆ ಇರಿದಂತಾಗಿದ್ದವು. ಇದಕ್ಕೆ ಅವನು ಆ ಶಬ್ದಗಳಿಗೆ ಮಾಡಿಕೊಂಡ

ಅಪಾರ್ಥವೇ ಕಾರಣ. "ಅಪ್ಪಣ್ಣನೆಂಬ ತಾನು ಮಕ್ಕಳಿಲ್ಲದ ದುರದೃಷ್ಟಶಾಲಿಯೆಂದೂ ಅದಕ್ಕೇ ಯಾರನ್ನೋ ಒಬ್ಬನನ್ನು ದತ್ತುಮಾಡಿಕೊಂಡಿರುವನೆಂದೂ" ಪ್ರಕಟಿಸುವದಕ್ಕಾಗಿ ಅನಂತಪ್ಪನವರು ಈ ಗುಂಪನ್ನು ಸೇರಿಸಿಕೊಂಡು ಉತ್ಸವದ ನೆಪದಿಂದ ತನ್ನನ್ನು ಗೇಲಿಗೆಬ್ಬಿಸಿದ್ದಾರೆಂದು ಅದಕ್ಕೆ ವ್ಯಾಖ್ಯಾನಮಾಡಿಕೊಂಡನು! ಈ ಗುರುವಾರ ನಿಯಮವು ನಿರಂತರವೂ ಸಾಗುತ್ತಿದ್ದದ್ದರಿಂದ ಇವನ ಕೋಪವು ಬೆಳೆಯುತ್ತಾ ಬಂತು. ಒಳಗೊಳಗೇ ಕುದ್ದುಕೊಳ್ಳುತ್ತಾ ಇದ್ದನು. ಒಂದು ಗುರುವಾರ ಅದು ಉದ್ರೇಕವಾಯಿತು. ಉತ್ಸವವು ಹಿಂತಿರುಗುವಾಗ ಎಂದಿನಂತೆ, 'ದತ್ತ ದತ್ತ!' ಎಂಬ ಭಜನೆಯು ಕಿವಿಗೆ ಬಿದ್ದೊಡನೆ ಅವನ ಕೋಪವು ಮಿತಿಮೀರಿದ್ದರಿಂದ ಅವನು ಹೊರಗೆ ಬಂದು ಅನಂತಪ್ಪನವರ ಕೆನ್ನೆಗೆ ಛಟೀರನೆ ಹೊಡೆದು ಮನಸ್ಸು ಬಂದಂತೆ ಬಯ್ಯಲಾರಂಭಿಸಿದನು. ಅನಂತಪ್ಪನವರು ಶಾಂತರಾಗಿಯೇ ಇದ್ದುಬಿಟ್ಟರು. ಆಗ ಈ ಮೂರ್ಖನ ಉದ್ಧಟತನವನ್ನು ಜನರು ಸಹಿಸಲಾರದೆ ಅವನಿಗೆ ಪ್ರತೀಕಾರ ಮಾಡಲು ಉದ್ಯುಕ್ತರಾದರು. ಅನಂತಪ್ಪನವರು ಎಲ್ಲರನ್ನೂ ಸಮಾಧಾನಮಾಡಿ ಆತನ ಮೇಲೆ ಕೈಮಾಡಿದ್ದೆಲ್ಲ ನನ್ನ ಮೇಲೆ ಕೈಮಾಡಿದಂತೆಯೇ ಸರಿ ಎಂದು ಆಣೆ ಇಟ್ಟರು. ಯತ್ನವಿಲ್ಲದೆ ಎಲ್ಲರೂ ಸುಮ್ಮನಾಗಬೇಕಾಯಿತು. ಅವರು ಜನರನ್ನು ಕುರಿತು "ನಮಸ್ಕಾರ ಮಾಡಲಿಕ್ಕೆ ಮಂದಿ ಬಂದಾಗ ಸಂತೋಷದಿಂದ ಕಾಲು ಮುಂದುಮಾಡುವದು, ಹೊಡೆಯುವದಕ್ಕೆ ಬಂದಾಗ ಮಾತ್ರ ಸಿಟ್ಟಿನಿಂದ ಅವರ ಮೇಲೆ ಕೈಮಾಡುವದು- ಹೀಗೆ ಪಕ್ಷಪಾತ ಮಾಡಿದರೆ ಹೇಗೆ ಸರಿಯಾದೀತು" ಎಂದು ಶಾಂತರಾಗಿಯೇ ಹೇಳಿ ಅವನನ್ನು "ಹೊಡೆಯಪ್ಪ, ನಿನ್ನ ಮನಸ್ಸು ಬಂದಷ್ಟು ಹೊಡೆ, ಇದೆಲ್ಲ ದತ್ತನ ಪ್ರಸಾದವೇ" ಎಂದು ಹೇಳಿದರು. ಆತನಿಗೆ ನಾಚಿಕೆಯಾಗಿ ಒಳಗೆ ಹೋಗಿಬಿಟ್ಟನು. ಪುನಃ ಎಂದಿನಂತೆ ಭಜನೆಯನ್ನು ಮಾಡುತ್ತಾ ಉತ್ಸವವನ್ನು ಸಾಂಗಗೊಳಿಸಿದರು. ಆ ವಿಷಯವನ್ನೇ ಮತ್ತೆ ಎತ್ತಲಿಲ್ಲವಂತೆ! ಎಂಥ ಸಮಾಧಾನ ! ಎಷ್ಟು ಶಾಂತಿ ಆ ಮಹನೀಯರದು !

ಹೀಗೆ ಸತ್ಪುರುಷರ ಮೇಲೆ ನಿಷ್ಕಾರಣವಾಗಿ ಕೈಮಾಡಿದ ಅಪ್ಪಣ್ಣನಿಗೆ ಕೂಡಲೆ ಚಳಿಜ್ವರ ಬಂದು ಹಾಸಿಗೆ ಹಿಡಿಯುವಂತಾಯಿತು. ಅವನಿಗೆ ತನ್ನ ತಪ್ಪಿತಕ್ಕೆ ಪಶ್ಚಾತ್ತಾಪವುಂಟಾಗಿ ಅನಂತಪ್ಪನವರ ಕ್ಷಮಾಪಣೆ ಬೇಡಿಕೊಂಡು ಅವರ ಶಿಷ್ಯನಾಗಿ ದಾನಧರ್ಮಿಷ್ಠನಾದನಂತೆ !

ಈ ಪ್ರಸಂಗವು ಅನಂತಪ್ಪನವರ ಶಾಂತತೆಗೆ ಒರೆಗಲ್ಲಾದದ್ದಲ್ಲದೆ "ಇದ್ದಲಿನವನೊಡನೆ ಮಾಡಿದ ಸ್ನೇಹಕ್ಕಿಂತಲೂ, ಗಂಧದಂಗಡಿಯವನೊಡನೆ ನಡೆಸಿದ ಜಗಳವೇ ಲೇಸೆಂಬ" ಗಾದೆಯನ್ನು ನೆನಪು ಮಾಡಿಕೊಡುವಂತಾಯಿತು.

# 3. ಶ್ರೀಶಂಕರಭಗವತ್ಪಾದರವರು

ಇಂದ್ರಿಯಗೋಚರವಾಗಿ ನಮ್ಮೆಲ್ಲರ ಅನುಭವದಲ್ಲಿಯೂ ಇರುತ್ತಿರುವ ಈ ಪ್ರಪಂಚವು ಈಶ್ವರಾಧಿಷ್ಠಿತವಾಗಿರುವದೋ ಸ್ವತಂತ್ರವಾಗಿರತಕ್ಕದ್ದೋ? ಇದಕ್ಕೂ ಇದನ್ನು ನೋಡುತ್ತಲಿರುವ ಜೀವನಿಗೂ ಇರುವ ಸಂಬಂಧವೇನು? ಜೀವೇಶ್ವರರಿಗಿರುವ ಸಂಬಂಧವು ಯಾವದು? ಎಂಬ ಈ ವಿಷಯದಲ್ಲಿ ತತ್ತ್ವವನ್ನು ಕಂಡುಹಿಡಿಯುವದಕ್ಕೆ ಅಸಂಖ್ಯಾತವಾದ ಸಿದ್ಧಾಂತಗಳು ಪಾಶ್ಚಾತ್ಯದೇಶಗಳಲ್ಲಿಯೂ ನಮ್ಮ ದೇಶಗಳಲ್ಲಿಯೂ ಹೊರಟಿವೆ. ಹೀಗಿರುವಲ್ಲಿ ಶ್ರೀಭಗವತ್ಪಾದರು ಇದೇ ವಿಚಾರದಲ್ಲಿ ಯಾವ ಸಿದ್ಧಾಂತವನ್ನು ಮಾಡಿದರೆಂಬುದನ್ನು ತಿಳಿಯುವದಕ್ಕೆ ವಾಚಕ ಮಹಾಶಯರಲ್ಲಿ ಕುತೂಹಲವಿರುವದು ಸಹಜವಾಗಿದೆ.

ಇತರ ಸಿದ್ಧಾಂತಗಳಲ್ಲಿ ಈ ಜೀವಿಕೆಯಲ್ಲಿ ಜೀವರು ಅನುಭವಿಸುತ್ತಿರುವ ದುಃಖ, ವ್ಯಾಧಿ, ಮೋಹ, ಮರಣ ಮುಂತಾದವುಗಳು ಅನಿವಾರ್ಯವೆಂತಲೂ ಅಥವಾ ನಿಯತವಾದ ಕರ್ಮಫಲಗಳೆಂತಲೂ ಆದ್ದರಿಂದ ಅವುಗಳನ್ನು ತಪ್ಪಿಸಿಕೊಳ್ಳುವದು ಯಾವ ಜ್ಞಾನದಿಂದಲಾಗಲಿ ಆಚರಣೆಯಿಂದಲಾಗಲಿ ಸಾಧ್ಯವಾಗಲಾರದೆಂತಲೂ ವರ್ಣಿತವಾಗಿದೆ. ಆ ಸಿದ್ಧಾಂತಗಳಂತೆ ಜೀವನು ಕರ್ಮದಿಂದ ಅಥವಾ ಜ್ಞಾನದಿಂದ, ಇಲ್ಲದಿದ್ದರೆ ಇವೆರಡನ್ನೂ ಕೂಡಿಸಿ ಅನುಷ್ಠಾನ ಮಾಡುವದರಿಂದ, ತನ್ನ ಮರಣವಾದ ಮೇಲೆ ಈಶ್ವರಸಾನ್ನಿಧ್ಯವೇ ಮೊದಲಾದ ಸುಖಗಳನ್ನು ಪಡೆದುಕೊಳ್ಳ ಬಹುದಾಗಿರುತ್ತದೆ. ಆದರೆ ವೇದಾಂತಶಾಸ್ತ್ರವನ್ನು ಉದ್ಧಾರಮಾಡಿ ನಿತ್ಯವಾಗಿ ನೆಲೆಗೊಳ್ಳುವಂತೆ ಮಾಡಿದ ಭಗವತ್ಪಾದರ ತಾತ್ಪರ್ಯವೇ ಬೇರೆಯಾಗಿದ್ದು ಉಳಿದ ಎಲ್ಲಾ ಸಿದ್ಧಾಂತಗಳಿಗೂ ವಿಲಕ್ಷಣವಾಗಿರುವದು. ಹೇಗೆಂದರೆ, ಜೀವನು ವೈರಾಗ್ಯವೇ ಮೊದಲಾದ ನಾಲ್ಕು ಸಾಧನಗಳನ್ನು ಅಳವಡಿಸಿಕೊಂಡು ಗುರುವಿನ ಉಪದೇಶದಿಂದ ಬ್ರಹ್ಮಜ್ಞಾನವನ್ನು ಪಡೆಯುವ ಕ್ಷಣದಲ್ಲಿಯೇ 'ಬ್ರಹ್ಮವಿದ್ ಬ್ರಹ್ಮೈವ ಭವತಿ' ಎಂಬ ನ್ಯಾಯದಿಂದ ಬ್ರಹ್ಮಾನುಭವವನ್ನು ಹೊಂದಿ ಶೋಕ, ಮೋಹ, ಆಧಿ, ವ್ಯಾಧಿ, ಮರಣ ಮುಂತಾದ ಶರೀರವನ್ನು ಆಶ್ರಯಿಸಿರುವ ಎಲ್ಲಾ ವ್ಯವಹಾರಗಳನ್ನೂ ಕೂಡಲೆ ದಾಟುವವನಾಗುವನು; ಅವನಿಗೆ ಬಿಡಬೇಕಾದ ಶರೀರವಾಗಲಿ, ವ್ಯವಹಾರ ಮಾಡ ಬೇಕಾದ ಪ್ರಪಂಚವಾಗಲಿ ವಿಧಿನಿಷೇಧರೂಪವಾದ ಕರ್ಮಗಳಾಗಲಿ ಇನ್ನು ಮೇಲೆ ಇರುವದಿಲ್ಲ, ಇವುಗಳನ್ನೆಲ್ಲವನ್ನೂ ಮೀರುವದರಿಂದ ಅವನು ನಿತ್ಯವಾದ ಬ್ರಹ್ಮಾನಂದ ದಲ್ಲಿ ಮುಳುಗಿ ವ್ಯವಹಾರ ದೃಷ್ಟಿಯಿಂದ "ಜೀವನ್ಮುಕ್ತ" ನೆನಸಿಕೊಳ್ಳುವನು.

ಈಗ ಭಗವತ್ಪಾದರವರ ಸಿದ್ಧಾನ್ತಕ್ಕೂ ಉಳಿದ ಎಲ್ಲಾ ಮತಗಳಿಗೂ ಇರುವ ಭೇದವು ಅಜಗಜಾಂತರವೆಂಬುದು ವಾಚಕರಿಗೆ ಮನಗಾಣುವದು. ಮುಖ್ಯವಾಗಿ ಈ ಜೀವಿಕೆಯು ತಾಪಕರೂಪವಾಗಿರುವದು. ಇಲ್ಲಿರುವ ಸಕಲತಾಪಗಳನ್ನೂ ಜ್ಞಾನದಿಂದಲೇ ನಿವೃತ್ತಿಮಾಡಿಕೊಳ್ಳಬಹುದಾಗಿದ್ದರೆ ಅಂಥ ಜ್ಞಾನವನ್ನು ಪಡೆದರೇ ನಮ್ಮ ಜನ್ಮವನ್ನು ಸಾರ್ಥಕಗೊಳಿಸಿಕೊಂಡಂತಾಗುವದು. ಹಾಗಿಲ್ಲದೇ ''ನಂದೋ ರಾಜಾ ಭವಿಷ್ಯತಿ'' ಎಂಬಂತೆ ಮುಂದೆ ಯಾವ ಜನ್ಮದಲ್ಲಿಯೂ ಕರ್ಮ ಪರಿಪಾಕದಿಂದ ಜ್ಞಾನವನ್ನು ಪಡೆದು, ಆಗಲೂ ಮೃತಿಹೊಂದಿದ ತರುವಾಯವೇ ಪರಮ ಪುರುಷಾರ್ಥವನ್ನು ಸಂಪಾದಿಸಬೇಕಾಗಿರುವದೆಂಬುದು ದವಾನಲದಲ್ಲಿ(ಕಾಡ್ಗಿಚ್ಚು) ಸದ್ಯಕ್ಕೆ ಬೆಂದುಬೆಂಡಾಗುತ್ತಿರುವ ಜೀವರಿಗೆ ಯಾವ ವಿಧವಾದ ಸಮಾಧಾನವನ್ನೂ ಕೊಡಲಾರದು. ಇದಲ್ಲದೆ ಮರಣಾನಂತರ ನಮಗೆ ಉಂಟಾಗಬಹುದಾದ ಫಲ ಪುರುಷಾರ್ಥಗಳನ್ನು ನಾಸ್ತಿಕರು ಹೇಳುತ್ತಿರುವ ಹಾಗೆ ಬರಿಯ ವಾಕ್ಯಪ್ರಾಮಾಣ್ಯ ದಿಂದಲೇ ನಂಬಬೇಕಾಗಿರುವದೇ ಹೊರತು ಯುಕ್ತಿ, ಅನುಭವ- ಇವೆರಡಕ್ಕೂ ಆ ಮತದಲ್ಲಿ ಅವಕಾಶವೇ ಇಲ್ಲದೆ ಹೋಗುವದು. ಶ್ರೀಭಗವತ್ಪಾದರಾದರೋ ಸಕಲ ಯುಕ್ತ್ಯನು ಭವಗಳನ್ನೂ ಅನುಸರಿಸಿ ''ಜ್ಞಾನದಿಂದ ಸದ್ಯೋಮುಕ್ತಿ'' ಎಂಬುದೇ ವೇದಾದಿ ಶಾಸ್ತ್ರಗಳಿಗೆಲ್ಲ ತಾತ್ಪರ್ಯವೆಂದು ಯಾವ ವಿಕಲ್ಪಗಳಾಗಲಿ ಸಂಶಯಗಳಾಗಲಿ ವಿಪರೀತ ಭಾವನೆಗಳಾಗಲಿ ಉಂಟಾಗದ ಹಾಗೆ ಸಮರ್ಥಿಸಿರುವದರಿಂದ ಇವರ ಸಿದ್ಧಾಂತವನ್ನು ಸರ್ವಪ್ರಮಾಣಗಳೂ ಸೇವಿಸುವವು ಎಂದು ಸಿದ್ಧವಾಗುತ್ತದೆ.

ಆದರೆ ನಾವು ಇಲ್ಲಿ ಅತಿಸಂಕ್ಷೇಪವಾಗಿ ಅವರು ಮಾಡಿದ ಲೋಕೋಪ ಕಾರದ ಮಾಹಾತ್ಮ್ಯವನ್ನು ತಿಳಿದೆವೇ ಹೊರತು ಅವರು ಸ್ಥಾಪಿಸಿರುವ ವೇದಾಂತದ ಅಸಾಧಾರಣ ಪ್ರಕ್ರಿಯೆಯನ್ನಾಗಲಿ ಅದರ ಒಳಭೇದಗಳನ್ನಾಗಲಿ ಕುರಿತು ಪ್ರಸ್ತಾವ ಮಾಡಲಿಲ್ಲ. ಈ ಮಹಾಸಿದ್ಧಾಂತದ ಸಂಪೂರ್ಣವಾದ ಜ್ಞಾನವನ್ನು ಪಡೆಯಲು ಅವರು ಅನುಗ್ರಹಿಸಿರುವ ಭಾಷ್ಯಾದಿ ದಿವ್ಯಪ್ರಬಂಧಗಳ ಪರಿಶೀಲನೆಯು ಅತ್ಯವಶ್ಯ ವಾಗಿರುತ್ತದೆ. ಅಂಥ ಪರಿಶೀಲನೆಯಿಂದ ಪರಮಪುರುಷಾರ್ಥವಾದ ಮೋಕ್ಷವೇ ಕೈಸೇರುತ್ತಿರುವಾಗ ಮುಮುಕ್ಷುವಾದ ಜೀವನಿಗೆ ಈ ಜನ್ಮವನ್ನು ಸಫಲಮಾಡಿ ಕೊಳ್ಳುವದಕ್ಕೆ ಬೇರೆ ಯಾವ ಮಾರ್ಗವಿರುವದೆಂದು ಹೇಳಬಹುದು?

ಭಗವತ್ಪಾದರವರು ಶ್ರೀಶಂಕರಾವತಾರವೆಂದು ಗ್ರಂಥಮೂಲಕವಾದ ಸಾರ್ವಜನೀನ ಪ್ರತೀತಿಯುಂಟು. ಆದರೆ ಅವರು ''ಸರ್ವಂ ಖಲ್ವಿದಂ ಬ್ರಹ್ಮ'' ಎಂಬ ವಾಕ್ಯದ ತಾತ್ಪರ್ಯವನ್ನು ಯಾವ ಸಂಕೋಚವೂ ಇಲ್ಲದೆ ಮುಖ್ಯಾರ್ಥದಲ್ಲಿಯೇ

ನಿರ್ಧರಿಸಿರುವರು. ಇದನ್ನು ನೋಡಿದರೆ ಬ್ರಹ್ಮವಲ್ಲದೇ ಬೇರೆ ಯಾವ ವಸ್ತುವೂ ಇಂಥ ಅಖಂಡಬ್ರಹ್ಮದೃಷ್ಟಿಯನ್ನು ಹೊಂದಲಾರದಾದ್ದರಿಂದ ಅವರ ಬೋಧಾನುಸಾರ ವಾಗಿಯೆ ಭಗವತ್ಪಾದರವರು ಬ್ರಹ್ಮವಸ್ತುವೇ ಹೊರತು ಬೇರಲ್ಲವೆಂದು ನಾವು ತಿಳಿಯಬೇಕಾಗಿದೆ. ಇದಕ್ಕೆ ಮತ್ತೆ ಯಾವ ಪ್ರಮಾಣವೂ ಅವಶ್ಯವಿಲ್ಲ.

ಈ ಮಹನೀಯರು ಸುಮಾರು 1200 ವರ್ಷಗಳಿಗೆ ಹಿಂದೆ ಮಲೆಯಾಳದ ದೇಶದ ಕಾಲಟಿಯೆಂಬ ಅಗ್ರಹಾರದಲ್ಲಿ ಪರಮ ಶುದ್ಧವಾದ ಬ್ರಾಹ್ಮಣ ಕುಲದಲ್ಲಿ ಶಿವಗುರು ಪುತ್ರನಾಗಿ ವೈಶಾಖ ಶುದ್ಧ ಪಂಚಮಿಯ ದಿನ ಜನಿಸಿದರು. ಉತ್ತರ ಯೋಗಿ, ದಕ್ಷಿಣಭೋಗಿ, ಪೂರ್ವರೋಗಿ. ಪಶ್ಚಿಮತ್ಯಾಗಿ. ಎಂಬ ಲೋಕವಾರ್ತೆಗೆ ಅನುಸಾರವಾಗಿ ಮಿಕ್ಕ ದಿಕ್ಕುಗಳನ್ನು ಬಿಟ್ಟು ಪಶ್ಚಿಮ ದೇಶವಾದ ಮಲೆಯಾಳದಲ್ಲಿ ಇವರು ಅವತರಿಸಿದ್ದು ಇವರ ನಿಜವಾದ ಸರ್ವಪರಿತ್ಯಾಗಕ್ಕೆ ಅನುಗುಣವಾಗಿತ್ತು. ಐದನೆಯ ವರ್ಷವೇ ಉಪನೀತರಾಗಿ, ಎಂಟನೇ ವಯಸ್ಸಿನೊಳಗೆ ಸರ್ವಶಾಸ್ತ್ರ ವಿಶಾರದರಾಗಿತಾಯಿಯ ಅಪ್ಪಣೆ ಪಡೆದು ಸನ್ನ್ಯಸ್ತರಾಗಿ ಶ್ರೀ ಗೋವಿಂದಭಗವತ್ಪಾದ ರಲ್ಲಿ ಕ್ರಮಸನ್ನ್ಯಾಸವನ್ನು ಹೊಂದಿ ಅವರಲ್ಲಿ ಕೆಲವು ಕಾಲ ಶಾಸ್ತ್ರವಿಚಾರದಲ್ಲಿ ಕಾಲಕ್ಷೇಪಮಾಡಿ, ಅವರ ಅಪ್ಪಣೆಯಂತೆ ಕಾಶಿಗೆ ದಯಮಾಡಿಸಿ ಭಾಷ್ಯಾದಿಗಳನ್ನು ರಚಿಸಿದರು. ಮುಂದೆ ಭಟ್ಟಪಾದರನ್ನು ನೋಡಿ ಮಂಡನಮಿಶ್ರರನ್ನು ವಾದದಲ್ಲಿ ಜಯಿಸಿ ಜ್ಞಾನೋಪದೇಶವನ್ನು ಕೊಟ್ಟು ಸನ್ನ್ಯಾಸದೀಕ್ಷೆಯಿತ್ತು ಅವರನ್ನು ಶೃಂಗಗಿರಿ ಯಲ್ಲಿ ಮಠಕ್ಕೆ ಪ್ರಥಮಾಚಾರ್ಯರನ್ನಾಗಿ ನಿಯಮಿಸಿದರು. ಬಳಿಕ ಭರತಖಂಡದ ಸಕಲದಿಗ್ಭಾಗಗಳಲ್ಲಿಯೂ ಶಿಷ್ಯರೊಡನೆ ಸಂಚರಿಸಿ ದುರ್ಮತಗಳನ್ನು ಖಂಡಿಸಿ ವೇದಾನುಸಾರವಾದ ಮತಗಳನ್ನು ಸ್ಥಾಪಿಸಿದರು. ಈ ರೀತಿಯಾಗಿ ಲೋಕೋದ್ಧಾರ ಕ್ಕಾಗಿ ತಾವು ಮಾಡಬೇಕಾಗಿದ್ದ ಮಂಗಲಕಾರ್ಯಗಳನ್ನೆಲ್ಲ ಮುಗಿಸಿ ಮೂವತ್ತೆರಡನೆಯ ವಯಸ್ಸಿನಲ್ಲಿ ಬದರಿಕಾಶ್ರಮದಲ್ಲಿ ವೃಷಭಾರೂಢರಾಗಿ ಕೈಲಾಸವನ್ನು ಕುರಿತು ತೆರಳುವರಾದರು. ಈ ದಿವ್ಯ ಚರಿತ್ರೆಯು ಮಾಧವಾಚಾರ್ಯರೇ ಮುಂತಾದ ಮಹಾಕವಿ ಗಳು ಬರೆದಿರುವ ಮಹಾಕಾವ್ಯಗಳಲ್ಲಿ ವಿಸ್ತಾರವಾಗಿ ವರ್ಣಿತವಾಗಿರುವದು.

ಮುಖ್ಯವಾಗಿ ಕಲಿಪ್ರಾಬಲ್ಯದಿಂದ ಅವೈದಿಕಮತಗಳು ತಲೆ ಎತ್ತಿ ಭರತ ಖಂಡದ ಅಧ್ಯಾತ್ಮವಿದ್ಯೆಯು ಪರಮ ಸಂಕುಚಿತಾವಸ್ಥೆಯಲ್ಲಿದ್ದ ಕಾಲದಲ್ಲಿ ಅವುಗಳನ್ನು ಖಂಡಿಸಿ ಆರ್ಷವಾದ ಉಪನಿಷತ್ಸಿದ್ಧಾಂತವನ್ನು ಮೇಲಕ್ಕೆತ್ತಿದ ಧೀರರುಗಳಲ್ಲಿ ನಾಶ ರಹಿತವಾದ ಕೀರ್ತಿಗೆ ಪಾತ್ರರಾದವರು ಶ್ರೀಮದ್ಗೌಡಪಾದರು ಮತ್ತು ಶ್ರೀಭಗವತ್ಪಾದರು- ಇವರಿಬ್ಬರೇ ಎಂದು ಥೀಬೋ ಎಂಬ ಯುರೋಪಿಯನ್

ವಿದ್ವಾಂಸನು ಅಭಿಪ್ರಾಯಪಟ್ಟಿರುತ್ತಾನೆ. ಈ ನಮ್ಮ ಭರತಖಂಡಕ್ಕೆ ಶಾಶ್ವತವಾದ ಕೀರ್ತಿ ಬೇಕಾದರೆ ಧನಕನಕವಸ್ತ್ರವಾಹನಾದಿಗಳಿಂದಾಗಲಿ, ವ್ಯವಹಾರಶಕ್ತಿಯಿಂದಾಗಲಿ, ಭೌತಿಕವಿದ್ಯಾವಿಶಾರದರಾಗುವದರಿಂದಾಗಲಿ, ಹೊಸ ನಾಗರಿಕತೆಯಿಂದಲಾಗಲಿ, ಇದು ಎಂದಿಗೂ ಉಂಟಾಗಲಾರದು. ಆದರೆ ಮನುಷ್ಯಬುದ್ಧಿಗೆ ನಿಲುಕದೆ ''ಯತೋ ವಾಚೋ ನಿವರ್ತನ್ತೇ ಅಪ್ರಾಪ್ಯ ಮನಸಾ ಸಹ'' ಎಂಬ ಶ್ರುತಿಗೆ ವಿಷಯವಾದ ಯಾವ ಬ್ರಹ್ಮಜ್ಞಾನವುಂಟೋ ಅದು ವೇದಶಾಸ್ತ್ರಪ್ರಮಾಣಗಳಿಂದ ಸಿದ್ಧವಾಗಿ ಯುಕ್ತ್ಯನುಭವಗಳಿಂದ ಪೋಷಿತವಾಗಿ ಎಂದಿಗೂ ಬಾಡದೆಯೂ, ಯಾರಿಂದಲೂ ಅಪಹರಿಸಲಿಕ್ಕಾಗದೆಯೂ, ಯಾರಿಂದಲೂ ತಿರಸ್ಕರಿಸಲಶಕ್ಯವಾಗಿಯೂ ಇರುವ ತೇಜೋವಿರಾಜಮಾನವಾದ ಕೀರ್ತಿಯನ್ನು ನೆಲೆಗೊಳಿಸುವದು. ಇದೇ ನಮ್ಮ ಭಗವತ್ಪಾದರವರ ಅನುಗ್ರಹವು.

*****

# 4. ಅಪ್ಪಂಭಟ್ಟರೂ ರಾಮುವೂ

ರಾಮು :- ನಮೋ ನಮಃ ಅಪ್ಪಂಭಟ್ಟರೇ, ಇದೇನು ಇಷ್ಟು ವಿಜೃಂಭಣೆ? ತಲೆಯಲ್ಲಿ ಜಲತಾರಿ ಶಾಲು, ಕೈನಲ್ಲಿ ಬೆಳ್ಳಿಕೋಲು, ತುಂಬ ಅಲಂಕೃತ ರಾಗಿದ್ದೀರೆ? ಅಮ್ಮಾವರು ಸೌಖ್ಯವಾಗಿದ್ದಾರೊ? ಹೊಸ ಮದುವೇ ಗಂಡು. ಕಾಶಿಯಾತ್ರೆಗೆ ಹೊರಟಹಾಗೆ ಹೊರಟಿರಲ್ಲ? ಈಚೆಗೆ ತಮ್ಮ ದರ್ಶನವು ಕೂಡ ದುರ್ಲಭವಾಯಿತೆ?

ಅಪ್ಪಂಭಟ್ಟರು : - ಚಿರಂಜೀವಿಯಾಗಿರು. ನಮ್ಮ ಮನೆಯಲ್ಲಿ ಎಲ್ಲರೂ ಸುಖ ವಾಗಿರುತ್ತಾರೆ. ಇನ್ನೇನೂ ಇಲ್ಲ, ಆದರೆ ಶ್ರೀಮನ್ಮಹಾರಾಜರು ನನ್ನ ಪಾಂಡಿತ್ಯವನ್ನು ಮೆಚ್ಚಿ ಸಭೆಮಾಡಿಸಿ ನನಗೆ ತರ್ಕವಾಚಸ್ಪತಿ ಎಂಬ ಬಿರುದನ್ನು ಕೊಟ್ಟು ಈ ಶಾಲನ್ನೂ ಈ ಕೋಲನ್ನೂ ಸಹ ವಿದ್ಯಾಪಾರಿತೋಷಿಕವಾಗಿ ಅನುಗ್ರಹಿಸಿರು ತ್ತಾರೆಯೋ ? ನಿನ್ನ ಹಳೆ ತುಂಟಾಟವನ್ನು ಬಿಟ್ಟು ಇನ್ನುಮೇಲೆ ಮರ್ಯಾದೆಯಾಗಿ ನಡೆದುಕೋ.

ರಾಮು :- ಹಾಗೆಯೇ? ಬಹು ಸಂತೋಷ. ಇಂದಿಗೆ ನನ್ನ ಮನಸ್ಸು ಆನಂದಭರಿತವಾಯ್ತು. ಆದರೆ ನಮ್ಮ ಹಳೇ ಗುರುಗಳಾದ ತಮ್ಮ ಸಾನ್ನಿಧ್ಯ ಬಿಟ್ಟು ನಮ್ಮ ತುಂಟಾಟಕ್ಕೆ ಬೇರೆ ಜಾಗ ಉಂಟೆ. ಮಹಾಸ್ವಾಮಿ ? ಅದೇನು ತಕ್ರ, ಬೃಹಸ್ಪತಿ-ಎಂದಿರಲ್ಲ, ಹಾಗಂದರೇನು?

ಅಪ್ಪಂಭಟ್ಟರು : - ಛೀ ಭ್ರಷ್ಟ ! ನಿನ್ನ ನಾಲಿಗೆಯನ್ನು ದರ್ಭೆಯಿಂದ ಸುಡಬೇಕು. ತಕ್ರವಲ್ಲವೋ ತರ್ಕ! ಬೃಹಸ್ಪತಿ ಅಲ್ಲ, ವಾಚಸ್ಪತಿ? ಅಂದರೇ ತರ್ಕಶಾಸ್ತ್ರದಲ್ಲಿ ನಾನು ಬ್ರಹ್ಮದೇವನಿಗೆ ಸಮಾನನಂತೆ. ಅದೇ ನನಗೆ ಹೊಸ ನಾಮಧೇಯವು.

ರಾಮು :- ಹಾಗಾದರೆ ಅಪ್ಪಂಭಟ್ಟರು ಎನ್ನುವ ಹೆಸರು ಹೋಯ್ತಲ್ಲವೇ? ಅಪ್ಪಂಭಟ್ಟರ ಹೆಸರಿಗೆ ಹುಟ್ಟಿದ ದಸ್ತಾವೇಜುಗಳೆಲ್ಲ ನಿಮ್ಮ ಪಾಲಿಗೆ ಮಣ್ಣು ತಿಂದ ಹಾಗಾಯ್ತು. ಅವುಗಳನ್ನು ನನಿಗಾದರೂ ಕೊಟ್ಟು ಬಿಡೋಣವಾಗಲಿ. ನಾನು ಬದುಕಿಕೊಳ್ಳುತ್ತೇನೆ. ಹಳೇಶಿಷ್ಯನ ಮೇಲೆ ಅಷ್ಟರಮಟ್ಟಿಗೆ ಕೃಪೆಮಾಡಿ.

ಅಪ್ಪಂಭಟ್ಟರು : - (ನಕ್ಕು) ಎಲ್ಲಾದರೂ ಉಂಟೆ ! ಈ ಶಾಲು, ಈ ಕೋಲು, ನನ್ನ ಜೀವನ ನಡಸೀತೆ? ಲೌಕಿಕವ್ಯವಹಾರಗಳಲ್ಲಿ ನನ್ನ ಹೆಸರು ಅಪ್ಪಂಭಟ್ಟರೆ; ಆದರೆ ನನ್ನ ಪಾಂಡಿತ್ಯದ್ಯೋತಕವಾಗಿ ಈ ಹೊಸಹೆಸರನ್ನು ನಾನು ಪಡೆದಂತಾಯ್ತು.

**ರಾಮು** :- ನಿಮ್ಮ ಪಾಂಡಿತ್ಯವೇನು ಸ್ವಾಮಿ. ನಮಗೆ ಹುಟ್ಟಿದಾರಭ್ಯ ತಿಳಿದೇ ಇತ್ತು. ತಾವು "ತಕ್ರಾಂತಂಚ ಭೋಜನಂ" ಎಂಬುದನ್ನು ಪದೇಪದೇ ಹೇಳಿ ಒಬ್ಬಟ್ಟು ಹೆಚ್ಚಾಗಿ ತಿಂದಾಗ ಒಂದು ಸೇರು ಮಜ್ಜಿಗೆಯನ್ನು ಕುಡಿಯುವುದರಲ್ಲಿ ಹಿಂಜರಿಯುವಿರಾ? "ತಕ್ರಂಶಕ್ರಸ್ಯ ದುರ್ಲಭಂ" ಅಲ್ಲವೇ? ಆದ್ದರಿಂದ ತಮಗೆ ತಕ್ರಬೃಹಸ್ಪತಿಯೆಂಬ ನಾಮಧೇಯವು ತಕ್ಕದ್ದೇ; ಆದರೆ ಈ ಗುಟ್ಟು ಶ್ರೀಮನ್ಮಹಾರಾಜರವರಿಗೆ ಹ್ಯಾಗೆ ತಿಳಿಯಬಂತೋ ಪರಮೇಶ್ವರನೇ ಬಲ್ಲ.

**ಅಪ್ಪಂಭಟ್ಟರು** : - ಛಿ ಛಿ ಮೂರ್ಖ ! ನಿನ್ನ ಮೌಢ್ಯಕ್ಕೆ ಏನು ಹೇಳಲಿ? ತರ್ಕವಾಚಸ್ಪತಿ ಅಂದರೆ ನ್ಯಾಯಶಾಸ್ತ್ರದಲ್ಲಿ ನಾನು ಅದ್ವಿತೀಯನೋ !

**ರಾಮು** :- ಈವಾಗ ಸರಿಹೋಯ್ತು. ನ್ಯಾಯವೇ? ನಿಮ್ಮ ಬೀದಿಯಲ್ಲಿಯೆ ಅದರ ಗಂಧವೂ ಇಲ್ಲ. ಅಕಾರ ಪೂರ್ವಕವಾದರೆ ನಾನೂ ಒಪ್ಪ್ಯೇನು.

**ಅಪ್ಪಂಭಟ್ಟರು** : -(ನಗುತ್ತಾ) ಯಾಕೊ? ನಿನ್ನ ತುಂಟಾಟ ಬಿಡಲೇ ಇಲ್ಲ. ಯಾರಿಗೆ ನಾನು ಅನ್ಯಾಯ ಮಾಡಿದ್ದೇನೆ? ಅದಿರಲಿ, ಶಾಸ್ತ್ರದಲ್ಲಿ ನನ್ನನ್ನು ಜಯಿಸಿದವರು ಇದುವರೆವಿಗೂ ಉಂಟೇ?

**ರಾಮು** :- ಹಾಗಾದರೆ ಮಹಾಸ್ವಾಮಿ, ನಾನು ಒಂದು ಚಿಕ್ಕ ಪ್ರಶ್ನೆಯನ್ನು ಕೇಳುವೆನು. ಅದಕ್ಕೆ ನ್ಯಾಯವಾಗಿ ಸದುತ್ತರ ಕೊಡುವಿರಾ?

**ಅಪ್ಪಂಭಟ್ಟರು** : - ಶಾಸ್ತ್ರರೀತಿಯಾಗಿ ಬೇಕಾದ್ದು ಕೇಳು. ಲಕ್ಷಣಪರಿಷ್ಕಾರ, ಪ್ರಾಮಾಣ್ಯವಾದ - ಮುಂತಾದ ಭಾಗಗಳು ನನಗೆ ಕರತಲಾಮಲಕವಲ್ಲವೇ?

**ರಾಮು** :- ಕರತಲಾಮಲಕವೋ ತರುತಲಾಮಲಕವೋ? ನನಗೆ ಗೊತ್ತಿಲ್ಲ. ಲಕ್ಷಣ ಎಂತ ಅಪ್ಪಣೆಕೊಟ್ಟರಲ್ಲವೇ? ನಿಮ್ಮ ಕೋಲಿಗೆ ಲಕ್ಷಣವೇನು? ರವಷ್ಟು ಅಪ್ಪಣೆ ಯಾಗಲಿ.

**ಅಪ್ಪಂಭಟ್ಟರು** : - ಎಲೋ ಇದು ಒಂದು ರಜತಾಲಂಕೃತವಾದ ಬಿದಿರು ಕಟ್ಟಿಗೆ.

**ರಾಮು** :- ನಿಮ್ಮ ವಿಶೇಷಣಗಳು ಒಂದು ಕಡೆ ಇರಲಿ. ಹೋದರೆ ಕೋಲು ಎಂಬುವದಕ್ಕೆ ಕಟ್ಟಿಗೆ ಎಂತ ಹೇಳಿದಂತಾಯಿತು. ಇದು ಒಳ್ಳೇ ಲಕ್ಷಣಪರಿಷ್ಕಾರ.

**ಅಪ್ಪಂಭಟ್ಟರು** : - ನೀನು ಹೇಳುವುದಾದರೆ ಸರಿಯೇ. ಶುದ್ಧಮಂಕು ಎಂದು ತಿಳಿದಿದ್ದೆ. ಶಾಹಬಾಸ ಅಪ್ಪಾ, ಅಷ್ಟು ಮಟ್ಟಿಗೆ ಮುಸಲಾಗ್ರಬುದ್ಧಿ ನಿನಗೆ ಉಂಟಾಯ್ತಲ್ಲ!

ಈಗ ಹೇಳುವೆನು ಕೇಳು. ಕೋಲು ಎಂಬುವದು ನಡೆಯುವಾಗ ಅಥವಾ ಹೊಡೆಯುವಾಗ ಉಪಯುಕ್ತವಾದ ಒಂದು ಉದ್ದ ದಪ್ಪನಾದ ಪದಾರ್ಥವಯ್ಯ ತಿಳೀತೋ?

ರಾಮು :- ನಿಮ್ಮ ವಿಶೇಷಣಗಳಲ್ಲಿರಲಿ, ವಿಶೇಷ್ಯವೇನು ಸ್ವಾಮಿ? ಪದಾರ್ಥ ವಲ್ಲವೇ? ಇದಕ್ಕೆ ಲಕ್ಷಣವೇನು?

ಅಪ್ಪಂಭಟ್ಟರು : - ಓಹೋ ಪದಾರ್ಥ ಎಂಬುದಕ್ಕೆ ಲಕ್ಷಣ ಹೇಳಬೇಕೆ? ಅಭಿಧೇಯತ್ವಂ ಪದಾರ್ಥಸ್ಯಲಕ್ಷಣಂ.

ರಾಮು :- ಗುರುಗಳೇ, ತಾವು ಈವಾಗ ಅಪ್ಪಣೆ ಕೊಟ್ಟದ್ದನ್ನು ಕನ್ನಡದಲ್ಲಿ ವಿವರಿಸಿ. ಅಭಿಧೇಯತ್ವವೆಂದರೆ?

ಅಪ್ಪಂಭಟ್ಟರು : - ಅಭಿಧೇಯತ್ವವೆಂದರೆ ಹೆಸರುಳ್ಳದ್ದಾಗಿರುವದು.

ರಾಮು :- ಅಲ್ಲಿ ವಿಶೇಷ್ಯವೇನು ಸ್ವಾಮಿ. ಹೆಸರು ಉಳ್ಳದ್ದಾಗಿರುವದು ಯಾವದು? ಅಪ್ಪಣೆಯಾಗಬೇಕು.

ಅಪ್ಪಂಭಟ್ಟರು : -ಅಯ್ಯೋ ಹುಚ್ಚಾ, ವಿಶೇಷ್ಯವು ಪದಾರ್ಥವೇ ಅಲ್ಲವೇ? ಇದು ಒಂದು ಪರಮ ರಹಸ್ಯವೇ?

ರಾಮು :- ಗುರುಗಳೇ, ಈವಾಗ ನಿಮ್ಮ ಪಾಂಡಿತ್ಯಕ್ಕೆ ಅನುರೂಪವಾದ ಉತ್ತರ ಕೊಟ್ಟರಿ; ಹೆಸರುಳ್ಳದ್ದು ಪದಾರ್ಥವು, ಪದಾರ್ಥವು ಹೆಸರುಳ್ಳದ್ದು. ಈ ಅನ್ಯೋನ್ಯಾಶ್ರಯದಲ್ಲಿ ಯಾವದಕ್ಕೆ ನೀವು ಲಕ್ಷಣಪರಿಷ್ಕಾರಮಾಡಿದ್ದೋ ಗೊತ್ತಾಗಲಿಲ್ಲ.

ಅಪ್ಪಂಭಟ್ಟರು : - ಹೋಗೋ ಅಪ್ರಯೋಜಕ, ನಿನ್ನ ಅನ್ಯೋನ್ಯಾಶ್ರಯವು ನನ್ನ ಏನುಮಾಡೀತು! ರಾಜಾಶ್ರಯದಿಂದ ದೊರೆತ ನನ್ನ ವಿದ್ಯಾ ಬಿರುದುಗಳನ್ನು ನೋಡಿ ಅಸೂಯೆಯಿಂದ ಹೀಗಾಡುತ್ತೀಯೆ. ನಿನ್ನ ಮೊಖವೇ ನಾನು ನೋಡುವುದಿಲ್ಲ.

ರಾಮು :- ಯಾಕೆ ಸ್ವಾಮಿ, ಇಷ್ಟುಕೋಪ? ತಮಾಷೆಗೆ ನಾನು ವಾದಿಸಿದರೆ 'ಶೇಷಂ ಕೋಪೇನ ಪೂರಯೇತ್' ಎಂಬ ಗಾದೆಗೆ ಅನುಸಾರವಾಗಿ ನನ್ನ ಮುಖವನ್ನೇ ನೋಡುವದಿಲ್ಲ ಎಂದು ಅಪ್ಪಣೆಮಾಡಿದಿರಿ. ಇದಿರಲಿ, ನಾನು ಬಂದ ಕಾರ್ಯ

ವಾಗಬೇಕು. ನಿಮ್ಮ ಮಗ ತಿಮ್ಮಭಟ್ಟನಿಗೆ ಹೈಕೋರ್ಟು ಜಡ್ಜಿಗಳು ತಮ್ಮ ಕುಮಾರಿಯನ್ನು ಕೊಟ್ಟು ಲಗ್ನಮಾಡಬೇಕೆಂದು ಇಚ್ಛಯಿಸಿರುತ್ತಾರೆ. ನನ್ನಲ್ಲಿ ಕನ್ಯಾಜಾತಕವನ್ನು ಕೊಟ್ಟಿರುತ್ತಾರೆ. ಇದೋ ನೋಡಿ, ತಮ್ಮ ಮುಖ್ಯ ಶಿಷ್ಯನಾಗಿ ಇರುವದ್ದರಿಂದ ನಾನೇ ಈ ಲಗ್ನ ಪೂರ್ತಿಯಾಗುವದಕ್ಕೆ ತಕ್ಕ ಸಾಧನಗಳನ್ನು ಮಾಡಿರುವೆನು. ತಮಗೆ ವರದಕ್ಷಿಣೆ ಬೇಕಾಗಿದ್ದರೂ ಮುಚ್ಚುಮರೆಯಿಲ್ಲದೇ ತಮ್ಮ ತಾತ್ಪರ್ಯವನ್ನು ತಿಳಿಸಿ.

**ಅಪ್ಪಂಭಟ್ಟರು :** - (ಸಂತೋಷದಿಂದ) ಎಲೋ ರಾಮು, ನೀನು ಎಂದಿಗೂ ನನ್ನಲ್ಲಿ ಭಕ್ತಿ ಶ್ರದ್ಧೆ ಉಳ್ಳವನಾಗಿರುತ್ತಿ. ನಾನು ಕೋಪದಿಂದಾಡಿದ ಮಾತು ಮರೆತು ಬಿಡು. ವರದಕ್ಷಿಣೆವಿಷಯದಲ್ಲಿ ಐದುಸಕಾರಗಳು ಏರ್ಪಾಡು ಮಾಡಿಬಿಡು. ಜಾತಕಗಳನ್ನು ಆಮೇಲೆ ನೋಡೋಣ. ಮುಂಚೆ ಈ ಕೆಲಸವನ್ನು ಪೂರೈಸು, ಮರೆಯಬೇಡ.

**ರಾಮು :-** ನಮೋ ನಮಃ ಈಗಲೇ ಹೋಗಿ ಸಕಲ ವಿಷಯದಲ್ಲಿಯೂ ತೃಪ್ತಿಕರವಾಗಿ ಏರ್ಪಾಡು ಮಾಡುವೆನು. ತಮ್ಮ ಆಶೀರ್ವಾದಗಳು ಮಾತ್ರ ನನ್ನ ಮೇಲೆ ಪೂರ್ಣವಾಗಿರಬೇಕು.

*****

# 5. ಗೋಪಾಲಶೆಟ್ಟರ ಮನೆಯಲ್ಲಿ ಮದುವೆ

ನಮ್ಮ ಸೀಮೆಯಲ್ಲೆಲ್ಲಾ ಪ್ರಖ್ಯಾತವಾಗಿರುವ ಕಲ್ಯಾಣಪಟ್ಟಣದಲ್ಲಿ ಈಚೆಗೆ ಒಂದು ಅಸಾಧಾರಣವಾದ ಮದುವೆಯು ನಡೆಯಿತು. ಗೋಪಾಲಶೆಟ್ಟರು ವೈಶ್ಯರಲ್ಲೆಲ್ಲ ವರ್ಣಾಶ್ರಮಧರ್ಮಗಳನ್ನು ಅನುಸರಿಸುವುದರಲ್ಲಿ ಅಗ್ರೇಸರರೂ ವರ್ತಕರಲ್ಲೆಲ್ಲ ಧನವಂತರೂ ಆಗಿದ್ದದ್ದರಿಂದ ಅವರ ಜ್ಯೇಷ್ಠಕುಮಾರಿಯ ವಿವಾಹದಲ್ಲಿ ಬಹು ವಿತರಣೆಯಿಂದಲೂ ಔದಾರ್ಯದಿಂದಲೂ ಕಾರ್ಯಕ್ರಮವು ಜರುಗಿತು.

ಮಹಾಲಿನ ಹಾಗೆ ಇದ್ದ ಅವರ ಮನೆಯ ಮುಂದೆ ಸುಮಾರು ಹತ್ತು ಸಾವಿರ ಜನಗಳು ಸುಖವಾಗಿ ಕೂತುಕೊಳ್ಳಬಹುದಾದ ಚಪ್ಪರ ಹಾಕಿತ್ತು. ಅದರಲ್ಲಿ ಕಲ್ಯಾಣಮಂಟಪವಲ್ಲದೆ ನೆಂಟರಿಷ್ಟರು, ಸಂಗೀತವಿದ್ವಾಂಸರು, ವೈದಿಕರು, ಪುರಾಣಿಕರು, ಕುಶಲವಿದ್ಯಾನಿಪುಣರು, ಉದ್ಯೋಗಸ್ಥರು, ಪ್ರಭುಗಳು, ಬಡಬಗ್ಗರು- ಇವರಿಗೆಲ್ಲ ಬೇರೆಬೇರೆ ಭಾಗಗಳನ್ನು ಗೊತ್ತುಮಾಡಿದ್ದರು. ಮಧುರೆಯಿಂದ ಪೊನ್ನು ಸಾಮಿಯವರನ್ನು ವಾಲಗಕ್ಕೆ ಕರೆಸಿದ್ದರು. ಸಂಜೀವರಾವ್ ಕೊಳಲು, ಟೈಗರ್ ವರದಾಚಾರ್ ಮತ್ತು ಬಿಡಾರದ ಕೃಷ್ಣಪ್ಪನವರ ಹಾಡಿಕೆ, ಗೋವಿಂದಸಾಮಿಪಿಳ್ಳೆ ಯವರ ಪಿಟೀಲು, ಭಕ್ಷಿ ಶೇಷಣ್ಣ, ಸುಬ್ಬಣ್ಣ ಇವರುಗಳ ವೀಣೆ ಇನ್ನೂ ಇತರ ವಾದ್ಯಗಳು- ಇವೆಲ್ಲ ಸೇರಿ ದೇವೇಂದ್ರನ ಸಭೆಯೋ ಎನ್ನುವಂತಿತ್ತು. ಬಂದವರಿಗೆ ಶೈತ್ಯೋಪಚಾರಗಳು ಆಗುತ್ತಿದ್ದವು. ಒಂದುಕಡೆ ಭಾಗವತಪ್ರಸಂಗ, ಒಂದುಕಡೆ ಶಾಸ್ತ್ರವಾಕ್ಯಾರ್ಥಗಳು, ಒಂದುಕಡೆ ''ಕನಕಾಂಗಿ'' ''ರತ್ನಾಂಗಿ'' ಎಂಬ ವೇಶ್ಯಾಸ್ತ್ರೀಯರ ಅಭಿನಯಪೂರ್ವಕವಾದ ನರ್ತನ- ಹೀಗೆ ನೋಟಗಳು ಜನಗಳ ಮನಸ್ಸನ್ನು ಕೊಳ್ಳೆ ಗೊಂಡವು. ಸಾಕ್ಷಾತ್ಕುಮಾರಸ್ವಾಮಿ ವಲ್ಲೀದೇವಿಯರಿಗೆ ಸಮಾನರಾದ ವಧೂವರರು ಮಂಟಪಮಧ್ಯದಲ್ಲಿ ಸರ್ವಾಭರಣಭೂಷಿತರಾಗಿ ನವಯವ್ವನದಿಂದ ವಿರಾಜಿಸುತ್ತ ಹೋಮಾದಿಗಳನ್ನು ಪುರೋಹಿತರ ಆಜ್ಞಾನುಸಾರವಾಗಿ ಮಾಡುತ್ತಿದ್ದರು. ಅವರ ರೂಪಲಾವಣ್ಯವನ್ನು ಸಭಿಕರು ನೋಡಿ ಎಲ್ಲಿ ದೃಷ್ಟಿ ತಾಕೀತೋ ಎಂದೇ ಅವರಿಗೆ ಎದುರಾಗಿ ನರ್ತನವನ್ನು ಏರ್ಪಡಿಸಿ ಎಲ್ಲರ ದೃಷ್ಟಿಯೂ ಕನಕಾಂಗಿ ರತ್ನಾಂಗಿಯರ ಕಡೆ ತಿರುಗುವ ಹಾಗೆ ಏರ್ಪಡಿಸಿದ್ದರೂ ಇರಬಹುದು.

ವಾಚಕರೆ, ಮಂಟಪಕ್ಕೆ ಉತ್ತರದಲ್ಲಿ ವಿಜಯಂಗೊಂಡಿರುವ ವಿದ್ವತ್ಸಮೂಹ ವನ್ನು ನಾವು ಸಮೀಪಿಸಿ ನೋಡೋಣ. ಅಲ್ಲಿ ಷಟ್ಛಾಸ್ತ್ರನಿಧಿಗಳಾದ ಅನೇಕ ಪಂಡಿತರು

ಸೇರಿರುವರು. ದೀರ್ಘಶ್ರೀನಿವಾಸಾಚಾರ್‍ಯರು, ಎಡತೊರೆ ತಿರುಮಲಾಚಾರ್‍ಯರು, ವಿದ್ಯಾನಿಧಿ ನರಸಿಂಹಯ್ಯಂಗಾರರು, ವ್ಯಾಸಶಾಸ್ತ್ರಿಗಳು ಮತ್ತು ನಮಗೆ ಹಿಂದೆಯೆ ಪರಿಚಿತರಾಗಿರುವ ನ್ಯಾಯವಾಚಸ್ಪತಿ ಅಪ್ಪಂಭಟ್ಟರು, ಅವರ ಶಿಷ್ಯ ರಾಮು-ಇವರೆಲ್ಲರೂ ಸೇರಿದ್ದಾರೆ. ರಾಮುವಿನ ಅಂಗಚೇಷ್ಟೆಗಳನ್ನೂ ಮುಖಭಾವಗಳನ್ನೂ ನೋಡಿದರೆ ಯಾವದೋ ಒಂದು ಚರ್ಚೆ ನಡೆಯುತ್ತಿರುವಂತಿದೆ. ಅದನ್ನು ಕೇಳೋಣ.

ವ್ಯಾಸಶಾಸ್ತ್ರಿಗಳು : – ಏನು ಶ್ರೀನಿವಾಸಾಚಾರ್‍ಯರೆ, ಆಶೀರ್ವಾದವು ಆಗುವದಕ್ಕೆ ಇನ್ನೂ ಎಷ್ಟುಹೊತ್ತು ಬೇಕಾಗುವದೋ? ಮನೆಯಲ್ಲಿ ದೇವತಾರ್ಚನೆ ಮಾಡುವದಕ್ಕೆ ಹೊತ್ತಾಯಿತು. ಶೆಟ್ಟರನ್ನು ಯಾರಾದರೂ ಕೇಳಿ ತಿಳುಕೊಂಡರೆ ಉತ್ತಮ.

ಶ್ರೀನಿವಾಸಾಚಾರ್‍ಯರು :- ಮಂಟಪಮಧ್ಯದಲ್ಲಿ ಗಡಿಯಾರವಿದೆ. ಈವಾಗ ಹತ್ತುಗಂಟೆಯಾಯಿತು. ಇನ್ನು ಒಂದು ಗಂಟೆಯಲ್ಲಿ ಎಲ್ಲವೂ ಮುಗಿಯುವದು. ಇಷ್ಟರೊಳಗೆ ಬೇಜಾರಾದಪಕ್ಷದಲ್ಲಿ ನಮ್ಮ ಅಪ್ಪಂಭಟ್ಟರು ಇದ್ದಾರಲ್ಲವೇ? ಯಾವದಾದರೂ ನ್ಯಾಯವಿಚಾರಮಾಡಬಹುದು.

ರಾಮು : – ಮಹಾಸ್ವಾಮಿ, ನನಗೂ ಅದೇ ತಾತ್ಪರ್ಯ. ಆದರೆ ನಾನು ಬಾಯಿ ಎತ್ತಿದರೆ ತುಂಟ ಎಂಬುದಾಗಿ ನಮ್ಮ ಗುರುಗಳು ಸಿಟ್ಟುಮಾಡಿಕೊಳ್ಳುತ್ತಾರೆ. ಆದ್ದರಿಂದ ತಮ್ಮಂಥ ದೊಡ್ಡವರು ಯಾವದಾದರೂ ನ್ಯಾಯ ವಿಷಯ ಅವರಿಂದ ಹೊರಡಿಸಿದರೆ ಬಹುಸಂತೋಷ.

ತಿರುಮಲಾಚಾರ್‍ಯರು : – ಅದೇ ಸರಿ. ವಿಷಯಚರ್ಚೆಯಲ್ಲಿ ಕೋಪವೇತಕ್ಕೆ? ಸಕಲ ವಿಷಯಗಳಿಗೂ ಮೂಲವಾಗಿರುವದು ಪ್ರಾಮಾಣ್ಯವಾದ. ಅಪ್ಪಂಭಟ್ಟರೆ, ಈ ವಾದವನ್ನು ತಾವು ಉಪಪಾದನೆ ಮಾಡುವಂಥವರಾಗಿ. ನಾನು ತಿಳಿದ ಮಟ್ಟಿಗೆ ಪೂರ್ವಪಕ್ಷ ಸ್ಥಾನವನ್ನವಲಂಬಿಸುವೆನು. ನಮ್ಮ ವ್ಯಾಸಶಾಸ್ತ್ರಿಗಳು ಮಧ್ಯಸ್ಥರಾಗಿರಲಿ. ಏನು ವ್ಯಾಸಶಾಸ್ತ್ರಿಗಳೆ, ಇಷ್ಟವೊ?

ವ್ಯಾಸ :- ಅಪ್ಪಾ, ನಮಗೆ ಯಾಕೆ ಈ ತಂಟೆ? ಅಪ್ಪಂಭಟ್ಟರಿಗೂ ನನಗೂ ಇರುವ ಸ್ನೇಹವೇನಾದರೂ ಕೆಟ್ಟೀತು.

ಅಪ್ಪಂ :- ಅದೇನೂ ಇಲ್ಲ, ಶಾಸ್ತ್ರವಿಚಾರದಲ್ಲಿ ನಮ್ಮ ಮೈತ್ರಿಕೆಡಬೇಕೆ? ಧಾರಾಳವಾಗಿ ತಾವು ಮಧ್ಯಸ್ಥರಾಗಿರಬೇಕು. ಈವಾಗ ಪ್ರಾಮಾಣ್ಯವಾದವನ್ನು ಉಪಪಾದನೆ ಮಾಡುವೆನು. 'ಪ್ರಮಾಣಸ್ಯ ಭಾವಃ ಪ್ರಾಮಾಣ್ಯಂ'.

ರಾಮು :- ರವಷ್ಟು ಕನ್ನಡದಲ್ಲಿ ಮಾತಾಡಿ ನಮಗೆಲ್ಲ ಸಾಧ್ಯವಾದಷ್ಟು ವಿಷಯವನ್ನು ತಿಳಿಸಬೇಕು.

ಅಪ್ಪಂ :- ಹಾಗೇ ಆಗಲಿ; ಆದರೆ ನಿನ್ನ ಕುಚೋದ್ಯಗಳನ್ನೆಲ್ಲ ತ್ಯಜಿಸಿ ಭಯ ಭಕ್ತಿಯಿಂದ ಕೇಳು. ಪ್ರಮಾಣ ಎಂದು ಎರಡು ಅರ್ಥಗಳಲ್ಲಿ ಉಪಯೋಗಿ ಸಲ್ಪಡುವದು. ಅವು ಯಾವವೆಂದರೆ, ಯಥಾರ್ಥಜ್ಞಾನ ಮತ್ತು ತತ್ಸಾಧನ. ಇಂದ್ರಿಯಾದಿಗಳು ಯಥಾರ್ಥ ಜ್ಞಾನವನ್ನುಂಟುಮಾಡುವದರಿಂದ ಅವುಗಳಿಗೆ ಪ್ರಮಾಣವೆಂತ ಹೆಸರುಂಟು; ಅವುಗಳಿಂದ ಉಂಟಾಗುವ ''ಅಯಂ ಘಟಃ'' (ಇದು ಒಂದು ಗಡಿಗೆ) ಎಂಬ ಜ್ಞಾನಕ್ಕೂ ಪ್ರಮಾಣವೆಂತ ಹೇಳುವುದುಂಟು. ಈ ಪ್ರಾಮಾಣ್ಯವಾದದ ಫಲವೇನೆಂದರೆ ವ್ಯವಹಾರದಲ್ಲಿ ಉಂಟಾಗುವ ಜ್ಞಾನಗಳಲ್ಲಿ ಯಾವದು ಯಥಾರ್ಥಜ್ಞಾನ? ಅಥವಾ ಯಥಾರ್ಥಜ್ಞಾನವು ಉಂಟಾಗುವದೋ ಇಲ್ಲವೋ? ಎಂಬ ಅಂಶದ ನಿರ್ಣಯವೇ? ಇದರಲ್ಲಿ ಎರಡು ಪಕ್ಷಗಳುಂಟು. ಸ್ವತಸ್ತ್ವ, ಪರತಸ್ತ್ವ, ಸ್ವತಸ್ತ್ವಪಕ್ಷದಲ್ಲಿ ಯಾವ ಜ್ಞಾನವಾದರೂ ಯಥಾರ್ಥವಾಗಿಯೇ ಉಂಟಾಗುವದು. ಆದ್ದರಿಂದ ಒಂದ್ಕೊಂದು ಜ್ಞಾನವೂ ಪ್ರಮಾಣವೇ. ಆದರೆ ತದ್ಬಾಧಕಜ್ಞಾನ ಉಂಟಾಗುವ ಇಂದ್ರಿಯಾದಿಗಳ ದೋಷದಿಂದ ಉಂಟಾಗುವದರಿಂದ ಮೊದಲನೆಯ ಜ್ಞಾನ ಪ್ರಮಾಣವಾಗದೆ ಹೋದಾಗ್ಯೂ ಸಾಮಾನ್ಯವಾಗಿ ಹುಟ್ಟತಕ್ಕಂಥ ಒಂದೊಂದು ಜ್ಞಾನವೂ ಪ್ರಮಾಣವೇ ಎಂಬುವ ಪಕ್ಷಕ್ಕೆ ಇದು ವಿರೋಧವಾಗದು. ಪರತಸ್ತ್ವ ಪಕ್ಷದಲ್ಲಿಯೋ ಎಂದರೆ ಮೊದಲಿನ ಜ್ಞಾನವು ಪ್ರಮಾಣ ವಾಗಬೇಕಾದರೆ ಅದು ಕಾರ್ಯಕಾರಿಯಾಗಬೇಕು. ಹಾಗಾದರೆ ಆ ಮೊದಲಿನ ಜ್ಞಾನಕ್ಕೆ ಎರಡನೆಯ ಜ್ಞಾನದಿಂದ ಪ್ರಾಮಾಣ್ಯ ಸಿದ್ಧಿಸುತ್ತದೆಯೇ ಹೊರತು ಬರಿಯ ಜ್ಞಾನೋತ್ಪತ್ತಿ ಮಾತ್ರದಿಂದಲೇ ಅದಕ್ಕೆ ಪ್ರಮಾಣವು ಬರಲಾರದು. ಆದ್ದರಿಂದ ಜ್ಞಾನ ಪ್ರಾಮಾಣ್ಯವು ಮುಂದಿನ ಅನುಭವದಿಂದ ನಿಶ್ಚಯಿಸಬೇಕೇ ಹೊರತು ಜ್ಞಾನವು ಸ್ವತಃಪ್ರಾಮಾಣವೆಂಬುದಾಗಿ ಹೇಳಕೂಡದು. ಹೇಗೆಂದರೆ ಒಂದು ವಸ್ತುವನ್ನು ನೋಡಿ ''ಇದು ಗಡಿಗೆ'' ಎಂದು ಜ್ಞಾನವುಂಟಾಗುತ್ತದೆ. ಅನಂತರ ಗಡಿಗೆಯನ್ನು ಹ್ಯಾಗೆ ಉಪಯೋಗಿಸಬಹುದೋ ಹಾಗೆ ನೀರು ಮುಂತಾದವುಗಳನ್ನು ತರುವದಕ್ಕೆ ಅನುಕೂಲವಾದರೆ ಆಗ ಅದು ಗಡಿಗೆ ಎಂಬ ಮೊದಲಿನ ಜ್ಞಾನಪ್ರಮಾಣವಾಗುತ್ತದೆ. ಅದು ಎತ್ತುವಾಗ ಒಂದು ಬಟ್ಟೆಯ ಆಕಾರವನ್ನು ಹೊಂದಿಬಿಟ್ಟರೆ ಮೊದಲಿನ ಜ್ಞಾನವು ಭ್ರಾಂತಿಯೆಂಬುದಾಗಿ ನಿಶ್ಚಯವಾಗುತ್ತದೆ.

**ರಾಮು** :- ಇದೆಲ್ಲ ಇರಲಿ, ಮಹಾಸ್ವಾಮಿ, ತಮ್ಮ ಮತವೇನು? ಅನುಗ್ರಹಿಸಬೇಕು. ಸ್ವತಸ್ತವೋ? ಪರತ್ತ್ವವೋ?

**ಅಪ್ಪಂ** :- ಎಲೋ ಹುಚ್ಚುಮುಂಡೇ, ಇಲ್ಲಿ ಸ್ವತ್ತು ಪರತ್ತ್ವಗಳ ಚರ್ಚೆ ಇಲ್ಲವೋ? ''ಸ್ವತಸ್ತ್ವ'' ''ಪರತಸ್ತ್ವ'' ಎಂದು ಉಚ್ಚರಿಸು. ನಮ್ಮ ಮತ ನ್ಯಾಯ ಮತವೇ. ಪರತಸ್ತ್ವವೇ ಸರಿಯಾದ ಸಿದ್ಧಾಂತ. ಲೋಕವ್ಯವಹಾರಕ್ಕೂ ಇದು ಅನುಕೂಲವಾದದ್ದು. ಯಾವದೊಂದನ್ನೂ ಪರೀಕ್ಷೆ ಮಾಡಿಯಲ್ಲವೆ ಅದರ ಸ್ವರೂಪವನ್ನು ನಿರ್ಣಯಿಸಬೇಕು? ಆದ್ದರಿಂದಲೇ ಜ್ಞಾನವೂ ಕೂಡ ಉತ್ತರ ಜ್ಞಾನದಿಂದ ಪ್ರಾಮಾಣ್ಯವನ್ನು ಹೊಂದುತ್ತದೆ.

**ತಿರು** :- ಅಪ್ಪಂಭಟ್ಟರೆ, ತಮ್ಮ ಸಿದ್ಧಾಂತಕ್ಕೂ ವ್ಯವಹಾರಕ್ಕೂ ಪರಮವಿರುದ್ಧವು. ಹೇಗೆಂದರೆ, ಪ್ರತಿಯೊಂದು ಜ್ಞಾನವೂ ಉತ್ತರಜ್ಞಾನದಿಂದ ಪ್ರಾಮಾಣ್ಯವನ್ನು ಹೊಂದಬೇಕಾದರೆ ಹಾಗೆಯೇ ಉತ್ತರಜ್ಞಾನವೊಂದೊಂದಕ್ಕೂ ತದುತ್ತರಜ್ಞಾನದ ಆಶ್ರಯವಿರಬೇಕಾಗುತ್ತದೆ. ಆದ್ದರಿಂದ ಯಾವ ಜ್ಞಾನಕ್ಕೂ ಪ್ರಾಮಾಣ್ಯವಿಲ್ಲದೆ ಹೋಯಿತು. ಯದ್ಯಪಿ ನೈಯಾಯಿಕರು ಪರತಸ್ತ್ವವಾದಿಗಳು, ಆದಾಗ್ಯೂ ಸಕಲ ವ್ಯವಹಾರಕ್ಕೂ ಕಾರಣವಾದ ಜ್ಞಾನಕ್ಕೆ ಪ್ರಾಮಾಣ್ಯಲೋಪವನ್ನುಂಟುಮಾಡತಕ್ಕಂಥ ಅವರ ಮತ ಆಸ್ತಿಕ ಶಿರೋಮಣಿಗಳಾಗಿರುವ ನಿಮಗೆ ಹ್ಯಾಗೆ ಸಮ್ಮತವಾದೀತು?

**ಅಪ್ಪಂ** :- ತಾವು ಹೇಳುವದೇನೋ ಸರಿಯೆ. ಆದರೆ ಶಾಸ್ತ್ರವನ್ನು ಬಿಟ್ಟು ಏನೊಂದೂ ನಾನು ಹೇಳುವ ಹಾಗಿಲ್ಲ. ನ್ಯಾಯಶಾಸ್ತ್ರಕ್ಕೆ ಪರತಸ್ತ್ವಕ್ಕೆ ಸಮ್ಮತ. ಅಥವಾ ತಮ್ಮ ಸಿದ್ಧಾಂತ ಪ್ರಕಾರ ಸ್ವತಸ್ತ್ವವನ್ನು ಸಾಧಿಸಿ, ನೋಡೋಣ.

**ತಿರು** :- ಸಾಧಿಸುವದೇನು? ಜ್ಞಾನಕ್ಕೆ ಸ್ವಭಾವದಿಂದಲೇ ಪ್ರಾಮಾಣ್ಯ, ಯಾವ ಒಬ್ಬನೂ ಒಂದು ನದಿಯನ್ನು ನೋಡಿ ಇದು ನದಿಯೋ ಅಲ್ಲವೋ ಎಂಬ ಸಂದೇಹದಿಂದ ಪ್ರವರ್ತಿಸುವದಿಲ್ಲ. ವ್ಯವಹಾರಪ್ರವಾಹವೇ ಈ ರೀತಿಯಾಗಿದೆ. ಒಂದು ವೇಳೆ ಇಂದ್ರಿಯಾದಿದೋಷಗಳಿಂದ ಭ್ರಾಂತಿಯುಂಟಾದ ಪಕ್ಷದಲ್ಲಿ ಅದು ಸಾಧನದಲ್ಲಿ ದೋಷವನ್ನು ಸೂಚಿಸುತ್ತದೆಯೇ ಹೊರತು ಜ್ಞಾನಪ್ರಾಮಾಣ್ಯದಲ್ಲಿ ಯಾವ ದೋಷವನ್ನೂ ತೋರಿಸುವದಿಲ್ಲ. ತಸ್ಮಾತ್ ಸ್ವತಸ್ತ್ವವೇ ಸರಿ. ಸಕಲ ವ್ಯವಹಾರೋಚ್ಛೇದಕವಾಗಿರುವಂಥ ನಿಮ್ಮ ಪರತಸ್ತ್ವ ಮಂಕು ತಾರ್ಕಿಕನ ಮತ ಎಂತ ಹೇಳಬೇಕು.

ಅಪ್ಪಂ :- (ಕೋಪಗೊಂಡು) ತಾರ್ಕಿಕನು ಮಂಕೆ? ಇಂಥ ಮಾತು ಆಡಬಹುದೆ? ವ್ಯಾಸಶಾಸ್ತ್ರಿಗಳೇ ಕೇಳಿ, ತಿರುಮಲಾಚಾರ್ಯರೇ ನೀವು ಜ್ಞಾನವೇ ಪ್ರಮಾಣ ಎಂದು ಬೊಗುಳಿದಿರಲ್ಲವೇ? ಅದು ಯಾವ ಪ್ರಮಾಣದಿಂದ ನಿಮಗೆ ಗೊತ್ತಾಯಿತು? ಇಂದ್ರಿಯ ದೋಷಗಳಿಂದ ಭ್ರಾಂತಿಯೆಂದು ಹೇಳಿದಿರಲ್ಲ, ಆ ಇಂದ್ರಿಯ ದೋಷಗಳನ್ನು ಅರಿಯುವದಕ್ಕೆ ಬೇರೆ ಯಾವ ವಿಧಾನಗಳಿವೆ? ಜ್ಞಾನದ ಪ್ರಾಮಾಣ್ಯವು ಚರ್ಚಿಸಲ್ಪಡುವಾಗ ಇಂದ್ರಿಯಗಳನ್ನು ಮಧ್ಯೆ ತಂದು ಹಾಕಿದ್ದಕ್ಕೆ ನಿಮಗೆ ನಿಗ್ರಹಸ್ಥಾನ ಉಚಿತವಲ್ಲವೆ? ''ಹೆಂಡತಿಯ ಮಾತು ಕೇಳದೆ ಇದ್ದರೆ ಇವನು ಒಳ್ಳೆಯವನೇ?'' ಎಂದು ಹೇಳಿದರೆ ಹೆಂಡತಿಯು ಸುಮ್ಮನಿದ್ದರೆ ಆತನು ಒಳ್ಳೆಯವನು ಎಂದು ಅರ್ಥವಾಗುವದರಿಂದ ಹ್ಯಾಗೆ ಸ್ವತಃ ಅವನ ಒಳ್ಳೇತನ ನಿಲ್ಲಲಾರದೋ ಹಾಗೆ ಇಂದ್ರಿಯದೋಷದಿಂದ ಅಪ್ರಾಮಾಣ್ಯ ಬರುವ ಜ್ಞಾನಕ್ಕೆ ಸ್ವತಃ ಪ್ರಾಮಾಣ್ಯವೆಲ್ಲಿಂದ ಬಂತು? ಜ್ಞಾನ ಸಾಮಾನ್ಯವಾಗಿ ಪ್ರಮಾಣ ವಾಗಿದ್ದರೆ ಭ್ರಾಂತಿಜ್ಞಾನ ಹ್ಯಾಗೆ ಉಂಟಾದೀತು? ನಿಮ್ಮ ಜ್ಞಾನಕ್ಕೂ ಒಬ್ಬ ಕೇವಲ ಪಾಮರನ ಜ್ಞಾನಕ್ಕೂ ಪ್ರಾಮಾಣ್ಯದಲ್ಲಿ ಯಾವ ಭೇದ ಉಂಟು? ಒಂದೇ ವಿಷಯದಲ್ಲಿ ವಿರುದ್ಧ ಜ್ಞಾನಗಳು ಯಾಕೆ ಉಂಟಾಗಬೇಕು? ತಸ್ಮಾತ್ ನಿಮ್ಮ ಸ್ವತಸ್ತ್ವವನ್ನು ಕಟ್ಟಿ ಇಡಿ. ಪರತಸ್ತ್ವವೇ ಯುಕ್ತಿ ಅನುಭವಗಳನ್ನು ಅನುಸರಿಸಿದೆ.

ರಾಮು :- ಗುರುಗಳೆ, ಈವಾಗ ಸರಿಹೋಯಿತು. ತಿರುಮಲಾಚಾರ್ಯರು ನಿಮ್ಮ ಮತಪ್ರಚಾರ ಯಾವ ಜ್ಞಾನಕ್ಕೂ ಪ್ರಾಮಾಣ್ಯವಿಲ್ಲದೇ ಹೋಗುತ್ತದೆ ಎಂಬುದಾಗಿಯೂ ಅದು ಅನವಸ್ಥಾದೋಷಗ್ರಸ್ತವಾಗಿರುವದೆಂತಲೂ ತಮ್ಮ ಶಿಷ್ಯನಾದ ನನಗೆ ಕೂಡ ಸ್ಪಷ್ಟವಾಗುವಂತೆ ತೋರಿಸಿದರು. ಆದಾಗ್ಯೂ ತಮ್ಮ ಪಟ್ಟು ಬಿಡದೇನೇ ಬರಿಯ ಕಂಠಶೋಷಣೆ ಮಾಡುತ್ತಾ ಇದೀರಿ. ಇದರಲ್ಲಿ ಯಾವದು ಉಚಿತವೋ ವ್ಯಾಸಶಾಸ್ತ್ರಿಗಳು ಅಪ್ಪಣೆ ಕೊಡಬೇಕು.

ವ್ಯಾಸ :- ಅಪ್ಪಾ ತಿರುಮಲಾಚಾರ್ಯರೂ ಅಪ್ಪಂಭಟ್ಟರೂ ಇಬ್ಬರೂ ದೊಡ್ಡ ಪಂಡಿತರೇ, ಆದರಲ್ಲಿಯೇನೋ ಸಂದೇಹವಿಲ್ಲ, ಆದರೆ ಈ ಸ್ವತಸ್ತ್ವ ಪರತಸ್ತ್ವ ವಿಷಯಗಳು ಬಲು ಸೂಕ್ಷ್ಮವಾದವುಗಳು. ಇವರಿಬ್ಬರೂ ಕೋಪಿಸಿಕೊಳ್ಳದಿದ್ದರೆ ನನಗೆ ತೋರುವ ಎರಡು ಮಾತು ಆಡುವೆನು.

ತಿರುಮಲಾಚಾರ್ಯರು ಮತ್ತು ಅಪ್ಪಂಭಟ್ಟರು :- ರಂಗನ ಮುಂದೆ ಸಿಂಗನೆ? ತಮ್ಮ ಮುಂದೆ ನಮ್ಮ ಪಾಂಡಿತ್ಯವೇ? ಅಂತೂ ನಮಗೆ ವಿಷಯವನ್ನು ಸ್ಪಷ್ಟವಾಗಿ ತಿಳಿಸಬೇಕು, ಶಾಸ್ತ್ರಿಗಳೇ,

ವ್ಯಾಸ :- ಹಾಗಾದರೆ ವಿಜ್ಞಾಪಿಸುವೆನು. ಇಂದ್ರಿಯ ವಿಷಯ ಸಂಯೋಗದಿಂದ ಯಾವ ಜ್ಞಾನವೇ ಆಗಲಿ ಬುದ್ಧಿಯಲ್ಲಿ ಉಂಟಾದರೆ ಅದಕ್ಕೆ ಬುದ್ಧಿವೃತ್ತಿಯೆಂದು ಹೆಸರು. ಈ ಬುದ್ಧಿಯು ನಿಶ್ಚಯಾತ್ಮಕವಾಗಿರುವದರಿಂದ ಒಂದೊಂದು ಜ್ಞಾನವನ್ನೂ ''ಇದು ಪ್ರಮಾಣ, ಇದು ಪ್ರಮಾಣ'' ಎಂಬ ಮುದ್ರೆಯನ್ನು ಒತ್ತಿಯೇ ಹೊರಗೆಡವುತ್ತದೆ. ಇದರಿಂದ ಸ್ವತಸ್ತ್ವವು ತೋರಬಹುದಾಗಿದ್ದಾಗ್ಯೂ ವ್ಯವಹಾರಕ್ಕೆಬೇಕಾದ ಪ್ರಾಮಾಣ್ಯವು ಸಿದ್ಧಿಸಲಾರದು. ಯಾಕೆಂದರೆ ಸ್ವಪ್ನಕಾಲದಲ್ಲಿ ''ಇದು ಜಾಗ್ರತ್ತು. ಈ ನದಿಯಲ್ಲಿ ಸ್ನಾನ ಮಾಡುತ್ತೇನೆ'' ಎಂಬ ಅನುಭವ ವಾದಾಗ ಬುದ್ಧಿಯು ತನ್ನ ಸ್ವಭಾವವನ್ನನುಸರಿಸಿ ''ಇದು ಪ್ರಮಾಣ, ಇದು ಪ್ರಮಾಣ'' ಎಂಬುದಾಗಿ ಸೂಚಿಸುತ್ತಾ ಇರುತ್ತದೆ. ಎಚ್ಚರವಾದಮೇಲೆ ತಿರುಗಿಯೂ ''ಇದು ಎಚ್ಚರ, ಇದು ಪ್ರಮಾಣ'' ಎಂಬುದಾಗಿ ಸ್ವಭಾವದಿಂದ ಹೇಳುವಂಥ ಬುದ್ಧಿಯು ಹಿಂದಿನ ಅನುಭವವು ಸ್ವಪ್ನ ಎಂದು ಸೂಚಿಸುತ್ತದೆ. ಹಾಗೆಯೇ ಭ್ರಾಂತಿಸ್ಥಲಗಳಲ್ಲಿ ಕೂಡ ದೂರದಲ್ಲಿ ಒಬ್ಬ ಪುರುಷನನ್ನು ನೋಡಿದ ಹಾಗೆ ಅನುಭವ ಉಂಟಾದ ಕಾಲದಲ್ಲಿ ''ಇದು ಪ್ರಮಾಣ'' ವೆಂದು ಬುದ್ಧಿ ಹೇಳುತ್ತದೆ. ಆದರೆ ಸಮೀಪಿಸುತ್ತಾ ಸಮೀಪಿಸುತ್ತಾ ಅಲ್ಲಿ ''ಪುರುಷನಿಲ್ಲ, ಮೋಟುಮರ'' ಎಂಬ ಜ್ಞಾನವಾಗಲು ''ಇದು ಪ್ರಮಾಣ, ಇದು ಪ್ರಮಾಣ'' ಎಂತ ಬುದ್ಧಿಯು ಹೇಳಿ ಹಿಂದಿನ ಜ್ಞಾನವನ್ನು ಬಾಧಿಸುತ್ತದೆ. ಆದ್ದರಿಂದ ಪರತಸ್ತ್ವ ಕೂಡ ನಿಲ್ಲುವದಿಲ್ಲ. ಏಕೆಂದರೆ ಒಬ್ಬನು ಒಂದು ಹೊಸ ದ್ವೀಪಕ್ಕೆ ಹೋಗಿ ಅಲ್ಲಿ ಹಸಿವಿನಿಂದ ಬಳಲಿ ಹೊಸದಾದ ಒಂದು ಹಣ್ಣನ್ನು ನೋಡಿ ತಿನ್ನುವಾಗ ''ಇದು ಬಲು ಒಳ್ಳೆಯದು'' ಎಂಬುದಾಗಿ ಜ್ಞಾನವುಂಟಾಗುತ್ತದೆ ; ಅದನ್ನು ತಿಂದಮೇಲೆ ವಾಂತಿಯಾಗುವದಕ್ಕೆ ಮೊದಲಾಗಲು ''ಇದು ಕೆಟ್ಟದು'' ಎಂದು ತಿಳಿಯುತ್ತಾನೆ; ಅನಂತರ ಒಂದು ವಿಧವಾದ ಸುಖವೂ ಶಕ್ತಿಯೂ ಉಂಟಾದದ್ದನ್ನು ಕಂಡು ''ಇದು ಒಳ್ಳೆಯದು'' ಎಂದು ತಿಳಿಯುತ್ತಾನೆ; ತರುವಾಯ ಅಸಾಧ್ಯವಾಗಿ ತಲೆತಿರುಗುವದನ್ನು ಕಂಡು ''ಇದು ಕೆಟ್ಟದ್ದು'' ಎನ್ನುತ್ತಾನೆ. ಹೀಗೆ ಪರಂಪರೆಯಾಗಿ ಪೂರ್ವಾಪರ ವಿರುದ್ಧವಾದ ಜ್ಞಾನಗಳು ಒಂದೇ ವಿಷಯ ದಲ್ಲಿ ಉಂಟಾಗುವ ಸಂಭವ ನಮ್ಮ ಅನುಭವದಲ್ಲೆಲ್ಲ ಉಂಟು. ಆದ್ದರಿಂದ ಮುಂದಿನ ಜ್ಞಾನದಿಂದ ಹಿಂದಿನ ಜ್ಞಾನಕ್ಕೆ ಪ್ರಾಮಾಣ್ಯವಾಗಲಿ ಅಪ್ರಾಮಾಣ್ಯ ವಾಗಲಿ ಬರಬಹುದು. ಸ್ವತಸ್ತ್ವ ಪಕ್ಷದಲ್ಲಿ ಎಲ್ಲಿಯವರೆಗೂ ಕಾಲದೇಶನಿಮಿತ್ತ ಗಳಿಂದ ಬಾಧೆಯುಂಟಾಗುವ ಸಂಭವವಿರುವದೋ ಅಲ್ಲಿಯವರೆಗೂ ಜ್ಞಾನಕ್ಕೆ ಪ್ರಾಮಾಣ್ಯ ವನ್ನು ಹೇಳಲುಶಕ್ಯವು. ಆದರೆ ಯಾವ ಒಂದು ಜ್ಞಾನದಿಂದ ಕಾಲದೇಶ ನಿಮಿತ್ತಗಳು

ದಗ್ಧವಾಗಿ ವಿರುದ್ಧಜ್ಞಾನ ಸಂಭವವೇ ಇಲ್ಲದೇ ಹೋಗುವದೋ ಅಂಥ ಜ್ಞಾನವೇ ಅಂತ್ಯಜ್ಞಾನವೆಂತಲೂ ಅಂತ್ಯಪ್ರಮಾಣವೆಂತಲೂ ವೇದಾಂತಸಂಪ್ರದಾಯವನ್ನರಿತವರು ಹೇಳುವರು. ಆದ್ದರಿಂದ ವ್ಯವಹಾರಕ್ಕೆ ಸ್ವತಸ್ತ್ವವೇ ಆಗಲಿ ಪರತಸ್ತ್ವವೇ ಆಗಲಿ ಸಾಕಾಗಿದೆಯಾದರೂ ಜ್ಞಾನಕ್ಕೆ ಪರಮಾರ್ಥ ಪ್ರಾಮಾಣ್ಯವುಂಟಾಗಬೇಕಾದರೆ ಅದು ನಾನು ಹೇಳಿದ ರೀತಿಯಾಗಿ ವ್ಯವಹಾರಾತೀತ ವಿಷಯವನ್ನುಳ್ಳದ್ದಾಗಿರಬೇಕು.

ವಾಚಕರೆ, ಇಲ್ಲಿ ನಾನು ಎಚ್ಚರಗೊಂಡೆನು. ಇದುವರೆಗೂ ನಡೆಯುತ್ತಿದ್ದ ಕಲ್ಯಾಣೋತ್ಸವವೂ ಸಂಗೀತದ ಸಂಭ್ರಮವೂ ಶಾಸ್ತ್ರೀಯವಾಗ್ವಾದಗಳೂ ಎಲ್ಲಾ ನನ್ನ ಕನಸೇ ಹೊರತು ಬೇರಿಲ್ಲ, ನೋಡಿ, ಏನಾಶ್ಚರ್ಯ! ನಾನೊಬ್ಬನೇ ಅಲ್ಲದೇ ಇಷ್ಟು ಜನಗಳಾಗಿ ಪರಿಣಮಿಸಿ ಈ ನ್ಯಾಯಗಳನ್ನೆಲ್ಲ ವಿಮರ್ಶೆ ಮಾಡುತ್ತಾ ಇದ್ದವನು! ನನ್ನ ಬುದ್ಧಿಯು ಆ ಕಾಲದಲ್ಲಿ ಅದೇ ಪ್ರಮಾಣವೆಂತ ಹೇಳುತ್ತಿತ್ತು. ಈ ಕಾಲದಲ್ಲಿ ಇದೇ ಪ್ರಮಾಣವೆಂತ ಹೇಳುತ್ತಿದೆ. ಬುದ್ಧಿಯ ವೈಚಿತ್ರ್ಯವನ್ನು ಏನೆಂದು ವರ್ಣಿಸುವದು !

*****

# 6. ವೃಷಭಾಲಯ

ಕಲ್ಯಾಣಪುರವೆಂಬ ನಾಮಾಂತರವುಳ್ಳ ಬೆಂಗಳೂರಿನ ದಕ್ಷಿಣಭಾಗದಲ್ಲಿ ವೃಷಭಾಲಯವೊಂದುಂಟು. ಅದಕ್ಕೆ ''ಬಸವನ ಗುಡಿ'' ಎಂದು ಹೆಸರು. ಅದರ ಸುತ್ತಲೂ ಹೊಸದಾಗಿ ಏರ್ಪಟ್ಟಿರುವ ಶಾಖಾನಗರಕ್ಕೂ ಅದೇ ಹೆಸರು ಬಂದಿರುವದು. ಈ ಗುಡಿಯ ಸಮೀಪದಲ್ಲಿ ಒಂದು ಆಂಜನೇಯನ ಗುಡಿ, ಒಂದು ವಿಘ್ನೇಶ್ವರನ ಗುಡಿ, ಒಂದು ಅಶ್ವತ್ಥನ ಕಟ್ಟೆ ಮತ್ತು ಪಥಿಕರು, ಬಡವರು, ಸಾಧುಗಳು ಮುಂತಾದವರು ಇರುವದಕ್ಕೆ ಯೋಗ್ಯವಾದ ದೊಡ್ಡ ಸತ್ರ- ಇಷ್ಟು ಕಟ್ಟಡಗಳಿವೆ. ಈ ವೃಷಭಾಲಯವು ಒಂದು ಗುಡ್ಡದ ಮೇಲೆ ಕಟ್ಟಿರುವ ದೊಡ್ಡ ಕಟ್ಟಡ. ಅದರಲ್ಲಿ ಪ್ರತಿಷ್ಠಿತವಾಗಿರುವ ನಂದಿಯು ನಮ್ಮ ಮೈಸೂರು ಸೀಮೆಯಲ್ಲಿ ಇರುವ ನಂದಿಗಳಿಗೆಲ್ಲ ದೊಡ್ಡದಾಗಿ ಇರುವದಲ್ಲದೆ ಬಹುಜನ ಭಕ್ತರಿಂದ ಪೂಜಿಸಲ್ಪಡುವದಾಗಿರುವದು. ಇದರ ಸುತ್ತಲೂ ವರ್ಷಕ್ಕೆ ಒಂದು ಸಲ ಜನಗಳು ಸೇರಿ, ''ಕಡಲೇಕಾಯಿ ಪರಸೆ'' ಎಂಬ ಉತ್ಸವವನ್ನು ಸಂಭ್ರಮವಾಗಿ ನಡೆಸುವರು. ಆ ಕಾಲದಲ್ಲಿ ಎಲ್ಲಾ ಜಾತಿಯ ಜನರೂ ಆಲಯಕ್ಕೆ ಬಂದು ದೇವರದರ್ಶನ ಮಾಡಿ ಕೊಂಡು ಎಲ್ಲೆಲ್ಲಿಯೂ ಮಾರುವ ಕಡಲೇಕಾಯಿ, ಬೆಲ್ಲ- ಇವುಗಳನ್ನು ತೆಗೆದು ಕೊಂಡು ಸಮೀಪದಲ್ಲಿರುವ ಬಂಡೆಗಳ ಮೇಲೆಲ್ಲ ಗುಂಪುಗುಂಪಾಗಿ ಕೂತು ಅವುಗಳನ್ನು ತಿನ್ನುತ್ತಾ ರಾತ್ರೆ ಎಂಟು ಗಂಟೆಯವರೆವಿಗೂ ಆ ಬಯಲಿನಲ್ಲಿ ವಿನೋದವಾಗಿ ಕಾಲ ಕಳೆಯುತ್ತಿದ್ದು ಮನೆಗೆ ತೆರಳುವರು.

ಇದೇ ಸಂದರ್ಭದಲ್ಲಿ ಕಳೆದ ವರ್ಷ ನಾನು ಕೆಲವರು ಸ್ನೇಹಿತರೊಡನೆ ಸೇರಿ ವೃಷಭಾಲಯಕ್ಕೆ ಹೋಗಿ ದೇವರ ದರ್ಶನ ಮಾಡಿ ಸುಮಾರು ರಾತ್ರಿ ಒಂಭತ್ತು ಘಂಟೆಯಲ್ಲಿ ಆಲಯದ ಮುಂಭಾಗದಲ್ಲಿರುವ ಎತ್ತರವಾದ ದಿಣ್ಣೆಯ ಮೇಲೆ ಮಿತ್ರರೊಡನೆ ಮಾತಾಡಿಕೊಂಡು ಕೂತಿದ್ದೆನು. ಪ್ರಸ್ತಾಪಕ್ರಮದಿಂದ ''ಈ ಗುಡಿಯು ಯಾವಾಗ ಕಟ್ಟಿರಬಹುದು? ಈ ನಂದಿಯ ಮಹತ್ತ್ವವೇನು?''ಎಂಬ ವಿಷಯಗಳು ಚರ್ಚೆಗೆ ಬಂದಿದ್ದವು. ನಮ್ಮ ಮಿತ್ರರಲ್ಲಿ ಒಬ್ಬರು ಈ ನಂದಿಯು ಬಹುಕಾಲಕ್ಕೆ ಮುಂಚೆ - ತನ್ನ ಸಾನ್ನಿಧ್ಯದಿಂದ ಧರ್ಮವನ್ನು ಭೂಲೋಕದಲ್ಲಿ ಸ್ಥಿರೀಕರಿಸುವದಕ್ಕಾಗಿ ಚತುರ್ಮುಖಬ್ರಹ್ಮನಿಂದಲೇ ಸ್ಥಾಪಿತವಾಯಿತೆಂತಲೂ ನಂದಿಗೆ ಸಹಕಾರಿಗಳಾಗಿ ಆಂಜನೇಯನನ್ನೂ ವಿಘ್ನೇಶ್ವರನನ್ನೂ ಸಮೀಪದಲ್ಲಿಯೇ ಆ ಬ್ರಹ್ಮನೇ ಇರಿಸಿದ ನೆಂತಲೂ ಸಾಮಾನ್ಯರ ಕಣ್ಣಿಗೆ ಶಿಲಾರೂಪದಲ್ಲಿ ಕಂಡಾಗ್ಯೂ ಇವರು ಮೂವರೂ

ಜನಸಂಘವಿಲ್ಲದ ಕಾಲದಲ್ಲಿಯೂ ರಾತ್ರಿ ಸರಿಹೊತ್ತಿನಲ್ಲಿಯೂ ಒಬ್ಬರೊಡನೊಬ್ಬರು ಮಾತನಾಡಿಕೊಳ್ಳುವದುಂಟೆಂತಲೂ ಪ್ರತಿರಾತ್ರಿಯೂ ನಂದಿಯು ಆಲಯವನ್ನು ಬಿಟ್ಟು ಹೊರವಟ್ಟು ಸುತ್ತಲೂ ಇರುವ ಶಾಖಾನಗರದ ಬೀದಿಗಳಲ್ಲೆಲ್ಲ ಸಂಚಾರಮಾಡುವ ನೆಂತಲೂ ತಿರುಗಿ ಬೆಳಿಗ್ಗೆ ಐದು ಗಂಟೆಯೊಳಗಾಗಿ ಆಲಯಕ್ಕೆ ಬಂದು ಮುಂಚಿ ನಂತೆಯೇ ಶಿಲಾರೂಪನಾಗುವನೆಂತಲೂ ಭಕ್ತರಕ್ಷಣೆಯಲ್ಲಿ ಧೃತ ಕಂಕಣನೆಂತಲೂ ಅನೇಕರಿಗೆ ಆಧಿವ್ಯಾಧಿಗಳನ್ನು ನಿವಾರಣೆ ಮಾಡಿರುವನೆಂತಲೂ ಹೇಳಿದರು. ಇದನ್ನು ಕೇಳಿ ನಾವೆಲ್ಲರೂ ವಿಸ್ಮಿತರಾದೆವು. ಕೆಲವರಿಗೆ ಇದು ಕಟ್ಟುಕಥೆಯೆಂದೂ ಬರಿಯ ಮನೋವಿಲಾಸವೆಂದೂ ತೋರಿತು.

ಹೀಗೆ ನಾವು ಇದೇ ವಿಷಯವನ್ನು ಚರ್ಚಿಸುತ್ತಿರುವಲ್ಲಿ ಅಲ್ಲಿಗೆ ಯಾರೋ ಒಬ್ಬರು ಯತಿಗಳು ಬಿಜಯಂಗೈದರು. ಅವರು ದೇವದರ್ಶನಮಾಡಿ ಹಿಂತಿರುಗು ವಾಗ ಅವರ ಮುಖದಲ್ಲಿ ತುಳುಕುತ್ತಿದ್ದ ವಿಲಕ್ಷಣತೇಜಸ್ಸನ್ನೂ ಶಾಂತತೆಯನ್ನೂ ನೋಡಿ ನಾವು ಎಲ್ಲರೂ ಎದ್ದು ನಮಸ್ಕರಿಸಿ ನಮ್ಮನ್ನು ಅನುಗ್ರಹಿಸಿ ಕೃತಾರ್ಥರಾಗಿ ಮಾಡ ಬೇಕೆಂದು ಬೇಡಿಕೊಂಡೆವು. ಆಗ ಅವರು ಪ್ರಸನ್ನಚಿತ್ತರಾಗಿ ನಗುನಗುತ್ತಾ ''ನಿಮ್ಮೊಡನೆ ಸಂಭಾಷಿಸುವದಕ್ಕೆ ನನಗೂ ಇಷ್ಟವುಂಟು'' ಎಂದು ಹೇಳಿ ಆ ದಿಣ್ಣೆಯ ಮೇಲೆ ಹತ್ತಿ ತಾವೂ ಕೂತು ನಮ್ಮನ್ನೂ ಕೂತುಕೊಳ್ಳುವಂತೆ ಆಜ್ಞಾಪಿಸಿದರು. ಅನಂತರ ಅವರು ''ಎಲೈ ಮಿತ್ರರೆ, ನೀವು ಇದುವರೆಗೂ ಚರ್ಚಿಸಿದ ವಿಷಯ ವನ್ನು ಕೇಳುವದಕ್ಕೆ ನನಗೂ ಕುತೂಹಲವಿದೆ. ಈ ನಂದಿಯ ಮಾಹಾತ್ಮ್ಯ ವಿಷಯದಲ್ಲಿ ನೀವು ಸಂದೇಹಪಡುವ ಕಾರಣವೇನು?'' ಎಂದು ಕೇಳಿದರು.

ಇವರು ತತ್ಕಾಲದಲ್ಲಿ ಅಲ್ಲಿ ಇಲ್ಲದೇ ಇದ್ದಾಗ್ಯೂ ನಾವು ಆಡಿದ ಮಾತುಗಳನ್ನು ತಿಳಿದು ಅದರ ಸಂಬಂಧವಾದ ಪ್ರಶ್ನೆಯನ್ನು ಕೇಳಿದ್ದನ್ನು ನೋಡಿ ಇವರು ಸರ್ವಜ್ಞರೇ ಸರಿ ! ಇವರಲ್ಲಿ ನಮ್ಮ ಅಜ್ಞಾನವನ್ನು ಹೋಗಲಾಡಿಸಿಕೊಳ್ಳುವದಕ್ಕೆ ಸಂದರ್ಭವನ್ನಿತ್ತ ಈ ನಂದಿಯೂ ಮಹಾತ್ಮನೇ ಸರಿ ಎಂದು ದೃಢವಾಗಿ ನಂಬಿ ನಾನು ಇಂತೆಂದೆನು. ''ಯತಿವರ್ಯರೆ, ಈ ನಂದಿಯ ವಿಹಾರಗಳು ಸತ್ಯವೋ ಅಸತ್ಯವೋ ಎಂಬುದನ್ನು ನಾವು ಚರ್ಚಿಸುತ್ತಿದ್ದೆವು. ನಂದಿಯು ಶಿಲೆಯಾಗಿರುವದು. ಶಿಲೆಯು ಓಡಾಡುವದು ಅಥವಾ ಮಾತಾಡುವದು ಪ್ರತ್ಯಕ್ಷಪ್ರಮಾಣಕ್ಕೆ ವಿರುದ್ಧ. ಆದ್ದರಿಂದ ಆ ವಿಷಯದಲ್ಲಿ ನಾವು ಸಂಶಯಪಡುವದು ಸಹಜವಲ್ಲವೆ?''

ಆಗ ಯತಿಗಳು ನಕ್ಕು "ಪ್ರತ್ಯಕ್ಷ ಪ್ರಮಾಣವೆ? ಪ್ರತ್ಯಕ್ಷವಾಗಿ ತೋರುವದೆಲ್ಲ ಸತ್ಯವಾದೀತೆ? ಆದಿರಲಿ, ಮೊದಲು ಪ್ರತ್ಯಕ್ಷವೆಂದರೇನೆಂದು ನಿಶ್ಚಯಮಾಡಿ ಕೊಂಡಿದ್ದೀರೋ?" ಎಂದು ಕೇಳಿದರು.

ಆಗ ನಮ್ಮಲ್ಲಿ ನ್ಯಾಯಶಾಸ್ತ್ರವನ್ನು ಸಂಪೂರ್ಣವಾಗಿ ಓದಿ ಪಂಡಿತನಾಗಿದ್ದ ತಿಮ್ಮಣ್ಣಭಟ್ಟನು ಪ್ರತ್ಯುತ್ತರ ಕೊಟ್ಟದ್ದೇನೆಂದರೆ "ಪ್ರತ್ಯಕ್ಷವೆಂದರೆ ಇಂದ್ರಿಯಾರ್ಥ ಸನ್ನಿಕರ್ಷಜನ್ಯಜ್ಞಾನವು ಎಂದು ಶಾಸ್ತ್ರವು ಹೇಳುವದು, ಈ ನಂದಿಯ ಸಂಚಾರವು ಯಾವ ಇಂದ್ರಿಯಕ್ಕೂ ವಿಷಯವಾಗದೇ ಇರುವದರಿಂದ ಯಾವ ಪ್ರಮಾಣ ದಿಂದಲೂ ನಂಬಲು ಅಸಾಧ್ಯವು. ಪ್ರತ್ಯಕ್ಷವಾಗಿದ್ದರೆ ಸತ್ಯವೇ ಆಗಿಬಿಡುತ್ತಿತ್ತು. ಏಕೆಂದರೆ ಪ್ರತ್ಯಕ್ಷವು ಪದಾರ್ಥವನ್ನು ನೇರಾಗಿ ವಿಷಯೀಕರಿಸುವದು. ಆದ್ದರಿಂದಲೇ ಪ್ರತ್ಯಕ್ಷ ವಿಷಯದ ಸತ್ಯತೆಯ ವಿಷಯದಲ್ಲಿ ಯಾವ ಸಂದೇಹವೂ ಬರುವದಕ್ಕೆ ಅವಕಾಶವಿಲ್ಲ"

**ಯತಿಗಳು** :- ಪ್ರತ್ಯಕ್ಷವನ್ನು ವಿವರಿಸಿ ಹೇಳಿ, ನೋಡೋಣ? ಇಂದ್ರಿಯ ವಿಷಯ ಇವುಗಳ ಸನ್ನಿಕರ್ಷಣದಿಂದ ಜ್ಞಾನವು ಹುಟ್ಟುವ ಬಗೆ ಹೇಗೆ?- ಇಂದ್ರಿಯವೇ ವಿಷಯವನ್ನು ನೋಡುತ್ತದೆಯೋ ಅಥವಾ ಅಂತಃಕರಣವು ನೋಡುತ್ತದೆಯೊ? ಅಥವಾ ಆತ್ಮನೊ?

**ತಿಮ್ಮಣ್ಣ** :- ಆತ್ಮಾ ಮನಸಾ ಸಂಯುಜ್ಯತೇ, ಮನ ಇಂದ್ರಿಯೇಣ, ಇಂದ್ರಿಯಮರ್ಥೇನ ! ತತಃ ಪ್ರತ್ಯಕ್ಷಂ (ಆತ್ಮನು ಮನಸ್ಸಿನೊಡನೆ ಸೇರುತ್ತಾನೆ; ಮನಸ್ಸು ಇಂದ್ರಿಯದೊಡನೆ ಸೇರುತ್ತದೆ; ಆ ಇಂದ್ರಿಯವು ವಿಷಯದೊಡನೆ ಸೇರುವದು. ಆದರಿಂದ ಪ್ರತ್ಯಕ್ಷವಾಗುವದು.)

**ಯತಿಗಳು** :- ಅಪ್ಪಾ, ನೀವು ಹೇಳಿದ ವಾಕ್ಯದ ಅರ್ಥವು ಸಮಂಜಸವಾಗಿ ತೋರುವದಿಲ್ಲ. ಜಡವಸ್ತುವಿನಲ್ಲಿ ಚಲನವಿಲ್ಲೆಂದು, ಆದಕ್ಕಾಗಿ ಮೊದಲು "ಆತ್ಮಾ ಮನಸಾ ಸಂಯುಜ್ಯತೇ" ಎಂದು ಹೇಳುವಿರಿ. ಆದರೆ "ಯತ್ರ ಸಂಯೋಗಃ ತತ್ರ ಸಂಯುಕ್ತಯೋರ್ಜಡತ್ವಂ" (ಎಲ್ಲೆಲ್ಲಿ ಎರಡು ವಸ್ತುಗಳ ಸಂಯೋಗವಾಗುತ್ತದೆಯೋ ಅಲ್ಲಲ್ಲಿ ಸಂಯೋಗವಾದ ಪದಾರ್ಥಗಳೆರಡೂ ಜಡವಾಗಿರುವವು) ಎಂಬ ವ್ಯಾಪ್ತಿಯಿರುವದರಿಂದ ಆತ್ಮನು ಜಡವಾಗುವನು. ಜಡವಾದ ಆತ್ಮನಿಗೆ ಎಷ್ಟು ಸಂಯೋಗಗಳಿಂದ ತಾನೇ ಜ್ಞಾನವುಂಟಾದೀತು?

ತಿಮ್ಮಣ್ಣ:- ಹಾಗಾದರೆ ನಮ್ಮ ನ್ಯಾಯಮತಕ್ಕೆ ವಿರುದ್ಧವಾಗಿ ತಾವು ಹೇಳುವದಾಯಿತು. ಬೇರೆ ಯಾವ ರೀತಿಯಾಗಿಯೇ ಆಗಲಿ, ಪ್ರತ್ಯಕ್ಷವನ್ನು ಸಾಧಿಸಲು ಅಸಾಧ್ಯ.

ಯತಿಗಳು :- ಪ್ರತ್ಯಕ್ಷವನ್ನು ಸಾಧಿಸುವದರಲ್ಲಿ ನನಗೇನೂ ಆಗ್ರಹವಿಲ್ಲ. ಆದರೆ ಪ್ರಮಾಣದಲ್ಲಿ ನೀವು ಹೆಚ್ಚಾಗಿ ಅಭಿಮಾನ ತೋರಿಸಿದ್ದರಿಂದ ಅದರ ದೋಷವನ್ನು ನಾನು ಎತ್ತಿಹೇಳಿದೆನು. ನೋಡಿ, ಈ ಆತ್ಮನು ಮನಸ್ಸನ್ನೂ ಇಂದ್ರಿಯವನ್ನೂ ಬಿಟ್ಟು ವಿಷಯವನ್ನು ನೋಡುವದಕ್ಕೆ ಶಕ್ತನಲ್ಲ. ಮನಸ್ಸೂ ಕೂಡ ಇಂದ್ರಿಯವನ್ನೂ ಬಿಟ್ಟು ವಿಷಯವನ್ನು ಗ್ರಹಿಸುವದಕ್ಕೆ ಶಕ್ತಿಯುಳ್ಳದಲ್ಲ. ಆದ್ದರಿಂದ ಆತ್ಮನಿಗೆ ಬರುವ ಅಯಂ ಘಟಃ (ಇದೊಂದು ಗಡಿಗೆ) ಎಂಬ ಜ್ಞಾನವು ತನಗೆ ಅವ್ಯವಹಿತವಾಗಿರುವ ಮನಸ್ಸಿನ ತೋರ್ಪಡಿಸುವಿಕೆಯಿಂದಲೇ ಉಂಟಾಗುವದು. ಈ ಜ್ಞಾನದಲ್ಲಿ ಘಟವೆಂಬ ವಿಷಯವೂ ತದ್ಗ್ರಾಹಕವಾದ ಇಂದ್ರಿಯವೂ ಇವೆರಡೂ ಇರುವವೆಂಬುದು, ಆತ್ಮನಿಗೆ ಮನಸ್ಸನ್ನು ಬಿಟ್ಟು ನೇರಾಗಿ ತಿಳಿಯುವಂತಿಲ್ಲ. ಹಾಗೆಯೇ ಮನಸ್ಸೂ ಕೂಡ ಇಂದ್ರಿಯದ ಮಾತನ್ನು ನಂಬಿಕೊಂಡು ವಿಷಯವಿದೆ ಎಂದು ತಿಳಿಯುವದೇ ಹೊರತು ವಿಷಯವನ್ನು ಎಂದಿಗೂ ಸಾಕ್ಷಾತ್ತಾಗಿ ಗ್ರಹಿಸುವದಕ್ಕೆ ಶಕ್ತಿಯುಳ್ಳದ್ದಲ್ಲ. ಹೀಗಿರುವಲ್ಲಿ ಅಯಂ ಘಟಃ ಎಂಬ ಜ್ಞಾನದಲ್ಲಿ ಆತ್ಮನು ಘಟವನ್ನು ನೇರಾಗಿ ನೋಡಿದನೆಂಬುದಾಗಿ ಹ್ಯಾಗೆ ತಿಳಿಯಲು ಸಾಧ್ಯ? ಇದು ಹ್ಯಾಗಿದೆಯೆಂದರೆ, ಒಬ್ಬ ದೊರೆಯೂ ಒಬ್ಬ ಮಂತ್ರಿಯೂ ಒಬ್ಬ ಅಮಲುದಾರನೂ ಒಬ್ಬ ಶ್ಯಾನುಭೋಗನೂ ಸೇರಿ ರಾಜ್ಯಭಾರಮಾಡುತ್ತಾ ಇದ್ದರಂತೆ. ಇವರಲ್ಲಿ ರಾಜನು (ಆತ್ಮನು) ತನ್ನ ಅರಮನೆಯನ್ನು ಬಿಟ್ಟವನಲ್ಲ. ಅರಮನೆಗೂ ಮಂತ್ರಿಯ ಮನೆಗೂ ನಡುವೆ ಇದ್ದ ಗೋಡೆಯಲ್ಲಿ ಒಂದು ರಂಧ್ರಮಾಡಿ ಕೊಂಡು ಆ ರಂಧ್ರದ ಮುಖಾಂತರ ಇವನು ದಿನವೂ ಮಂತ್ರಿಯ (ಮನಸ್ಸಿನ) ಮುಖವನ್ನೇ ನೋಡದೆ ರಾಜ್ಯ ವಿಷಯದ ವಿಚಾರಣೆ ಮಾಡುತ್ತಾ ಇದ್ದನಂತೆ. ಮಂತ್ರಿಯು ಕೂಡ ಅದೇ ರೀತಿಯಾಗಿ ಪಕ್ಕದ ಮನೆ ಅಮಲುದಾರ (ಇಂದ್ರಿಯ) ನೊಡನೆ ಗೋಡೆಯ ರಂಧ್ರದ ಮೂಲಕವಾಗಿಯೇ ವಿಷಯಗಳನ್ನು ತಿಳಿಯುತ್ತಾ ಬಂದನಂತೆ. ಮಂತ್ರಿಯೂ ತನ್ನ ಮನೆ ಬಿಟ್ಟವನಲ್ಲ. ಅಮಲುದಾರನು ಮಾತ್ರ ಶ್ಯಾನುಭೋಗನನ್ನು ನೋಡಿ ವಿಚಾರಿಸಿ ವಿಷಯಗಳನ್ನು ತಿಳಿದು ಮಂತ್ರಿಗೆ ಸಕಲವನ್ನೂ ತಿಳಿಸುತ್ತಾ ಇದ್ದನು. ಇಲ್ಲಿ ಶ್ಯಾನುಭೋಗನಿಂದ ವಿಷಯವನ್ನು ನೇರಾಗಿ ನೋಡ ತಕ್ಕವನು ಅಮಲುದಾರನೊಬ್ಬನೆ. ಅಮಲುದಾರನು ಹ್ಯಾಗೆ ಹೇಳಿದರೂ ಗತ್ಯಂತರವಿಲ್ಲದೆ ಅದೇ ಸತ್ಯವೆಂದು ಮಂತ್ರಿಯೂ ರಾಜನೂ ನಂಬಬೇಕಾಗಿರುವದು.

ಇದರಲ್ಲಿ ಮಂತ್ರಿಯು ಅಮಲುದಾರನನ್ನೂ ಶ್ಯಾನುಭೋಗನನ್ನೂ ನೋಡಿದವನಲ್ಲ; ರಾಜನು ಮಿಕ್ಕ ಮೂವರನ್ನೂ ನೋಡಿದವನಲ್ಲ. ಇಂಥ ಸ್ಥಿತಿಯಲ್ಲಿ ರಾಜ್ಯ ಹ್ಯಾಗಿದೆಯೋ ಶ್ಯಾನುಭೋಗನಿದ್ದಾನೆಯೋ ಇಲ್ಲವೋ, ಅಮಲುದಾರನಿದ್ದಾನೆಯೋ ಇಲ್ಲವೋ, ಈ ವಿಷಯಗಳು ಖಂಡಿತವಾಗಿ ತಿಳಿಯುವದಕ್ಕೆ ರಾಜನಿಗೆ ಅವಕಾಶವಿಲ್ಲ. ಆದರೂ ಮಾರ್ಗಾನ್ತರವಿಲ್ಲದೆ ಇರುವದರಿಂದ ಮಂತ್ರಿ ಹೇಳುವದನ್ನೇ ಒಪ್ಪಿಕೊಳ್ಳಬೇಕಾಗಿದೆ. ಮಂತ್ರಿಯು ಪರಸ್ಪರ ವಿರುದ್ಧವಾದ ಎಷ್ಟು ಸಮಾಚಾರಗಳನ್ನು ತಿಳಿಸಿದರೂ ''ಕುಂಟನ ಪಾರುಪತ್ಯ ಮನೆಯ ಮುಂದೆ'' ಎಂಬಂತೆ ಎಲ್ಲಕ್ಕೂ ಒಪ್ಪಬೇಕಾಗಿ ಬರುವದು. ಹೀಗಿರುವಲ್ಲಿ ಮಂತ್ರಿ ಹೇಳುವದೆಲ್ಲ ಸತ್ಯವೆಂಬುದಕ್ಕೆ ಯಾವ ಪ್ರಮಾಣವುಂಟು? ಈಗ ''ಇದು ಹಾವು'' ಎಂತ ಹೇಳುತ್ತಾನೆ! ತಿರುಗಿ ''ಅಲ್ಲ, ಅಲ್ಲ, ಇದು ಹಗ್ಗ'' ಎನ್ನುತ್ತಾನೆ. ಕೆಲವು ಸಂದರ್ಭಗಳಲ್ಲಿ ಬಹುಕಾಲದವರೆಗೆ ಒಂದು ಭಾವನೆಯನ್ನು ಕೊಟ್ಟು ಕಡೆಗೆ ''ಅದು ತಪ್ಪು, ಸುಳ್ಳು'' ಎಂದು ನುಡಿಯುವನು. ಇಂಥ ಮಂತ್ರಿಯನ್ನೇ ಆಶ್ರಯಿಸಿಕೊಂಡಿರುವ ರಾಜನಿಗೆ ಸರ್ವಥಾ ಪ್ರಪಂಚದ ನಿಜಸ್ಥಿತಿ ತಿಳಿಯಲು ಸಾಧ್ಯವೇ- ಹೀಗಲ್ಲವೆ ನ್ಯಾಯಶಾಸ್ತ್ರವು ಆತ್ಮನಿಗೆ ಪ್ರಪಂಚವು ಪ್ರತ್ಯಕ್ಷವೆನ್ನುವದು? ಮನಸ್ಸನ್ನು ಬಿಟ್ಟು ಸಾಕ್ಷಾತ್ತಾಗಿ ಆತ್ಮನು ಇಂದ್ರಿಯವನ್ನೂ ವಿಷಯವನ್ನೂ ನೋಡುವದಕ್ಕೆ ಶಕ್ತಿಯುಳ್ಳವನಾಗಿದ್ದರಲ್ಲವೆ ಮನಸ್ಸು ಹೇಳುವದು ಸತ್ಯವೋ ಸುಳ್ಳೋ ಎಂಬುದನ್ನು ನಿಶ್ಚಯಮಾಡಲು ಸಾಧ್ಯವಾಗುವದು! ಹೀಗಿರುವಾಗ ಮನಸ್ಸೇ ಇಂದ್ರಿಯವನ್ನೂ ವಿಷಯವನ್ನೂ ಕಲ್ಪನೆಮಾಡಿಕೊಂಡು ದಿನದಿನವೂ ಆತ್ಮನಿಗೆ ತನ್ನಿಷ್ಟದಂತೆ ಕಲ್ಪಿತ ಪ್ರಪಂಚದ ಕಥೆಯನ್ನು ವರ್ಣಿಸುವದು ಎಂಬುದಾಗಿ ಏಕೆ ತಿಳಿಯಬಾರದು ? ಇದೂ ಹಾಗಿರಲಿ, ಆತ್ಮ ಮೊದಲಾದ ವಸ್ತುಗಳಿಗೆ ಸಂಯೋಗವಾದ್ದರಿಂದ ಘಟಪಟಾದಿ ಜ್ಞಾನಗಳು ಉಂಟಾಗಬೇಕಾದ ಕಾರಣವೇನು? ಉಂಟಾದರೆ, ಅದರ ಪ್ರಾಮಾಣ್ಯವೆಂಥಾದ್ದು? ಸಾಮಾನ್ಯ ವ್ಯವಹಾರಕ್ಕೆ ಪ್ರತ್ಯಕ್ಷವೂ ಒಂದು ಸಾಧನವಾಗಿದ್ದಾಗ್ಯೂ ಅದನ್ನು ಬಾಧಿತವಾಗುವ ವರೆಗೇ ಪ್ರಮಾಣವೆಂತ ತಿಳಿಯಬೇಕು. ಹೀಗೆ ಪ್ರತ್ಯಕ್ಷಕ್ಕೆ ಪ್ರಾಮಾಣ್ಯವನ್ನೇ ಹೇಳಲಶಕ್ಯವಾಗಿರುವದು.

ತಿಮ್ಮಣ್ಣ :- ಮಹಾಸ್ವಾಮಿ, ತಾವು ಹೇಳಿದ್ದು ವಿಚಿತ್ರವಾಗಿದೆ. ಪ್ರತ್ಯಕ್ಷದ ಗತಿಯೇ ಇಂತಿರಲಾಗಿ ಅನುಮಾನ ಶಬ್ದಾದಿಗಳಿಗೆ ಯಾವ ಗತಿ ಬಂದೀತೋ! ಅವುಗಳ ವಿಷಯವಾಗಿಯೂ ದಯವಿಟ್ಟು ಉಪನ್ಯಾಸ ಮಾಡಬೇಕು. ಅಂತೂ ಪ್ರಮಾಣ ಗಳೇ ಸಿದ್ಧವಾಗದಿದ್ದರೆ ಯಥಾರ್ಥ ಜ್ಞಾನವು ಹೇಗೆ ಸಿದ್ಧವಾಗಬೇಕು? ಮುಂದೆ ಜೀವನಿಗೆ ಯಾವಗತಿ? ಅಪ್ಪಣೆಕೊಡಬೇಕು.

ಯತಿಗಳು :- ಪ್ರತ್ಯಕ್ಷವನ್ನೇ ಆಗಲಿ ಮತ್ತೆಯಾವ ಪ್ರಮಾಣವನ್ನೇ ಆಗಲಿ ದೂಷಿಸುವುದಕ್ಕೆ ನಾನು ಹೊರಟವನಲ್ಲ, ಆದರೆ ಪ್ರತ್ಯಕ್ಷವು ಜ್ಯೇಷ್ಠ ಪ್ರಮಾಣವಾದ್ದರಿಂದ ಪ್ರತ್ಯಕ್ಷಕ್ಕೆ ವಿಷಯವಾಗದೆ ಇರುವದನ್ನು ಸಾಧಿಸುವದೇ ಆಗಲಾರದೆಂದು ತಿಳಿದರುವ ಜನಗಳ ಭ್ರಾಂತಿಯನ್ನು ತೋರಿಸುವದೇ ನನ್ನ ಮುಖ್ಯ ಅಭಿಪ್ರಾಯವು. ಪ್ರತ್ಯಕ್ಷವನ್ನೇ ನಂಬಿ ಇರುವವರು ಎಷ್ಟೋ ಭ್ರಾಂತಿಗಳಿಗೆ ಒಳಗಾಗಿ ನಾವು ಭ್ರಾಂತರಾದೆವು ಎಂಬುದನ್ನೂ ಸಹ ಅರಿಯದೆಯೇ ತಮ್ಮ ಜೀವಮಾನವನ್ನೆಲ್ಲ ಕಳೆಯುತ್ತಾರೆ. ಉದಾಹರಣೆಗೆ, ''ಸೂರ್ಯೋದಯವು ಆಯಿತು'' ಎಂದು ವ್ಯವಹರಿಸುವ ಕಾಲದಲ್ಲಿ ಅದಕ್ಕೆ ಏಳು ನಿಮಿಷ ಮೊದಲೇ ಉದಯವಾಗಿ ಬಿಟ್ಟಿರುವದೆಂಬುದು ಇವರಿಗೆ ತಿಳಿಯದು. ಉದಿತಸೂರ್ಯನು ದೃಷ್ಟಿಯ ಕಾರ್ಯಕ್ಷೇತ್ರದಲ್ಲಿದ್ದರೂ ಜನರಿಗೆ ಇವನ ದರ್ಶನವಾಗದೇ ಇರುವರು. ಅಸ್ತಂಗತಾದಿತ್ಯನು ದೃಷ್ಟಿಯ ಕಾರ್ಯಕ್ಷೇತ್ರವನ್ನು ದಾಟಿಹೋದಮೇಲೆಯೂ ದರ್ಶನಕ್ಕೆ ಯೋಗ್ಯನಾಗಿರುವನು ಎಂದರೆ ಸೂರ್ಯನು ನಿಜವಾಗಿ ಮುಳುಗಿದ ಮೇಲೆಯೂ ಏಳು ನಿಮಿಷದವರೆಗೆ ಕಾಣುತ್ತಲೇ ಇರುವನು. ಈ ಭ್ರಾಂತಿಗೆ ಕಾರಣವೇನೆಂದರೆ, ಸೂರ್ಯನಿಂದ ರಶ್ಮಿಗಳು ಹೊರಟು ನಮ್ಮ ದೃಷ್ಟಿಗೆ ಸಂಬಂಧವಾಗುವದಕ್ಕೆ ಏಳು ನಿಮಿಷವಾಗುವದು. ಅದುವರೆಗೆ ಸೂರ್ಯನು ಎದುರಿನಲ್ಲಿದ್ದರೂ ಇಲ್ಲವೆಂದೇ ತೋರುವನು. ಮುಳುಗಿದ ಮೇಲೆ ಎದುರಿಗೆ ಇಲ್ಲದಿದ್ದರೂ ಸ್ವಲ್ಪ ಹೊತ್ತು ಎದುರಿಗೆ ಇರುವಂತೆಯೇ ತೋರುವನು. ಹೀಗೆ ಪ್ರತ್ಯಕ್ಷ ಅನುಭವವೆಂದು. ಇದು ನಿಶ್ಚಿತವಾಗಿದ್ದರೂ ಭ್ರಾಂತಿಯೆಂದು ಹೇಳಬೇಕೇ ಹೊರತು ಬೇರಿಲ್ಲ. ಇದರಂತೆ, ಆಕಾಶದಲ್ಲಿ ಸೂರ್ಯನು ಇರುವ ಸ್ಥಳವನ್ನು ಸೂರ್ಯನನ್ನು ನೋಡಿ ಹೇಳುವದಕ್ಕೆ ಬರುವದಿಲ್ಲ, ಆದ್ದರಿಂದ ಒಂದೊಂದು ನಿಮಿಷದಲ್ಲಿಯೂ ಸೂರ್ಯನು ಇಂಥ ಸ್ಥಳದಲ್ಲಿದ್ದಾನೆಂದು ನಾವು ಪ್ರತ್ಯಕ್ಷವಾಗಿ ನೋಡಿ ನಿರ್ಧರಿಸುವದೆಲ್ಲ ಭ್ರಾಂತಿಯೇ ಆಗುವದು ಇದಲ್ಲದೆ, ಖಗೋಳದಲ್ಲಿ ಏನೂ ಕಾಣದಿರುವ ಸ್ಥಳಗಳಲ್ಲಿಯೂ ಕೂಡ ಪ್ರತ್ಯಕ್ಷವನ್ನು ನಂಬಿ ''ಇಲ್ಲಿ ಏನೂ ಇಲ್ಲ'' ಎಂದು ಹೇಳುವದು ಸರಿಯಲ್ಲ, ಏಕೆಂದರೆ ಅಂಥ ಕಡೆಯಲ್ಲೆಲ್ಲ ಹೊಸ ಹೊಸ ನಕ್ಷತ್ರಗಳು ಈಚೀಚೆಗೆ ಕಂಡು ಬರುತ್ತಿರುವವು. ಸೂರ್ಯ ಚಂದ್ರಗ್ರಹಗಳು ಉದಯಾಸ್ತಮಯ ಕಾಲಗಳಲ್ಲಿ ದೊಡ್ಡವಾಗಿಯೂ ನೆಟ್ಟನೆ ತಲೆಯ ಮೇಲೆ ಇರುವಾಗ ಚಿಕ್ಕವಾಗಿಯೂ ತೋರುವದಿಲ್ಲವೆ? ಈ ಎರಡು ಪರಿಮಾಣಗಳಲ್ಲಿ ಯಾವದು ಸರಿಯಾದದ್ದು? ಆದ್ದರಿಂದ ನಮಗೆ ಕಾಣುವಂಥ ಪರಿಮಾಣಗಳು ಪ್ರತ್ಯಕ್ಷವಾದಾಗ್ಯೂ ಭ್ರಾಂತಿಯೆಂಬುದರಲ್ಲಿ ಸಂದೇಹವಿಲ್ಲ.

ಇದೂ ಅಲ್ಲದೆ, ಆತ್ಮನು ಟೆಲಿಫೋನ್[1] ಎಕ್ಸ್ಚೇಂಜು ಆಫೀಸಿನಲ್ಲಿರುವ ರೈಟರಿನ ಹಾಗೆ ಪಂಚೇಂದ್ರಿಯಗಳ ಮೂಲಕ ಬರುವ ಸಮಾಚಾರಗಳನ್ನು ಅರಿತು "ವಿಷಯಗಳು ಹೀಗಿರುವವು" ಎಂದು ಕಲ್ಪಿಸಿಕೊಳ್ಳಬಹುದೇ ಹೊರತು ವಿಷಯಗಳನ್ನು ನೇರಾಗಿ ನೋಡಲಾರನು. ಎಕ್ಸ್ಚೇಂಜುರೈಟರು ಕೂಡ ನಗರದ ಒಂದುಭಾಗದಲ್ಲಿರುವ ಜನರ ಸಮಾಚಾರವನ್ನು ಉಳಿದ ಭಾಗಗಳಲ್ಲಿರುವ ಜನರಿಗೆ ತಿಳಿಸುವದಕ್ಕೆ ತನ್ನ ಕೊಠಡಿಯಲ್ಲಿಯೇ ಕೂತು ಸಹಾಯ ಮಾಡುವನೇ ಹೊರತು ನಗರದ ಆಯಾ ಭಾಗಗಳಲ್ಲಿ ನಡೆಯುವ ಸಂಗತಿಗಳನ್ನು ನೇರಾಗಿ ಅರಿಯನು. ಆದರೆ ಈ ದೃಷ್ಟಾಂತದಲ್ಲಿ ಈ ರೈಟರು ತನ್ನ ಕೆಲಸ ಮುಗಿದ ಮೇಲೆ ಹೊರಗೆ ಹೋಗಿ ಸಮಾಚಾರಗಳನ್ನು ಅಪರೋಕ್ಷವಾಗಿ ಅರಿಯುವದಕ್ಕೆ ಸಾಧ್ಯವುಂಟು. ಆತ್ಮನಿಗಂದರೋ ಮನಸ್ಸು ಇಂದ್ರಿಯ ಇವುಗಳನ್ನು ಅತಿಕ್ರಮಿಸಿ ವಿಷಯಸಾಂಗತ್ಯವನ್ನು ಪಡೆಯುವ ಸಂಭವವು ಎಂದಿಗೂ ಇಲ್ಲ. ಆದ್ದರಿಂದಲೇ ನಮಗೆ ಪ್ರತ್ಯಕ್ಷವೆಂದು ಕಾಣುವ ಪ್ರಪಂಚವೆಲ್ಲ ಮನಸ್ಸಿನ ಜಾಲವಿದ್ಯೆಯೆಂದು ದೊಡ್ಡವರು ಹೇಳುವರು. ಇಂಥ ಪ್ರತ್ಯಕ್ಷಕ್ಕೆ ಹೆಚ್ಚಾಗಿ ಬೆಲೆಕೊಟ್ಟು ವೇದಶಾಸ್ತ್ರಗಳಲ್ಲಿ ಪ್ರತಿಪಾದಿತವಾಗಿರುವ ದೈವರಹಸ್ಯಗಳನ್ನು ನಂಬಬಾರದೆಂದು ತಿಳಿದುಕೊಳ್ಳುವದು ಪೂರ್ಣಜ್ಞಾನವನ್ನು ಸಂಪಾದಿಸುವ ಮಾರ್ಗವನ್ನೇ ಬಿಟ್ಟು ಅಡ್ಡಹಾದಿಯಾಗಿರುತ್ತದೆ. ಆದ್ದರಿಂದ ಈ ಗುಡಿಯಲ್ಲಿ ವಾಸಮಾಡುವ ವೃಷಭದೇವನ ಅಥವಾ ಪಕ್ಕದಲ್ಲಿ ನೆಲಸಿರುವ ಹನುಮಂತ, ವಿಘ್ನೇಶ್ವರ- ಇವರುಗಳ ಮಾಹಾತ್ಮ್ಯವು ಇಷ್ಟೇ ಎಂದು ಹೇಳಲಶಕ್ಯವು. ಬರಿಯ ಮೇಲು ಮೇಲು ನೋಟದಿಂದ ಉಂಟಾಗುವ ನಮ್ಮ ಅನುಭವವೆಲ್ಲಿ, ಪರಮರಹಸ್ಯವಾಗಿರುವ ಈ ದೇವತೆಗಳ ಗಾಂಭೀರ್ಯಾದಿ ಗುಣಗಳೆಲ್ಲಿ? ಭಕ್ತಿಯಿದ್ದರೆ ಚರ್ಮಚಕ್ಷುಸ್ಸಿಗೆ ಅತೀತವಾದ ಭಗವಂತನ ಮಾಹಾತ್ಮ್ಯವನ್ನು ಯೋಗಿಗಳಾದವರು ದಿವ್ಯಚಕ್ಷುಸ್ಸಿನಿಂದ ಅರಿಯುವರು.

ವಾಚಕರೆ, ಇಲ್ಲಿ ಯತಿಗಳು ಮೌನವನ್ನು ಧರಿಸಿ ಎದ್ದರು. ಕೂಡಲೆ ನಾವೂ ಅವರ ಅನಿರ್ವಚನೀಯಶಕ್ತಿಯಿಂದ ಪರತಂತ್ರರಾಗಿ ಅವರನ್ನೇ ಹಿಂಬಾಲಿಸ

---

1. ಬೆಂಗಳೂರು ಮುಂತಾದ ದೊಡ್ಡ ನಗರಗಳಲ್ಲಿ ದೂರದಲ್ಲಿರುವವರು ಒಬ್ಬರೊಡನೆ ಮಾತಾಡುವದಕ್ಕೆ ಟೆಲಿಫೋನ್ ಎಂಬ ದೂರಶ್ರಾವಕ ಯಂತ್ರವನ್ನು ಪಯೋಗಿಸುವರು. ತಂತಿಯ ಮೂಲಕ ಯಂತ್ರಗಳು ಪರಸ್ಪರ ಸಂಬದ್ಧವಾಗಿರುತ್ತವೆ. ನಗರದ ಒಂದು ಭಾಗದಲ್ಲಿರುವವರು ಮತ್ತೊಂದು ಭಾಗದಲ್ಲಿರುವವರೊಡನೆ ಮಾತಾಡ ಬೇಕಾದರೆ ಎಕ್ಸ್ಚೇಂಜ್ ಎಂಬ ಪರಸ್ಪರ ಸಂಬಂಧವನ್ನು ಮಾಡುವ ಆಫೀಸಿನವರ ಸಹಾಯಬೇಕು.

ತೊಡಗಿದೆವು. ಆದರೆ ಅವರು ನಮ್ಮ ಉದ್ದೇಶವನ್ನರಿತು, ನಿಲ್ಲಬೇಕೆಂದು ಕೈಸನ್ನೆ ಮಾಡಿ ಆಲಯವನ್ನು ಹೊಕ್ಕರು. ತರುವಾಯ ಹತ್ತು ನಿಮಿಷಗಳವರೆಗೂ ನಾವು ಏನೂ ತೋಚದೆ ಮೈಮರೆತು ನಿಂತಿದ್ದೆವು. ಇಷ್ಟರಲ್ಲಿ ಗುಡಿಯೊಳಗೆ ಘನ ಗಂಭೀರವಾದ ಘಂಟಾನಾದವಾಗಲು ಎಚ್ಚತ್ತು ಯತಿಗಳನ್ನು ಗುಡಿಯಲ್ಲಿ ಕಾಣಬಹುದೆಂಬ ಆಸೆಯಿಂದ ಒಳಹೊಕ್ಕೆವು. ಅಷ್ಟು ಹೊತ್ತಿಗೆ ರಾತ್ರಿ ಸುಮಾರು ಹತ್ತು ಘಂಟೆಯಾಗಿ ಎಲ್ಲೆಲ್ಲಿಯೂ ಕತ್ತಲು ತುಂಬಿತ್ತು. ಗರ್ಭಗುಡಿಯಲ್ಲಿ ಮಾತ್ರ ಒಂದು ಚಿಕ್ಕ ದೀಪವು ಮಿಣುಗುತ್ತಿತ್ತು. ಆದರ ಸಹಾಯದಿಂದ ಒಳಗೆ ನೋಡಲು ಗುಡಿಯ ಬಾಗಿಲು ಮುದ್ರಿತವಾಗಿತ್ತು. ಎದುರಿಗೆ ಹತ್ತಿರದಲ್ಲಿಯೇ ಒಬ್ಬ ಮುದುಕಿಯು ಮಲಗಿದ್ದಳು. ಯತಿಗಳು ಏನಾದರೋ ತಿಳಿಯಬೇಕೆಂಬ ಕುತೂಹಲವು ನಮ್ಮನ್ನು ಬಿಡಲಿಲ್ಲವಾದ್ದರಿಂದ ಆ ಸ್ತ್ರೀಯನ್ನು ಎಬ್ಬಿಸಿ, ''ಅಮ್ಮ, ಇಲ್ಲಿ ಬಂದ ಯತೀಶ್ವರರು ಎಲ್ಲಿರುವರು? ಈಗ ತಾನೆ ಗುಡಿಯೊಳಕ್ಕೆ ಪ್ರವೇಶಿಸಿದರಲ್ಲ!'' ಎಂದು ತಿಮ್ಮಣ್ಣ ಭಟ್ಟರು ಕೇಳಿದರು. ಅದಕ್ಕೆ ಆಕೆಯ ''ಅಪ್ಪ,ಇಲ್ಲಿ ಯತಿಯೂ ಇಲ್ಲ, ಸನ್ಯಾಸಿಯೂ ಇಲ್ಲ. ಗುಡಿಯ ಪೂಜಾರಿ ಬಾಗಿಲನ್ನು ಬೀಗಹಾಕಿಕೊಂಡು ಹೋಗಿ ಒಂದು ಘಂಟೆಯಾಯಿತು. ಆಗಿನಿಂದ ನಾನು ಬಾಗಿಲಿಗೆ ಅಡ್ಡವಾಗಿಮಲಗಿರುತ್ತೇನೆ. ನನಗೂ ತಿಳಿಯದೆ ಈ ಬೀಗವನ್ನೂ ಮುರಿಯದೆ ಯಾವ ಕಳ್ಳನೂ ಇಲ್ಲಿ ಬರುವದಕ್ಕೆ ಅವಕಾಶವಿಲ್ಲ'' ಎಂದಳು. ಆಗ ನಾನು''ಹಾಗಾದರೆ ಈಗ ಒಂದು ನಿಮಿಷಕ್ಕೆ ಮುಂಚೆ ಗುಡಿಯ ಘಂಟೆಯನ್ನು ಗಟ್ಟಿಯಾಗಿ ಬಾರಿಸಿದರಲ್ಲ, ಅವರು ಯಾರು?'' ಎಂದು ಕೇಳಿದೆನು. ಆಕೆಯು ''ನಾನು ಇಲ್ಲಿಯೇ ನಿದ್ದೆಯಿಲ್ಲದೆ ಮಲಗಿದ್ದೇನೆ. ಘಂಟೆಯ ಶಬ್ದವೇ ನನಗೆ ಕೇಳಬರಲಿಲ್ಲ'' ಎಂದಳು.

ಇದನ್ನು ಕೇಳಿ ನಮಗೆಲ್ಲ ರೋಮಾಂಚವಾಯಿತು. ಒಂದು ವೇಳೆ ವೃಷಭದೇವನೇ ಈ ಯತಿರೂಪವಾಗಿ ಬಂದು ಯಾವದನ್ನೂ ನಂಬದಿರುವ ಈ ಶುಷ್ಕತರ್ಕಾಶ್ರಯನಾದ ತಿಮ್ಮಣ್ಣಭಟ್ಟರಿಗೆ ಭಕ್ತಿಯುಂಟಾಗುವಂತೆ ದರ್ಶನವನ್ನನು ಗ್ರಹಿಸಿದನೋ ಏನೋ ಎಂದು ನಮಗೆ ತೋರಿತು. ಬೇರೆ ಯಾವುದು ಮಾಡುವು ದಕ್ಕೂ ಅಕಾಲವಾದ್ದರಿಂದ ನಾವು ಬೇರೆಬೇರೆ ಅಭಿಪ್ರಾಯಗಳಿಂದಲೂ ಭಿನ್ನಭಾವ ಗಳಿಂದಲೂ ಕೂಡಿದವರಾಗಿ ಯಾತ್ರೆ ನಡೆದ ಮಹತ್ತ್ವವನ್ನು ಚಿಂತಿಸುತ್ತಲೇ ನಮ್ಮ ಗೃಹಗಳಿಗೆ ತೆರಳಿದೆವು.

*****

# 7. ರೈಲು ಪ್ರಯಾಣ

ಒಂದಾನೊಂದು ದಿವಸ ಬೆಳಿಗ್ಗೆ ಎದ್ದು ದಿನಚರ್ಯಗಳನ್ನು ಮುಗಿಸಿಕೊಂಡು ರೈಲ್ವೆಸ್ಟೇಷನ್ನಿಗೆ ಹೋಗಿ ಪಶ್ಚಿಮವಾಹಿನಿಗೆ ಟಿಕೆಟ್ ತೆಗೆದುಕೊಂಡು ಗಾಡಿಯಲ್ಲಿ ಕೂತೆನು. ಕೆಂಗೇರಿ ಸ್ಟೇಷನ್ನಿನಲ್ಲಿ ಒಬ್ಬ ಬ್ರಾಹ್ಮಣನು, ಸುಮಾರು 50 ವರ್ಷ ವಯಸ್ಸು ಇರಬಹುದು. ತಲೆಯಲ್ಲಿ ಒಂದು ಮೂಟೆ, ಒಂದು ಕೈಯ್ಯಲ್ಲಿ ಬೆತ್ತ, ಮತ್ತೊಂದು ಕೈಯಲ್ಲಿ ಒಂದು ಕೊಡೆ ಹೀಗೆ ಧರಿಸಿಕೊಂಡು ನಮ್ಮ ಗಾಡಿಯೊಳಕ್ಕೆ ಪ್ರವೇಶಿಸಿದನು. ಆತನು ವೃದ್ಧನಾಗಿದ್ದಾಗ್ಯೂ ಹಸನ್ಮುಖನಾಗಿ ಬಹು ಚಟುವಟಿಕೆಯಿಂದಲೂ ವಿನಯ ದಿಂದಲೂ ಕೂಡಿದ್ದರಿಂದ ನಮಗೆಲ್ಲ ಆತನಲ್ಲಿ ಪ್ರೀತಿಯೂ ಗೌರವವೂ ಉಂಟಾದವು. ಸ್ಥಳಸಂಕೋಚವಾಗಿದ್ದಾಗ್ಯೂ ನಾವೆಲ್ಲರೂ ಆತನಿಗೆ ಅನನಕೂಲಮಾಡದೆ ನಮ್ಮ ಗಂಟುಮೂಟೆಗಳನ್ನು ಕೆಳಗಿರಿಸಿ ಕೂಡುವದಕ್ಕೆ ಸ್ಥಳವನ್ನು ಮಾಡಿಕೊಟ್ಟೆವು.

ಕ್ಷಣಭಂಗುರವಾದ ಈ ಸಂಸಾರಕ್ಕೆ ಸಾಮ್ಯವು ರೈಲಿನಲ್ಲಿ ಒದಗುವ ಕ್ಷಣಿಕ ಸಾಂಗತ್ಯವಲ್ಲವೇ? ಒಂದು ಕ್ಷಣದಲ್ಲಿ ಪರಿಚಯವಾಗಿ ಎರಡನೆಯ ಕ್ಷಣದಲ್ಲಿಯೇ ಪರಮ ಮೈತ್ರಿಯುಂಟಾಗಿ, ಒಬ್ಬರನ್ನೊಬ್ಬರು ಅಗಲುವದನ್ನೂ ಸಹಿಸಲಾರದಷ್ಟು ಬಳಕೆಯುಂಟಾಯಿತೋ ಇಲ್ಲವೋ ಅನ್ಯೋನ್ಯವಿಯೋಗವುಂಟಾಗುವದು. ಯಾವ ಸ್ಟೇಷನ್ನಿನಲ್ಲಿ ಯಾರು ಇಳಿಯಬೇಕೋ ಅಲ್ಲಿ ಅವರು ಕೈಗಳನ್ನು ಜೋಡಿಸಿಕೊಂಡು ''ಸ್ವಾಮಿ, ಹೋಗಿಬರುತ್ತೇನೆ. ಜ್ಞಾಪಕ ಎಂದೆಂದಿಗೂ ಇರಬೇಕು''ಎಂದು ಇಳಿದು ಹೋಗುವರು. ಕೂಡಲೇ ಗಾಡಿಯಲ್ಲಿ ಸಂಧಿಸಿದಂಥ ಜನಗಳ ನೆನಪೇ ಮರೆತು ತಾವು ಮುಂದೆಹೋಗಿ ನಡೆಸಬೇಕಾದ ವ್ಯವಹಾರವು ಇವರ ಮನಸ್ಸನ್ನು ತುಂಬಿಕೊಳ್ಳುವದು. ಇತ್ತ ಗಾಡಿಯಲ್ಲಿ ಮುಂದಕ್ಕೆ ಪಯಣಮಾಡುವ ಜನಗಳಿಗೋ ಎಂದರೆ ಇಳಿದವರ ವಿಷಯದಲ್ಲಿ ಯಾವ ಯೋಚನೆಯೂ ತಟ್ಟದೆ ಮುಂದೆ ಸ್ಟೇಷನ್ನುಗಳಲ್ಲಿ ಸಿಕ್ಕುವವರ ಸ್ನೇಹವನ್ನೂ ಹಿಂದಿನ ಹಾಗೆಯೇ ಕ್ಷಣದಲ್ಲಿ ಸಂಪಾದಿಸಿ ಕ್ಷಣದಲ್ಲಿ ಕಳೆದುಕೊಂಡು ಈ ಸಂಯೋಗವಿಯೋಗಗಳಲ್ಲಿ ಯಾವ ಸ್ಥಿರವಾದ ಸುಖದುಃಖ ಗಳನ್ನೂ ಹೊಂದದೆ ತಾವು ಕೂಡ ಒಬ್ಬೊಬ್ಬರಾಗಿ ತಮ್ಮ ತಮ್ಮ ಊರುಗಳು ಬಂದಾಗ ಇಳಿದು ಮಾಯವಾಗುತ್ತಾರೆ. ಹೀಗೆಯೇ ಅಲ್ಲವೇ ಜೀವರೂ ಕೂಡ ಜನ್ಮದಿಂದ ಜನ್ಮಕ್ಕೆ ತೆರಳಿ ಆಯಾ ಜನ್ಮಗಳಲ್ಲಿ ಸಂಭವಿಸಿದ ಹೆಂಡಿರು, ಮಕ್ಕಳು, ಮಿತ್ರರು - ಎಂಬ ಸಂಬಂಧಗಳಿಂದ ತಾತ್ಕಾಲಿಕ ಸುಖದುಃಖಗಳನ್ನು ಹೊಂದಿ ತಮ್ಮ ತಮ್ಮ

ಕರ್ಮಾನುಸಾರ ಕಾಲಬರಲು ಯಾವ ಯೋಚನೆಯೂ ನಿರೀಕ್ಷಣೆಯೂ ಇಲ್ಲದೆ ಮುಂದಿನ ಜನ್ಮಕ್ಕೆ ಸಾಗುವರು?

ಇರಲಿ, ನಮಗೆ ಹೊಸದಾಗಿ ಸಿಕ್ಕಿದ ಈ ಬ್ರಾಹ್ಮಣರ ಸಾಂಗತ್ಯದಿಂದ ನಮ್ಮೆಲ್ಲರಿಗೂ ಒಂದು ವಿಧವಾದ ಕುತೂಹಲವುಂಟಾಗಿ ಇವರ ಚರಿತ್ರೆಯೇನು? ಎಂದು ತಿಳಿದುಕೊಳ್ಳಲಪೇಕ್ಷೆ ಉಂಟಾಯಿತು. ಎದುರು ಸಾಲಿನಲ್ಲಿ ಚನ್ನಪ್ಪಶೆಟ್ಟರು ಕೂತಿದ್ದರು. ಅವರು ಅಷ್ಟು ನಸ್ಯವನ್ನು ತಯಾರುಮಾಡಿ ''ಸ್ವಾಮಿ, ಒಪ್ಪಿಸಿಕೊಳ್ಳಬೇಕು; ಸ್ವಾಮಿ, ಒಪ್ಪಿಸಿಕೊಳ್ಳಬೇಕು'' ಎಂಬುದಾಗಿ ಒಬ್ಬೊಬ್ಬರಿಗೂ ವಿನಯಪೂರ್ವಕವಾಗಿ ನಶ್ಯ ಕೊಡುತ್ತ ಬಂದು ಕೊನೆಗೆ ಈ ಬ್ರಾಹ್ಮಣನಿಗೂ ಕೊಡುವರಾದರು. ಬಳಿಕ ''ಮಹಾಸ್ವಾಮಿ, ತಮ್ಮ ಊರು ಯಾವದೋ, ಯಾವ ಜೀವನವೋ, ಎಲ್ಲಿಗೆ ದಯಮಾಡಿಸವದೋ, ಅಪ್ಪಣೆಯಾಗಬೇಕು'' ಎಂದರು. ಅದಕ್ಕೆ ಆತನು ''ಅಪ್ಪ, ಕೆಂಗೇರಿ ಹತ್ತಿರ ಕುಂಬಳಗೋಡಿನಲ್ಲಿರುವೆನು. ನನ್ನನ್ನು ವಾಲ್ಮೀಕಿಶಾಸ್ತ್ರಿ ಎಂತ ಕರೆಯುವರು. ನಾನು ಸರ್ಕಾರಿ ನೌಕರಿಯಲ್ಲಿದ್ದು ಈಗ ಪಿನ್ಷನುದಾರನಾಗಿದ್ದೇನೆ. ಮೈಸೂರಲ್ಲಿ ನಮ್ಮ ಸ್ನೇಹಿತರನ್ನು ನೋಡುವದಕ್ಕೆ ಹೊರಟಿರುವೆನು'' ಎಂದನು.

ಚೆನ್ನಪ್ಪ :- ತಮಗೆ ಮಕ್ಕಳೆಷ್ಟು ಸ್ವಾಮಿ ? ಭೂಮಿಕಾಣಿ ಏನಾದರೂ ಒಂದಿಷ್ಟು ಮಾಡಿಕೊಂಡಿದ್ದೀರೊ?

ವಾಲ್ಮೀಕಿ :- ಅಪ್ಪ, ನನ್ನ ಕಥೆಯನ್ನು ಏನು ಕೇಳುವಿರಿ? ವಾಲ್ಮೀಕಿಮಹರ್ಷಿಯು ಹೇಗೆ ಕುಟುಂಬರಕ್ಷಣೆಗೋಸ್ಕರ ಬೇಕಾದ ಪಾಪಕೃತ್ಯಗಳೆಲ್ಲ ಮಾಡಿ ಕಡೆಗೆ ನಾರದರ ಉಪದೇಶದಿಂದ ವೈರಾಗ್ಯವನ್ನು ಪಡೆದನೋ ಹಾಗೆಯೇ ನಾನೂ ಕೂಡ ನೌಕರಿಯಲ್ಲಿದ್ದು ಸೇವಕವೃತ್ತಿಯಲ್ಲಿ ಬಳಲಿ, ಯಜಮಾನನಿಗೋಸ್ಕರ ಧರ್ಮಾಧರ್ಮವನ್ನು ವಿಚಾರಿಸದೆ ಅಪ್ಪಣೆಯಂತೆ ನಡೆದುಕೊಂಡು ನಮ್ಮ ಕುಲಕ್ಕೆ ಬಂದ ಅಧ್ಯಯನಾದಿಗಳನ್ನು ಬಿಟ್ಟು ತಪಸ್ಸು ಕೆಟ್ಟು ಕುಟುಂಬಸೌಖ್ಯಕ್ಕೆ ಮನಸ್ಸು ಕೊಟ್ಟು ಎಷ್ಟು ದುಡಿದರೂ ಸಾಲದೆ, ಹೆಂಡಿರುಮಕ್ಕಳಿಗೆ ತೃಪ್ತಿಯೂ ಆಗದೆ ಕಡೆಗೆ ಚಾಕರಿಯ ಅವಧಿ ಮುಗಿಯಲು ನೌಕರಿಯಿಂದ ನಿವೃತ್ತನಾದೆನು. ಈಗ ಬರುವ ಪಿಂಛನ್ನು ಗೃಹಕೃತ್ಯಕ್ಕೆ ಸಾಲದೆ ಮಾರ್ಗಾಂತರವನ್ನೂ ಪಡೆಯಲಾರದೆ ವರ್ಷದಲ್ಲಿ ಹನ್ನೊಂದು ತಿಂಗಳು ನೆಂಟರು, ಇಷ್ಟರು, ಮಿತ್ರರು, ಪರಿಚಿತರು- ಇವರಲ್ಲಿದ್ದು ಕಾಲಹಾಕುತ್ತಿದ್ದೇನೆ. ಇದ್ದಬದ್ದ ಜಮೀನುಗಳೆಲ್ಲ ಮಕ್ಕಳ ವಿವಾಹೋಪನಯನ ಮುಂತಾದ ಕಾರ್ಯಗಳಿಗಾಗಿ

ಮಾರಿ, ಕಂಡವರ ಪಾಲು ಮಾಡಿದೆನು. ಇಂಥ ಸ್ಥಿತಿಯಲ್ಲಿ ಬೇರೆ ಯಾವದೂ ತೋರದೆ ಶಾಸ್ತ್ರಕಾಲ ಕ್ಷೇಪಮಾಕೊಂಡು ಈ ಪ್ರಪಂಚವೇ ಸುಳ್ಳು ಎಂಬ ಪಕ್ಷದಲ್ಲಿಯೇ ವಿಶೇಷವಾದ ನಂಬಿಕೆಯನ್ನುಂಟುಮಾಡಿಕೊಳ್ಳುವದಕ್ಕೆ ವೀರಪ್ರಯತ್ನವನ್ನು ಮಾಡುತ್ತಾ ಇದ್ದೇನೆ. ಈ ಪ್ರಪಂಚವೇ ಸತ್ಯವಾಗಿ ಮುಂದಕ್ಕೂ ಇದೇ ರೀತಿಯಾಗಿದ್ದಲ್ಲಿ ನಮ್ಮ ಗತಿಯನ್ನು ಯೋಚಿಸಿದರೆ ಭಯಂಕರವಾಗಿರುವದು. ನಿಮ್ಮನ್ನು ನೋಡಿದರೆ ಒಳ್ಳೇ ಪುಣ್ಯವಂತರು ಎಂದುಕಾಣುತ್ತದೆ. ತಾವು ಯಾರೋ?

ಪಕ್ಕದಲ್ಲಿ ಕೂತಿದ್ದ ಶ್ಯಾನುಭೋಗ ತಿಪ್ಪಯ್ಯನವರು ''ಅದಕ್ಕೇನು ಸ್ವಾಮಿ, ಅನುಮಾನ? ಶೆಟ್ಟರು ಅಷ್ಟೈಶ್ವರ್ಯವಂತರು, ನಮ್ಮನ್ನೆಲ್ಲಾ ಕಾಪಾಡುವರು ಅವರೇ. ಅವರ ಉಡುಪು, ಮುಖಭಾವವು, ತೇಜಸ್ಸು - ಇವುಗಳನ್ನು ನೋಡಿದರೆ ಅವರ ಸ್ಥಿತಿ ಸ್ಪಷ್ಟವಾಗುವದಲ್ಲವೇ?'' ಎಂದರು.

**ವಾಲ್ಮೀಕಿ :** - ಅಪ್ಪ, ಈ ಕಾಲದಲ್ಲಿ ಯಾವದೊಂದೂ ನೋಡಿದ ಮಾತ್ರಕ್ಕೆ ನಿಶ್ಚಯಿಸುವದು ಅಸಾಧ್ಯವಾಗಿದೆ. ಹುಡುಗರು ಎಲ್ಲರೂ ಒಂದೇ ರೀತಿಯಾಗಿ ಮುಖಕ್ಷೌರ, ಬೈತಲೆ ಬಿಡಿಸಿಕೊಳ್ಳುವದು ಮುಂತಾದ ಲಕ್ಷಣವುಳ್ಳವರಾಗಿರುವದರಿಂದ ಇವರು ಬ್ರಾಹ್ಮಣರು, ಇವರು ಇತರರು ಎಂದು ತಿಳಿಯುವದಕ್ಕೆ ಬೇಕಾದ ಗುರುತುಗಳೇ ಇಲ್ಲದೆ ಹೋಯಿತು. ಮತ್ತು ಹಣೆಯಲ್ಲಿ ಯಾರೂ ಏನೂ ಇಡದೆ ಸರ್ವರೂ ಸದಾಕಾಲವೂ ಏಕಾದಶೀಮುಖವನ್ನು ಧರಿಸಿಕೊಂಡಿರುವರು. ಆದ್ದರಿಂದಲೇ ಶಾಸ್ತ್ರದಲ್ಲಿ ಹೇಳಿರುವ ಪ್ರತ್ಯಕ್ಷ, ಅನುಮಾನ, ಆಗಮ- ಮುಂತಾದ ಪ್ರಮಾಣಗಳು ಕೂಡ ಯಾವ ಜ್ಞಾನಕ್ಕೂ ಸಹಾಯವಾಗುವದಿಲ್ಲ.

ಆಗ ಸ್ವಲ್ಪದೂರದಲ್ಲಿ ಕೂತಿದ್ದ ನಾರಣಾಚಾರ್ರು ಇವರ ಕಡೆ ತಿರುಗಿ ನೋಡಿ ''ಅದೇನು ಹಾಗೆಂದರೆ? ಪ್ರಮಾಣಗಳಿಲ್ಲದೆ ವ್ಯವಹಾರ ನಡೆದೀತೆ? ಈಗ ನಿಮ್ಮನ್ನು ನೋಡಿ ನೀವು ಮನುಷ್ಯರು ಎಂತ ಪ್ರತ್ಯಕ್ಷವೂ ನಿಮ್ಮ ರೂಪದಿಂದ ನೀವು ವಯೋವೃದ್ಧರು ಎಂಬ ಅನುಮಾನವೂ ಹೇಳಿಕೊಂಡ ಚರಿತ್ರೆಯಿಂದ ನೀವು ಕುಟುಂಬದಲ್ಲಿ ವಿರಕ್ತಿ ಹೊಂದಿದವರು ಎಂಬ ಶಬ್ದಜ್ಞಾನವೂ ನಮಗೆ ಉಂಟಾಗಲಿಲ್ಲವೇ?

**ವಾಲ್ಮೀಕಿ :** - ನೀವು ಹೇಳಿದ್ದು ಸತ್ಯವೆ ಆದಾಗ್ಯೂ ಇಂಥ ಜ್ಞಾನಗಳಿಂದ ವ್ಯವಹಾರಗಳನ್ನು ನಡೆಸಬಹುದೇ ಹೊರತು ಇವು ಮುಂದೆ ಯಾವಾಗಲೂ ಬಾಧಿತವಾಗುವದಿಲ್ಲ ಎಂಬ ನಂಬಿಕೆಯುಂಟೆ? ಪ್ರತ್ಯಕ್ಷವಾಗಿ ನನ್ನನ್ನು ಮನುಷ್ಯನಾಗಿ

ತಿಳಿದಾಗ್ಯೂ ನನ್ನ ರೂಪದಿಂದ ನಾನು ವೃದ್ಧನೆಂದು ಊಹಿಸಿದಿರಲ್ಲವೆ? ಅದು ಯಥಾರ್ಥಜ್ಞಾನವೆಂತ ಹೇಳಬಹುದೆ? ದುಃಖದಿಂದಲೂ ಸುಖದಿಂದಲೂ ರೂಪಗಳು ಹೆಚ್ಚು ಕಡಿಮೆಯಾಗಿ ವಯೋನಿರ್ಣಯಮಾಡುವದು ಕಷ್ಟವಾಗುತ್ತದೆ. ಅನುಮಾನ ಪ್ರಮಾಣವೂ, ಶಾನೆ ಬುದ್ಧಿಕೌಶಲ್ಯವೂ, ಲೋಕಾನುಭವವೂ, ಉಂಟಾದ ವರಿಗೂ ಕೂಡ ಅನೇಕ ಸಂದರ್ಭಗಳಲ್ಲಿ ಭ್ರಾಂತಿಯನ್ನುಂಟು ಮಾಡುತ್ತದೆಯಲ್ಲವೆ?

ನಾರಣಾಚಾರ್ರು :- ಅದೆಲ್ಲ ಇರಲಿ, ಸ್ವಾಮಿ, ಯತ್ಕಾರ್ಯಂ ತತ್ಸಕರ್ತೃಕಂ (ಯಾವದು ಕಾರ್ಯವೋ ಅದಕ್ಕೆ ಕರ್ತೃವಿರಬೇಕು) ಎಂಬುವ ಅನುಮಿತಿಯಲ್ಲಿ ನಿಮಗೇನು ಅನುಮಾನ ಬಂತು?

ವಾಲ್ಮೀಕಿ :- ಆಚಾರ್ರೆ, ಈ ವಿಷಯದಲ್ಲಿ ಕೂಡ ಚರ್ಚೆಯು ಬೇಕಾದಷ್ಟು ಉಂಟು. ಆದರೆ ಈ ಅನುಮಿತಿಯಿಂದ ಪ್ರಯೋಜನವೇನು?

ಆಚಾರ್ರು :- ಪ್ರಯೋಜನವೆ? ನಾಸ್ತಿಕಮತಕ್ಕೆ ಇದೇ ದೊಡ್ಡ ಕೊಡಲಿಯಲ್ಲವೆ? ಕಾರ್ಯರೂಪವಾದ ಪ್ರಪಂಚಕ್ಕೆ ಕರ್ತನು ಇದ್ದೇ ಇರಬೇಕು ಎಂಬ ಈಶ್ವರಸಿದ್ಧಿ ಯುಂಟಾಗುವದಕ್ಕೆ ನ್ಯಾಯಾಂತರವುಂಟೆ?

ವಾಲ್ಮೀಕಿ :- ಹಾಗಾದರೆ ನೀವು ಈ ಅನುಮಿತಿಯ ಯೋಗ್ಯತೆಯನ್ನು ಸರಿಯಾಗಿ ನಿಶ್ಚಯಿಸಲಿಲ್ಲವೆಂದು ತೋರುತ್ತದೆ.

ನಾರಣಾಚಾರ್ರು :- ಅದು ಹ್ಯಾಗೆ? ಪರಲೋಕ, ಪುಣ್ಯಾಪುಣ್ಯ, ದೈವಭಕ್ತಿ, ವೇದ, ಕರ್ಮಾನುಷ್ಠಾನ- ಇವುಗಳಿಗೆಲ್ಲ ಆಧಾರವಾದ ಈ ಅನುಮಿತಿಯ ಯೋಗ್ಯತೆ ನನಗೆ ತಿಳಿಯದೆ ಹೋಯಿತೆ? ಚೆನ್ನಪ್ಪಶೆಟ್ಟರೆ, ಇವರ ಮಾತು ಕೇಳಿದಿರಾ? ಈ ಲೋಕವನ್ನು ಸೃಷ್ಟಿಮಾಡಿದ ದೇವರಲ್ಲಿಯೂ ಧರ್ಮಾಧರ್ಮಗಳಲ್ಲಿಯೂ ಇವರಿಗೆ ಅನುಮಾನ ಬಂದಿದೆಯಂತೆ! ಇವರ ಶಾಸ್ತ್ರನೈಪುಣ್ಯವನ್ನು ಏನೆಂದು ಬಣ್ಣಿಸಬೇಕು !

ಚೆನ್ನಪ್ಪ:- ಅದು ಹ್ಯಾಗಾದೀತು? ದೇವರಿಲ್ಲದೆ ಪ್ರಪಂಚವುಂಟಾದೀತೇ? ಇದೇನು ಮಾತು !

ತಿಪ್ಪಯ್ಯ :- ಅಲ್ಲ ಸ್ವಾಮಿ, ಪೈರಿಲ್ಲದೆ ರಾಗೀಕಾಳಾದೀತೆ? ದೊರೆಯಿಲ್ಲದೆ ರಾಜ್ಯ ಬಾಳೀತೆ? ಶಾಸ್ತ್ರಿಗಳು ಒಳ್ಳೇಮಾತು ಅಪ್ಪಣೆಕೊಟ್ಟರು ! ಮೊನ್ನೆ ತಾಲ್ಲೂಕು ಕಾನ್ಫರೆನ್ಸು ಆಯಿತೆ, ಅಮಲದಾರ್ರೂ ಶೇಕದಾರ್ರೂ ಇಲ್ಲದಿದ್ದರೆ ಆ ರೈತರಿಂದ ಒಂದು ಬಿಡಿಕಾಸು

ಹೊರಟೀತೆ? ಕಾಫಿಯಂತೆ, ಟೀಯಂತೆ, ಬೆಂಗಳೂರು ಹಣ್ಣುಗಳಂತೆ, ಗಂಗಾಪಾಣಿ ಎಳನೀರಂತೆ- ಇವುಗಳನ್ನೆಲ್ಲ ಯಾವ ಮುಂಡೇಮಗನು ಒದಗಿಸಿಯಾನು?

**ವಾಲ್ಮೀಕಿ** :- ನಿಜವೇ ಅಪ್ಪ, ನೀವೆಲ್ಲಾ ಹೇಳುವದು. ನನಗೂ ರವಷ್ಟು ಮಟ್ಟಿಗೆ ಸರ್ಕಾರದ ಆಡಳಿತೆಯು ತಿಳಿಯುವದು. ಶ್ರೀರಾಮನ ಹಾಗೆ ರಾಜನಿಲ್ಲದಿದ್ದರೆ ಪ್ರಜೆಗಳು ಹೇಗೆ ಸುಖಪಟ್ಟಾರು? ಆದರೆ ನಾರಣಾಚಾರ್ರ್ರೂ ನಾನೂ ಚರ್ಚಿಸಿದ ವಿಷಯ ಬೇರೆ. ಪ್ರಪಂಚವೆಂದರೆ ಕಾಲ, ದೇಶ, ಕಾರ್ಯಕಾರಣಸಂಬಂಧ ಇವುಗಳನ್ನೂ ಅಡಗಿಸಿಕೊಂಡಿರುವದಲ್ಲವೆ? ಒಂದು ಕಾರ್ಯವನ್ನು ನೋಡಿ ಅದಕ್ಕೆ ಒಂದು ಕಾರಣವನ್ನು ಕಲ್ಪಿಸುತ್ತೇವಷ್ಟೇ; ಆದರೆ ಈ ಕಾರ್ಯಕಾರಣಗಳೆರಡೂ ಪ್ರಪಂಚದಲ್ಲಿ ಅಡಗಿವೆಯೇ ಹೊರತು ಪ್ರಪಂಚವನ್ನು ಮೀರಿರುವದಿಲ್ಲ. ಹೀಗೆ ಕಾರ್ಯಕಾರಣ ಸಂಬಂಧವನ್ನು ಅಥವಾ ದೇಶಕಾಲ ಸಂಬಂಧಗಳನ್ನು ನಾವು ಕಲ್ಪಿಸುವಾಗಲೆಲ್ಲಾ ಪ್ರಪಂಚದ ಒಳಗೇ ವ್ಯವಹರಿಸುತ್ತೇವೆ. ಅದುವರೆಗೂ ನಮ್ಮ ವ್ಯವಹಾರವು ಸಾಗುವದಕ್ಕೆ ಪ್ರತ್ಯಕ್ಷಾನುಮಾನಗಳು ಪ್ರಯೋಜನಕರವಾಗಿವೆ. ಆದರೆ ಪ್ರಪಂಚವನ್ನೆಲ್ಲ ಕಾರ್ಯವಾಗಿ ತಿಳಿದು ಅದಕ್ಕೆ ಕಾರಣವನ್ನು ಅಥವಾ ಕರ್ತನನ್ನು ಕಲ್ಪಿಸುವದು ಮನುಷ್ಯನಬುದ್ಧಿಗೂ ಅನುಭವಕ್ಕೂ ಅತೀತವಾಗುವದು. ಯಾವಾಗ ಕಾರ್ಯ ಕಾರಣ ಸಂಬಂಧವಿರುವದೋ ಆಗ ಕಾಲದೇಶ ಸಂಬಂಧಗಳೂ ಇರಲೇಬೇಕು. ಈ ಸಂಬಂಧ ತ್ರಯವೂ ಯಾವಾಗ ಸಿದ್ಧವಾಯಿತೋ ಆಗ ಪ್ರಪಂಚತ್ವವೂ ಸಿದ್ಧವಾದಂತೆಯೇ ಆಯಿತು. ಈ ಮಾರ್ಗದಲ್ಲಿ ಪ್ರಪಂಚದಿಂದ ದೇವರಿಗೂ ಧರ್ಮಾ ಧರ್ಮಗಳಿಗೂ ಹಾರುವ ಶಕ್ತಿ ಹೇಗೆ ಬರುವದೋ ತಿಳಿಯದು. ಕುರುಡನಾದವನು ಇದ್ದ ಕಡೆಯೇ ಇದ್ದುಕೊಂಡು ಪಾದವಿನ್ಯಾಸಗಳನ್ನು ಮಾಡುತ್ತಾ ''ನಾನು ಈಗ ಎರಡುಮೈಲಿ ನಡೆದೆ, ಪೇಟೆಯಲ್ಲಿ ಸುತ್ತಿದೆ'' ಎಂದು ತಿಳಿದು ಕೊಂಡರೆ ಎಷ್ಟರಮಟ್ಟಿಗೆ ನಿಜವಾಗಿರುವದೋ, ಅಥವಾ ಬಾಲಕರು ರಾತ್ರಿಯಲ್ಲಿ ಚಂದ್ರನನ್ನು ನೋಡಿಕೊಂಡು ಓಡುತ್ತಾ ಚಂದ್ರನು ತಮ್ಮೊಡನೆ ಓಡಿಬರುತ್ತಾ ಇದ್ದಾನೆಂದು ಆಡಿಕೊಳ್ಳುವದು ಎಷ್ಟರ ಮಟ್ಟಿಗೆ ನಿಜ ವಾಗಿರುವದೋ, ಗಾಢಾ ಲೋಚನೆ ಮಾಡದೆ ಪ್ರಪಂಚಕ್ಕೂ ಈಶ್ವರನಿಗೂ ಕಾರ್ಯಕಾರಣ ಸಂಬಂಧವನ್ನು ಕಲ್ಪಿಸಿಕೊಂಡು ಈಶ್ವರಸಿದ್ಧಿ ಮಾಡಿದೆವು ಎಂಬ ಪಂಡಿತರ ಮಾತೂ ಅಷ್ಟೇ ಬೆಲೆಯುಳ್ಳದ್ದಾಗಿರುವದು.

**ನಾರಣಾಚಾರ್ರು** :- ಈಗ ಸರಿಯಾಗಿ ಹೋಯಿತು, ಶಾಸ್ತ್ರಿಗಳೇ, ದೇವರ ಇರುವಿಕೆಯಲ್ಲಿಯೇ ಅನುಮಾನವುಳ್ಳ ನಿಮ್ಮ ಪಾಂಡಿತ್ಯವನ್ನು ಎಷ್ಟು ಕೊಂಡಾಡಿದರೂ ತೀರದು. ನೀವು ಪ್ರಚ್ಛನ್ನಬೌದ್ಧರೇ ಎಂದು ನಾನು ನಿರ್ಣಯಿಸುವೆನು. ಅಲ್ಲದಿದ್ದರೆ, ಈ ವಯಸ್ಸಿಗೆ ಇಷ್ಟು ನಾಸ್ತಿಕ್ಯ ಎಲ್ಲಿಂದ ಬಂದೀತು? ಇಂಥವರ ದರ್ಶನವೇ ಸರ್ವಥಾ ವರ್ಜನೀಯ. ಈ ಹಾಳು ರೈಲಿನಿಂದ ಎಂಥೆಂಥ ಸಂಭವಗಳುಂಟಾಗುತ್ತವೆ ! ಕೃಷ್ಣ, ಕೃಷ್ಣ !

**ವಾಲ್ಮೀಕಿ** :- ಇಷ್ಟು ಆಯಾಸ ಯಾಕೆ ಪಡುತ್ತೀರಿ ! ನಾನೇನೂ ನಾಸ್ತಿಕನಲ್ಲ, ಆದರೆ ದೇವರು ಒಬ್ಬನು ಇರುವಲ್ಲಿ, ನಾಸ್ತಿಕನನ್ನು ಕೂಡ ಅವನು ಪೋಷಿಸುತ್ತಾನಲ್ಲವೆ? ದೇವರಿಗೇ ಅಷ್ಟು ಸಹನೆಯಿದ್ದರೆ ತಮಗೆ ಇಷ್ಟು ಉದ್ವೇಗವುಂಟಾಗುವದು ಶೋಚನೀಯವು. ಕೇವಲ ಅನುಮಿತಿಯಿಂದ ಈಶ್ವರಸಿದ್ಧಿಯಾಗಲಿ, ಬ್ರಹ್ಮಸಿದ್ಧಿಯಾಗಲಿ, ಆತ್ಮಸಿದ್ಧಿಯಾಗಲಿ; ಧರ್ಮಾಧರ್ಮಸಿದ್ಧಿಯಾಗಲಿ ಆಗುವದಿಲ್ಲವೆಂದು ಶಾಸ್ತ್ರಗಳೇ ಮೊರೆಯಿಡುತ್ತವೆ. ಇಲ್ಲದಿದ್ದರೆ ಸಾಕ್ಷಾತ್ಸತ್ಯ ವತೀಸುತನಾದ ವ್ಯಾಸದೇವನಿಂದ ರಚಿತವಾಗಿ ಪರಮಾರ್ಥಗರ್ಭಿತವಾದ ''ಶಾಸ್ತ್ರಯೋನಿತ್ವಾತ್'' (ಏಕೆಂದರೆ ಆ ಬ್ರಹ್ಮಕ್ಕೆ ಶಾಸ್ತ್ರವೇ ಪ್ರಮಾಣವು) ಎಂಬ ಸೂತ್ರಕ್ಕೆ ಆನರ್ಥಕ್ಯ ಬಂದೀತು.

**ನಾರಣಾಚಾರ್ರು** :- ಇದು ಬೇಕಾದರೆ ಒಪ್ಪಿದೆನು. ಅಂತೂ ನೀವು ನಾಸ್ತಿಕರಲ್ಲ, ಜಗತ್ಕರ್ತನು ಒಬ್ಬನು ಇದ್ದಾನೆ, ಧರ್ಮಾಧರ್ಮವ್ಯವಸ್ಥೆಯು ಉಂಟು - ಎಂಬುವ ಅಂಶಗಳನ್ನು ಒಪ್ಪಿಕೊಂಡಿರಲ್ಲ! ದೈವಾಧೀನ! ವೆಂಕಟೇಶಮೂರ್ತಿಯೇ ಬದುಕಿಸಿದನಪ್ಪ! ಶೆಟ್ಟರೆ, ಕೇಳಿದಿರಾ? ''ಅವರ ಮಾತು ಸುಳ್ಳು, ನನ್ನ ಮಾತು ನಿಜ; ಅಂತೂ ಅವರ ಮಾತಿನಲ್ಲಿಯೇ ನನಗೆ ನಂಬಿಕೆ'' ಎಂದ ಹಾಗೆ, ನಾನು ಹೇಳಿದ್ದು ಸರಿಯಲ್ಲವಂತೆ, ದೇವರು ಉಂಟಂತೆ! ಇಂಥವರಲ್ಲವೇ ಈ ಕಾಲದಲ್ಲಿ ಪಂಡಿತರು ಅನ್ನಿಸಿಕೊಳ್ಳುವರು. ಕೇವಲ ವಾದಪರರೇ ಹೊರತು ಸತ್ಯಪರರಲ್ಲ.

**ಚೆನ್ನಪ್ಪ** :- ಸ್ವಾಮಿ, ನಿಮ್ಮ ಶಾಸ್ತ್ರ ವಿವಾದಗಳು ನಮಗೆ ತಿಳಿಯುವ ಹಾಗಿಲ್ಲ, ಅಂತೂ ನಾರಣಾಚಾರ್ರು ಪ್ರಪಂಚಕರ್ತನು ಒಬ್ಬನು ಇದ್ದಾನೆ. ಎಂದು ಅಪ್ಪಣೆಕೊಟ್ಟರು. ವಾಲ್ಮೀಕಿಶಾಸ್ತ್ರಿಗಳು ಕೂಡ ಅದನ್ನು ಒಪ್ಪಿದ ಹಾಗೆ ತೋರುತ್ತದೆ. ಆಚಾರ್ರು ಹೇಳಿದ ಯುಕ್ತಿ ನಮಗೆ ಸ್ವಲ್ಪಮಟ್ಟಿಗೆ ಗೊತ್ತಾಯಿತು. ಆದರೆ ಈ ಶಾಸ್ತ್ರಿಗಳು ಯಾವ ರೀತಿಯಲ್ಲಿ ಅದೇ ವಿಷಯವನ್ನು ಸ್ಥಾಪಿಸುವರೋ ತಿಳಿಯಲಿಲ್ಲ, ಇನ್ನೂ ಮೈಸೂರಿಗೆ ಮೂರುನಾಲ್ಕು ಸ್ಟೇಷನ್ನುಗಳಿರುವದರಿಂದ ಶಾಸ್ತ್ರಿಗಳು ತಮ್ಮ ಪ್ರಮಾಣವನ್ನು ತಿಳಿಸಿದರೆ ಉಪಕಾರವಾಗಿರುವದು.

ಸರ್ವರೂ :- ಆಗಬಹುದು, ಆಗಬಹುದು.

ಇಷ್ಟರಲ್ಲಿ ಕ್ಲೋಸ್‌ಪೇಟೆ ಸ್ಟೇಷನ್ ಬಂತು. ರೈಲುಗಾಡಿ ನಿಂತ ಕೂಡಲೇ ''ವಾಲ್ಮೀಕಿ ಶಾಸ್ತ್ರಿಗಳೇ!'' ಎಂದು ಗಾಡಿಗಾಡಿಗೂ ಕೂಗಿಕೊಂಡು ಕಡೆಗೆ ನಮ್ಮ ಗಾಡಿಯ ಹತ್ತಿರಕ್ಕೆ ಒಬ್ಬ ದೊಡ್ಡಮನುಷ್ಯರು ಬಂದರು. ವಿಚಾರಿಸಿದ್ದರಲ್ಲಿ ಅವರು ಅಸಿಸ್ಟೆಂಟ್ ಕಮೀಷನರ್ ಮ॥ರಾ॥ವೆಂಕೋಬರಾಯರೆಂದು ತಿಳಿಯಬಂತು. ಅವರು ನಮ್ಮ ಗಾಡಿಯಲ್ಲಿದ್ದ ಶಾಸ್ತ್ರಿಗಳನ್ನು ನೋಡಿ ''ನಮಸ್ಕಾರ ಸ್ವಾಮಿ, ನಮ್ಮ ಮಗನಿಗೆ ನಾಳೆಯದಿನ ಪಶ್ಚಿಮವಾಹಿನಿಯಲ್ಲಿ ವಿವಾಹಮಹೋತ್ಸವ ಬೆಳೆಸಲು ಉದ್ಯುಕ್ತನಾಗಿ ಮನೆಯವರನ್ನೆಲ್ಲಾ ಅಲ್ಲಿಗೆ ಕಳುಹಿಸಿದ್ದೇನೆ. ತಮಗೆ ಲಗ್ನಪತ್ರಿಕೆಯನ್ನು ಮೈಸೂರಿಗೆ ಕಳುಹಿಸಿದೆನು. ಆದರೆ ಅಲ್ಲಿಂದ ನಮ್ಮ ಉಭಯಮಿತ್ರರಾದ ನಂಜುಂಡಯ್ಯನವರು ತಾವು ಈ ಹೊತ್ತು ಹೊರಟು ಮೈಸೂರಿಗೆ ಬರುವದಾಗಿ ಉತ್ತರಕೊಟ್ಟರು. ಅದರಿಂದಲೇ ನಾನು ತಮ್ಮ ಸಂದರ್ಶನಕ್ಕೋಸ್ಕರ ಇಲ್ಲಿಗೆ ಬಂದೆನು. ಯಾವ ಅಭ್ಯಂತರವನ್ನೂ ಹೇಳದೆ ನೇರಾಗಿ ಪಶ್ಚಿಮವಾಹಿನಿಯಲ್ಲಿ ಇಳಿದು ಮದುವೆಯನ್ನು ನಡೆಸಿಕೊಟ್ಟು ವಧೂವರರನ್ನು ಆಶೀರ್ವದಿಸಿ ಮುಂದಕ್ಕೆ ಪ್ರಯಾಣಮಾಡಬೇಕೆಂದು ಬೇಡುತ್ತೇನೆ. ನನ್ನ ಅಳಿಯ ಬ್ಯಾರಿಸ್ಟರು ಜಯರಾವ್ ಪಶ್ಚಿಮವಾಹಿನಿಯ ಸ್ಟೇಷನ್ನಿನಲ್ಲಿ ಕಾದಿದ್ದು ತಮ್ಮನ್ನು ನಾವು ಇಳಿದುಕೊಂಡಿರುವಲ್ಲಿಗೆ ಕರೆದುಕೊಂಡು ಹೋಗುವನು. ನನ್ನ ಅಭೀಷ್ಟವನ್ನು ನೆರವೇರಿಸುವ ಹಾಗೆ ಭರವಸೆಕೊಡಬೇಕು'' ಎಂದು ಕೇಳಿಕೊಂಡರು.

ಆಗ ಚೆನ್ನಪ್ಪಶೆಟ್ಟರು, ಶ್ಯಾನುಭೋಗರು ಇಬ್ಬರೂ ''ನಾವೂ ಕಾರ್ಯಾಂತರ ವಾಗಿ ಅಲ್ಲಿಯೇ ಇಳಿಯುತ್ತೇವೆ. ಆದ್ದರಿಂದ ತಾವೂ ಅಲ್ಲಿ ನಿಲ್ಲುವ ಪಕ್ಷಕ್ಕೆ ಬಂದು ನಮ್ಮ ಪರಿಚಯವನ್ನು ವೃದ್ಧಿಮಾಡಿಕೊಳ್ಳುವದಕ್ಕೆ ನಮಗೆ ಅವಕಾಶ ದೊರೆಯುವದು. ರಾಯರು ಹೇಳಿದ ಹಾಗೆಯೇ ಅನುಗ್ರಹಿಸಬೇಕು'' ಎಂದು ಕೇಳಿಕೊಂಡರು. ನಾರಣಾಚಾರ್ರೂ ಶ್ರೀರಂಗಪಟ್ಟಣದಲ್ಲಿ ಇಳಿಯುವವರಾದ್ದರಿಂದ ಅವರೂ ಕೂಡ ''ಶಾಸ್ತ್ರಿಗಳೇ, ತಮ್ಮದು ಹೊಸ ಪರಿಚಯ. ಆದಾಗ್ಯೂ ತಮ್ಮ ಸಂಗಡ ಹೆಚ್ಚಾಗಿ ಸಂಭಾಷಣೆ ಮಾಡಬೇಕೆಂಬ ಕೋರಿಕೆ ನನಗೂ ಉಂಟಾದ್ದರಿಂದ ತಾವು ಪಶ್ಚಿಮ ವಾಹಿನಿಯಲ್ಲಿ ಇಳಿದರೆ ಅಲ್ಲಿ ಇಬ್ಬರೂ ಸೇರುವದಕ್ಕೆ ಅನುಕೂಲವಾಗಿರುವದು. ಹಾಗೆಯೇ ಮನಸ್ಸು ಮಾಡಿ'' ಎಂದರು.

ಇವರನ್ನೆಲ್ಲಾ ನೋಡಿ ವೆಂಕೋಬರಾಯರೂ ''ಸ್ವಾಮಿ, ತಮ್ಮಗಳ ಪರಿಚಯವು ನನಗೆ ಇಲ್ಲ, ಆದರೂ ತಾವುಗಳೆಲ್ಲ ಅವಶ್ಯವಾಗಿ ಶುಕ್ರವಾರದ ನಾಳೆಯದಿನ ಹತ್ತುಗಂಟೆಗೆ ಪಶ್ಚಿಮವಾಹಿನೀ ಛತ್ರದಲ್ಲಿ ನಡೆಯುವ ನಮ್ಮ ಮಗನ ವಿವಾಹಕ್ಕೆ ದಯಮಾಡಿಸಿ ತಾಂಬೂಲಪರಿಗ್ರಹಿಸಬೇಕು'' ಎಂದು ಪ್ರಾರ್ಥಿಸಿದರು.

ವಾಲ್ಮೀಕಿಶಾಸ್ತ್ರಿಗಳು :- ರಾಯರೆ, ನಮಗೆ ಮೈಸೂರೇನು, ಮತ್ತೊಂದೇನು? ''ವಯಿರೇ ವೈಕುಂಠ, ಕಡುಪೇ ಕೈಲಾಸ'' ಎಂಬ ರೀತಿಯಿಂದ ಉದರಭರಣವೇ ಮುಖ್ಯಕಾರ್ಯವಾಗಿ ತಿರುಗುತ್ತಾ ಇರುವ ನನಗೆ ಪಶ್ಚಿಮವಾಹಿನಿಯಲ್ಲಿ ಇಳಿದು ತಮ್ಮ ಮನೆಯ ವಿವಾಹವನ್ನು ನೋಡಿ ನೇತ್ರಾನಂದ ಪಡೆಯುವದಕ್ಕಿಂತ ಬೇರೆ ಏನು ಮಹತ್ಕಾರ್ಯಮಾಡಬೇಕಾಗಿದ್ದದೆ? ಇದೂ ಅಲ್ಲದೆ, ಈ ನೆಪದಿಂದ ಕಾವೇರಿಸ್ನಾನವೂ ಮಹನೀಯರ ಸಂದರ್ಶನವೂ ಸಿಕ್ಕುವದಲ್ಲದೆ? ಅವಶ್ಯವಾಗಿ ತಮ್ಮ ಅಪ್ಪಣೆ ಪ್ರಕಾರವೇ ನಡೆಯುವೆನು'' ಎಂದರು. ಆಗ ವೆಂಕೋಬರಾಯರು ''ಶಾಸ್ತ್ರಿಗಳೇ, ಪರಮಸಂತೋಷವಾಯಿತು''ಎಂದು ಹೇಳುತ್ತಿರುವಲ್ಲಿ ಗಾಡಿಯು ಹೊರಟಿತು. ಶ್ರೀರಂಗಪಟ್ಟಣದ ಸ್ಟೇಷನ್ ಬರಲು ನಾರಣಾಚಾರ್ರು ಇಳಿದು ''ಶಾಸ್ತ್ರಿಗಳೇ, ತಮ್ಮನ್ನ ಮತ್ತೆ ಬಂದು ನೋಡುವೆನು'' ಎಂದು ಹೇಳುತ್ತಾ ಹೊರಟುಹೋದರು. ಪಶ್ಚಿಮ ವಾಹಿನಿಯಲ್ಲಿ ಗಾಡಿ ನಿಲ್ಲಲು ಜಯರಾಯರು ಗಾಡಿಗಾಡಿಗೆ ''ವಾಲ್ಮೀಕಿ ಶಾಸ್ತ್ರಿಗಳೇ!'' ಎಂದು ಕೂಗುತ್ತ ನಾವಿದ್ದ ಗಾಡಿಯಲ್ಲಿ ಶಾಸ್ತ್ರಿಗಳನ್ನು ಕಂಡು ಅವರನ್ನು ಬರಮಾಡಿಕೊಂಡರು. ಶೆಟ್ಟರೂ ಶ್ಯಾನುಭೋಗರೂ ಅಲ್ಲಿಯೇ ಇಳಿದರು. ಇದನ್ನೆಲ್ಲಾ ನೋಡುತ್ತಿದ್ದ ನಾನೂ ಇಳಿದು, ಮುಂದೆ ನಡೆಯುವದನ್ನು ನೋಡಬೇಕೆಂಬ ಕುತೂಹಲದಿಂದ ಮರುದಿನ ಹನ್ನೆರಡು ಗಂಟೆಯ ಹೊತ್ತಿಗೆ ನದೀ ತೀರದಲ್ಲಿ ನೆರಳಲ್ಲಿ ಜಮಖಾನದ ಮೇಲೆ ಕೂತಿದ್ದ ಜನಗಳನ್ನು ಕಂಡು ಸಮೀಪಿಸಲು ಅವರ ಮಧ್ಯದಲ್ಲಿ ವೆಂಕೋಬರಾಯರು, ವಾಲ್ಮೀಕಿಶಾಸ್ತ್ರಿಗಳು ಮುಂತಾದ ನಮ್ಮ ಹಿಂದಿನ ಪರಿಚಿತರೆಲ್ಲರೂ ಸೇರಿದ್ದದ್ದು ಕಾಣಿಸಿತು. ಮದುವೆಯ ಮನೆಗೂ ಮಠಕ್ಕೂ ದೇವಾಲಯಕ್ಕೂ ಯಾವ ಔತಣ ವಿಲ್ಲದೆಯೇ ನುಗ್ಗುವದು ಸ್ವಭಾವವಾದ್ದರಿಂದಲೂ ನದಿಯ ತೀರದಲ್ಲಿ ಯಾರ ಅಂಕೆಯೂ ಇಲ್ಲದೆ ಇದ್ದದ್ದರಿಂದಲೂ ಸಭೆಯಲ್ಲಿ ಹೋಗಿ ಸೇರಿಕೊಂಡೆನು. ಆಗ ನಾರಣಾಚಾರ್ರು ಹಿಂದಿನ ದಿನ ಚರ್ಚೆಯನ್ನು ಮತ್ತೆ ಪ್ರಾರಂಭಿಸಿ ''ಶಾಸ್ತ್ರಿಗಳೇ, ಈಶ್ವರಸಿದ್ಧಿಯ ವಿಷಯದಲ್ಲಿ ಅನುಮಾನವು ಯಾತಕ್ಕೂ ಬಾರದು ಎಂದು ಅಪ್ಪಣೆ ಕೊಟ್ಟರಷ್ಟೆ. ತಾವು ಮತ್ತೆ ಯಾವ ರೀತಿಯಲ್ಲಿ ಸಿದ್ಧಮಾಡುವಿರೋ ಅಪ್ಪಣೆ ಕೊಡಬೇಕು'' ಎಂದರು.

ಜಯರಾವ್ :- ಈಶ್ವರಸಿದ್ಧಿಯೇ? ಯಾರು ಇದುವರೆಗೂ ಮಾಡಿದ್ದು? ಎಲ್ಲಾ ಮತದವರೂ ತಮ್ಮ ತಮ್ಮ ಶಾಸ್ತ್ರಗಳನ್ನು ಇಟ್ಟುಕೊಂಡು ಅಂಧಪರಂಪರೆಯಾಗಿ ''ಈಶ್ವರನುಂಟು, ಧರ್ಮಾಧರ್ಮವ್ಯವಸ್ಥೆಯು ಅವನಿಂದಲೇ, ಪರಲೋಕದಲ್ಲಿ ನಿತ್ಯಸುಖ ನಿತ್ಯದುಃಖಗಳನ್ನು ಜೀವನು ದೇಹವನ್ನು ಬಿಟ್ಟಮೇಲೆ ಅನುಭವಿಸುವನು'' ಎಂಬುದಾಗಿ ಅವರವರ ಮೂಗಿಗೆ ನೇರಾಗಿ ಆಡಿಕೊಳ್ಳುತ್ತಾರೆ. ನಮ್ಮ ವೇದಗಳು ತಾನೇ ಏನು ಹೆಚ್ಚು? ಯಾರೋ ಒಬ್ಬನು ಬದುಕಿದ್ದವನೇ ಅಲ್ಲವೆ, ಸತ್ತಮೇಲೆ ಆಗುವ ವಿಷಯಗಳನ್ನು ಅವುಗಳಲ್ಲಿ ಬರೆದವನು? ಹೆತ್ತವರಿಗೆ ಹೆಗ್ಗಣ ಮುದ್ದು ಎನ್ನುವಂತೆ, ನಾವೂ ಹಳೆಯ ಸಂಪ್ರದಾಯಗಳನ್ನಿಟ್ಟುಕೊಂಡು ಒಬ್ಬನು ಬೂದಿಯಂತೆ, ಒಬ್ಬನು ನಾಮವಂತೆ, ಒಬ್ಬನು ಮುದ್ರೆಯಂತೆ- ಈ ರೀತಿಯಾಗಿ ವಿವಿಧ ವೇಷಾಲಂಕೃತ ರಾಗಿ ''ನಾನು ಸ್ವರ್ಗಕ್ಕೆ ಏರುವೆನು, ಮಿಕ್ಕವರು ನರಕಕ್ಕೇ ಬೀಳುವರು'' ಎಂದು ತಮ್ಮ ತಮ್ಮ ಮತದ ಸಿದ್ಧಾಂತಗಳನ್ನು ಕೊಂಡಾಡುವರು. ಯುರೋಪು ಖಂಡದಲ್ಲಿ ಸಾವಿರಾರು ಸಿದ್ಧಾಂತಗಳು, ಎಷ್ಟೋ ಮತಗಳು ಅಶ್ವತ್ಥಪ್ರದಕ್ಷಿಣೆಗೆ ಹಾಕುವಷ್ಟು ಅಸಂಖ್ಯಾತವಾಗಿರುವದು. ಹೀಗಿದ್ದಾಗ್ಯೂ ಆ ಜನಗಳು ಯಾವ ವೇಷವನ್ನೂ ಧರಿಸದೆ ಒಬ್ಬರನ್ನೊಬ್ಬರು ಹೀಯಾಳಿಸದೆ ಲೌಕಿಕಕಾರ್ಯಗಳಲ್ಲಿ ಒಗ್ಗಟ್ಟಾಗಿ ನಿಂತು ಚತುರತೆಯಿಂದ ವ್ಯವಹಾರವನ್ನು ನಡೆಸುವರು. ನಾವಾದರೋ ಪರಲೋಕದ ವಿಚಾರದಲ್ಲಿ ಭಿನ್ನಾಭಿಪ್ರಾಯಗಳನ್ನು ಕೈಕೊಂಡು ಐಹಿಕವಿಚಾರದಲ್ಲಿ ಅಭಿಜ್ಞತೆಯನ್ನ ಗಲಿ, ವ್ಯವಹಾರಶಾಸ್ತ್ರಗಳಲ್ಲಿ ಔದಾಸೀನ್ಯವನ್ನು ಹೊಂದಿ ಐಶ್ವರ್ಯ, ಬಲ, ಕೀರ್ತಿ - ಎಲ್ಲವನ್ನೂ ಕಳೆದುಕೊಂಡಿದ್ದೇವೆ. ಈಗಲೂ ನಮ್ಮ ಶಾಸ್ತ್ರ ನಮ್ಮ ದೇವತೆಗಳು ಎಂದು ಕೊಚ್ಚಿಕೊಳ್ಳುವದೇನೂ ಕಮ್ಮಿಯಾಗಲಿಲ್ಲ. ಸಾಕಪ್ಪ ಸಾಕು. ಶಾಸ್ತ್ರಿಗಳು ಏನು ಅಪ್ಪಣೆ ಕೊಡಿಸುವರೋ ಕೇಳೋಣ.

ನಾರಣಾಚಾರ್ರು :- ಇವರು ಹೇಳಿದ್ದು ಯುಕ್ತವೇ. ಇದಕ್ಕೇ ಅಲ್ಲವೆ, ಸಮುದ್ರ ಯಾನ ಮಾಡಕೂಡದು ಎಂದು ಸ್ಮೃತಿಗಳು ಮೊರೆಯಿಡುವುವು? ಸಂಗದಂತೆ ಬುದ್ಧಿಯೂ ಕೆಟ್ಟು ನಾಸ್ತಿಕ್ಯವನ್ನು ಪಡೆಯುವದಕ್ಕೆ ಈ ಬ್ಯಾರಿಸ್ಟರುಗಳು ಸಮುದ್ರ ವನ್ನು ದಾಟಬೇಕಾಗಿತ್ತೇ? ಕೆಟ್ಟುಹೋಗುವದಕ್ಕೆ ದಾರಿಗಳು ನಮ್ಮ ಸೀಮೆಯಲ್ಲಿಯೇ ಇಲ್ಲವೇ? ಕೃಷ್ಣ ! ಕೃಷ್ಣ! ಒಳ್ಳೇ ಸಾಂಗತ್ಯ ಸಿಕ್ಕಿತು! ಅದಿರಲಿ ಶಾಸ್ತ್ರಿಗಳೆ, ತಾವು ಒಂದಿಷ್ಟು ಮಾತನಾಡಿ.

ವಾಲ್ಮೀಕಿ :- ಆಚಾರ್ರೇ, ನಮಗೆ ಯಾತಕ್ಕೆ ಕೋಪ? ಬ್ಯಾರಿಸ್ಟರು ಹೇಳಿದ್ದರಲ್ಲಿ

ನ್ಯಾಯವೂ ಉಂಟು. ನಾನು ನಿನ್ನೆ ವಿಜ್ಞಾಪಿಸಿದ ಹಾಗೆ ಮನುಷ್ಯ ಯುಕ್ತಿಯಿಂದ ಈಶ್ವರಾದಿ ವಿಷಯಗಳನ್ನು ಸಿದ್ಧಮಾಡುವದಾಗಿದ್ದರೆ ಸರ್ವಥಾ ಚತುರರಾದ ಯುರೋಪು ಜನಗಳಿಗೆ ಇವು ಸಿದ್ಧವಾಗಿಯೇ ಆಗುತ್ತಿದ್ದವು. ಆದರೆ, ಕೇವಲ ಶ್ರುತಿಯಿಂದಲೂ ಆತ್ಮಾನುಭವದಿಂದಲೂ ನಿಶ್ಚಯಿಸತಕ್ಕ ವಿಷಯವು ಅವರಿಗೆ ಹೇಗೆ ಲಭಿಸೀತು? ಪ್ರಮಾಣಗಳ ವಿಷಯದಲ್ಲಿ ಹಿಂದೆ ನಾನು ಹೇಳಿದ ರೀತಿಯಿಂದ ಇದಮಿತ್ಥಂ ಎಂದು ನಿಶ್ಚಯಿಸುವದು ಅಸಾಧ್ಯ. ಪ್ರತ್ಯಕ್ಷವಾಗಿ ನೋಡುವದು ಪ್ರಮೆಯಾಗಿಯೂ ಭ್ರಮೆಯಾಗಿಯೂ ಮುಗಿಯಬಹುದು. ಹಾಗೆಯೇ ಅನುಮಾನವೂ ಸದಸದ್ರೂಪವಾಗಿರುವದು. ಶಬ್ದವೂ ಹಾಗೆಯೇ ಆದರೆ ಯಾವದು ಅನುಭವವನ್ನು ಆಶ್ರಯಿಸಿಕೊಂಡೇ ಇರುವದೋ ಅದು ಪ್ರಮೆಯನ್ನೇ ಉಂಟುಮಾಡುತ್ತದೆ: ಅದು ನಿಜವಾಗಿ ಪ್ರಮಾಣವೆನ್ನಿಸಿಕೊಳ್ಳುವದಕ್ಕೆ ಅರ್ಹವಾಗಿಯೂ ಇರುವದು. ಇವುಗಳಲ್ಲಿ ಒಂದು ಪ್ರಮಾಣದಿಂದ ಆದ ಜ್ಞಾನವು, ಮತ್ತೊಂದು ಪ್ರಮಾಣದ ಜ್ಞಾನದ ಉತ್ಪತ್ತಿಗೆ ಸಹಕಾರಿಯಾಗುವದು ಹೇಗೆಂದರೆ, ''ಕೆರೆಯಲ್ಲಿ ನೀರಿದೆ'' ಎಂಬ ಶಬ್ದವನ್ನು ಕೇಳಿ ಕೆರೆಯಲ್ಲಿ ನೀರಿರುವದನ್ನು ನೋಡಿದರೆ, ಆಗ ಶಬ್ದಜನ್ಯಜ್ಞಾನವು ಪ್ರತ್ಯಕ್ಷಜ್ಞಾನಕ್ಕೆ ಸಹಕಾರಿಯಾಯಿತು. ಹೀಗೆಯೇ ಶಬ್ದ ಪ್ರಮಾಣವು ಅನುಮಾನಪ್ರಮಾಣಕ್ಕೂ ಸಹಕಾರಿಯಾಗುವದು. ಆತ್ಮನಿರ್ಣಯಕ್ಕೂ ಸಹಕಾರಿಯಾಗುವದು. ಇಲ್ಲಿ ರೂಪಾದಿಗಳು ಕೇವಲ ಪ್ರತ್ಯಕ್ಷ ವಿಷಯ ಮತ್ತೊಬ್ಬನ ಸುಖದುಃಖ ಮೊದಲಾದ ಜ್ಞಾನವು ಕೇವಲ ಅನುಮಾನದಿಂದುಂಟಾಗತಕ್ಕದ್ದು. ಪರಲೋಕವೇ ಮುಂತಾದದ್ದು ಕೇವಲ ಶಬ್ದಪ್ರಮಾಣಕ್ಕೆ ವಿಷಯವಾಗಿರುವದು. ಕೊನೆಯ ಎರಡೂ ತನ್ನ ಅನುಭವಕ್ಕೆ ಬರುವವಲ್ಲ; ಆದ್ದರಿಂದ ಇವು ಚರ್ಚೆಯ ವಿಷಯವಲ್ಲ; ಆದರೆ ಆಗಮ ವಿಷಯವಾಗಿರುವ ಯಾವದು ತನ್ನ ಅನುಭವದಲ್ಲಿ ಪರ್ಯವಸಾನವನ್ನು ಹೊಂದುವದೋ ಅದು ಯಾರ ಪ್ರಮಾಣದಿಂದಲೂ ಖಂಡಿಸಲ್ಪಡದು. ಈ ಕಾರಣದಿಂದಲೇ ಮ॥ರಾ॥ ಜಯರಾಯರು ಅಪ್ಪಣೆ ಕೊಟ್ಟಂತೆ ಇತರ ಮತಗಳು ತಮ್ಮ ತಮ್ಮ ಶಾಸ್ತ್ರಾನುಸಾರವಾಗಿ ನಮ್ಮ ಅನುಭವಕ್ಕೆ ಬಾರದಂಥ ಪರಲೋಕಾದಿಗಳನ್ನು ಎಷ್ಟು ವಿಜೃಂಭಣೆಯಿಂದ ವರ್ಣಿಸಿರುತ್ತವೆಯಾದರೂ ನಮ್ಮ ಶ್ರುತಿವಾಕ್ಯಗಳಿಗೆ ಇರುವಂಥ ಪ್ರಾಮಾಣ್ಯವು ಅವುಗಳಿಗೆ ಎಂದಿಗೂ ಬರಲಾರದು. ಶ್ರುತಿಗಳಲ್ಲಿ ಕರ್ಮಕಾಂಡವೇನೋ ದೇಹಪಾತಾನಂತರ ಉಂಟಾಗುವ ವಿಷಯಗಳನ್ನು ವರ್ಣಿಸುತ್ತದೆ. ಆದರೂ ಜ್ಞಾನಕಾಂಡವು ಬ್ರಹ್ಮಾತ್ಮೈಕ್ಯವನ್ನು ಹೇಳುವದಾದ್ದರಿಂದಲೂ ಇದು ನಮ್ಮ ಅನುಭವದಿಂದ ನಿಶ್ಚಯಮಾಡಲ್ಪಡುವದಾದ್ದರಿಂದಲೂ ಅನುಭವ

ವನ್ನನುಸರಿಸಿ ಶ್ರುತಿಯೂ ಶ್ರುತಿಯನ್ನನುಸರಿಸಿ ಅನುಭವವೂ ಇರುವದರಿಂದ ನಮ್ಮ ಶ್ರುತಿಗಳಿಗೆ ಪ್ರಾಮಾಣ್ಯವು ಸಿದ್ಧವೇ ಆಯಿತು. ಮತ್ತು ಆತ್ಮೈಕ್ಯವನ್ನು ಬೋಧಿಸತಕ್ಕ ನಮ್ಮ ಶ್ರುತಿಯೂ ಆತ್ಮಾತಿರಿಕ್ತವಾಗಿ ಇರಕೂಡದಾದ್ದರಿಂದಲೇ ಯಾವ ಆತ್ಮನನ್ನು ನಾನು ಎಂಬುದಾಗಿ ವ್ಯವಹರಿಸುತ್ತೇವೆಯೋ ಆ ಆತ್ಮನೇ ಶ್ರುತಿಯೆಂಬುದಾಗಿ ವ್ಯವಹರಿಸ -ಲ್ಪಡುವದೆನ್ನಬೇಕು. ಈ ಎರಡಕ್ಕೂ ಇರುವ ಐಕ್ಯವೇ ಶ್ರುತಿಪ್ರಾಮಾಣ್ಯಕ್ಕೆ ಅಪ್ರತಿಹತ ವಾದ ನ್ಯಾಯವಾಗಿರುವದು.

ನಾರಣಾಚಾರ್ರು :- ಸಾಕು ಸ್ವಾಮಿ, ಅಲ್ಲಿ ರವಷ್ಟು ನಿಲ್ಲಿಸಿ. ಏನು ಶ್ರುತಿಯನ್ನೆಲ್ಲಾ ಅದ್ವೈತಕ್ಕೆ ತಿರುಗಿಸಿಕೊಂಡುಬಿಟ್ಟಿರೋ? ಅದೂ ಹಾಗಿರಲಿ, ಆತ್ಮನೇ ಶ್ರುತಿರೂಪ ವಾಗಿದೆ ಎಂತ ಕಲ್ಪಿಸಿದಿರಷ್ಟೆ; ಇತರ ಮತಗಳ ಶಾಸ್ತ್ರಗಳು ಏನು ಪಾಪ ಮಾಡಿದವು? ಅವುಗಳೂ ಆತ್ಮಸ್ವರೂಪವಲ್ಲವೆ? ನಿಮ್ಮ ಅದ್ವೈತ ಠಕ್ಕಿನಿಂದ ಶ್ರುತಿ ಪ್ರಾಮಾಣ್ಯವನ್ನು ಸಿದ್ಧಮಾಡಿದೆನು ಎಂದು ನೀವು ತಿಳಿದುಕೊಂಡದ್ದು ಭ್ರಾಂತಿಯೇ ಆಗುವದು. ಬಿಡಿ ಬಿಡಿ; ಇದನ್ನು ಯಾರು ಒಪ್ಪಿಯಾರು?

ವಾಲ್ಮೀಕಿ :- ನಾನು ಠಕ್ಕೇನೂ ಮಾಡಲಿಲ್ಲ, ಆಚಾರ್ರೇ, ಆತ್ಮೈಕ್ಯದೃಷ್ಟಿಯಿಂದ ಶ್ರುತಿಪ್ರಾಮಾಣ್ಯವು ಸಿದ್ಧಿಸುವದೇ ಹೊರತು ಬೇರೆ ಬೇರೆ ರೀತಿಯಿಂದ ಅದು ಸಾಗುವದಲ್ಲ. ಇತರ ಶಾಸ್ತ್ರಗಳೂ ಕೂಡ ಆತ್ಮಸ್ವರೂಪವೇ ಎನ್ನುವದರಲ್ಲಿ ಸಂದೇಹ ವೇನೂ ಇಲ್ಲ. ಆದರೆ ಸರ್ವವೂ ಆತ್ಮಸ್ವರೂಪವಾಗಿದ್ದರೂ ವ್ಯವಹಾರ ದಲ್ಲಿ ನೀರಡಿಕೆಯುಳ್ಳವನು ದಾಹಶಾಂತಿಗೆ ನೀರನ್ನು ಹುಡುಕುವಂತೆ ಮತ್ತೆ ಯಾವದನ್ನೂ ಹುಡುಕುವದಿಲ್ಲ. ಘಟದಿಂದ ಆಗುವ ಕಾರ್ಯ ಪಟದಿಂದ ಆದೀತೆ? ನೀರನ್ನು ತರಬೇಕಾದರೆ ಗಡಿಗೆಯನ್ನು ಉಪಯೋಗಿಸುತ್ತಾರೆಯೇ ಹೊರತು ಜಲ್ಲಡಿಯನ್ನು ಉಪಯೋಗಿಸುತ್ತಾರೆಯೇ? ಆದ್ದರಿಂದ ಎಲ್ಲಾ ಶಾಸ್ತ್ರಗಳಿಗಿಂತಲೂ ನಮ್ಮ ವೇದಶಾಸ್ತ್ರವು ಈ ರೀತಿಯಲ್ಲಿ ವಿಲಕ್ಷಣವಾಗಿರುವದು. ಆತ್ಮಸಿದ್ಧಿ ಮಾಡುವದಕ್ಕೆ ವೇದೋಕ್ತಮಾರ್ಗವು ಸಾಧಕವಾದೀತೆ ಹೊರತು ಬೇರೆ ಮತಗಳ ಶಾಸ್ತ್ರಗಳು ಉಪಯೋಗವಾಗುವದಿಲ್ಲ. ನಮ್ಮ ಶ್ರುತಿಗಳ ವೈಲಕ್ಷಣ್ಯವನ್ನು ಇನ್ನೂ ನಿಧಾನವಾಗಿ ವಿಚಾರಿಸಿ ತಿಳಿಯ ಬೇಕಾಗಿರುವದು.

ತಿಪ್ಪಯ್ಯ :- ಶಾಸ್ತ್ರಿಗಳೇ, ಎಲ್ಲವೂ ಆತ್ಮನೇ, ಬ್ರಹ್ಮನೇ ಎಂದು ಅಪ್ಪಣೆ ಕೊಟ್ಟಿರಿ, ಇದರಿಂದ ಧರ್ಮಾಧರ್ಮಗಳ ವ್ಯವಸ್ಥೆ ಪರಲೋಕಸಿದ್ಧಿ ಇವೆಲ್ಲ ಹೇಗೆ ಉಂಟಾಗುವವೋ ತಿಳಿಯಲಿಲ್ಲ. ನಮ್ಮ ಶೆಟ್ಟರು ಶ್ಯಾನೆ ಧರ್ಮರತರಾಗಿರುವರು. ಆದ್ದರಿಂದ ಈ ವಿಷಯವನ್ನು ರವಷ್ಟು ವಿವರಿಸಬೇಕು.

ನಾರಣಾಚಾರ್ರು :- ಅದ್ವೈತಮತರೀತ್ಯಾ ಧರ್ಮವೇನು? ಅಧರ್ಮವೇನು? ಅವರಿಗೆ ಎಲ್ಲಾ ಒಂದೇ. ನಿಮಗೇಕೆ ಶ್ಯಾನುಭೋಗರೆ, ಆ ಭ್ರಾಂತಿ?

ವಾಲ್ಮೀಕಿ :- ಹಾಗಲ್ಲ, ಯಾವಾಗ ಜ್ಞಾನಕಾಂಡದ ಪ್ರಾಮಾಣ್ಯವು ಸಿದ್ಧಿಯಾಯಿತೋ ಆಗ ಕರ್ಮಿಗಳಿಗೋಸ್ಕರ ಇರುವ ಕರ್ಮಕಾಂಡದ ಪ್ರಾಮಾಣ್ಯವು ಸಿದ್ಧವೇ ಆಯಿತು. ಪರಲೋಕ ವಿಷಯದಲ್ಲಿ ಪ್ರತ್ಯಕ್ಷಾದಿಗಳಿಗೆ ಪ್ರವೇಶವಿಲ್ಲ; ಜ್ಞಾನಕಾಂಡದ ವಿಷಯವು ಅನುಭವಸಿದ್ಧವು. ಆದ್ದರಿಂದಲೇ ಎರಡು ಕಾಂಡದ ಪ್ರಾಮಾಣ್ಯವೂ ಸರಿಯಾದದ್ದೇ ಎಂಬ ತೀರ್ಮಾನಕ್ಕೆ ಯಾವ ಅಡ್ಡಿಯೂ ಉಂಟಾಗಲಾರದು ಮತ್ತು ಸರ್ವವೂ ಆತ್ಮನೇ ಎಂಬ ಜ್ಞಾನವುಂಟಾದಲ್ಲಿ ಅಧರ್ಮದ ಮೂಲೋಚ್ಛೇದವೇ ಮಾಡಿದ ಹಾಗಾಯಿತು. ಸಕಲ ಅಧರ್ಮಗಳಿಗೂ ಭೇದಜ್ಞಾನವೇ ಕಾರಣವಲ್ಲವೆ?

ನಾರಣಾಚಾರ್ರು :- ಕೃಷ್ಣ , ಕೃಷ್ಣ ! ಸ್ವಾಮಿ, ನನಗೆ ತಾಂಬೂಲವೂ ಬೇಡ, ನಿಮ್ಮ ಮರ್ಯಾದೆಗಳೂ ಬೇಡ. ತಿಳಿಯದೇ ಇಲ್ಲಿ ಬಂದದ್ದಕ್ಕೆ ಒಳ್ಳೆಯ ಮಾತು ಕೇಳಿದ ಹಾಗಾಯಿತು. ಭೇದವು ಸತ್ಯವಲ್ಲವೆ! ಇದು ಎಂಥ ಅಜ್ಞರು ಆಡುವ ಮಾತು !

ವಾಲ್ಮೀಕಿ :- ಕೋಪಿಸಿಕೋಬೇಡಿ ಆಚಾರ್ರೇ, ವ್ಯವಹಾರದಲ್ಲಿ ಭೇದವನ್ನವಲಂಬಿಸಿಯೇ ಸಕಲ ಧರ್ಮಾಧರ್ಮಗಳ ವ್ಯವಸ್ಥೆಯುಂಟಾಗಿದೆ. ಭೇದವಿಲ್ಲದಿದ್ದರೆ ಅಭೇದಜ್ಞಾನ ಯಾರಿಗೆ ತಾನೆ ಉಂಟಾಗುವದು? ನಾನು ಭೇದವಿಲ್ಲ ಎಂದು ಹೇಳಲಿಲ್ಲ, ಆದರೆ ವ್ಯವಹಾರದಲ್ಲಿ ಮಾತ್ರ ಉಂಟು ಎಂದು ಒಪ್ಪುತ್ತೇನೆ. ಚಿತ್ತಕ್ಕೆ ಆಯಾಸಕೂಡದು.

ನಾರಣಾಚಾರ್ರು :- ವೆಂಕಟೇಶ, ನನ್ನ ರಕ್ಷಿಸಿದೆಯಪ್ಪ, ಭೇದ ಉಂಟಂತೆ, ಇದು ವ್ಯವಹಾರದಲ್ಲಿ ಮಾತ್ರವಂತೆ ! ಆದಿರಲಿ, ಸ್ವಾಮಿ, ನಿಮ್ಮ ಪರಮಾರ್ಥವೇನು, ಸತ್ತಮೇಲೆ ತಾನೆ ತಿಳಿಯುವದು? ಅಲ್ಲಿಯೂ ಭೇದವೇ ಇರುವದು. ಅಂತೂ ಭೇದವೇ ಸತ್ಯ. ನಿಮ್ಮ ಅಭೇದವೆಂಬುದೇ ಮಿಥ್ಯ.

ಇಷ್ಟು ಹೊತ್ತಿಗೆ ಗಂಧ, ಹೂ, ತಾಂಬೂಲ ಮುಂತಾದವುಗಳು ಎಲ್ಲರಿಗೂ ಕೊಡಲ್ಪಟ್ಟವು. ನಾರಣಾಚಾರ್ರು ರವಷ್ಟು ಶಾಂತರಾಗಿ ವಾಲ್ಮೀಕಿಶಾಸ್ತ್ರಿಗಳಿಂದ ಅಪ್ಪಣೆ ತೆಗೆದುಕೊಂಡು ತೆರಳಿದರು. ನಾನು ಇದನ್ನೆಲ್ಲಾ ಕೇಳಿ ಸಂತುಷ್ಟನಾಗಿ ಆ ದಿನ ರಾತ್ರೇನೇ ರೈಲೇರಿ ಮೈಸೂರಿಗೆ ಹೋದೆನು.

*****

# 8. ಗವೀಪುರದ ಮಾಹಾತ್ಮ್ಯ

ಒಂದು ದಿನ ಹುಣ್ಣಿಮೆಯ ದಿವಸವೇ ಕಾರ್ತಿಕಸೋಮವಾರವೂ ಬಿದ್ದದ್ದರಿಂದ ಆ ಸಾಯಂಕಾಲ ಸಂಧ್ಯಾಕರ್ಮವನ್ನು ಮುಗಿಸಿಕೊಂಡು ಪುಷ್ಪಫಲಾದಿಗಳೊಡನೆ ನಾನು ಗವೀಪುರವೆಂಬ ಗುಹಾಪುರಕ್ಕೆ ಶ್ರೀಗಂಗಾಧರೇಶ್ವರನ ಸಂದರ್ಶನಕ್ಕೋಸ್ಕರ ಹೊರಟೆನು. ಈ ಗುಹಾಪುರವು ಉತ್ತಮಕ್ಷೇತ್ರವಾಗಿ ಇರುವದರಿಂದ ಅಲ್ಲಿ ಯಾತ್ರೆ, ಮದುವೆ, ಮುಂತಾದವನ್ನು ಮಾಡುವವರ ಅನುಕೂಲಕ್ಕಾಗಿ ನೀರು ನಿಡಿ ಮುಂತಾದ ಸೌಲಭ್ಯವನ್ನು ಕಲ್ಪಿಸಿ ಅನೇಕ ಸತ್ರಗಳನ್ನು ಕಟ್ಟಿಸಿರುತ್ತಾರೆ. ಕಲಿಯುಗ ಐದುಸಾವಿರ ವರ್ಷಗಳು ತುಂಬುವವರೆಗೂ ಪ್ರತಿ ಸಂವತ್ಸರವೂ ಇಲ್ಲಿ ಸಾವಿರಗಟ್ಲೆ ಬ್ರಾಹ್ಮಣರಿಗೆ ಬೆಂಗಳೂರು ವರ್ತಕ ಮಹಾಜನಗಳು ಬಹು ಶ್ರದ್ಧೆಯೊಡನೆಯೂ ಔದಾರ್ಯದೊಡನೆಯೂ ಮಹಾಸಮಾರಾಧನೆಗಳನ್ನು ನಡೆಸುತ್ತಾ ಇದ್ದರು. ಈಗಲೂ ಇಲ್ಲಿ ರಥೋತ್ಸವವೇನೋ ನಡೆಯುತ್ತದೆ; ಅರ್ಪಣೆ ಮಾತ್ರ ಸ್ವಪ್ನಪ್ರಾಯವಾಗಿದೆ. ಈ ಗುಡಿಗೆ ಸೇರಿದ ಹಾಗೆ ಕೆಂಪಾಂಬುಧಿಯೆಂಬ ದಿವ್ಯಸರಸ್ಸೂ ಒಂದುಂಟು. ಗುಡಿಯು ಬಲು ಪುರಾತನವಾದದ್ದು; ಇದು ಗವಿಯಲ್ಲಿಯ ವಿಚಿತ್ರ ತರವಾಗಿ ಕೊರೆಯಲ್ಪಟ್ಟಿರುವದು. ಇದಕ್ಕೆ ದಕ್ಷಿಣದಲ್ಲಿ ಮಹಾರಾಷ್ಟ್ರ ಜನರ ಸತ್ರವೂ ಲವಂಗಭಾರತೀಸ್ವಾಮಿಗಳು ಎಂಬ ಮಹಾರಾಷ್ಟ್ರಸಾಧುಗಳ ದಿವ್ಯ ಮಠವೂ ಇರುವವು.

ಈ ನೋಟಗಳನ್ನೆಲ್ಲ ನೋಡುತ್ತಾ ನಾನು ಗುಡಿಯೊಳಗೆ ಪ್ರವೇಶಿಸಿ ದೇವರಿಗೆ ಫಲಾರ್ಪಣೆ ಮಾಡಿ ಗಂಗಾಧರೇಶ್ವರನಿಗೂ ಪಾರ್ವತೀದೇವಿಯರಿಗೂ ಮಂಗಳಾರತಿ ಮಾಡಿಸಿ, ಸಾಷ್ಟಾಂಗವಾಗಿ ದಂಡಪ್ರಣಾಮವನ್ನು ಮಾಡಿ, ಸಂಪ್ರದಾಯದ ಪ್ರಕಾರ ಘಂಟೆಯನ್ನು ಬಾರಿಸಿ, ಕೊಂಚಹೊತ್ತು ಅಲ್ಲಿರುವ ಗವಿಗಳಲ್ಲಿ ಹೊಕ್ಕು ನೋಡಿ, ತರುವಾಯ ಗುಡಿಯನ್ನು ಬಿಟ್ಟು ಪೂರ್ವಕ್ಕೆ ಹೊರಡುವಾಗ ಈ ದೇವರ ಮಾಹಾತ್ಮ್ಯ ವಿಚಾರವಾಗಿಯೂ ಈ ಗುಡಿಯನ್ನು ಯಾವ ಭಕ್ತಾಗ್ರೇಸರರು ಕಟ್ಟಿಸಿರಬಹುದೋ ಇಲ್ಲಿ ಯಾವಯಾವ ಅದ್ಭುತ ಲೀಲೆಗಳು ಭಕ್ತರ ರಕ್ಷಣೆಗೋಸ್ಕರ ನಡೆದಿರಬಹುದೋ ಎಂಬ ವಿಚಾರವಾಗಿಯೂ ನನ್ನಲ್ಲಿಯೇ ಆಲೋಚಿಸಿ ಕೊಳ್ಳುತ್ತಾ ಬಲಗಡೆಯಿದ್ದ ಮಿ॥ಪರಮಶಿವಯ್ಯನವರ ಗುಡ್ಡಕ್ಕೆ ಹತ್ತಿಹೋದೆನು.

ಶಿಖರದಲ್ಲಿ ಒಂದು ಮಾರುತಿಯ ದೇವಾಲಯವು ಒಂದಿಷ್ಟು ಶಿಥಿಲವಾದ ಸ್ಥಿತಿಯಲ್ಲಿರುವದು. ಗುಡಿಯಲ್ಲಿ ದೀಪವು ಉರಿಯುತ್ತಾ ಇದ್ದದ್ದರಿಂದ ಒಳಗೆ ಹೋಗಿ ದೇವರಿಗೆ ನಮಸ್ಕರಿಸಿ ಹೊರಟು ಮುಂದೆ ಇರುವ ಒಂದು ಅರಳೀ ಮರದ ಕೆಳಗಿನ ಬಂಡೆಯ ಮೇಲೆ ಕೂತೆನು. ಆದಾಗ್ಯೂ ಗಂಗಾಧರೇಶ್ವರನ ಸ್ಮರಣೆಯು ನನ್ನನ್ನು ಬಿಡಲಿಲ್ಲ. ಹೀಗಿರುವಲ್ಲಿ ಯಾರೋ ಒಬ್ಬರು ಸಂನ್ಯಾಸಿಗಳು ಅಲ್ಲಿಗೆ ಬಂದರು. ಅವರನ್ನು ನೋಡಿ ಎದ್ದು ನಮಸ್ಕರಿಸಿದೆನು. ಅವರು ಹಸನ್ಮುಖರಾಗಿ ''ಕೂಡಪ್ಪ!'' ಎಂದು ಹೇಳಿ ತಾವೂ ಆ ಬಂಡೆಯ ಮೇಲೆ ಕೂತುಕೊಂಡರು.

ನಾನು ಅವರನ್ನು ನೋಡಿ ''ಮಹಾಸ್ವಾಮಿ, ತಾವು ಎಲ್ಲಿಂದ ದಯ ಮಾಡಿಸಿದರೋ, ಈ ಗುಹಾಪುರದಲ್ಲಿರುವ ಗಂಗಾಧರೇಶ್ವರನ ಮಹಾತ್ಮ್ಯವನ್ನು ಸ್ವಲ್ಪಮಟ್ಟಿಗೆ ನನಗೆ ವಿವರಿಸಬೇಕು'' ಎಂದು ಪ್ರಾರ್ಥಿಸಿದೆನು.

ಅವರು ಉತ್ತರಕೊಟ್ಟದ್ದೇನೆಂದರೆ - ''ಅಪ್ಪ, ನಾನು ಕಾಶಿಯಿಂದ ಬಂದು ಹತ್ತು ದಿನಗಳಾದವು. ಗಂಗಾಧರೇಶ್ವರನ ಸೇವೆಗೋಸ್ಕರವೇ ಬಂದವನು. ಆತನ ಮಾಹಾತ್ಮ್ಯವು ಹೇಳಲಶಕ್ಯವು. ಆದಾಗ್ಯೂ ಒಂದು ಉಪನ್ಯಾಸವನ್ನು ಹೇಳುವೆನು. ಶ್ರದ್ಧೆಯಿಂದ ಕೇಳುವನಾಗು. ಸುಮಾರು ಐವತ್ತು ವರ್ಷಕ್ಕೆ ಹಿಂದೆ ಈ ಬೆಂಗಳೂರು ಪಟ್ಟಣದಲ್ಲಿ ಸ್ವಧರ್ಮಾಚಾರನಿರತನಾಗಿಯೂ ಸತ್ಯವ್ರತನಾಗಿಯೂ ವೇದಬ್ರಾಹ್ಮಣರಲ್ಲಿ ಅನುರಕ್ತನಾಗಿಯೂ ಇದ್ದ ಒಬ್ಬ ವೈಶ್ಯ ಶಿರೋಮಣಿ ಇದ್ದನು. ಆತನ ನಾಮಧೇಯವು ಚಿಂತಲ ರಾಮಶೆಟ್ಟಿ. ಆತನು ವಿಶೇಷ ದ್ರವ್ಯವುಳ್ಳವನಾಗಿ ಸಕಲೈಶ್ವರ್ಯಯುಕ್ತನಾಗಿ ಪತ್ನೀಪುತ್ರರೊಡಗೂಡಿ ಸುಖದಿಂದ ಬಾಳುತ್ತಿದ್ದನು. ಪ್ರತಿ ದಿನವೂ ಉಷಃ ಕಾಲದಲ್ಲಿ ಎದ್ದು ನಿತ್ಯಕರ್ಮಗಳನ್ನು ಮುಗಿಸಿ ಕನ್ಯಕಾಪರಮೇಶ್ವರಿಯ ದರ್ಶನ ಮಾಡಿಕೊಂಡು, ಇಬ್ಬರು ಬ್ರಾಹ್ಮಣರಿಗೆ ಸ್ವರ್ಣದಾನಮಾಡಿ ಅವರ ಆಶೀರ್ವಾದವನ್ನು ಹೊಂದಿ, ಆಮೇಲೆ ಸುಮಾರು ಎಂಟುಘಂಟೆಗೆ ತನ್ನ ವ್ಯಾಪಾರದ ಕಸಬಿನಲ್ಲಿ ತೊಡಗುವನು. ಹನ್ನೊಂದುಘಂಟೆಯಾಗುತ್ತಲೂ ಎಲ್ಲಾ ಕೆಲಸವನ್ನೂ ಬಿಟ್ಟು ಮನೆಗೆ ಬಂದು, ಮಾಧ್ಯಾಹ್ನಿಕ ದೇವತಾರ್ಚನೆಗಳನ್ನು ತೀರಿಸಿಕೊಂಡು, ಪಾಪಿಪರದೇಶಿಗಳಿಗೆ ದೇವರನೈವೇದ್ಯದಲ್ಲಿ ಒಂದು ಭಾಗವನ್ನು ಇಟ್ಟು ಅನಂತರ ತಾನು ಮಕ್ಕಳೊಡನೆಯೂ ಅತಿಥಿಅಭ್ಯಾಗತರೊಡನೆಯೂ ಊಟಮಾಡುವನು. ಇದಾದ ಮೇಲೆ ಒಂದು ಘಂಟೆಯಿಂದ ಮೂರುಘಂಟೆಯವರೆಗೂ ಪುರಾಣಾದಿ ಶ್ರವಣಗಳನ್ನು ಮಾಡಿ ತನ್ನ ವೈಶ್ಯವೃತ್ತಿಗೆ ತೊಡಗುವನು. ಹೀಗೆಯೇ ಸಾಯಂಕಾಲದ ಹೊತ್ತಿಗೆ ಮನೆಗೆ ಬಂದು, ಶುಚಿರ್ಭೂತನಾಗಿ, ಸಂಧ್ಯಾಕರ್ಮಗಳನ್ನು ಮುಗಿಸಿಕೊಂಡು, ಪರಮೇಶ್ವರಿಯ

ದರ್ಶನಮಾಡಿ, ಬಳಿಕ ಉಂಡು ಹತ್ತುಘಂಟೆಯವರೆಗೂ ಹರಿಕಥೆ ಕೇಳೋಣ, ತತ್ತ್ವವಿಚಾರ ಮಾಡೋಣ, ಮುಂತಾದವುಗಳಲ್ಲಿ ಕಾಲವನ್ನು ಕಳೆದು ಮಲಗಿಕೊಳ್ಳುವನು. ಇಂಥ ಶುಭಚರಿತ್ರ ನಾಗಿದ್ದವನಿಗೆ ಪರಶಿವನಲ್ಲಿ ಅನನ್ಯ ಭಕ್ತಿಯಿದ್ದದ್ದು ಏನೂ ಅತಿಶಯವಲ್ಲ.

''ಆದರೆ ಕಷ್ಟವು ಯಾರನ್ನು ತಾನೆ ಬಿಡುವದು? ಇವನಿಗೂ ಕೂಡ ಒಂದು ಕಾಲದಲ್ಲಿ ವ್ಯಾಪಾರದಲ್ಲಿ ವಿಶೇಷವಾದ ನಷ್ಟವುಂಟಾಗಿ, ಸಾಲಗಾರರಿಗೆ ಸಮಾಧಾನ ಹೇಳಲು ಅಶಕ್ಯನಾಗಿ, ತನ್ನ ಗೌರವಕ್ಕೆ ತಕ್ಕಹಾಗೆ ಜೀವನ ನಡೆಯುವದು ದುರ್ಘಟವಾಯಿತು. ಆದಾಗ್ಯೂ ತನ್ನ ಸ್ಥಿತಿಯನ್ನು ''ಸಂಸಾರಗುಟ್ಟು ವ್ಯಾಧಿರಟ್ಟು'' ಎಂಬಂತೆ ಯಾರಿಗೂ ಅಂದರೆ ತನ್ನ ಹೆಂಡತಿ ಮಕ್ಕಳಿಗೂ ಕೂಡ ತಿಳಿಸದೆಯೇ ಭಕ್ತರ ಮಾನವನ್ನು ಕಾಪಾಡುವ ಪರಮಶಿವನಲ್ಲಿ ದೃಢವಾದ ನಂಬಿಕೆಯನ್ನಿಟ್ಟು ಎಂದಿನ ಹಾಗೆಯೇ ''ಧೀರಸ್ತತ್ರನ ಮುಹ್ಯತಿ'' ಎಂಬ ಭಗವದ್ವಾಕ್ಯವನ್ನು ಸ್ಮರಿಸಿಕೊಂಡು ಸಂತೋಷದಿಂದ ಇದ್ದುಬಿಟ್ಟನು. ಹಾಗೂ ಒಂದು ದಿನ ತಾನು ತೊಡತಕ್ಕ ಹಣಗಳಿಗೆ ವಿಶೇಷ ತಗಾದೆ ಉಂಟಾದ್ದನ್ನು ನೋಡಿ ಸಾಲಗಾರರಿಗೆಲ್ಲ ''ಬರುವ ಆದಿತ್ಯವಾರ ನಿಮ್ಮ ಲೆಖ್ಖಗಳನ್ನೆಲ್ಲ ಫೈಸಲುಮಾಡುವೆನು'' ಎಂದು ಭರವಸೆ ಕೊಟ್ಟು ತನ್ನೊಳಗೇ ತಾನೇ ಆಲೋಚಿಸಿದನು.

''ಎಲೈ ಮಹಾದೇವನೆ, ನೀನು ನನ್ನ ಪರೀಕ್ಷೆ ಮಾಡುತ್ತಿದ್ದೀಯಲ್ಲವೇ? ನಾನುಕೊಟ್ಟ ವಾಯಿದೆಯ ಪ್ರಕಾರ ಅವರವರಿಗೆ ಆದಿತ್ಯವಾರದ ದಿನ ಹಣ ಸಲ್ಲಿಸದಿದ್ದರೆ ನನ್ನ ಗೌರವವುಳಿದೀತೆ? ಅದರ ಮೇಲೆ ಜೀವಿತ ಫಲವೇನು? ನಿನ್ನ ಲೀಲೆ ಹೇಗೆ ಪರಿಣಮಿಸುವದೋ ಅರಿಯೆನು'' ಎಂದು ಆದಿತ್ಯವಾರದವರೆಗೂ ದೈವಾನುಗ್ರಹವನ್ನು ನಿರೀಕ್ಷಿಸಿಯೂ ಏನೊಂದು ಸಹಾಯವೂ ಒದಗದೆ ಇರುವದನ್ನು ಕಂಡು ಆದಿನ ಎಂದಿನಂತೆ ಎಂಟು ಘಂಟೆಯ ಒಳಗೆ ನಿತ್ಯಕರ್ಮಗಳನ್ನು ತೀರಿಸಿಕೊಂಡು ಫಲಪುಷ್ಪಾದಿಗಳನ್ನು ತೆಗೆದುಕೊಂಡು ಪರಮೇಶ್ವರಿಯಗುಡಿಗೆ ಎಂದೂ ಹೋಗುವಂತೆ ಮನೆಯನ್ನು ಬಿಟ್ಟು ಹೊರಟನು.

''ನೇರಾಗಿ ಎಲ್ಲಿಯೂ ನಿಲ್ಲದೆ ಒಂಭತ್ತುಗಂಟೆಯ ಹೊತ್ತಿಗೆ ಗುಹಾಪುರಕ್ಕೆ ಬಂದು ಗಂಗಾಧರೇಶ್ವರನನ್ನೂ ಪಾರ್ವತಿದೇವಿಯರನ್ನೂ ಪೂಜೆಮಾಡಿ ತನ್ನ ಕಷ್ಟಗಳನ್ನೆಲ್ಲಾ ಹೇಳಿಕೊಂಡು ಮೊರೆಯಿಟ್ಟು ಇನ್ನು ನಾನು ರಿಕ್ತಹಸ್ತದೊಡನೆ ಮನೆಗೆ ಹೋಗಲಾರೆನು. ನಿನ್ನ ಸಾನ್ನಿಧ್ಯದಲ್ಲಿಯೇ ಪ್ರಾಣವನ್ನು ಒಪ್ಪಿಸುವೆನು'' ಎಂದು

ದೃಢನಿಶ್ಚಯವನ್ನು ಮಾಡಿಕೊಂಡು ಪಶ್ಚಿಮದಲ್ಲಿರುವ ದೊಡ್ಡ ಗುಹೆಯಲ್ಲಿ ಪ್ರವೇಶಮಾಡಿದನು. ಬಗ್ಗಿ ಕೆಲವು ಹೊತ್ತು , ಕೂತು ಕೆಲವುದೂರ, ಮಲಗಿಕೊಂಡು ಕೆಲವು ದೂರ - ಹೀಗೆ ಹೋಗುತ್ತಾ, ಆ ಗಾಢಾಂಧಕಾರದಲ್ಲಿ ಯಾವದೂ ತಿಳಿಯದೆ ''ಸಾವಿಗೆ ಸಿದ್ಧನಾದವನಿಗೆ ಸಮುದ್ರ ಮೊಳಕಾಲು'' ಎಂಬ ಗಾದೆಯಂತೆ ಯಾವ ಅಪಾಯಕ್ಕೂ ಅಂಜದೆ ಮುಂದೆ ನುಗ್ಗುವಲ್ಲಿ ದ್ವಾರಶಾನೆ ಇಕ್ಕಟ್ಟಾಗಿದ್ದರಿಂದ ಇವನು ತನ್ನ ಬಲವನ್ನೆಲ್ಲ ಉಪಯೋಗಿಸಿ ನುಗ್ಗಲು ಇವನ ದೇಹ ಕಲ್ಲಿನ ನಡುವೆ ಸಿಕ್ಕಿಕೊಂಡು ಮುಂದೂ ಹಿಂದೂ ಚಲಿಸುವದಕ್ಕೆ ಎಷ್ಟು ಪ್ರಯತ್ನ ಮಾಡಿದರೂ ಆಗಲಿಲ್ಲ.

ಆಗ ಶ್ರೇಷ್ಠಿಯು ಹಸಿವಿನಿಂದಲೂ ನೀರಡಿಕೆಯಿಂದಲೂ ತನ್ನನ್ನು ಬಿಡಿಸಿ ಕೊಳ್ಳುವದಕ್ಕೆ ಮಾಡಿದ ಪ್ರಯತ್ನಗಳಿಂದ ಉಂಟಾದ ಆಯಾಸದಿಂದಲೂ ಬರುತ್ತ ಬರುತ್ತ ಬಲಹೀನನಾಗಿ ಕಡೆಗೆ ಯಾವ ಸುಪರಿಣಾಮವನ್ನೂ ಹೊಂದುವದರಲ್ಲಿ ನಿರಾಶೆಯುಂಟಾದರೂ ಗಂಗಾಧರೇಶ್ವರನ ಪಾದಕಮಲದಲ್ಲಿಯೇ ನ್ಯಸ್ತಧರನಾಗಿ ''ದೇವರೇ, ನಿನ್ನ ಚಿತ್ತವಿದ್ದಂತೆ ಆಗಲಿ, ಮಾನವನ್ನು ಕಳೆದುಕೊಂಡು ಸಮಾನರಲ್ಲಿ ಬಾಳುವದಕ್ಕಿಂತ ಇಲ್ಲಿಯೇ ಪ್ರಾಣವನ್ನು ಒಪ್ಪಿಸುವದು ಉತ್ತಮವಲ್ಲವೆ? ಇದೂ ನಿನ್ನ ಸಂಧಾನವೆ. ಅಂತು ನನ್ನನ್ನು ಸಿಕ್ಕಿಸಿಕೊಂಡಿದ್ದೀಯೆ, ನಿನ್ನ ಕೃಪೆಯಿದ್ದಂತಾಗಲಿ'' ಎಂದು ಏಕಮನಸ್ಕನಾಗಿ ಧ್ಯಾನಮಾಡುತ್ತಾ ಕೊನೆಗೆ ಪ್ರಜ್ಞೆತಪ್ಪಿ ಮೈಮರೆತನು.

ಹೀಗಿರುವಲ್ಲಿ ಬ್ರಹ್ಮಾಂಡಕೋಟಿಗಳಿಗೆಲ್ಲ ಅಧೀಶ್ವರನಾಗಿ ಸಕಲಜೀವರಾಶಿ ಗಳಿಗೂ ಕಾಲಕಾಲಕ್ಕೆ ಆಹಾರವನ್ನು ಕೊಟ್ಟು ಕಾಪಾಡುವ ಸರ್ವಚೈತನ್ಯಮೂರ್ತಿ ಯಾದ ಪರಮೇಶ್ವರನ ಲೀಲೆಯನ್ನು ಎಂತೆಂದು ವರ್ಣಿಸುವದು? ಅಣುರೇಣು ತೃಣಕಾಷ್ಠಗಳಲ್ಲಿ ಇದ್ದು ತತ್ತದ್ರೂಪಗಳನ್ನು ವಹಿಸದೆಯೇ ವಹಿಸಿ ಲೋಕವಿಡಂಬನೆ ಮಾಡುವ ಸರ್ವಜ್ಞನಿಗೆ ಯಾವದು ತಾನೇ ಅಸಾಧ್ಯ? ಚಿಂತಲರಾಮಶ್ರೇಷ್ಠಿಯು ಯಾವಾಗ ಮೂರ್ಛೆ ಹೊಂದಿದನೋ ಆಗ ಕರುಣಾಸಮುದ್ರನಾದ ಮಹಾದೇವನ ಕೃಪೆಯು ವಿಕಸಿಸಿ ಅವನಲ್ಲಿ ಅನುಗ್ರಹಮಾಡುವದಕ್ಕೆ ಚಿತ್ತವುಂಟಾಯಿತು. ಕೂಡಲೆ ಶ್ರೇಷ್ಠಿಯನ್ನು ಯಾರೋ ಕೈಕೊಟ್ಟು ಎಳೆದುಕೊಂಡು ಮೈಮೇಲೆ ಪನ್ನೀರು ಚಿಮುಕಿಸಿ ಕೂಡಿಸಿದ ಹಾಗಾಯಿತು. ಆಗ ಆತನು ಸುತ್ತಮುತ್ತಲು ನೋಡಲು ತಾನು ವಿಚಿತ್ರವಾದ ಮಹಾಮಂಟಪದಲ್ಲಿ ಇರುವದಾಗಿಯೂ ಎಲ್ಲೆಲ್ಲಿಯೂ ವೇದ ಘೋಷಗಳು, ಶಾಸ್ತ್ರವಿಚಾರಗಳು, ಸಂಗೀತಗಳು, ನಾಟ್ಯಗಳು, ತತ್ತ್ವೋಪದೇಶಗಳು ಹೀಗೆ ನಡೆಯುತ್ತಿರುವದಾಗಿಯೂ ಕಂಡನು. ಈ ವಿಚಿತ್ರವನ್ನು ನೋಡಿ ಶ್ರೇಷ್ಠಿಯು

ದಿಗ್ಭ್ರಮೆಯಾಗಿ ''ಇದೇನು ಕನಸೋ ಎಚ್ಚರವೋ ತಿಳಿಯಲಿಲ್ಲವಲ್ಲ! ಗಂಗಾಧರೇಶ್ವರನ ಗುಹೆಯಲ್ಲಿ ಸಿಕ್ಕಿಕೊಂಡವನನ್ನು ಮೇಲಕ್ಕೆತ್ತಿದ ಮಹಾಪುರುಷನು ಯಾರೋ ಅರಿಯೆನು. ಇಲ್ಲಿ ನೋಡಿದರೆ ಎಲ್ಲರೂ ದೇವತಾಸ್ವರೂಪರಾಗಿರುವರು. ಇಲ್ಲಿ ಕತ್ತಲೆಯೆಂಬುದೇ ಇಲ್ಲ, ಅಜ್ಞಾನ ಮೊದಲೇ ಇಲ್ಲ. ಇಂಥಾ ಸಭೆಯಲ್ಲಿ ಇರುವದಕ್ಕೆ ನಾನು ಯೋಗ್ಯನೆ? ನಾನು ವೈಶ್ಯನೆಂದು ತಿಳಿದರೆ ಈ ಮಹಾತ್ಮನು ನನ್ನನ್ನು ಅಟ್ಟಿಸಿಬಿಟ್ಟಾರೋ ಏನೋ! ಇಲ್ಲಿ ಏನು ಉಪಾಯಮಾಡುವದಕ್ಕಾದೀತು? ಅಥವಾ ಉಪಾಯಗಳಿಗೆ ತಕ್ಕ ಪ್ರದೇಶವೇ ಇದು?'' ಎಂದು ಬಗೆಬಗೆಯಾಗಿ ಯೋಚಿಸುತ್ತಿದ್ದನು. ಕೊನೆಗೆ ''ಹೇಗೇ ಆಗಲಿ, ಇದುವರೆಗೂ ಕಾಪಾಡಿದ ಆ ಪಾರ್ವತೀಪತಿಯು ನನಗೆ ಮುಂದೆ ಗತಿ ಕಲ್ಪಿಸಲಾರನೆ?'' ಎಂದು ಧೈರ್ಯವನ್ನು ತಂದುಕೊಂಡು ಪಕ್ಕದಲ್ಲಿ ಇದ್ದ ಒಬ್ಬರನ್ನು ನಮಸ್ಕರಿಸಿ ''ಅಯ್ಯ, ಇದು ಯಾವ ಲೋಕ? ಇಲ್ಲಿ ಇರುವವರು ಯಾರು? ನಾನು ಇಲ್ಲಿಗೆ ಹೇಗೆ ಬಂದೆನು?'' ಎಂದು ಕೇಳಿದನು.

ಆದಕ್ಕೆ ಅವರು ''ಅಪ್ಪ, ಇದು ಕೈಲಾಸವು, ಇಲ್ಲಿ ಬರುವರೆಲ್ಲ ಶಿವಾನುಗ್ರಹದಿಂದಲೇ ಬರುವರು; ಮತ್ತೆ ಯಾರ ಶಿಫಾರಸ್ಸಿನಿಂದಲೂ ಇಲ್ಲಿ ಬರಲಾಗು ವದಿಲ್ಲ. ಇಲ್ಲಿ ನೆರೆದಿರುವವರೆಲ್ಲ ದೇವತೆಗಳು, ಋಷಿಗಳು, ಮುಕ್ತರು. ಆ ಮೂಲೆಯಲ್ಲಿ ಕುಳಿತಿರುವವರೇ ವೇದವ್ಯಾಸರು, ಅವರ ಸುತ್ತಲೂ ಉಪದೇಶ ವನ್ನು ಕೈಕೊಳ್ಳುತ್ತಾ ಇರುವವರೇ ಮುಂದೆ ಮರ್ತ್ಯಲೋಕಕ್ಕೆ ಗುರುಗಳಾಗಿ ಅವತರಿಸುವರು'' ಎಂದರು.

ಆಗ ಶ್ರೇಷ್ಠಿಗೆ ಹಸಿವೂ ನೀರಡಿಕೆಯೂ ಉಂಟಾದ್ದರಿಂದ ''ಇಲ್ಲಿ ಅನ್ನ ನೀರು ಸಿಕ್ಕೀತೆ?'' ಎಂತ ಕೇಳಲು ಅಲ್ಲಿದ್ದವರು ಒಂದು ಸ್ವರ್ಣಪಾತ್ರೆಯಲ್ಲಿ ನೀರನ್ನು ಕೊಟ್ಟರು. ಅದನ್ನು ಅವನು ಕುಡಿದೊಡನೆಯೆ ಹಸಿವು ತೀರಿ ದೇಹ ಶಾಂತಿಯುಂಟಾಯಿತು. ''ಇದು ಏನು?'' ಎಂದು ಕೇಳಲು ''ಇದೇ ಅಮೃತವು'' ಎಂದು ಉತ್ತರ ಕೊಟ್ಟರು. ಬಳಿಕ ಶ್ರೇಷ್ಠಿಯು ಎದ್ದು ವೇದವ್ಯಾಸರ ಅಭಿಮುಖವಾಗಿ ಹೊರಟು ಅವರನ್ನು ನೋಡಿ ದೂರದಿಂದ ಕೈಮುಗಿದು ನಮಸ್ಕರಿಸಿ ಕೂತು ಕೊಂಡನು. ಆಗ ವೇದವ್ಯಾಸರು ''ಅಪ್ಪ ಏಕೆ ಖಿನ್ನನಾಗಿದೀಯೆ? ಶಿವಾನುಗ್ರಹ ದಿಂದ ನಿನಗೆ ಶ್ರೇಯಸ್ಸುಂಟಾಗುವದು, ಯೋಚಿಸಬೇಡ. ಆದರೆ ಇಲ್ಲಿ ಬಂದದ್ದಕ್ಕೆ ನಿನಗೆ ಏನಾದರೂ ತತ್ತ್ವವಿಷಯ ತಿಳಿಯಬೇಕಾದರೆ ಕೇಳು'' ಎಂದರು.

ಅದಕ್ಕೆ ಶ್ರೇಷ್ಠಿಯು ''ಮಹಾಸ್ವಾಮಿ, ಚಿಕ್ಕವಯಸ್ಸಿನಲ್ಲಿಯೇ ಹೆಂಡತಿ ಮಕ್ಕಳನ್ನು ಬಿಟ್ಟು ಊರುಬಿಟ್ಟು ಕೇರಿಬಿಟ್ಟು ಎಲ್ಲಿಯೋ ಬಂದಿರುವ ನನಗೆ ಇನ್ನು ಆಗತಕ್ಕ ಶ್ರೇಯಸ್ಸು ಏನಿದೆ? ನಮ್ಮ ಲೋಕಕ್ಕೆ ಹೋದರೆ ಸಾಲಗಾರರು ತಿಂದು ಹಾಕುವರು. ಇಲ್ಲದಿದ್ದರೆ ಏಕಾಂಗಿಯಾಗಿ ಕಾಲವನ್ನು ಹೇಗೋ ಕಳೆಯಬೇಕು. ಆದಾಗ್ಯೂ ಶಿವಾನುಗ್ರಹವು ಏನು ತಾನೇ ಮಾಡಲಾರದು? ಅದಂತಿರಲಿ. ಈಗ ತಾವು ಅಪ್ಪಣೆಕೊಟ್ಟ ರೀತಿಯಲ್ಲಿ ನಾನು ಸ್ವತಃ ಶಾಸ್ತ್ರವನ್ನು ಓದಿದವನಲ್ಲ. ಆದರೆ ಬಹುಜನರಿಂದ ಇಂಥ ವಿಚಾರಗಳನ್ನು ಕೇಳಿದವನಾದ್ದರಿಂದ ನನಗೂ ಕೂಡ ಕೇಳತಕ್ಕ ವಿಷಯವೊಂದುಂಟು. ಅದನ್ನು ತಮ್ಮಲ್ಲಿ ಅರಿಕೆ ಮಾಡದೆ ಇನ್ನೆಲ್ಲಿ ಮಾಡಿಕೊಳ್ಳಲಿ? ಸಕಲ ತತ್ತ್ವಗಳಿಗೂ ವೇದವೇ ಮೂಲ, ಧರ್ಮಜ್ಞಾನಗಳ ಸ್ವರೂಪಗಳುಕೂಡ ವೇದದಿಂದಲೇ ತಿಳಿಯತಕ್ಕವು ಎಂದು ಕೇಳಿದ್ದೇನೆ. ಆದರೆ ವೇದವು ಅಷ್ಟು ಪ್ರಮಾಣವಾದದ್ದೇ ಎಂಬ ಒಂದು ವಿಷಯವೇ ನನಗೆ ಸಂದೇಹ. ಏಕೆಂದರೆ ಸ್ವಧರ್ಮದಲ್ಲಿ ನಿರತನಾಗಿ ಸ್ವಪ್ನದಲ್ಲಿಯೂ ಶಿವನ ಪಾದವನ್ನು ಮರೆಯದೆ ಇದ್ದ ನನಗೆ ಬಂದ ಸ್ಥಿತಿಯನ್ನು ನೀವೇ ಬಲ್ಲಿರಷ್ಟೆ? ಹೀಗಿರುವಲ್ಲಿ ವೇದಪ್ರಾಮಾಣ್ಯ ವೆಂಬದು ಎಂಥದ್ದೊ? ಸರ್ವವೇದಗಳನ್ನು ಕ್ರಮಪಡಿಸಿದ ತಮಗೆ ಗೊತ್ತಾಗುವ ಹಾಗೆ ಈ ವಿಷಯವು ಇತರರಿಗೆ ಗೋಚರವಾಗದು. ಆದ್ದರಿಂದ ದಯವಿಟ್ಟು ನನ್ನ ಸಂಶಯವನ್ನು ತೀರಿಸಿ ಉದ್ಧಾರಮಾಡಬೇಕು'' ಎಂದನು.

ಅದಕ್ಕೆ ವ್ಯಾಸರು ''ಎಲೆ ಶ್ರೇಷ್ಠಿವರ್ಯನೆ, ನಿನ್ನ ಪ್ರಶ್ನೆಯೂ ಉತ್ಕೃಷ್ಟವಾದದ್ದು. ನಾನು ಮೊದಲು ಅದಕ್ಕೆ ಉತ್ತರಕೊಟ್ಟು ಕಡೆಯಲ್ಲಿ ನಿನ್ನ ಇತರ ಸಂದೇಹಗಳನ್ನೂ ಪರಿಹರಿಸುವೆನು. ಕೇಳು. ವೇದವೆಂದರೆ ಜ್ಞಾನವು. ಈ ಜ್ಞಾನಕ್ಕೆ ಪ್ರಮಾಣವು ಸ್ವತಃ ಉಂಟಾಗುತ್ತದೆ. ಅದರಲ್ಲಿಯೂ ಯಾವ ಜ್ಞಾನಕ್ಕೆ ಎಂದಿಗೂ ಬಾಧೆಯುಂಟಾಗುವ ಸಂಭವವಿಲ್ಲವೋ ಅಂಥ ಜ್ಞಾನಸ್ವರೂಪವನ್ನೇ ಪ್ರತಿಪಾದಿಸುವ ವೇದಕ್ಕೆ ಪ್ರಾಮಾಣ್ಯ ವಿಲ್ಲವೆಂಬುದು ಎಂಥ ಮಾತು? ಈ ಜ್ಞಾನದ ದೃಷ್ಟಿಯಿಂದಲೇ ಧರ್ಮವ್ಯವಸ್ಥೆಯೂ ಉಂಟಾಗಿರುವದರಿಂದ ವೇದವಿಹಿತವಾದ ಧರ್ಮಕ್ಕೂ ವೇದವೇ ಪ್ರಮಾಣವು. ಏಕೆಂದರೆ ಯಾವದು ಪುರುಷಾರ್ಥವಾಗಿರುವ ಜ್ಞಾನವುಂಟುಮಾಡುವದೋ ಅದಕ್ಕೆ ಧರ್ಮವೆಂದು ವ್ಯವಹಾರವು . ಆದ್ದರಿಂದ ಧರ್ಮಕ್ಕೂ ಜ್ಞಾನಕ್ಕೂ ಕಾರ್ಯ ಕಾರಣ ಸಂಬಂಧವಿರುವದು. ಕಾರ್ಯ ಕಾರಣಗಳು ಕೂಡ ಸ್ವರೂಪದಲ್ಲಿ ಒಂದಾಗಿರುವ ದರಿಂದ ಯಾವದು ಜ್ಞಾನವೋ ಅದೇ ಧರ್ಮವು, ಯಾವದು ಧರ್ಮವೋ ಅದೇ ಜ್ಞಾನವು ಎಂಬುದಾಗಿ ತತ್ಸ್ವರೂಪಗಳಲ್ಲಿ ಏಕತ್ವವನ್ನು ಅಂಗೀಕರಿಸಬೇಕು.ಆದರೆ ನೀನು

ಧರ್ಮಿಷ್ಠನಾಗಿದ್ದು ದುಃಖಕ್ಕೆ ಭಾಗಿಯಾದೆನಲ್ಲ ಎಂದು ಧರ್ಮಫಲದ ವಿಷಯವಾಗಿ ಸಂಶಯವನ್ನು ಹೊಂದಿರುತ್ತೀಯೆ. ಇದು ಸರಿಯಲ್ಲ, **ಧರ್ಮಾಚರಣೆಯಿಂದ ಆಗಬೇಕಾದ ಫಲವು ಚಿತ್ತಶುದ್ಧಿ ಮತ್ತು ಜ್ಞಾನಾಭಿಮುಖತ್ವ**, ಈ ಎರಡು ಫಲಗಳೂ ನಿನ್ನಲ್ಲಿ ಪುಷ್ಕಲವಾಗಿ ತೋರುತ್ತಿವೆ. ಇನ್ನು ಧನ ಮುಂತಾದ್ದರ ಲಾಭನಷ್ಟಗಳು ಇಲ್ಲಿ ಯೋಚಿಸತಕ್ಕದ್ದೂ ಅಲ್ಲ. ಹಾಗೆ ಯೋಚಿಸುವದು ಶಾಸ್ತ್ರೀಯವೂ ಅಲ್ಲ. ಇನ್ನೇನಾದರೂ ಬೇರೆ ಪ್ರಶ್ನೆಗಳನ್ನು ಕೇಳಬೇಕೆಂತ ಇದ್ದರೆ ಕೇಳು''ಎಂದರು.

ರಾಮಶೆಟ್ಟಿಯು ''ಮಹಾತ್ಮರೇ, ಇಲ್ಲಿಗೆ ಬಂದಮೇಲೆ ನನಗೆ ಧನದ ಚಿಂತೆಯೇ ಬಿಟ್ಟುಹೋಯಿತು. ಆದರೆ ಈ ಕಾಲದಲ್ಲಿ ವರ್ಣಾಶ್ರಮಧರ್ಮಗಳು ತಲೆಕೆಳಗಾಗಿ ನಡೆಯುತ್ತಾ ಇವೆಯಷ್ಟೆ. ಈಗ ಬ್ರಾಹ್ಮಣರಿಗೆ ಬ್ರಾಹ್ಮಣ್ಯವು ಹೇಗೋ ಹಾಗೆ ವೈಶ್ಯರಿಗೆ ವೈಶ್ಯತ್ವವೂ ಉಳಿದಿರುವದಲ್ಲವೆ? ಹೀಗಿರುವಲ್ಲಿ ವೇದೋಕ್ತ ರೀತಿಯಿಂದ ಕರ್ಮಗಳನ್ನು ಮಾಡುವದಕ್ಕೆ ನಮಗೆ ಪೂರ್ಣಾಧಿಕಾರವು ಉಂಟೆ ಇಲ್ಲವೆ? ಈ ವಿಷಯದಲ್ಲಿ ತಮ್ಮ ನಿಶ್ಚಯವಾದ ಅಪ್ಪಣೆ ಕೊಡಿಸಬೇಕು.

ಆಗ ವೇದವ್ಯಾಸರು ''ಅಯ್ಯಾ, ಒಳ್ಳೆಯ ಪ್ರಶ್ನೆಯನ್ನು ಹಾಕಿದೆ. ವೈಶ್ಯರಿಗೆ ವೈಶ್ಯಧರ್ಮ ಇಲ್ಲವೆಂದು ಯಾರು ಹೇಳಿಯಾರು? ಈ ಕಾಲಕ್ಕೆ ಬ್ರಾಹ್ಮಣರು ಬ್ರಾಹ್ಮಣಧರ್ಮವನ್ನು ಆಚರಿಸುವದಕ್ಕಿಂತ ವೈಶ್ಯರು ತಮ್ಮ ಧರ್ಮವನ್ನು ಹೆಚ್ಚಾಗಿ ಅವಲಂಬಿಸುತ್ತಾ ಇರುವರು. ಆದರೆ ನೀನು ಪಡೆದಿರುವ ಸಂದೇಹದ ನಿವೃತ್ತಿ ಯುಂಟಾಗುವದಕ್ಕೆ ಒಂದು ಸಂದರ್ಭವನ್ನು ಹೇಳುವೆನು. ಇದನ್ನು ಸಾವಧಾನ ವಾಗಿ ಕೇಳು. ಬಹುಕಾಲಕ್ಕೆ ಹಿಂದೆ ಭರತಖಂಡವು ಅನ್ಯಾಕ್ರಾಂತವಾಗಿ ಸಕಲವರ್ಣದ ವರಲ್ಲಿಯೂ ಹಾಹಾಕಾರವುಂಟಾಗಲು ವೈಶ್ಯರು ತಮ್ಮ ವೈದಿಕ ಕರ್ಮೋಪಕರಣಗಳು, ಅಗ್ನಿಹೋತ್ರಾದಿಗಳು, ದೇವತಾರ್ಚನೆಯ ಸಾಮಗ್ರಿಗಳು ಇವೆಲ್ಲವನ್ನೂ ತಮಗೆ ಪುರೋಹಿತರಾಗಿದ್ದ ಭಾಸ್ಕರಪಂತರಕಡೆ ಇಟ್ಟು ಈ ಆಪತ್ಕಾಲ ತೀರುವವರೆಗೂ ತಮಗೋಸ್ಕರ ದೇವತಾರ್ಚನೆ ಮುಂತಾದವುಗಳನ್ನು ನಡೆಸಿಕೊಂಡು ಬರ ಬೇಕೆಂದು ಕೇಳಿಕೊಂಡು, ಅವರಲ್ಲಿ ಪೂರ್ಣವಿಶ್ವಾಸವಿಟ್ಟುಬೇಕಾದ ದ್ರವ್ಯಸಹಾಯ ವನ್ನು ಕೊಟ್ಟು ಅಲ್ಲಲ್ಲಿ ಚದುರಿಹೋಗಿ ಪ್ರಾಣರಕ್ಷಣೆಯನ್ನು ಮಾಡಿಕೊಂಡರು. ಆ ಕಾಲದಿಂದ ಅನಾದಿಯಾಗಿ, ನಡೆದುಬಂದಿದ್ದ ವೇದೋಕ್ತ ಕರ್ಮಗಳು ವಿಚ್ಛಿನ್ನವಾದವು. ವೈಶ್ಯರು ಬಹುಕಾಲದವರೆಗೂ ಈ ರೀತಿಯಾಗಿ ಭಾಸ್ಕರಪಂತರ ಅನುಜ್ಞೆಯಿಂದ ಸಕಲ ಕರ್ಮಗಳನ್ನೂ ಪುರಾಣೋಕ್ತವಾದ ಪದ್ಧತಿಯನ್ನನುಸರಿಸಿಕೊಂಡು ಬ್ರಾಹ್ಮಣರ

ಸಹಾಯದಿಂದ ನಡೆಸುತ್ತಾ ಬಂದರು. ಈ ಕಾಲದಲ್ಲಿ ಸ್ವಭಾವವಾಗಿಯೇ ಅವರಿಗೆ ತಿರುಗಿ ವೈದಿಕಕರ್ಮವನ್ನು ಅನುಸರಿಸಬೇಕೆಂಬ ನ್ಯಾಯವಾದ ಕೋರಿಕೆಯುಂಟಾಗಿದೆ. ಆದರೆ ಈ ಕಾಲದ ಬ್ರಾಹ್ಮಣರು ಈ ವಿಷಯದಲ್ಲಿ ಶಾಸ್ತ್ರೀಯ ಸಮ್ಮತಿಯನ್ನು ಕಾಣದೆ ಏನನ್ನೂ ಹೇಳುವವರಾಗಿಲ್ಲ. ಮಠಾಧಿಪತಿಗಳಿಗೂ ಕೂಡ ಈ ಧರ್ಮಸೂಕ್ಷ್ಮವು ಗೊತ್ತಾಗುವದು ಸಾಧ್ಯವಿಲ್ಲ. ಶೀಘ್ರದಲ್ಲಿಯೇ ಮಹಾ ಪುರುಷನು ಅವತಾರ ಮಾಡುವನು. ಅವನಿಂದ ಸಕಲಧರ್ಮ ವ್ಯವಸ್ಥಾಪನೆಯೂ ಆಗುವದು. ಈ ವಿಷಯದಲ್ಲಿ ಏನೇನೂ ಸಂಶಯಪಡಬೇಕಾದ್ದಿಲ್ಲ'' ಎಂದರು.

ಚಿಂತಲರಾಮಶೆಟ್ಟಿಯು ''ಮಹರ್ಷಿಗಳೇ, ತಮ್ಮ ವಾಕ್ಯದಂತೆಯೇ ಆಗಬೇಕು. ಇದಿರಲಿ. ನನಗೆ ಮತ್ತೊಂದು ದೊಡ್ಡಸಂದೇಹ ಬಂದಿದೆ. ನಾನೇನು ಬದುಕಿದ್ದೇನೆಯೆ ಅಥವಾ ಸತ್ತು ಈ ಲೋಕಕ್ಕೆ ಬಂದಿದ್ದೇನೆಯೋ ಇದೇನು ಸ್ವಪ್ನವೋ ಎಚ್ಚರವೋ ? ನನಗೇನೂ ತೋಚುವುದಿಲ್ಲ. ಈ ವಿಷಯದಲ್ಲಿ ಅಪ್ಪಣೆ ಕೊಡಬೇಕು''ಎಂದು ಕೇಳಿದನು.

ವೇದವ್ಯಾಸರು ''ಎಲೈ ವೈಶ್ಯೋತ್ತಮನೆ, ಸಕಲ ವೇದಾಂತಶ್ರವಣವನ್ನೂ ಮಾಡಿದ ನಿನಗೆ ಈ ಸಂದೇಹಗಳು ಬಂದ ಕಾರಣವೇನು? ಬದುಕಿ ಇರುವದನ್ನಾಗಲಿ ಸತ್ತು ಇರುವದನ್ನಾಗಲಿ, ಕನಸು ಕಾಣುತ್ತಿರುವದನ್ನಾಗಲಿ, ಎಚ್ಚರವಾಗಿರುವದನ್ನಾಗಲಿ, ಯಾವ ನ್ಯಾಯದಿಂದ ನಿರ್ಧರಿಸಲಾದೀತು? ನೀನು ಮಾತನಾಡುತ್ತಲೂ ನ್ಯಾಯವನ್ನು ಕೇಳುತ್ತಲೂ ಜ್ಞಾನದೊಡನೆ ಕೂಡಿ ವ್ಯವಹರಿಸುತ್ತಲೂ ಇರುವಲ್ಲಿ ನಿನ್ನನ್ನು ಸತ್ತವನು ಎಂತ ಹೇಗೆ ಹೇಳಬಹುದು? ಅಥವಾ ನಿನಗೆ ಇದು ಸ್ವಪ್ನವು ಎಂದು ತೋರಿದರೆ, ನಿನ್ನ ಸ್ವಪ್ನದಲ್ಲಿ ಕಾಣಬರುವ ನನ್ನ ಮಾತಿಗೆ ಯಾವ ಪ್ರಮಾಣವು ಉಂಟಾದೀತು?'' ಎಂದರು.

ಚಿಂತಲರಾಮಶೆಟ್ಟಿಯು ''ಹಾಗಾದರೆ, ಮಹಾಸ್ವಾಮಿಗಳು, ಎಚ್ಚರ, ಕನಸು, ಎಂಬಿವುಗಳಿಗೆ ಲಕ್ಷಣವೇ ಇಲ್ಲವೆ? ತಾವು ಸಂದೇಹವನ್ನು ತೀರಿಸದೆ ಮತ್ತೆ ಯಾರು ತೀರಿಸಿಯಾರು? ನಾನು ಈಗ ವ್ಯವಹರಿಸುತ್ತಾ ಇರುವೆನೆಂಬುದು ನಿಜವಾದಾಗ್ಯೂ ನನ್ನ ಹಿಂದಿನ ಸಂಸ್ಕಾರವೆಲ್ಲ ನನ್ನಲ್ಲಿ ಇದ್ದೇ ಇರುವದು. ಗುಹೆಯಿಂದ ನಾನು ಅದೇ ದೇಹದಿಂದ ಇಲ್ಲಿಗೆ ಬಂದೆನೆ, ಅಥವಾ ದೇಹಾಂತರದಿಂದ ಬಂದೆನೆ? ಯಾರ ಅನುಗ್ರಹದಿಂದ ಇಲ್ಲಿ ಬಂದೆನೋ, ಇದೊಂದೂ ತಿಳಿಯುವಂತಿಲ್ಲವಲ್ಲ?'' ಎಂದನು.

ಇದನ್ನು ಕೇಳಿ ವೇದವ್ಯಾಸರು "ಎಲೈ ಶ್ರೇಷ್ಠಿಯೆ, ಕನಸು ಎಚ್ಚರ ಎಂಬುದು ಎರಡೂ ಆಯಾ ಕಾಲದಲ್ಲಿ ಎಚ್ಚರವಾಗಿಯೂ ಸತ್ಯವಾಗಿಯೂ ತೋರುತ್ತದೆ. ಅವಸ್ಥಾಂತರದಲ್ಲಿ ಬೇರೆಯಾಗಿ ತಿಳಿಯಲ್ಪಡುತ್ತವೆ. ಆದ್ದರಿಂದ ಯಾವ ಅವಸ್ಥೆಯ ನಿಜಸ್ವರೂಪವಾಗಲಿ ಆ ಅವಸ್ಥೆಯಲ್ಲಿಯೇ ನಿರ್ಧರಿಸುವದು ಸಾಧ್ಯವಲ್ಲ. ಈ ನಿನ್ನ ತಾತ್ಕಾಲಿಕಾವಸ್ಥೆಯನ್ನು ಕೂಡ ಇಂಥದ್ದೆಂದು ಈಗ ನಿಶ್ಚಯಿಸುವದು ಆಗುವದಿಲ್ಲ. ಶ್ರುತಿಯು ಕೂಡ "ತ್ರಯಃ ಸ್ವಪ್ನಾಃ" ಎಂಬುದಾಗಿ ಮೂರವಸ್ಥೆಗಳನ್ನೂ ಸ್ವಪ್ನಪ್ರಾಯವಾಗಿ ತಿಳಿಸುತ್ತಿದೆ. ಈ ಅವಸ್ಥೆಗಳಲ್ಲಿಯೇ ಬದುಕಿರುವದು. ಸತ್ತಿರುವದು ಎಂಬ ವ್ಯವಹಾರವೂ ಉಂಟಾಗುತ್ತದೆಯಾದ್ದರಿಂದ ಅವಸ್ಥೆಯ ನಿರ್ಣಯವೇ ಆಗದೆ ಇರುವಾಗ ಸಪ್ರಾಣ, ಅಪ್ರಾಣ ಎಂಬ ಸ್ಥಿತಿಗಳನ್ನು ನಿರ್ಣಯಿಸುವದು ಹೇಗೆ? ಎಲ್ಲವೂ ವಂಧ್ಯಾಪುತ್ರನ ಹಾಗೆ ಮಿಥ್ಯಾಭೂತವಾದದ್ದು. ಈ ಭ್ರಾಂತಿಗೆಲ್ಲ ಅಧಿಷ್ಠಾನ ಭೂತನಾದ ಆತ್ಮನೇ ಸತ್ಯನು, ಸದಾನಂದ ರೂಪನು, ನಿತ್ಯನು, ನಿರ್ಮಲನು ಎಂಬ ಈ ವೈದಿಕಜ್ಞಾನವನ್ನು ಸಂಪಾದಿಸಿ ಸುಖಿಯಾಗು" ಎಂತ ಹೇಳಿ ಮುಗಿಸಿದರು.

ಶ್ರೇಷ್ಠಿಯು ಇದನ್ನೆಲ್ಲ ಯೋಚಿಸಿ ಏನೂ ತೋಚದವನಾಗಿ ವ್ಯಾಸ ದೇವರಿಗೆ ಸಾಷ್ಟಾಂಗಪ್ರಣಾಮವನ್ನು ಮಾಡಿ ಆ ಸ್ಥಲವನ್ನು ಬಿಟ್ಟು ಸಮೀಪದಲ್ಲಿದ್ದ ಬಹುರಮ್ಯವಾದ ಒಂದು ಉದ್ಯಾನವನಕ್ಕೆ ತೆರಳಿದನು. ಅಲ್ಲಿ ಅತಿ ರೂಪಲಾವಣ್ಯ ದೊಡನೆ ಕೂಡಿ ನಿತ್ಯಯವ್ವನವನ್ನು ಹೊಂದಿದ್ದ ಇಬ್ಬರು ಸುಂದರಾಂಗಿಯರೂ ಒಬ್ಬ ಬಾಲಕನೂ ಇವನನ್ನು ಎದುರುಗೊಂಡು ವಂದನೆ ಮಾಡಿದರು.

ಆಗ ಶ್ರೇಷ್ಠಿಯು ಅವರನ್ನು ನೋಡಿ ಅವರ ಗುರ್ತನ್ನು ಅರಿಯದೆ ಎಲೈ ನೀವು ಯಾರು? ನನ್ನ ಕಡೆಗೆ ಏಕೆ ಬಂದಿರಿ?" ಎಂದನು. ಅದಕ್ಕೆ ಹಿರಿಯಾಕೆಯು ಹೇಳಿದ್ದೇನೆಂದರೆ "ಓ ಮಹಾಪುರುಷನೆ, ನಾನು **ಶೀಲವು;** ಈ ನನ್ನ ತಂಗಿಯು **ಸತ್ಯವು;** ಈ ಹುಡುಗನು ನನ್ನ ಮಗನಾದ **ಯಶಸ್ಸು.** ನೀನು ನಮ್ಮಗಳಲ್ಲಿ ಅತಿ ಪ್ರೀತಿಯಿಂದ ಇರುತ್ತಿದ್ದರೂ ಈಗ ನಮ್ಮ ಪರಿಚಯವೇ ಇಲ್ಲದ ಹಾಗೆ ನಟಿಸುವದನ್ನು ಕಂಡು ನಮಗೆ ಆಶ್ಚರ್ಯವಾಗಿರವದು. ನನ್ನನ್ನು ನೀನು ಒಂದು ಕ್ಷಣವೂ ಬಿಟ್ಟವನಲ್ಲ. ನಾನಿದ್ದ ಕಡೆ ನನ್ನ ತಂಗಿಯೂ ಇರುವಳೇ ಹೊರತು ನನ್ನ ಬಿಟ್ಟು ಆಕೆಯು ಇರುವಳಲ್ಲ. ನಿನಗೆ ಮುಂದೆ ಕುಲೋದ್ಧಾರಕನಾದ ಈ ಯಶಸ್ಸು ಪುತ್ರನಾಗಿ ಹುಟ್ಟಿರುವನು. ಇಲ್ಲಿ ನಿನಗೆ ಬೇಕಾದ ಉಪಚಾರಗಳನ್ನು ಮಾಡುವದಕ್ಕೆ ಸಿದ್ಧನಾಗಿ ನಿನ್ನ ನೆರಳಿನಂತೆ ನಾವು ಇಲ್ಲಿಗೆ ಬಂದಿರುವೆವು.

ಶ್ರೇಷ್ಠಿ :- ಹಾಗಾದರೆ ನಿಮಗೆ ಈ ಪ್ರದೇಶವು ಗೊತ್ತುಂಟೆ? ಅಲ್ಲಿ ಮರದ ಕಳಗೆ ಕೂತಿರುವವರು ಯಾರು?

ಶೀಲ :- ನಾವು ಯಾವಾಗಲೂ ಇಲ್ಲಿ ವಾಸಮಾಡುವೆವು. ಈ ಮಧ್ಯದಲ್ಲಿ ಭೂಲೋಕದಲ್ಲಿ ನಮ್ಮನ್ನು ಆದರಿಸುವವರು ಯಾರಾದರೂ ಉಂಟೇನೋ ಎಂಬ ಕುತೂಹಲದಿಂದ ಬಹುರಾಜ್ಯಗಳನ್ನು ಸುತ್ತಿದೆವು. ಬ್ರಾಹ್ಮಣರು, ರಾಜರು, ವೈಶ್ಯರು, ಇತರರು- ಎಲ್ಲರ ಬಳಿಗೂ ಹೋಗಿ ನೋಡಿದೆವು. ಆದರೆ ಈ ಕಾಲದ ಮಾಹಾತ್ಮ್ಯದಿಂದ ಸಕಲವರ್ಣದವರೂ ಧನಕನಕವಸ್ತುವಾಹನವನಿತಾವಿಹಾರಾದಿ ದುರ್ವ್ಯವಹಾರಗಳಲ್ಲಿ ಮನಸ್ಸನ್ನು ನಾಟಿಸಿ ಜೀವಿತಕಾಲವನ್ನೆಲ್ಲ ವ್ಯರ್ಥಮಾಡಿ ಕೊಳ್ಳುವದರಲ್ಲಿ ನಿಪುಣರಾಗಿ 'ನವನಾಗರಿಕರು' ಎಂಬ ಬಿರುದನ್ನು ಹಾಕಿಕೊಂಡು ಆದರಿಂದಲೇ ಸಂತೋಷಪಡುವರೇ ಹೊರತು ಶೀಲ, ಸತ್ಯ, ಯಶಸ್ಸು - ಮೂರನ್ನೂ ಕಣ್ಣೆತ್ತಿನೋಡದೆ ಇವುಗಳನ್ನು ತೃಣಕ್ಕಿಂತ ಕಡಿಮೆಯಾಗಿ ಎಣಿಸುವರು. ಆದ್ದರಿಂದಲೇ ಅವರಿಂದ ತಿರಸ್ಕೃತರಾಗಿ ನೀನು ಇರುವ ಸ್ಥಳಕ್ಕೆ ಬಂದೆವು. ಅಲ್ಲಿ ಕೂತಿರುವವರು ಜಮದಗ್ನಿ ಮಹರ್ಷಿಗಳು. ಇನ್ನು ಅವರ ಸುತ್ತಮುತ್ತಲೂ ಇರುವವರು ಭೂಲೋಕದಲ್ಲಿ ದಯೆ, ಶಾಂತಿ, ಔದಾರ್ಯ, ನಿಷ್ಕಾಮಕರ್ಮ, ಧರ್ಮ, ನೀತಿ, ಜ್ಞಾನ - ಮುಂತಾದವುಗಳನ್ನು ಸಂಪಾದಿಸಿದವರು.

ಶೀಲೆ :- ಹಾಗೆಯೇ ಆಗಬಹುದು.

ಶ್ರೇಷ್ಠಿ :- (ಸ್ವಗತ) ಓಹೋ! ವ್ಯಾಸದೇವರು ನಿಶ್ಚಯವಾಗಿ ಹೇಳಲಿಲ್ಲವಾದರೂ ಇವರ ಮಾತಿನಿಂದ ನಾನು ಸತ್ತೇ ಹೋಗಿರಬೇಕಲ್ಲವೆ? ಇಲ್ಲದಿದ್ದರೆ ಸತ್ತವರ ಗುಂಪೆಲ್ಲ ಇಲ್ಲಿ ಎಲ್ಲಿ ಬಂತು? ಆದರೆ ಈ ವ್ಯಾಸದೇವರು ಕೂಡ ಸತ್ತವರು ಎಂತ ಹೇಳಬಹುದೆ? ಅವರು ಚಿರಂಜೀವಿಗಳಲ್ಲವೆ? ಇದು ಒಂದೇ ರವೆಯಷ್ಟು ಧೈರ್ಯವನ್ನು ಕೊಡುವದು. ಇಲ್ಲಿ ಬದುಕಿರುವವರು ಕೂಡ ಬರಬಹುದು ಎಂದು ತೋರುತ್ತದೆ. ಅದಂತಿರಲಿ, ಪ್ರಾಣದಲ್ಲಿ ಯಾವ ಆಶೆಯೂ ಇಡದ ನನಗೆ ಈ ವಿಚಾರ ಏಕೆ? ಅಂತೂ ಈ ಸ್ಥಳದ ಮಾಹಾತ್ಮ್ಯವನ್ನು ಕೊನೆಗಾಣಬೇಕು. ಮುಂದೆ ಹೋಗೋಣ - (ಪ್ರಕಾಶ) ಎಲೈ ಶೀಲೆಯೆ, ನಾವು ಮೊದಲು ಆ ಜಮದಗ್ನಿ ಮಹರ್ಷಿಗಳನ್ನು ನೋಡೋಣ. ಆಮೇಲೆ ಈ ಸ್ಥಳದ ಇತರ ಪ್ರಾಂತ್ಯಗಳಿಗೆ ನಿಮ್ಮ ಸಹಾಯದಿಂದ ಹೋಗಬೇಕೆಂದು ಮಾಡಿರುವೆನು.

ಶ್ರೇಷ್ಠಿಯೂ ಜಮದಗ್ನಿ ಮಹರ್ಷಿಗಳನ್ನು ನೋಡಿ ಸಾಷ್ಟಾಂಗವಾಗಿ ನಮಸ್ಕರಿಸಿದನು. ಆ ಋಷಿವರ್ಯರು ಕಣ್ತೆತ್ತಿನೋಡಿ ''ಎಲೈ ಕುಮಾರಕನೆ, ನಿನ್ನ ಮನಸ್ಸಿನಲ್ಲಿ ಇರುವ ಚಿಂತನೆಗಳು ನನಗೆ ಗೊತ್ತಾಯಿತು, ನೀನು ವಿಚಾರಪಡಲು ಕಾರಣವಿಲ್ಲ. ಸಾಕ್ಷಾದ್ಗಂಗಾಧರೇಶ್ವರನ ಅನುಗ್ರಹವನ್ನು ನೀನು ಪೂರ್ಣವಾಗಿ ಸಂಪಾದಿಸಿದ್ದೀಯೆ. ಕೇಳಬೇಕಾದದ್ದು ಏನಾದರೂ ಇದ್ದರೆ ಕೇಳು.''

ಶ್ರೇಷ್ಠಿ :- ಮಹರ್ಷಿಗಳೇ, ನನ್ನ ಚಿತ್ತವೃತ್ತಿಯು ಶಾನೆ ಭ್ರಾಂತಿಗೊಂಡಿದೆ. ಈ ಹೆಂಗಸರೂ ಈ ಮಗನೂ ನನ್ನವರು ಎಂಬುದಾಗಿ ಹೇಳುತ್ತಿದ್ದಾರೆ. ಹಾಗಾದರೆ ನನ್ನ ಹೆಂಡತಿಯೂ ಮಕ್ಕಳೂ ಏನಾದರೋ ತಿಳಿಯಲಿಲ್ಲವಲ್ಲ! ಶೀಲೆಯನ್ನು ನಾನು ಪಾಣಿಗ್ರಹಣಮಾಡಿಕೊಂಡದ್ದು ನನ್ನ ನೆನಪಿನಲ್ಲಿಯೇ ಇಲ್ಲ. ನಾನು ಸತ್ಯವಾಗಿ ವಿವಾಹಮಾಡಿಕೊಂಡ ಹೆಂಡತಿಯೂ ನನ್ನ ಮಕ್ಕಳೂ ಇಲ್ಲಿಲ್ಲ. ಇವರಲ್ಲಿ ಯಾರು ನನ್ನ ನಿಜವಾದ ಪತ್ನಿ, ಯಾರು ನಿಜವಾದ ಪುತ್ರರು ಎಂಬುದು ನನ್ನ ಮನಸ್ಸನ್ನು ಕದಡಿಬಿಟ್ಟಿದೆ. ಮೊದಲು ಈ ವಿಷಯದಲ್ಲಿ ತಾವು ನನಗೆ ವಿವರಿಸಬೇಕು.

ಜಮದಗ್ನಿ :- ಅಪ್ಪ, ನೀನು ಅಗ್ನಿಸಾಕ್ಷಿಕವಾಗಿ ಮದುವೆಯಾದ ಹೆಂಡತಿಯರು ಜನ್ಮಜನ್ಮಕ್ಕೂ ಬೇರೆಬೇರೆಯಾಗಿ ಇರುವರು. ಆದರೆ ಅವರಿಗೂ ನಿನಗೂ ಇರುವ ಸಂಬಂಧವು ನಿತ್ಯವಲ್ಲ. ಈ ಶೀಲೆ, ಸತ್ಯ ಇವರ ಸಂಬಂಧವು ಜನ್ಮಜನ್ಮಾಂತರ ಗಳಲ್ಲಿಯೂ ತಪ್ಪುವ ಹಾಗಿಲ್ಲ; ನೀನು ತಪ್ಪಿಸಿಕೊಳ್ಳುವವನೂ ಅಲ್ಲ. ಈ ಮಗನ ಸಂಬಂಧವೂ ಅಂಥ ಅತಿಶಯವಾದದ್ದೇ. ಇದು ನಿನಗೆ ಅನಾದಿಯಾಗಿ ಸ್ವಭಾವದಿಂದಲೇ ಉಂಟಾಗಿರುವದರಿಂದ ನೀನು ಅಧರ್ಮ ಪ್ರವೃತ್ತಿಯಾದೀತೆಂದು ಸಂಶಯಪಡಬೇಡ.

ಶ್ರೇಷ್ಠಿ: - (ಸ್ವಗತ) ಈಗ ಸರಿಯಾಗಿ ಹೋಯಿತು, ನನ್ನ ಹೆಂಡತಿ ಮಕ್ಕಳು, ಭೂಲೋಕದಲ್ಲಿಯೇ ಇರುವರು. ನಾನು ಆ ಲೋಕವನ್ನು ಬಿಟ್ಟು ಗುಹೆಯಲ್ಲಿ ಪ್ರಾಣತ್ಯಾಗವನ್ನೇ ಮಾಡಿಕೊಂಡಿರಬೇಕು. ಹಾಗಾದರೆ ಸತ್ತವರಿಗೆ ಬದುಕಿರುವವರಿಗೆ ಇರುವಂತೆಯೇ ಇಂಥ ಜ್ಞಾನವೂ ಯೋಚನೆಗಳೂ ಉಂಟಾಗುವದು ಸಂಭವವೆ? ಗಂಗಾಧರ, ನಿನ್ನ ಲೀಲೆಯು ಸರ್ವಥಾ ಅವೇದ್ಯ ! ಮುಂದೆ ನೀನು ಎಲ್ಲಿ ಬಿಟ್ಟರೂ ಸರಿಯೆ. (ಪ್ರಕಾಶವಾಗಿ) ಮಹರ್ಷಿಗಳೇ, ಆತ್ಮನಿಗೆ ಜನ್ಮಾಂತರಗಳುಂಟೆಂದು ಅಪ್ಪಣೆ ಕೊಟ್ಟಿರಲ್ಲವೆ? ಅದರ ವಿಷಯ ರವೆಯಷ್ಟು ವಿವರಿಸೋಣಾಗಬೇಕು.

ಜಮದಗ್ನಿ :- ಜನ್ಮ ಎಂದರೆ ಹುಟ್ಟುವಿಕೆ. ಇದು ದೇಹವನ್ನೇ ಆರಿತದ್ದು. ಸರ್ವ ಸಾಕ್ಷಿಯಾಗಿರತಕ್ಕ ಆತ್ಮನಿಗೂ ಹುಟ್ಟುವದು, ಬೆಳೆಯುವದು ಮುಂತಾದ ವಿಕಾರಗಳನ್ನು

ಸಂಬಂಧಪಟ್ಟವುಗಳೆಂದು ತಿಳಿಯಬಾರದು. ಆತ್ಮನು ನಿತ್ಯನಾಗಿರುವದರಿಂದ ವಿಕಾರಕ್ಕೆ ಒಳಪಟ್ಟ ದೇಹಸಂಬಂಧವು ಅನಂತವಾಗಿರಬೇಕು. ಇದೇ ಜನ್ಮಾಂತರಗಳ ರಹಸ್ಯವು.

ಶ್ರೇಷ್ಠಿ :- ಆತ್ಮನ ನಿತ್ಯತ್ವವನ್ನು ಹೇಗೆ ತಿಳಿಯಬೇಕು?

ಜಮದಗ್ನಿ :- ಆತ್ಮನು ಚೈತನ್ಯವಾದದ್ದರಿಂದ, ಆತ್ಮನು ಇಲ್ಲ ಎಂದು ತಿಳಿಯುವದಕ್ಕೂ ಚೈತನ್ಯವೇ ಆಧಾರವಾದ್ದರಿಂದ ಎಷ್ಟುದೂರ ಆಲೋಚಿಸಿದ್ದರೂ ಚೈತನ್ಯಕ್ಕೆ ಉತ್ಪತ್ತಿಯೇ ಆಗಲಿ, ವಿನಾಶವೇ ಆಗಲಿ ಉಂಟಾಗುವ ಸಂಭವವೇ ಇಲ್ಲ.

ಶ್ರೇಷ್ಠಿ :- ಹಾಗಾದರೆ ಜನ್ಮಾಂತರಗಳಿಂದ ನಮಗೆ ಆಗುವ ಫಲವೇನು? ಹಿಂದಿನ ಜನ್ಮದ ಸ್ಮೃತಿಯೇ ಇಲ್ಲದೆ ಇರುವದರಿಂದ ಆಗ ಮಾಡಿದ ಕರ್ಮದ ಫಲವನ್ನೇ ಈಗ ನಾನು ಅನುಭವಿಸುತ್ತಿದ್ದೇನೆ ಎಂಬ ನಿಶ್ಚಯಜ್ಞಾನವು ಉಂಟಾಗಲಾರದು. ಆದ್ದರಿಂದ ಈ ನಂಬಿಕೆಯು ನಿಷ್ಪ್ರಯೋಜನವು.

ಜಮದಗ್ನಿ :- ಸ್ಮೃತಿಯಿಲ್ಲದೆ ಇರುವದರಿಂದ ಜನ್ಮಾಂತರವನ್ನು ಇಲ್ಲವೆಂದು ಹೇಳಕೂಡದು. ಈ ಜನ್ಮದ ವ್ಯವಹಾರಗಳಲ್ಲಿಯೇ ಸ್ಮೃತಿಯ ಅಭಾವವೂ ಮತ್ತು ವಿಪ್ರಲಂಭಕತ್ವವೂ ಕಂಡುಬರುತ್ತದೆ. ಆದ್ದರಿಂದ ಜನ್ಮನಿತ್ಯತ್ವಕಾರಣದಿಂದ ನಂಬ ಬೇಕಾದ ಜನ್ಮಾಂತರದ ಇರುವಿಕೆಯನ್ನು ಪ್ರಯೋಜನವಿರುವದು, ಅಥವಾ ಇಲ್ಲದಿರುವದು ಎಂಬುದರ ಮೇಲೆ ಖಂಡಿಸುವದಕ್ಕೆ ಆಗಲಾರದು.

ಶ್ರೇಷ್ಠಿ :- ಮಹರ್ಷಿಗಳೇ, ತಮ್ಮ ವಾಕ್ಕಿನಿಂದ ಅತಿರಹಸ್ಯವಾದ ವಿಷಯವನ್ನು ತಿಳಿದಂತಾಯಿತು. ಇನ್ನು ಅಪ್ಪಣೆ ತೆಗೆದುಕೊಳ್ಳುತ್ತೇನೆ. ಹೀಗೆಂದು ಹೇಳಿ ಜಮದಗ್ನಿಗಳಿಗೆ ಪ್ರಣಾಮಮಾಡಿ ಆ ಉದ್ಯಾನವನ್ನು ಬಿಟ್ಟು ಹೊರಗೆ ಬಂದನು. ಅವನ ಸಂಗಡ ಶೀಲೆ, ಯಶಸ್ಸು ಇವರೂ ತೆರಳಿದರು. ಕೈಲಾಸದ ವಿಚಿತ್ರವಾದ ಭಾಗಗಳನ್ನೆಲ್ಲಾ ಅವರ ಜತೆಯಲ್ಲಿ ನೋಡುತ್ತಾ ಆನಂದಪಡುತ್ತಾ ತಿರುಗಿದನು.

ಒಂದು ಪಾರ್ಶ್ವದಲ್ಲಿ ಅನೇಕ ಗೋಪುರಗಳಿರುವ ಬಹು ವಿಚಿತ್ರವಾದ ಕಟ್ಟಡವನ್ನು ನೋಡಿ, ಅದರ ಮರ್ಮವನ್ನು ತಿಳಿಯಬೇಕೆಂದು ಶೀಲೆ ಮುಂತಾದ ವರನ್ನೆಲ್ಲಾ ಕೇಳಲು ಅವರು ತಮಗೊಂದೂ ತಿಳಿಯದು ಎಂದು ಹೇಳಿದರು.

ಶ್ರೇಷ್ಠಿಯು ಮುಂದೆಹೋಗಿ ಒಂದು ಅಶ್ವತ್ಥಮರದ ಕೆಳಗೆ ಸುಖಾಸನದಲ್ಲಿ ಕುಳಿತಿದ್ದ ಒಬ್ಬ ಸುಂದರಪುರುಷನನ್ನು ನೋಡಿ ಆತನಿಗೆ ವಂದನೆಯನ್ನು ಸಮರ್ಪಿಸಿ

''ಎಲೈ ಮಹಾತ್ಮನೆ, ಈ ಮುಂದೆ ಇರುವ ಚಿತ್ರಗೋಪುರಗಳಿರುವ ಕಟ್ಟಡಗಳು ಎಂಥವು ಬಲ್ಲೆಯ'' ಎಂದು ಕೇಳಲು ಆತನು ''ಅಪ್ಪಾ, ನೀನು ಇಲ್ಲಿಗೆ ಹೊಸಬನೆಂದು ಕಾಣುತ್ತದೆ. ಈ ಪ್ರದೇಶದಲ್ಲಿರುವ ಅದ್ಭುತಗಳನ್ನು ತೋರಿಸುವೆನು. ನನ್ನೊಡನೆ ಬಾ'' ಎಂದನು. ಶ್ರೇಷ್ಠಿಯು ಆತನ ನಯವಿನಯಗಳಿಗೆ ಕೃತಜ್ಞನಾಗಿ ಆತನನ್ನು ಮುಂದಿಟ್ಟುಕೊಂಡು ಆ ಕಟ್ಟಡಗಳನ್ನು ನೋಡಲು ಹೊರಟನು. ಸಮೀಪದಲ್ಲಿ ಬಂದಾಗ ಆ ಮಾರ್ಗದರ್ಶಿಯು ''ಅಯ್ಯ, ಈ ಕಟ್ಟಡವೇ ಪ್ರಪಂಚದ ಉತ್ಪತ್ತಿಸ್ಥಿತಿ ಲಯಗಳು ನಡೆಯುವಂಥ ಸ್ಥಳ. ಒಳಗೆ ಪ್ರವೇಶಿಸಿ ಒಂದೊಂದು ವಿಶೇಷವನ್ನೂ ಹೇಳುವೆನು. ಸಾವಧಾನವಾಗಿ ಕೇಳು'' ಎಂದು ಒಳಕ್ಕೆ ಪ್ರವೇಶಿಸಿದನು.

ಮೊದಲನೆಯ ಆವರಣದಲ್ಲಿ ಜಾಜ್ವಲ್ಯಮಾನವಾಗಿ ನೋಡಲಿಕ್ಕೆ ಶಕ್ಯವಾದ ಮಹಾಕಾಂತಿಯುಳ್ಳ ಒಂದು ತೇಜೋರಾಶಿಯು ಇತ್ತು. ಅದನ್ನು ಕಂಡು ಶ್ರೇಷ್ಠಿಯು ಆಶ್ಚರ್ಯದಲ್ಲಿ ಮುಳುಗಿ ''ಮಹಾಸ್ವಾಮಿ, ಇದು ಏನು?'' ಎಂದನು. ಅದಕ್ಕೆ ಅವನು ''ಅಯ್ಯ, ಈ ಪ್ರಪಂಚವೆಲ್ಲ ಜ್ಯೋತಿಸ್ವರೂಪವಾಗಿದೆ. ನಿನ್ನ ಮುಂದೆ ಇರುವ ಜ್ಯೋತಿರಾಶಿಯೇ *(Nebula)* ಬಹಿಃಪ್ರಪಂಚಕ್ಕೆಲ್ಲ ಮೂಲ ಕಾರಣವಾಗಿರುವದು. ಈ ರಾಶಿಯು ಅಳತೆಗೆ ಸಿಕ್ಕದಂಥ ಔಷ್ಣ್ಯದಿಂದಲೂ ನೋಡಿದರೆ ಕಣ್ಣುಕೊಕ್ಕರಿಸುವಂಥ ಪ್ರಕಾಶದಿಂದಲೂ ಕೂಡಿರುವದು. ಇದರಿಂದಲೇ ಉದಕವೂ ಪೃಥ್ವಿಯೂ ಉಂಟಾಗುವವು. ಹೇಗೆಂದರೆ -ಈ ತೇಜಃ ಪುಂಜದಿಂದ ಒಂದು ಅಂಶವು ಬೇರ್ಪಟ್ಟು ನಿತ್ಯಚಲನೆಯನ್ನು ಹೊಂದಿ ಅಂತರದಲ್ಲಿ ಪ್ರಕಾಶಿಸುವಾಗ ನಕ್ಷತ್ರವೆಂತಲೂ ಆದಿತ್ಯನೆಂತಲೂ ಕರೆಸಿಕೊಳ್ಳುವದು. ಇಂಥ ಆದಿತ್ಯರು ಲೆಕ್ಕಪಕ್ಕವಿಲ್ಲದೆ ಈ ಸ್ಥಳದಿಂದ ಉತ್ಪತ್ತಿಯಾಗುತ್ತಿರುವರು. ಈ ಒಂದೊಂದು ಆದಿತ್ಯನೂ ಮೂಲತೇಜಸ್ಸಿನಿಂದ ಬೇರ್ಪಟ್ಟಮೇಲೆ ಮೊದಲು ಹಬೆಯಾಗಿದ್ದದ್ದು ಶಾಖವು ತಗ್ಗಿ ದ್ರವವಾಗಿ ಪರಿಣಮಿಸಿ, ಥಳಥಳಿಸುತ್ತಿರುವದು. ಆದ್ದರಿಂದಲೇ ನಕ್ಷತ್ರಗಳು ಒಂದು ಸಮಯದಲ್ಲಿ ಇರುವ ರೂಪವನ್ನು ಮತ್ತೊಂದು ಸಮಯದಲ್ಲಿ ಧರಿಸದೆ ಬಗೆಬಗೆಯ ದೂರಗಳನ್ನೂ ವರ್ಣಗಳನ್ನೂ ಹೊಂದುತ್ತಾ ಮಿಂಚುತ್ತಿರುವವು. ಹೀಗೆ ಅಪರಿಮಿತ ಗಾತ್ರವುಳ್ಳ ಒಂದೊಂದು ಆದಿತ್ಯನೂ ವಿಷ್ಣುಚಕ್ರದಂತೆ ಬಿಡದೆ ಸುತ್ತುತ್ತಿರುವಾಗ ಆ ಆದಿತ್ಯನ ಒಂದೊಂದು ಕಣವೂ ಅದರಿಂದ ಸಿಡಿದು ಅಂತರದಲ್ಲಿ ಬೀಳುತ್ತದೆ. ಕೂಡಲೇ ಆ ಒಂದೊಂದೂ ಗ್ರಹವಾಗಿ ಪರಿಣಮಿಸುವದು. ಹೀಗೆಯೇ ನವಗ್ರಹಗಳೂ ಭೂಲೋಕದವರ ದೃಷ್ಟಿಗೆ ಗೋಚರವಾಗುವವು. ಇವುಗಳಲ್ಲದೆ ಬೇರೆಬೇರೆ ಆದಿತ್ಯರುಗಳಿಂದ ಉಂಟಾದ ಗ್ರಹಗಳು ಅಸಂಖ್ಯಾತವಾಗಿರುವವು. ಇವುಗಳಲ್ಲಿ

ಒಂದೊಂದು ಗ್ರಹವು ಕೂಡ ಕಾಲಕ್ರಮದಲ್ಲಿ ಔಷ್ಣ್ಯವನ್ನೂ ತೇಜಸ್ಸನ್ನೂ ಕೊಂಚಮಟ್ಟಿಗೆ ಕಳೆದುಕೊಂಡು ಸರ್ವಜೀವರಾಶಿಗೂ ಯೋಗ್ಯವಾದ ವಾಸಸ್ಥಾನವಾಗುವದು. ಇದು ಎಂಥ ಆಶ್ಚರ್ಯ! ತೇಜಸ್ಸಿನಿಂದ ಉಂಟಾದ್ದೆಲ್ಲವೂ ರೂಪಾಂತರವನ್ನು ಹೊಂದಲಿ, ಅಥವಾ ರೂಪಾಂತರದಿಂದ ತಿಳಿಯಬರಲಿ, ನಿಜವಾಗಿ ತೇಜಸ್ಸೇ ಆಗಿರುವದಲ್ಲವೆ? ಆದ್ದರಿಂದ ಈ ಪ್ರಪಂಚವೆಲ್ಲ ತೇಜೋಮಯವಾಗಿದೆ'' ಎಂದನು.

ಆಗ ಶ್ರೇಷ್ಠಿಯು ಬಹು ವಿನಯದಿಂದ ಇಂತೆಂದನು. ''ಮಹಾತ್ಮರೆ, ಪ್ರಪಂಚಕ್ಕೆಲ್ಲ ಬ್ರಹ್ಮವೇ ಕಾರಣವೆಂತಲೂ, ಅದರಿಂದ ಆಕಾಶ, ವಾಯು, ತೇಜಸ್ಸು ಮುಂತಾದವುಗಳು ಕ್ರಮಕ್ರಮವಾಗಿ ಉತ್ಪನ್ನವಾಗಿರುವದೆಂತಲೂ ಕೇಳಿದೇನೆ. ಈಗ ತಾವು ಹೇಳಿದ್ದರಲ್ಲಿ ತೇಜಸ್ಸಿನಿಂದ ಮೊದಲಾಗಿ ಸರಿಹೋಯಿತು. ಆದರೆ ಆಕಾಶ ವಾಯುಗಳಿಗೆ ಸ್ಥಾನವಿಲ್ಲದೆ ಹೋಯಿತು, ಬ್ರಹ್ಮನ ವಿಚಾರವೇ ಇಲ್ಲದೆ ಹೋಯಿತು. ಇಂಥ ಸೃಷ್ಟಿಯ ಕಥೆ, ನಾಸ್ತಿಕರಿಗೆ ಸರಿಯಾದೀತೇ ಹೊರತು ವೇದಸಮ್ಮತವಾಗಲಾರದಷ್ಟೆ''.

ಅದಕ್ಕೆ ಮಾರ್ಗದರ್ಶಿಯು ''ಎಲೈ ವಿವೇಕಿಯೆ, ಒಳ್ಳೆಯ ಪ್ರಶ್ನೆಯನ್ನು ಮಾಡಿದೆ. ಆಕಾಶದಿಂದ ಉಂಟಾದ ವಾಯು ಆಕಾಶದಂತೆಯೇ ಅದೃಶ್ಯವಾಗಿರುವದರಿಂದ ದರ್ಶನಯೋಗ್ಯವಾದ ತೇಜಸ್ಸನ್ನೇ ಮೊದಲು ಮಾಡಿಕೊಂಡು ಇಲ್ಲಿ ವಿವರಿಸುವೆನು. ಆದರೂ 'ನೂಲಿನಂತೆ ಶೇಲೆ'(ಶೀರೆ) ಎಂಬ ನ್ಯಾಯದಿಂದ ಅಗ್ನಿಸ್ವರೂಪವಾದ ತೇಜಸ್ಸೂ ಔಷ್ಣ್ಯವೂ ತತ್ಕಾರಣವಾದ ಆಕಾಶವಾಯುಗಳಿಂದಲೇ ಅಲ್ಲವೆ ಬಂದಿರಬೇಕು? ಆದ್ದರಿಂದ ನೂಲಿನಲ್ಲಿ ಹೇಗೆ ಸೀರೆಯು ಅವ್ಯಕ್ತವಾಗಿ ಇದ್ದೇ ಇದೆಯೋ ಹಾಗೆ ಆಕಾಶವಾಯುಗಳಲ್ಲಿಯೂ ಈ ಎರಡು ಅಂಶಗಳು ಅವ್ಯಕ್ತವಾಗಿ ಇದ್ದೇ ಇದೆ ಎಂಬುದಾಗಿ ಪಂಡಿತರು ಒಪ್ಪಿರುವರು'' ಎಂದನು.

ಶ್ರೇಷ್ಠಿ :- ಇದೂ ಸರಿಯಾಗಿ ಹೋಯಿತು. ಆದರೆ ಬ್ರಹ್ಮವನ್ನು ಮುಟ್ಟಲೇ ಇಲ್ಲವಲ್ಲ? ಬ್ರಹ್ಮಕ್ಕೆ ಜಗತ್ಕಾರಣತ್ವವು ಹೇಗೆ ಸಿದ್ಧಿಯಾದೀತು? ಮತ್ತು ಬ್ರಹ್ಮವನ್ನು ತೇಜೋರೂಪ - ಎಂದು ಹೇಗೆ ತಿಳಿಯಬಹುದು?

(ತನ್ನ ತೇಜಸ್ಸಿನಿಂದ ಆ ಪಂಡಿಕೆ ಮುಂತಾದವುಗಳನ್ನು ನಾವು ತಿಳಿಯುವಂತೆ ಬೆಳಗಿ ತೋರಿಸುತ್ತಾನೆ. ಆದ್ದರಿಂದಲೇ ಸೂರ್ಯನನ್ನು ತೇಜೋಽವೆಂತಲೂ ಮಡಿಕೆಯನ್ನು ತೇಜೋಹೀನವಾದದ್ದೆಂತಲೂ ವ್ಯವಹರಿಸುವೆವು. ಹೀಗೆ ಉಳಿದ ಪದಾರ್ಥಗಳನ್ನು ತಿಳಿಸುವುದಕ್ಕೆ ಇಂದ್ರಿಯಗಳಿಗೆ ಸಹಾಯಕವಾಗಿರುವದು ಯಾವುದೋ ಆದನ್ನು

ತೇಜಸ್ಸೆಂದು ಕರೆಯುತ್ತೇವಾದ್ದರಿಂದ ಈ ಸೂರ್ಯನನ್ನು ಇಂದ್ರಿಯಾದಿಗಳನ್ನು ನಾವು ಕರೆಯುವುದಕ್ಕೆ ಒದಗುವ ಜ್ಞಾನವೂ ಸ್ವಯಂ ಜ್ಯೋತಿಯಾಗಿ ಪರಂಜ್ಯೋತಿ ಯೆಂತಲೂ ಪರಶಿವನೆಂತಲೂ) ಕರೆಯಲ್ಪಡುವದು. ಆದ್ದರಿಂದ ಸರ್ವ ಪರಂಜ್ಯೋತಿ ಸ್ವರೂಪ ಎನ್ನುವದಕ್ಕೆ ಯಾರ ಸಂಶಯವೂ ಇಲ್ಲ.

ಶ್ರೇಷ್ಠಿ :- ಹಾಗಾದರೆ ಅಂಧಕಾರವು ಕೂಡ ಜ್ಯೋತಿಃಸ್ವರೂಪವೆಂತಲೇ ಅಲ್ಲವೇ ಅನ್ನಬೇಕು. ಇದು ಸ್ವಭಾವಕ್ಕೆ ವಿರುದ್ಧವಲ್ಲವೇ?

ಮಾರ್ಗದರ್ಶಿ :- ಅಪ್ಪ ನೀನು ಹೇಳಿದ ಹಾಗೆ ಅಂಧಕಾರವು ಎಂಬುದೂ ಒಂದುಂಟೆ? ಅದು ಇದ್ದರೆ ಬೇರೆ ಕಾರಣವನ್ನು ಹುಡಕಬೇಕಾಗಿತ್ತು. ಆದರೆ ಸರ್ವಕಾಲದಲ್ಲಿಯೂ ತೇಜೋರಾಶಿಗಳು ಅನಂತವಾಗಿ ಪ್ರಕಾಶಿಸುತ್ತಾ ಇರುವಾಗ ಅಂಧಕಾರಕ್ಕೆ ಸ್ಥಳವೆಲ್ಲಿರುವದಯ್ಯ !

ಶ್ರೇಷ್ಠಿ :- ನಿಜ ಸ್ವಾಮಿ, ಆದರೆ ಕಣ್ಣು ಮುಚ್ಚಿಕೊಂಡರೊ? ಆಗ ಅಂಧಕಾರವಲ್ಲದೆ ಏನಿದೆ?

ಮಾರ್ಗದರ್ಶಿ :- ಕಣ್ಣುಮುಚ್ಚಿಕೊಂಡಾಗ್ಯೂ "ಈಗ ಅಂಧಕಾರ" ಎಂಬುದನ್ನು ತಿಳಿಯುವ ಆತ್ಮಜ್ಯೋತಿಯನ್ನು ಎಲ್ಲಿ ಬಟ್ಟು ಮರೆತೆಯಯ್ಯ ! ಆದ್ದರಿಂದ ಯಾವ ಅವಸ್ಥೆಯಲ್ಲಿಯೂ ತೇಜಸ್ಸಿನ ಅಭಾವವನ್ನು ತೋರಿಸುವದಕ್ಕೇ ಆಗಲಿ ಚಿಂತಿಸುವದಕ್ಕೆ ಆಗಲಿ ಸಾಧ್ಯವಿಲ್ಲ.

ಶ್ರೇಷ್ಠಿ :- ಹಾಗಾದರೆ ನಿಮ್ಮ ಮಾತಿನಿಂದ ಆತ್ಮಜ್ಯೋತಿಯೇ ಪರಂಜ್ಯೋತಿ ಯೆಂದಾಯಿತು. ಆದರೆ ಈ ಆತ್ಮನೇ ಪ್ರಪಂಚಕ್ಕೆ ಕಾರಣವೆಂದು ಹೇಗೆ ತಿಳಿಯುವದು?

ಮಾರ್ಗದರ್ಶಿ :- ಯಾವ ನ್ಯಾಯದಿಂದ ಜ್ಯೋತಿಯಿಲ್ಲದೆ ಪದಾರ್ಥವು ಅನುಭವವುಂಟಾಗುವದಿಲ್ಲವೆಂಬುದರ ಮೇಲೆ ಜ್ಯೋತಿಯೇ ಪದಾರ್ಥಗಳಿಗೆ ಕಾರಣ ಎಂದು ತಿಳಿದಿದ್ದೇವೆಯೋ ಅದೇ ನ್ಯಾಯದಿಂದ ಯಾವ ಜ್ಞಾನವನ್ನು ಬಿಟ್ಟು ಜ್ಯೋತಿಯೆಂದೂ ತಿಳಿಯುವದಕ್ಕೆ ಅಸಾಧ್ಯವೋ ಅಂಥ ಚೈತನ್ಯ ಜ್ಯೋತಿಯೇ ಸಕಲ ಬಹಿರ್ಜ್ಯೋತಿಗಳಿಗೂ ಕಾರಣವೆಂದು ಸಿದ್ಧವಾಗುವದಿಲ್ಲವೆ? ಮಣ್ಣಿಲ್ಲದೆ ಗಡಿಗೆ ಯಾಗದಿದ್ದರೆ ಗಡಿಗೆಗೆ ಮಣ್ಣೇ ಕಾರಣವಲ್ಲವೆ? ಹಾಗೆಯೇ ಜ್ಞಾನಪೂರ್ವಕ ವಾಗಿಯೇ ಪದಾರ್ಥವ್ಯವಹಾರವುಂಟಾದರೆ ಜ್ಞಾನವೇ ಸರ್ವಕ್ಕೂ ಮೂಲ ಕಾರಣವಲ್ಲವೆ? ಬ್ರಹ್ಮವೆಂದರೇನು? ಅಖಂಡಜ್ಞಾನಮಯವಾದದ್ದಲ್ಲವೆ?

ಶ್ರೇಷ್ಠಿ :- ನನಗೆ ಒಂದು ಸಂದೇಹವುಂಟಾಗಿದೆ. ಜ್ಞಾನವಿಲ್ಲದೆ ವಿಷಯವು ತಿಳಿಯಬರುವದಿಲ್ಲ; ಹಾಗೆಯೇ ವಿಷಯವಿಲ್ಲದೆ ಜ್ಞಾನಸಿದ್ಧಿಯೂ ಆಗುವದಿಲ್ಲ, ಇದರಿಂದ ಜ್ಞಾನವಿಷಯಗಳಿಗೆ ಪರಸ್ಪರ ಕಾರಣತ್ವವು ಎಂದೆಂದಿಗೂ ಸಿದ್ಧಿಸುವ ಹಾಗೆ ಕಾಣೆ.

ಮಾರ್ಗದರ್ಶಿ :- ಶಾಭಾಸಯ್ಯ. ಶ್ರೇಷ್ಠಿಯೇ, ಇದು ಸೂಕ್ಷ್ಮತಮವಾದ ವಿಚಾರ. ಆದಾಗ್ಯೂ ಹೇಳುವೆನು ಕೇಳು. ಜ್ಞಾನಕ್ಕೆ ವ್ಯತಿರಿಕ್ತವಾಗಿ ವಿಷಯವಿದ್ದರೆ ತಾನೆ ಜ್ಞಾನವು ಉಳಿದೀತು? ಎಂಬುದು ನಿನ್ನ ಸಂಶಯ. ಆದರೆ ಅಂಥದ್ದೇನೂ ಇಲ್ಲ, ಜ್ಞಾನವು ಜ್ಞಾನವನ್ನೇ ನಿರಂತರವೂ ವಿಷಯಮಾಡಿಕೊಂಡು ಇರಬಹುದು. 'ನೀನು ಜ್ಞಾನವೆಂದರೇನು?' ಎನ್ನುವಾಗ ಜ್ಞಾನರೂಪನಾದ ನಿನಗೆ ಜ್ಞಾನವೇ ವಿಷಯ ವಾಯಿತಲ್ಲವೆ? ಇದರಿಂದ ನಿನ್ನ ಸ್ವರೂಪಕ್ಕೆ ಏನು ಕುಂದಕವಾಯಿತು? ಮತ್ತು ಸ್ವಪ್ನದಲ್ಲಿ ತೋರುವ ವಿಷಯಗಳೆಲ್ಲ ಆತ್ಮಕಲ್ಪಿತವಷ್ಟೆ? ಇದರಿಂದ ಜ್ಞಾನವು ತದ್ವ್ಯತಿರಿಕ್ತವಾಗಿ ತೋರುವ ವಿಷಯಗಳನ್ನು ಕೂಡ ಕಲ್ಪಿಸಿಕೊಂಡು ವ್ಯವಹರಿಸಬಲ್ಲದು ಎಂದು ಆಗುವದಿಲ್ಲವೆ? ಇದೂ ಅಲ್ಲದೆ, ಉದಾಸೀನವೃತ್ತಿ, ಸುಷುಪ್ತಿ, ಸಮಾಧಿ- ಮುಂತಾದ ಕಾಲದಲ್ಲಿ ವಿಷಯನಾಶವಾದಾಗ್ಯೂ ಆತ್ಮನಾಶವಾಗದೆ ಇರುವದನ್ನು ಅನುಭವ ದಿಂದಲೂ ಶ್ರುತಿಗಳಿಂದಲೂ ತಿಳಿದಿದ್ದೇವಲ್ಲವೆ? ಆದರೆ ಜ್ಞಾನ ಸಂಬಂಧವೇ ಇಲ್ಲದೆ ವಿಷಯವಿರುವದನ್ನು ಯೋಚಿಸುವದಕ್ಕಾದರೂ ಸಾಧ್ಯವೆ?

ಶ್ರೇಷ್ಠಿ :- ಹಾಗಾದರೆ ಈ ಜ್ಞಾನವೇ ಬ್ರಹ್ಮವೆಂದು ತಮ್ಮ ಅಭಿಪ್ರಾಯವೆಂತ ತೋರುತ್ತದೆ.

ಮಾರ್ಗದರ್ಶಿ :- ಅಲ್ಲದೆ ಮತ್ತೇನು? ನೀನು ಚೈತನ್ಯಸ್ವರೂಪನಾಗಿ ಇರುವದ್ದರಿಂದ ಚೈತನ್ಯದಲ್ಲಿ ಭೇದಕಕಾರಣವಿಲ್ಲವಾಗಿ ನೀನೇ ಬ್ರಹ್ಮನು ಎಂಬ ಶ್ರುತಿ ವಾಕ್ಯದ ತಾತ್ಪರ್ಯ ಹೊರಟಹಾಗಾಯಿತು.

ಶ್ರೇಷ್ಠಿ :- ಇದು ದೊಡ್ಡಪ್ರಮೇಯ. ನಮ್ಮ ಅಲ್ಪಬುದ್ಧಿಗೆ ದಕ್ಕುವದು ಕಷ್ಟವೇ ಸರಿ. ಈಗ ಲೋಕದಲ್ಲಿ ನಡೆಯುವ ಸಕಲ ವ್ಯವಹಾರಗಳೂ ಮನುಷ್ಯನ ಪ್ರಯತ್ನಗಳಿಂದ ಸಾಗುವವು ಎಂದು ಕೇಳಿದ್ದೇನೆ. ಈಗಲಾದರೋ ನಿಮ್ಮ ಸತ್ಸಂಗದಿಂದ ಪ್ರಪಂಚ ವ್ಯವಹಾರಗಳಲ್ಲಿ ದೇವರಪ್ರೇರಣೆಯು ಪರಿಪೂರ್ಣವಾಗಿ ಉಂಟೆಂಬುದನ್ನು ಮನವರಿಕೆ ಮಾಡಿಕೊಂಡು ಕೃತಾರ್ಥನಾಗಿದ್ದೇನೆ.

*****

# 9. ಮನೋರಾಜ್ಯ

ಕಲಿಯುಗದಲ್ಲಿ ಸನಾತನಧರ್ಮವು ಕುಂದುತ್ತಾ ಬರುತ್ತದೆಯೆಂದು ಎಲ್ಲರಿಗೂ ವಿದಿತವಾಗಿಯೇ ಇರುವುದು. ಸಂಧ್ಯಾವಂದನ, ಅಮಾವಾಸ್ಯಾತರ್ಪಣ ಉಪಾಕರ್ಮ, ಶ್ರಾದ್ಧಾದಿಗಳು ನಾಮಾವಶೇಷಗಳಾಗಿ ಬೆಳಗುವವು. ಇಂಥ ಕಾಲ ಪರಿಪಾಕವು ತ್ರಿಕಾಲಜ್ಞರಾದ ಮಹರ್ಷಿಗಳಿಗೆ ಗೋಚರವಾಗದೆ ಇರಲಿಲ್ಲ, ಭಾಗವತ, ವಿಷ್ಣುಪುರಾಣ, ಭಾರತ- ಮುಂತಾದ ಪ್ರಸಿದ್ಧ ಗ್ರಂಥಗಳಲ್ಲಿ ಸ್ವಲ್ಪ ಮಟ್ಟಿಗೆ ಸೂಚಿತ ವಾಗಿರುವದು; ಆದಾಗ್ಗೂ ಕಲಿಯಮಾಹಾತ್ಮ್ಯೆಯು ಎಷ್ಟು ಮಟ್ಟಿಗೆ ಹೆಚ್ಚಿದಾಗ್ಯೂ ಪ್ರಾಚೀನಪದ್ಧತಿಗಳನ್ನು ಅನುಸರಿಸುವ ವ್ಯಕ್ತಿಗಳೂ, ಕುಟುಂಬಗಳೂ, ಕಡೆಯವರೆಗೂ ನಿಂತೇ ನಿಲ್ಲುವವು ಎಂಬುದಾಗಿಯೂ ಭಗವತ್ಸಂಕಲ್ಪದಿಂದ ಮುಂದೆ ಉಂಟಾಗುವ ಕೃತಯುಗಕ್ಕೆ ಇವುಗಳೇ ಬೀಜಭೂತಗಳು ಆಗುವವೆಂಬದಾಗಿಯೂ ತಿಳಿಯ ಬರುತ್ತದೆ. ಇಂಥಾ ನಮ್ಮ ಕಾಲದಲ್ಲಿ ಹಳೇ ಸಂಪ್ರದಾಯಗಳ ಹೇರಾಳ್ಕೆ ಎಲ್ಲಿ ಬಂದೀತು? ಆದಾಗ್ಯೂ ನಾನು ವಾಸವಾಗಿರುವ ಮನೆಗೆ ಹಿಂಭಾಗದಲ್ಲಿ ಒಬ್ಬ ವೈಷ್ಣವೋತ್ತಮರ ಮನೆಯುಂಟು. ಅಲ್ಲಿ ತ್ರಿಕಾಲದಲ್ಲಿಯೂ ಭಗವದಾರಾಧನೆಯೂ, ಪುರಾಣಪುಣ್ಯಕಥಾಶ್ರವಣಗಳೂ, ಸಾಂಪ್ರದಾಯಿಕ ಹಬ್ಬ ಹರಿದಿನಗಳ ಆಚರಣೆಯೂ ನಿರಂತರವಾಗಿ ನಡೆಯುತ್ತಾ ಬರುತ್ತಿವೆ. ಆದರಲ್ಲಿಯೂ ಏಕಾದಶೀ, ದ್ವಾದಶೀವ್ರತಗಳು ಪ್ರಾಮುಖ್ಯವನ್ನು ಹೊಂದಿವೆ. ತತ್ಸಾಮೀಪ್ಯದಿಂದ ನಮ್ಮ ಮನೆಯಲ್ಲಿಯೂ ಕೂಡ ಧಾರಣ ಪಾರಣಾದಿಗಳಲ್ಲಿ ಶ್ರದ್ಧೆಯು ಮಿತಿ ಮೀರಿ ಹೆಚ್ಚುತ್ತಿದೆ. ಅಂತೂ ಹಬ್ಬದ ಮಹಿಮೆಯನ್ನೂ ದ್ವಾದಶಿಯ ಪಾರಣೆಯ ಆನುಕೂಲ್ಯವನ್ನೂ ಹೆಚ್ಚಾಗಿ ಅನುಭವಿಸುತ್ತಾ ಬರುತ್ತಿದ್ದೇವೆ.

ಹೀಗಿರುವಲ್ಲಿ ಸತ್ಕರ್ಮದ ಫಲವು ಅದೃಷ್ಟವೆಂತ ಹೇಳುವದು ಸರಿಯೇ ಸರಿ; ಅದು ತಪ್ಪುವದಿಲ್ಲ ಎಂದು ನನ್ನ ಅಭುಭವದಲ್ಲಿ ಒಂದು ನಿದರ್ಶನವನ್ನು ಕೊಡುವೆನು. ಒಂದು ವಸಂತಕಾಲದಲ್ಲಿ ಶುಕ್ಲದ್ವಾದಶಿಯ ದಿನ ಎಂಟು ಘಂಟೆಗಳೊಳಗಾಗಿ ಪಾರಣೆಯನ್ನು ಮುಗಿಸಿಕೊಂಡು ಆ ದಿನವನ್ನೆಲ್ಲಾ ಯಾವ ವಿಚಾರವೂ ಇಲ್ಲದೆ ಸುಖವಾಗಿ ಕಳೆಯಬೇಕು ಎಂಬ ಆಲೋಚನೆಯು ನನಗೆ ಉಂಟಾಯಿತು. ಕೂಡಲೆ ಯಾರಿಗೂ ಏನೂ ಹೇಳದೆ ಉಡುಪನ್ನು ಹಾಕಿಕೊಂಡು ಕೈಯಲ್ಲಿರವಷ್ಟು ಹೆಚ್ಚಾಗಿಯೇ ಹಣವನ್ನು ತೆಗೆದುಕೊಂಡು ಬೀದಿಯಲ್ಲಿ ಹೊರಟೆನು. ಯಾವ

ಉದ್ದೇಶವೂ ಇಲ್ಲದೆ 'ಜಯ್ ಪರಮೇಶ್ವರ' ಎಂದು ಹೋಗುತ್ತಿರುವಾಗ ಅದೃಷ್ಟವಶಾತ್ ಒಂದು ಖಾಲಿಯಾಗಿದ್ದ ಮೋಟಾರ್‌ಕಾರನ್ನು ಇದಿರಾಗಿ ಕಂಡೆನು. ಕೂಡಲೆ ಕಾರು ನಡೆಸುವವನಿಗೆ ಸನ್ನೆಮಾಡಿ ಕಾರನ್ನು ನಿಲ್ಲಿಸಿ ಅವನಲ್ಲಿ ''ಈ ದಿನವೆಲ್ಲಾ ನನ್ನ ಸವಾರಿಮಾಡಿಸಬೇಕು'' ಎಂದು ಹೇಳಿ ಅವನ ಕೈಯ್ಯಲ್ಲಿ ಇಪ್ಪತ್ತು ರೂಪಾಯಿ ಇಟ್ಟು ಅದರಲ್ಲಿ ಕೂತು ಹೊರಟೆನು. ಅವನಿಗೆ ಈ ಕಡೆ ಆ ಕಡೆ ಎಂದು ಯಾವದನ್ನೂ ಹೇಳದೆ ಅವನು ಬಿಟ್ಟ ದಾರಿಯಲ್ಲಿಯೇ ಹೋಗುತ್ತಾ ಇದ್ದೆನು. ಪಾರಣೆಯ ಭೋಜನದ ಮಹಾತ್ಮ್ಯೆಯಿಂದಲೂ, ತಂಗಾಳಿಯಿಂದಲೂ, ವಿಧವಿಧವಾದ ನೋಟ ಗಳಿಂದಲೂ ಶೀಘ್ರದಲ್ಲಿಯೇ ನನಗೆ ನಿದ್ರಾದೇವಿಯ ಅನುಗ್ರಹವುಂಟಾಯಿತು. ಸಾರಥಿಯು ನನ್ನ ಕಡೆ ನೋಡದೆ ನನ್ನ ಸಂಕಲ್ಪದಲ್ಲಿಯೇ ಅವನಿಗೆ ಇಷ್ಟ ಬಂದ ಪರಿ ಪರಿ ಮಾರ್ಗಗಳಲ್ಲಿ ಹೆಚ್ಚಾದ ವೇಗದಿಂದ ಹೋಗುತ್ತಾ ಇದ್ದನು. ಸುಮಾರು ಹನ್ನೆರಡು ಘಂಟೆ ಆಗಿರಬಹುದು. ಆಗ ಎಚ್ಚತ್ತು ಸುತ್ತಮುತ್ತ ನೋಡಲು ಯಾವದೋ ಒಂದು ನವೀನವಾದ ದೊಡ್ಡ ಕಟ್ಟಡವನ್ನು ಇದಿರಾಗಿ ನೋಡಿದೆನು. ಸಾರಥಿಯು ಕೂಡ ಅದರ ಕಡೆಗೇ ಕಾರನ್ನು ನಡೆಸುತ್ತಾ ಇದ್ದದ್ದರಿಂದ ''ಇದು ಯಾವ ಕಟ್ಟಡ?'' ಎಂಬ ನನ್ನ ಕುತೂಹಲವನ್ನು ನೆರವೇರಿಸಿಕೊಳ್ಳಬಹುದು ಎಂದು ಯೋಚಿಸಿದೆನು. ಇದರೊಳಗೆ ಕಟ್ಟಡದ ಹೊರಬಾಗಿಲೊಳಗೆ ಪ್ರವೇಶಿಸಿ ಮೋಟಾರು ನಿಂತಿತು. ಕೂಡಲೆ ಸಾರಥಿಗೆ ಒಂದು ಕಡೆಯನ್ನು ತೋರಿಸಿ ''ಅಲ್ಲಿ ನಿಲ್ಲಿಸಿರು'' ಎಂಬ ಸನ್ನೆ ಮಾಡಿ ಕಾರಿಂದ ಇಳಿದು ಸುತ್ತಲೂ ದೃಷ್ಟಿಯನ್ನು ಪ್ರಸರಿಸಿನೋಡಲು ಅಲ್ಲಿನ ''ನ ಭೂತೋ ನ ಭವಿಷ್ಯತಿ'' ಎಂದು ತೋರಿದ ದೃಷ್ಟಿವೈಚಿತ್ರ್ಯವನ್ನು ಎಂತು ವರ್ಣಿಸಲಿ?

ಸುಮಾರು ನಾಲ್ಕಾರು ಮೈಲಿ ಚದರವುಳ್ಳ ಕಾಂಪೌಂಡಿನ ಮಧ್ಯದಲ್ಲಿ ಈ ಸುಂದರವಾದ ಕಟ್ಟಡವಿತ್ತು. ಅನೇಕ ಜನಗಳು ವಿವಿಧ ವರ್ಣಾಶ್ರಮಗಳಿಗೆ ಸಂಬಂಧಪಟ್ಟು ವಿವಿಧ ವಯಸ್ಕರಾಗಿ ಹೆಂಗಸರೂ ಗಂಡಸರೂ ಅಸಂಖ್ಯಾತರಾಗಿ ಬಹು ಉತ್ಸಾಹದಿಂದ ತಿರುಗಾಡುತ್ತಿದ್ದರು. ಒಂದು ಕಡೆ ಎತ್ತರವಾದ ಮರಗಳು ಇದ್ದವು. ಅವುಗಳು ಪುಷ್ಪಗಳಿಂದಲೂ, ಫಲಗಳಿಂದಲೂ ತುಂಬಿದ್ದವು. ಬಹು ದೂರಕ್ಕೆ ನೆರಳನ್ನು ಪ್ರಸರಿಸಿದ್ದವು. ಇನ್ನೊಂದು ಕಡೆ ಅನೇಕ ಲತಾಗೃಹಗಳೂ ಉಪವನ ಗಳೂ ಕೊಳಗಳೂ ಅಲಂಕರಿಸಿದ್ದವು. ಎಲ್ಲೆಲ್ಲಿಯೂ ಮಧುಕರಗಳ ಝೇಂಕಾರವೂ, ನಿಶ್ಚಿಂತೆಯಿಂದ ಭಕ್ತಿಭರಿತವಾದ, ಯುವಕರ ಸಂಗೀತದ ಮಾಧುರ್ಯವೂ ನನ್ನ ಮನಸ್ಸನ್ನೇ ಸೂರೆಗೊಂಡಿತು. ಇವುಗಳನ್ನೆಲ್ಲಾ ದಾಟಿ ಕಟ್ಟಡದ ಹಿಂದುಗಡೆಗೆ

ಹೋಗಲು ಅಲ್ಲಿ ರಮಣೀಯವಾದ ಒಂದು ಲೀಲಾ ಮಂಟಪವನ್ನು ಶಿಖರದಲ್ಲಿ ಉಳ್ಳ ಒಂದು ಬೆಟ್ಟವು ಕಾಣಿಸಿತು. ಆ ಬೆಟ್ಟವನ್ನು ಹತ್ತಿ ಆ ಮಂಟಪದೊಳಗೆ ಪ್ರವೇಶಿಸಿ ನೋಡಲು ಅಲ್ಲಿ ಒಬ್ಬ ಬ್ರಾಹ್ಮಣರನ್ನು ಕಂಡೆನು. ಅವರು ತೇಜಸ್ವಿಗಳಾಗಿ ಸುಮಾರು ಮೂವತ್ತುವರ್ಷ ವಯಸ್ಕರಾಗಿ ತೋರಿದರು. ಅವರೊಡನೆ ಸಂಭಾಷಿಸಲು ಅವರು ತಿರುಪತಿ ಶ್ರೀನಿವಾಸಾಚಾರ್ಯರೆಂತಲೂ ನನ್ನ ಹಾಗೆಯೇ ಅವರೂ ಸುಖವಾಗಿ ಕಾಲಕಳೆಯುವದಕ್ಕೆ ಆ ರಮ್ಯಪ್ರದೇಶಕ್ಕೆ ಬಿಜಯಮಾಡಿದ್ದರೆಂತಲೂ ತಿಳಿಯಿತು. ಅವರನ್ನು ನೋಡಿ -

''ಆಚಾರ್ಯರೆ, ಈ ಕಟ್ಟಡ ಯಾವುದು? ಇದು ಯಾವ ಪ್ರದೇಶ? ಇದರಲ್ಲಿ ಜಗತ್ತಿನಲ್ಲುಳ್ಳ ಸುಂದರವಾದ ಸಕಲ ಪದಾರ್ಥಗಳೂ ಒಂದೇಕಡೆ ಸೇರಿಸಿರುವ ಮಹಾತ್ಮರು ಯಾರು? ಇಲ್ಲಿ ಯಾವ ಭೇದವೂ ಇಲ್ಲದೆ ಸಕಲರಿಗೂ ಪ್ರವೇಶವು ಹೇಗೆ ಲಭಿಸುವಂತಾಯಿತು? ಒಂದು ನದಿಯು ಮಾತ್ರ ಇದ್ದಿದ್ದರೆ ಇದನ್ನೇ ಸ್ವರ್ಗವೆಂದು ಎಣಿಸಲಾಗದೆ?'' ಎಂದೆನು.

ಶ್ರೀ :- ''ಸ್ವಾಮಿ, ತಮ್ಮನ್ನು ನೋಡಿದರೆ ವಯೋವೃದ್ಧರಾಗಿ ಕಾಣಿಸುತ್ತೀರಿ. ಇಷ್ಟು ಕಾಲವೂ ಈ ಪ್ರದೇಶವು ತಮ್ಮ ಜ್ಞಾನಕ್ಕೆ ಗೋಚರವಾಗದೆ ಇರುವುದು ಆಶ್ಚಯವೇ ಸರಿ. ಇದು ಒಬ್ಬ ಮಹಾತ್ಮರು ಸಕಲಮತಸಾಮಂಜಸ್ಯವನ್ನು ಏರ್ಪಡಿಸುವದಕ್ಕೂ, ಸಕಲ ಜನಗಳಿಗೂ ಪರಸ್ಪರ ಸೌಹಾರ್ದತೆಯನ್ನು ಉಂಟುಮಾಡುವದಕ್ಕೂ ನಿರ್ಮಿಸಿರುವರು. ಕಟ್ಟಡದ ಒಳಗೆ ಸರ್ವಶಾಸ್ತ್ರಗಳಿಗೂ ಸಂಬಂಧಪಟ್ಟ ಪುಸ್ತಕ ಭಂಡಾರವು ಅನಂತ ವಾಗಿರುವದು. ಬಂದವರ ಶೈತ್ಯೋಪಚಾರಗಳಿಗೆ ಅನುಕೂಲವಾಗುವಂತೆ ಸುಖಕರ ವಾದ ಭಕ್ಷ್ಯಭೋಜ್ಯಾದಿಗಳನ್ನು ಏರ್ಪಡಿಸಿರುತ್ತಾರೆ. ನದಿಯೊಂದಿಲ್ಲ ಎಂಬ ನಿಮ್ಮ ಕೊರತೆಯನ್ನು ದೂರಮಾಡೋಣವಾಗಲಿ. ಈ ಕಡೆ ಕಿಟಕಿಯಿಂದ ನೋಡಿರಿ. ಅದ್ಭುತವಾದ ಹೊಳೆಯು ನಿರ್ಮಲವಾದ ನೀರಿನಿಂದಲೂ, ರತ್ನಗಳಂತಿರುವ ಸೋಪಾನಗಳಿಂದಲೂ, ಉಭಯತೀರಗಳಲ್ಲಿಯೂ ವಿವಿಧ ವರ್ಣಗಳುಳ್ಳ ಪುಷ್ಪ ಗಳಿಂದಲೂ, ಷಡ್ರಸೋಪೇತವಾದ ಫಲಗಳಿಂದಲೂ, ವಿಹಾರಭೂಮಿಯಿಂದಲೂ ಶೋಭಿಸುತ್ತಿರುವುದು. ಮತ್ತೂ ಅಲ್ಲಲ್ಲಿ ತೀರದ ಉತ್ತಮಭಾಗಗಳಲ್ಲಿ ಧ್ಯಾನಕ್ಕೂ ವಿಚಾರಕ್ಕೂ ಯೋಗ್ಯವಾದ ಏಕಾಂತಸ್ಥಳಗಳೂ ನಿರ್ಮಿಸಲ್ಪಟ್ಟಿರುವವು. ಇತಃ ಪರ ಪರಿಪೂರ್ಣವಾದ ಮನೋರಥವು ನಿಮಗೆ ಏನು ಉಳಿದೀತು?'' ಎಂದರು.

ಆ ನೋಟಗಳನ್ನು ಕಣ್ಣಾರೆ ಕಂಡು ಆನಂದಪೂರ್ಣವಾದ ಮನಸ್ಸಿನಿಂದ ಏನು ಹೇಳಲೂ ಅಶಕ್ತನಾದೆನು. ಬಳಿಕ ಆಚಾರ್ಯರನ್ನು ಕರೆದುಕೊಂಡು ನದಿಗೆ ಹೋಗಿ ತಾಪ ಹೆಚ್ಚಾಗಿದ್ದದ್ದರಿಂದ ಆ ಪುಣ್ಯೋದಕದಲ್ಲಿ ಸ್ನಾನವನ್ನು ಮಾಡಿ ಅಲ್ಲಿನ ಮಂಟಪಗಳ ಒಳಹೊಕ್ಕು ನೋಡಿ ಅವುಗಳ ವೈಚಿತ್ರ್ಯವನ್ನು ಸ್ಮರಿಸುತ್ತಲೇ ನಾವಿಬ್ಬರೂ ಮಧ್ಯದ ಕಟ್ಟಡವನ್ನು ಪ್ರವೇಶಿಸಿದೆವು. ಆಗ ನನಗೆ ಉಂಟಾದ ಸಂಭ್ರಮವನ್ನೂ ಔತ್ಸುಕ್ಯವನ್ನೂ ಏನೆಂದು ತಿಳಿಸಲಿ! ವಾಚಕರೆ, ನಿಮ್ಮ ಒಬ್ಬೊಬ್ಬರಿಗೂ ಅಂಥಾ ಕಟ್ಟಡವನ್ನು ದರ್ಶಿಸುವ ಭಾಗ್ಯವು ಉಂಟಾಗಬೇಕೆಂದು ನನ್ನ ಕೋರಿಕೆ. ಬೆಂಗಳೂರಿಗೆ ಇಷ್ಟು ಸಮೀಪದಲ್ಲಿ ಇರುವದರಿಂದ ತಾವೆಲ್ಲರೂ ಬಹುಶಃ ನೋಡಿಯೇ ಇರಬಹುದು. ನನಗೇನೋ ದೃಷ್ಟಪೂರ್ವವಲ್ಲ, ಮುಂದೆ ಹೋಗುತ್ತಲು ಎಲ್ಲೆಲ್ಲಿಯೂ ಪುಸ್ತಕಗಳೂ, ಆಸನಗಳೂ ಲೇಖನದ್ರವ್ಯಗಳೂ, ಸಮಾಚಾರಪತ್ರಿಕೆಗಳೂ, ಇವುಗಳನ್ನೆಲ್ಲಾ ಸಾವಧಾನವಾಗಿ ಮೈಮರೆತು ಉಪಯೋಗಿಸುವ ವಿವಿಧ ಜನಗಳೂ ತುಂಬಿರುವುದನ್ನು ನೋಡಿದೆನು. ಸಂಸ್ಕೃತ, ಕನ್ನಡ, ತಮಿಳು, ತೆಲುಗು, ಮಹಾರಾಷ್ಟ್ರ ಹಿಂದಿ, ಉರ್ದು, ಪರ್ಷಿಯನ್, ಅರಾಬಿಕ್, ಇಂಗ್ಲೀಷು - ಮುಂತಾದ ಸಕಲ ಭಾಷೆಗಳಲ್ಲಿಯೂ ಸಕಲಮತ ಸಕಲ ಸಂಪ್ರದಾಯಗಳನ್ನೂ ವಿವರಿಸುವ ಗ್ರಂಥಗಳು ಲೆಕ್ಕವಿಲ್ಲದೆ ಇದ್ದವು. ಮುಸಲ್ಮಾನರು, ಹಿಂದುಗಳು, ಕ್ರಿಶ್ಚಿಯನರು, ಬೌದ್ಧರು, ಜೈನರು, ನಾಸ್ತಿಕರು - ಎಲ್ಲರೂ ಸಮಭಾವ ದಿಂದಲೂ ಅನ್ಯೋನ್ಯತೆಯಿಂದಲೂ ಸೇರಿ ತಮ್ಮ ತಮ್ಮ ಅಭಿಪ್ರಾಯಗಳನ್ನು ಬಿಡದೆ ಇತರರ ಅಭಿಪ್ರಾಯಗಳಿಗೆ ಗೌರವವನ್ನು ಕೊಟ್ಟು ಎಲ್ಲರೂ ಕೃತಯುಗದ ಧರ್ಮವನ್ನು ಆಚರಿಸಿ ಇರುವಂತೆ ನನಗೆ ತೋರಿತು. ಈ ಕಾಲದಲ್ಲಿ ಸನಾತನ ಧರ್ಮದ ಸೋಂಕು ಎಲ್ಲಿಯೂ ಇಲ್ಲದೆ ಇದ್ದಾಗ್ಯೂ ಮುಂದೆ ನಮ್ಮ ಇಂಡಿಯಾ ದೇಶವು ಸ್ವಾತಂತ್ರ್ಯವನ್ನು ಪಡೆದು ಅಭಿವೃದ್ಧಿಗೆ ಬರಬೇಕಾದರೆ ಇಂಥಾ ಸರ್ವ ಮತಾಲಯಗಳೂ ಎಲ್ಲೆಲ್ಲಿಯೂ ಉದಿಸಬೇಕಲ್ಲವೆ? ಆಗಲೇ ಇಂಡಿಯಾ ಜನರಿಗೆ ಏಕತ್ವವುಂಟಾಗಬಹುದು. ಆದರೆ ಈ ಆಲೋಚನೆಯು ಮೀತಿಮೀರಿ ಶೇಖರಿಸಿರುವ ಹಣವಂತರಿಗೆ ಉಂಟಾದರೆ ಅಲ್ಲವೆ ನಮ್ಮ ಇಷ್ಟಾರ್ಥವು ನೆರವೇರ ಬಹುದು?

ಇದು ಹೀಗಿರಲಾಗಿ, ಆಚಾರ್ಯರೂ ನಾನೂ ಅನೇಕ ಗ್ರಂಥಗಳನ್ನು ಹುಡುಕುವಲ್ಲಿ ನಾವು ಕೆಲವು ಅಪೂರ್ವಗ್ರಂಥಗಳನ್ನು ನೋಡಿದೆವು. ಅವುಗಳಲ್ಲಿ ಶ್ರೀಮಾನ್ ಮಧ್ವಾಚಾರ್ಯರಿಂದ ಸೂಚಿಸಲ್ಪಟ್ಟ ಬ್ರಹ್ಮತರ್ಕಾದಿಗಳು ಇದ್ದವು. ಅವುಗಳನ್ನು ನೋಡುತ್ತಲೇ ಆಚಾರ್ಯರು-

''ಏನು ಸ್ವಾಮಿ, 'ಎಲ್ಲಿಯೂ ಸಿಕ್ಕಲಿಲ್ಲ', 'ಸ್ವಕಪೋಲಕಲ್ಪಿತಸೃಷ್ಟನೆ'- ಎಂಬುದಾಗಿ ಈ ಗ್ರಂಥಗಳನ್ನೆಲ್ಲಾ ಅದ್ವೈತಿಗಳು ಇಲ್ಲವೇ ಇಲ್ಲವೆಂದು ಸಾಧಿಸುವವರಲ್ಲವೆ? ಈಗ ನೀವು ಏನು ಹೇಳುತ್ತೀರಿ?''ಎಂದರು.

ಆಗ ನಾನು ''ಅದ್ವೈತಿಗಳ ತಪ್ಪೇನೂ ಇಲ್ಲ. ಇಂಥ ಪುಸ್ತಕಭಂಡಾರವನ್ನು ಎಲ್ಲಿ ತಾನೆ ಕಂಡಿರುವೆವು? ಶ್ರೀಮನ್ಮಧ್ವಾಚಾರ್ಯರು ಸರ್ವಜ್ಞರಾದರಿಂದ ಅವರಿಗೆ ಗೊತ್ತಾಗಿರಬಹುದು. ಅವರ ಈಚೆಗೆ ಅಂಥ ಮಹಾತ್ಮರು ಅವತರಿಸಲಿಲ್ಲ ವಾದ್ದ ರಿಂದಲೂ, ಈ ಗ್ರಂಥಗಳು ಹರಡಿಲ್ಲವಾದ್ದರಿಂದಲೂ, ಮಾಧ್ವರಿಗೆ ಕೂಡ ಅವು ಇದುವರೆಗೂ ಅಲಭ್ಯವಾಗಿರುವದರಿಂದಲೂ ಇಂಥ ಅಭಿಪ್ರಾಯವು ಲೋಕ ದಲ್ಲಿ ಪ್ರಸರಿಸಿರುವದರಲ್ಲಿ ಆಶ್ಚರ್ಯವೇನು? ಮೊನ್ನೆ ತಾನೆ ಶ್ರೀಮದುತ್ತರಾದಿಸ್ವಾಮಿ ಗಳವರು ಬೆಂಗಳೂರಿಗೆ ಬಿಜಯಂಗೈದಾಗ ಶ್ರುತಿ ಪ್ರಮಾಣದ ವಿಷಯದಲ್ಲಿ ದಶೋಪನಿಷತ್ತುಗಳನ್ನು ಬಿಟ್ಟು ಅವರು ಕೂಡ ಯಾವುದನ್ನೂ ಉದಾಹರಿಸಲಿಲ್ಲವಲ್ಲ?'' ಎಂದೆನು.

ಶ್ರೀ :- ''ಓಹೋ! ನಾನೂ ಕೇಳಿದ್ದೆನು. ಯಾರೋ ಕೆಲವರು ಸ್ಮಾರ್ತರು ಸನ್ನಿಧಾನಕ್ಕೆ ಬಂದು ಯಾವುದೋ ಕುಯುಕ್ತಿಗಳನ್ನು ಹೇಳಿ ಮೋಟನೆ ಹೊಂದಿದರಂತೆ''

ನಾನು :- ''ತಾವು ಆ ಕಾಲದಲ್ಲಿ ಅಲ್ಲಿ ಇದ್ದಿರೇನು ಸ್ವಾಮಿ? ಮೋಟನೆ ಏನು ಬಂತು? ಆ ಯುಕ್ತಿಗಳಿಗೆ ಇದುವರೆಗೂ ಯಾವ ಪ್ರಮಾಣದಿಂದಲೂ ಸಮಾಧಾನ ಬರಲಿಲ್ಲ ಎಂಬುದೇ ನನ್ನ ಅಭಿಪ್ರಾಯ. ಶ್ರೀಶ್ರೀಗಳವರ ವಿದ್ಯಾವೈಶಾರದ್ಯಕ್ಕೂ ವಿನಯಕ್ಕೂ ಔದಾರ್ಯಕ್ಕೂ ಎಂಥಾವರೂ ಬೆರಗಾಗಬೇಕಾದದ್ದು ನ್ಯಾಯವೇ. ಆದರೆ ವಾದದಲ್ಲಿ ಅದ್ವೈತಿಗಳಿಗೆ ಮೋಟನೆಯಾಯಿತು ಎಂಬ ಮಾತನ್ನು ಬಿಟ್ಟುಬಿಡಿ.''

ಶ್ರೀ :- ''ನಾನೇನೋ ಆ ಕಾಲದಲ್ಲಿ ಊರಲ್ಲಿರಲಿಲ್ಲ. ನೀವು ಇದ್ದಿರೆಂದು ತೋರುತ್ತದೆ; ಹಾಗಾದರೆ ನಿಮಗೆ ಯಾವ ಯುಕ್ತಿಗೆ ಉತ್ತರ ಬರಲಿಲ್ಲ ಎಂಬುದನ್ನು ಸೂಚಿಸಿ, ನೋಡೋಣ''

ನಾನು :- ''ಹಾಗಾದರೆ ಕೇಳಿ. ನನಗೆ ಜ್ಞಾಪಕವಿದ್ದಷ್ಟು ವಿಜ್ಞಾಪಿಸುವೆನು. ಶ್ರೀಶ್ರೀಗಳು ಅದ್ವೈತವೆಂದರೆ ಏನು? ಎಂದು ಕೇಳಲು ಅದಕ್ಕೆ ಜ್ಞಾನೈಕ್ಯವು ಎಂದು ಒಬ್ಬ ಅದ್ವೈತಿಯು ಉತ್ತರಕೊಟ್ಟನು.''

ಶ್ರೀ :- ''ಇಷ್ಟೇನೆ? ಇದಕ್ಕೆ ಉತ್ತರ ಬೇಕೆ? ಘಟಪಟಜ್ಞಾನಗಳು ಏಕವೆ? ಇದನ್ನು ಶ್ರೀಶ್ರೀಗಳವರು ವಿವರಿಸಲಿಲ್ಲವೆ?''

ನಾನು :- ''ಆಚಾರ್ಯರೆ, ಶ್ರೀಶ್ರೀಗಳವರು ತಮ್ಮಂತೆಯೇ ಅಪ್ಪಣೆ ಕೊಡಿಸಿದರು. ಆದರೆ ಅದು ನಿಲ್ಲಲಿಲ್ಲ''

ಶ್ರೀ :- ''ಏಕೆ ನಿಲ್ಲಲಿಲ್ಲ? ನೀವೇ ಹೇಳಿ. ಇಲ್ಲಿ ಇದಿರಾಗಿರುವ ಈ ಗೋಡೆಯೂ ಈ ಮರವೂ ಒಂದೇ ಜ್ಞಾನವನ್ನುಂಟುಮಾಡುತ್ತವೆಯೆ?''

ನಾನು :- ''ಇಲ್ಲ, ಕುಡ್ಯಜ್ಞಾನ. ವೃಕ್ಷಜ್ಞಾನ- ಎಂದು ಭಿನ್ನಜ್ಞಾನಗಳು ಉಂಟಾಗುತ್ತವೆ ಸರಿಯೆ; ಆದರೆ ಈ ಜ್ಞಾನಗಳು ಭಿನ್ನವೆಂದು, ಅರಿಯುವ ಜ್ಞಾನ ಒಂದಲ್ಲವೆ? ಅಲ್ಲಿ ಏನು ಭೇದವನ್ನು ತುರುಕಿಸುವದಕ್ಕೆ ಸಾಧ್ಯ?''

ಇಷ್ಟರೊಳಗೆ ಅಲ್ಲಿಗೆ ತಿಪ್ಪಂಭಟ್ಟರೂ ಅಪ್ಪಣಾಚಾರ್ಯರೂ ಬಂದರು. ಆಗ ಗಡಿಯಾರವನ್ನು ನೋಡಿ ನಾಲ್ಕು ಘಂಟೆಯ ಸಮಯವಾಗಿದ್ದುದರಿಂದ ಶ್ರೀನಿವಾಸಾಚಾರ್ಯರು ಎದ್ದು ''ಈ ವಾದವನ್ನು ನಿಲ್ಲಿಸಿ. ಈ ಹೊತ್ತು ನಮ್ಮ ಮನೆ ಯಲ್ಲಿ ಫಲಾಹಾರಪೂಜೆ ಆಗುವುದರಿಂದ ನೀವೆಲ್ಲರೂ ದಯಮಾಡಿಸಬೇಕು. ಸಮೀಪ ದಲ್ಲಿಯೇ ಮನೆ''- ಎಂದು ನಮ್ಮ ಮೂವರನ್ನೂ ಕರೆದುಕೊಂಡು ಹೋದರು. ಅಲ್ಲಿ ಕೇಶವಯ್ಯಂಗಾರ್ಯರೂ ವಾಸುದೇವಾಚಾರ್ಯರೂ ಆಗಲೇ ಬಂದು ಕಾದಿದ್ದರು. ಎಲ್ಲರಿಗೂ ಪಾದಪ್ರಕ್ಷಾಳನೆಯಾದ ಮೇಲೆ ಪೀಠಗಳ ಮೇಲೆ ಕೂಡಿಸಿದರು. ನನಗೂ ತಿಪ್ಪಂಭಟ್ಟರಿಗೂ ಫಲಗಳನ್ನು ಮುಂದಿಟ್ಟರು. ನಮ್ಮೊಡನೆ ಶ್ರೀನಿವಾಸಾಚಾರ್ಯರು ಕೂತು ವಿಧವಿಧವಾದ ಉಪಹಾರಗಳನ್ನು ಬಡಿಸಿದರು. ಹುಳಿಯವಲಕ್ಕಿ, ಮೊಸರ ವಲಕ್ಕಿ ಚಕ್ಕಲಿ, ಮುತ್ಸಾರೆ, ಕೋಡಬಳೆ, ಹೆಸರುಬೇಳೆ, ರವೆಯುಪ್ಪಿಟ್ಟು, ರಸ ಬಾಳೆ ಹಣ್ಣು, ಕಿತ್ತಲೆಹಣ್ಣು, ಹಲಸಿನಹಣ್ಣು, ಮಾವಿನಹಣ್ಣು, ದ್ರಾಕ್ಷೀ , ಬಾದಾಮಿ- ಮುಂತಾದವುಗಳನ್ನು ಯಥೇಚ್ಛವಾಗಿ ಹಾಕಿದರು. ಒಬ್ಬೊಬ್ಬರ ಮುಂದೆ ಇಟ್ಟ ರಾಶಿ ಯನ್ನು ನೋಡಿ ''ಇದು ಫಲಾಹಾರವೇ ಮಾತ್ರವಲ್ಲ, ಮುಂದೆ ನಿರಾಹಾರಕ್ಕೆ ಸೂಚಕವಾದದ್ದು!''- ಎಂದು ವಾಸುದೇವಾಚಾರ್ಯರು ''ಸ್ವಾಮಿ, ಬರೀ ಫಲಾಹಾರ ಮಾಡಿದರೆ ಹಾಗೆಯೇ ಆದೀತು; ಆದರೆ ಈ ತಿಪ್ಪಂಭಟ್ಟರು ಮುಂತಾದವರ ಸಂಗಡ ಶಾಸ್ತ್ರವಿಷಯದಲ್ಲಿ ಎರಡು ಮಾತಾಡಿದರೆ ಎಷ್ಟು ಫಲಾಹಾರವನ್ನು ಮಾಡಿ ದಾಗ್ಲೂ ಭಸ್ಮವಾಗುವುದು. ನೋಡಿ, ಅವರು ಭೇದವೇ ಇಲ್ಲವೆಂದು ಸಾಧಿಸು ವರಲ್ಲಾ!''

**ವಾಸು :-** ಏನು, ಭೇದವಿಲ್ಲವಂತೆ! ಆ ಬಾಳೇಹಣ್ಣು, ಆ ಮಾವಿನಹಣ್ಣು ಅವರ ಕೈಯಿ, ಬಾಯಿ, ಹೊಟ್ಟೆ- ಎಲ್ಲಾ ಅಭೇದದ ಗುಣಿಯಲ್ಲಿ ಬಿದ್ದಿವೆಯಂತೆ ! ಹೀಗೆ ಪ್ರತ್ಯಕ್ಷಾಪಲಾಪವನ್ನು ಮಾಡುವವರಿಗೆ ನ್ಯಾಯವೆಲ್ಲಿ?

**ತಿಪ್ಪ :-** ಏನು ಸ್ವಾಮಿ, ಫಲಾಹಾರಕ್ಕೆ ಕೂಗಿಬಿಟ್ಟು ಬೈಗಳಗಳಿಗೆ ಪ್ರಾರಂಭಿಸಿದಿರಿ? ''ಅಹಂ ಬ್ರಹ್ಮಾಸ್ಮಿ'' ಮುಂತಾದ ವಾಕ್ಯಗಳು ಇರುವಾಗ ನಿಮ್ಮ ವ್ಯಾವಹಾರಿಕ ಭೇದವು ಏನು ಮಾಡೀತು? ಹಣ್ಣು ,ಕಾಯಿ, ಬಾಯಿ, ಹೊಟ್ಟೆ- ಎಂಬುದೆಲ್ಲ ವ್ಯಾವಹಾರಿಕ ತಾನೆ?

**ಕೇಶವ :-** ಅಂತೂ ಭೇದವನ್ನು ಒಪ್ಪಿಕೊಂಡ ಹಾಗಾಯ್ತಲ್ಲ; ಹೋದರೆ ವ್ಯಾವಹಾರಿಕ, ಪಾರಮಾರ್ಥಿಕ- ಎಂಬ ಎರಡೂ ಬರೀ ಮಾತುಗಳೇ ಆದ್ದರಿಂದ ವ್ಯಾವಹಾರಿಕ ಭೇದವೇ ಭೇದ. ಭೇದವೇ ಉಳಿದಂತಾಯ್ತು.

**ಶ್ರೀ :-** ಅಷ್ಟೇ ಸರಿ! ಜ್ಞಾನವೊಂದಂತೆ, ಭೇದವೆಲ್ಲಾ ವಿಷಯದಲ್ಲಂತೆ? ಅಂತೂ ಜ್ಞಾನ ವಿಷಯ- ಎಂಬ ಭೇದವನ್ನು ಯಾವ ಲೋಕಕ್ಕೆ ಹೋಗಿ ತಪ್ಪಿಸಿಕೊಂಡಾರು?

**ಕೇಶವ :-** ಅಲ್ಲ ಮತ್ತೆ, ಈ ವ್ಯಾವಹಾರಿಕ, ಪಾರಮಾರ್ಥಿಕ- ಎಂಬ ಹೆಸರುಗಳನ್ನು ಕಲ್ಪನೆ ಮಾಡಿದ್ದಕ್ಕೆ ಎಷ್ಟು ಹೇಳಿದರೂ ತೀರದು ! ಯಾವುದು ವ್ಯಾವಹಾರಿಕ ಎಂದು ಹೇಳುತ್ತಾರೆಯೋ ಅದೇ ಪಾರಮಾರ್ಥವಾಗಿರುವುದರಿಂದ ಇನ್ನು ಬೇರೆ ಪರಮಾರ್ಥವನ್ನು ಎಲ್ಲಿ ಹುಡುಕುವುದು? ಅಥವಾ ನಮ್ಮ ಅನುಭವವನ್ನೇ ಸುಳ್ಳೆಂತ ಹೇಳಬೇಕಾಗಿ ಬರುವುದು.

**ಶ್ರೀ :-** ಈ ಅದ್ವೈತವಾದಿಗಳು ಅದಕ್ಕೂ ಹಿಂಜರಿಯುವವರಲ್ಲವಲ್ಲ; ಎಲ್ಲವನ್ನೂ ಮಿಥ್ಯಾ ಎಂಬುದಾಗಿ ಸಾಧಿಸುವರಲ್ಲ?

**ವಾಸು :-** ಅಪ್ಪಾ ಇದಕ್ಕೇಕೆ ನಮಗೆ ತಾಪವು? ಅನಾದಿಯಿಂದ ದೇವತೆಗಳೂ ದೈತ್ಯರೂ ಎಂದು ಎರಡು ಪಕ್ಷದ ವಾದಿಗಳು ಇರುವರಲ್ಲವೆ? ಇವರಲ್ಲಿ ದೇವತೆಗಳು ಭೇದವಾದಿಗಳು, ದೈತ್ಯರು ಅಭೇದರತರು, ಆದರೆ ಇದು ಸ್ವಭಾವವಾಗಿಯೇ ಉಂಟಾದ ವಿವಾದವಾದ್ದರಿಂದ ನಾವು ಎತ್ತಿ ಹೇಳುವುದರಲ್ಲಿ ಬರೀ ಮನಃಕಾಲುಷ್ಯವಾದೀತು. ತಿಪ್ಪಂಭಟ್ಟರು 'ಅಹಂ ಬ್ರಹ್ಮಾಸ್ಮಿ' ಎಂಬ ವಾಕ್ಯವನ್ನು ಉದಾಹರಿಸಿದರಲ್ಲವೆ, ಅದಕ್ಕೇನು ಅರ್ಥ?

ಅಪ್ಪ:- ನಮ್ಮ ಸ್ವಾಮಿಗೆ ಸರ್ವಶಬ್ದವಾಚ್ಯತ್ವವು ಇರುವುದರಿಂದ ವೇದ ವಾಕ್ಯಗಳಿಗೆಲ್ಲಾ ಬ್ರಹ್ಮವೇ ತಾತ್ಪರ್ಯವು. ಅಲ್ಲಿ ಐಕ್ಯಸೂಚಕವೇನಿದೆ?

ತಿಪ್ಪ:- ಈಶ್ವರನಿಗೆ ಸರ್ವಶಬ್ದವಾಚ್ಯತ್ವವು ಇದ್ದರೆ ವ್ಯವಹಾರವೇ ನಿರ್ಮೂಲ ವಾದೀತು. ನೀವು ನಾವು ಹೇಳುವ ಮಾತುಗಳಿಗೂ ಪಕ್ಷಿ, ಮಾರ್ಜಾಲಗಳ ಕೂಗುಗಳಿಗೂ ಬ್ರಹ್ಮವೇ ತಾತ್ಪರ್ಯವಾದರೆ ಉದ್ದೇಶವಿಧೇಯರೂಪವಾದ ವಾಕ್ಯ ಹೇಗೆ ಉಂಟಾದೀತು? ಮತ್ತು ತರ್ಕಶಾಸ್ತ್ರ, ವ್ಯಾಕರಣಶಾಸ್ತ್ರ, ಮೀಮಾಂಸಾ, ನೀತಿ- ಮುಂತಾದ ಶಾಸ್ತ್ರಗಳಿಗೆಲ್ಲಾ ಏನು ಗತಿ? ಗುರುಶಿಷ್ಯ ಪರಂಪರೆಗೆ ಅನರ್ಥ ಬಂದೀತು!

ವಾಸು :- ಹಾಗಲ್ಲ; ಒಂದೊಂದು ಶಬ್ದಕ್ಕೂ ಮುಖ್ಯಾರ್ಥ, ಅಮುಖ್ಯಾರ್ಥ ಎಂದು ಎರಡುಂಟು. ಅವುಗಳಲ್ಲಿ ಮುಖ್ಯಾರ್ಥ ವಿಷ್ಣುವೇ ಆದಾಗ್ಯೂ ಅಮುಖ್ಯಾರ್ಥ ದಲ್ಲಿ ವ್ಯವಹಾರ ನಡೆಸಬಹುದಲ್ಲವೆ?

ತಿಪ್ಪ :- ಹಾಗೂ ನಡೆಯುವಂತಿಲ್ಲ. ಮುಖ್ಯಾರ್ಥ ಎಲ್ಲಿ ಕೂಡುವುದಿಲ್ಲವೋ ಅಲ್ಲಿ ಅಲ್ಲವೆ ಅಮುಖ್ಯಾರ್ಥಕ್ಕೆ ಅವಕಾಶ? ನಿಮ್ಮ ಮತದ ಪ್ರಕಾರ ಎಲ್ಲೆಲ್ಲಿಯೂ ಮುಖ್ಯಾರ್ಥವು ಸಲ್ಲುವುದಾದ್ದರಿಂದ ಅಮುಖ್ಯಾರ್ಥಕ್ಕೆ ಅವಕಾಶವೆಲ್ಲಿ? ಮತ್ತು 'ಮುಖ್ಯಾರ್ಥ' 'ಅಮುಖ್ಯಾರ್ಥ'- ಎಂಬೀ ಶಬ್ದಗಳಿಗೂ ವಿಷ್ಣುವೇ ತಾತ್ಪರ್ಯವಾದ್ದರಿಂದ ನಿಮ್ಮ ಅಭಿಪ್ರಾಯವನ್ನು ತಿಳಿಸುವದಕ್ಕೆ ಆ ಮುಖ್ಯಾರ್ಥವನ್ನು ತ್ಯಾಗಮಾಡಿದ ಹೊರತು ನಿಮ್ಮ ಶಬ್ದಗಳಿಗೆ ಅರ್ಥಕ್ರಿಯಾಕಾರಿತ್ವವೇ ಎದ್ದು ಹೋಗಿಬಿಡುವುದು. ಭಾವಿಯಲ್ಲಿ ಮಗು ಬಿದ್ದು ತಾಯಿಯು 'ಅಯ್ಯೋ', ಕೂಸು ಮುಳುಗಿ ಹೋಗುತ್ತದೆ!' ಎಂದು ಕೂಗಿಕೊಳ್ಳುವಾಗ ಸರ್ವಶಬ್ದವಾಚ್ಯತ್ವವು ದೇವರಿಗೆ ಉಂಟೆಂದು ತಿಳಿಯುವ ಪಂಡಿತನಾದ ಗಂಡನು ಕೂಸನ್ನು ಬದುಕಿಸುವುದಕ್ಕೆ ಯಾವ ಪ್ರಯತ್ನವನ್ನು ಮಾಡುವನು? ಸ್ತಬ್ಧನಾಗಿದ್ದು ಕೂಸನ್ನು ಕಳೆದುಕೊಳ್ಳ ಬೇಕಾಗಿ ಬರುವುದು. ಆಗ ಕುಟುಂಬವು ಹ್ಯಾಗೆ ನಡೆಯುವುದು? ಹೆಂಡತಿಗಾಗಲೀ ಅವನಿಗಾಗಲೀ ಕೂಸನ್ನು ಹೋಗಲಾಡಿಸಿಕೊಂಡು ಯಾವ ಸುಖವುಂಟಾದೀತು? ಮತ್ತು ಮುಖ್ಯಾರ್ಥವನ್ನು ತ್ಯಾಗಮಾಡುವುದಕ್ಕೆ ಏನು ನಿಮಿತ್ತವಿದೆ? ನಿಮಗೆ ವ್ಯವಹಾರವೇ ಪರಮಾರ್ಥ ವಾಗಿರುವದರಿಂದ ಸಂಸಾರ ದುಃಖಗಳನ್ನೆಲ್ಲಾ ಸತ್ಯವಾಗಿ ಅನುಭವಿಸಿಕೊಂಡು ಹೋಗಬೇಕೇ ಹೊರತು ಪರಿಹಾರ ಮಾಡುವುದಕ್ಕೆ ಯತ್ನವನ್ನು ಮಾಡಬೇಕಾದ ಅವಶ್ಯಕತೆಯಿಲ್ಲದೇ ಹೋಗುವುದು. ಅಲ್ಲದೆ ವ್ಯವಹಾರದಲ್ಲಿ ಗೌಣಾರ್ಥವನ್ನು

ಇಟ್ಟುಕೊಳ್ಳಬೇಕು. ಎಂದರೆ, ಮುಖ್ಯಾರ್ಥವನ್ನು ತ್ಯಾಗವೇ ಮಾಡಬೇಕು. ಹಾಗೆ ತ್ಯಾಗಮಾಡುವುದಕ್ಕೇನೋ ಈ ಮುಖ್ಯಾರ್ಥವನ್ನು ಕಲ್ಪಿಸುವಿರಿ? ಮತ್ತು ವ್ಯವಹಾರವೇ ಸಕಲಾನುಭವವು ಎಂಬ ನಿಮಗೆ ಮುಖ್ಯಾರ್ಥವನ್ನು ಅನುಸರಿಸುವ ಅವಸ್ಥೆ ಬೇರೊಂದು ಯಾವುದು?

ವಾಸು :- ಸ್ವಾಮಿ, ಶ್ಯಾನೇ ಉಪನ್ಯಸಿಸಿ ಆಯಾಸಪಟ್ಟಿರಿ. ನಿಮ್ಮ ಮತದಲ್ಲಿ ಸಕಲವೂ ಬ್ರಹ್ಮವೇ ಎಂದು ಹೇಳುವಲ್ಲಿ ಗುರುಶಿಷ್ಯಪರಂಪರಾ ಎಲ್ಲಿಂದ ಬಂತು? ಶಾಸ್ತ್ರಾರ್ಥವೆಲ್ಲಿ ಬಂತು? ಧರ್ಮಾಧರ್ಮಗಳ ವಿವೇಚನೆಯೆಲ್ಲಿ? ದೇವರೆಲ್ಲಿ? ಜೀವನೆಲ್ಲಿ? ಪರಲೋಕಗಮನಾಗಮನಗಳೆಲ್ಲಿ? ಸೃಷ್ಟಿಸ್ಥಿತಿಲಯಗಳೆಲ್ಲಿ? ಭೇದ ಗರ್ಭಿತವಾಗಿಯೇ ಇರುವ ಮಾತು ತಾನೇ ಎಲ್ಲಿ? ಭಾವನೆ ತಾನೇ ಎಲ್ಲಿ? ಕಾರ್ಯವೆಲ್ಲಿ? ಫಲವೆಲ್ಲಿ? ಸರ್ವಶೂನ್ಯವನ್ನು ಒಪ್ಪುವ ಅದ್ವೈತವು ಕೂಡ ವಿವೇಕಿಗಳಿಗೆ ಸಮ್ಮತವಾದೀತೆ? ಅಂತೂ ವ್ಯವಹಾರದಲ್ಲಿಯಾದರೂ ಭೇದವನ್ನು ಒಪ್ಪಿಕೊಂಡಿರಲ್ಲ! ಅಷ್ಟೇ ಸಾಕು.

ನಾನು :- ತಿಪ್ಪಂಭಟ್ಟರು ಒಪ್ಪಿಕೊಂಡರೆ ಎಲ್ಲರೂ ಒಪ್ಪಿಕೊಂಡ ಹಾಗಾಯಿತೆ?

ಅಪ್ಪ :- ಇನ್ನು ಅದರಲ್ಲೂ ಏನಪ್ಪ ಕೊಂಡಿತೆಗೆಯುತ್ತೀರಿ? ಅದನ್ನು ಕೂಡ ಒಪ್ಪುವುದಿಲ್ಲವೇನು?

ನಾನು :- ಸ್ವಾಮಿ, ಯುಕ್ತಿಯಿಂದ ಭೇದವನ್ನು ಸಾಧಿಸಬಹುದಾಗಿದ್ದರೆ ನಾನೇಕೆ ಒಪ್ಪಲಾರೆನು? ಆದರೆ ಯುಕ್ತಿಯಿಂದ ನೋಡಿದರೆ ವ್ಯವಹಾರದಲ್ಲಿಯೂ ಕೂಡ ಭೇದವನ್ನು ನಿರ್ಧರಿಸುವುದು ಸಾಮಾನ್ಯವಲ್ಲ.

ವಾಸು :- ಅದು ಹೇಗೆ? ಘಟಪಟಭೇದವನ್ನು ಆಬಾಲಗೋಪಾಲರೂ ಅರಿಯುವುದಿಲ್ಲವೆ?

ನಾನು :- ಅವಿಚಾರಕರ ಅರಿವು ಅರಿವಲ್ಲ, ಸರಿಯಾಗಿ ವಿಚಾರಮಾಡಿದರೆ ಘಟಕ್ಕೂ ಪಟಕ್ಕೂ ಭೇದವನ್ನು ಧರ್ಮಿಗಳ ದೃಷ್ಟಿಯಿಂದಾಗಲೀ ಅಥವಾ ತತ್ತದ್ಧರ್ಮಗಳ ದೃಷ್ಟಿಯಿಂದಲಾಗಲೀ ಹೇಳಬೇಕು. ಧರ್ಮಗಳನ್ನು ಬಿಟ್ಟು ಧರ್ಮಿ ಇರುವುದನ್ನು ಕಂಡಿಲ್ಲ, ಆದ್ದರಿಂದ ಧರ್ಮಗಳ ಭೇದದಿಂದಲೇ ಘಟಕ್ಕೂ ಪಟಕ್ಕೂ ಭೇದವನ್ನು ಹೇಳಬೇಕು. ಧರ್ಮಿಯಲ್ಲಿ ಭೇದವನ್ನು ಯಾರು ಕಂಡರು?

ವಾಸು :- ಹೋಗಲಿ, ಆ ಧರ್ಮಗಳ ಭೇದವೋ? ಅದು ಎಲ್ಲರಿಗೂ ಪ್ರತ್ಯಕ್ಷವಲ್ಲವೆ? ಅದನ್ನು ಹೇಗೆ ನಿರಾಕರಿಸುವಿರಿ?

ನಾನು :- ಪ್ರತ್ಯಕ್ಷವನ್ನು ಕೂಡ ವಿಮರ್ಶೆಮಾಡಿದರೆ ಧರ್ಮಗಳನ್ನು ಬಿಟ್ಟು ಭೇದಸಾಧನೆಯು ಯಾವುದೂ ಇಲ್ಲವಷ್ಟೆ. ಧರ್ಮಗಳಲ್ಲಿ ಒಂದರಿಂದ ಒಂದು ಭಿನ್ನವಾಗಿರಬೇಕಾದರೆ ಆ ಭೇದವನ್ನು ನಿಶ್ಚಯಿಸುವುದಕ್ಕೆ ಬೇರೆ ಯಾವ ಭೇದಕ ಧರ್ಮಗಳನ್ನು ಸೃಷ್ಟಿಸುವಿರಿ? ಧರ್ಮಕ್ಕೂ ಧರ್ಮವುಂಟಾದರೆ ಮೊದಲಿನ ಧರ್ಮವು ಧರ್ಮಿಯೇ ಆದೀತು! ಆಗ ಶಾಸ್ತ್ರಸಮ್ಮತವಾದ ಧರ್ಮ ಧರ್ಮಿವ್ಯವಸ್ಥೆಯು ನಿರರ್ಥಕವಾಗುವುದು. ವ್ಯವಹಾರವೂ ನಾಶವಾಗುವುದು.

ಶ್ರೀ :- ಅದಿರಲಿ, ಸ್ವಾಮಿ, 'ಜ್ಞಾನ', 'ವಿಷಯ'- ಎಂಬ ಭೇದವನ್ನು ನೀವು ಒಪ್ಪಿಕೊಂಡಿದ್ದೀರೋ? ಇಲ್ಲವೋ? ಅಥವಾ ಅಲ್ಲಿಯೂ ನಿಮ್ಮ ಮಾಯಾ ಜಾಲದಿಂದ ಭೇದವನ್ನು ಅಂತರ್ಧಾನಮಾಡಿಸುವಿರೊ? ಅಂತೂ ನೀವು ಮಾಯಾವಿಗಳು ಎಂಬುದರಲ್ಲಿ ನನಗೆ ಒಂದಿಷ್ಟೂ ಸಂದೇಹವಿಲ್ಲ.

ನಾನು :- ಸ್ವಾಮಿ, ನನ್ನ ಮಾಯವೆಲ್ಲಾ ಬರೀ ಯುಕ್ತಿಯೇ ಹೊರತು ಬೇರೆ ಏನೂ ಇಲ್ಲ. ಯಾವುದು ಬುದ್ಧಿಗೆ ಹತ್ತುವುದಿಲ್ಲವೋ ಅದು ಮಾಯೆಯೆಂದು ತಿಳಿಯುತ್ತಾರೆ. ಆದರೆ ನ್ಯಾಯದಿಂದ ನೋಡಿದರೆ ನನ್ನ ಪಕ್ಷವು ಸುವಿದಿತ ವಾಗುವುದು. ಜ್ಞಾನ, ವಿಷಯ- ಇವುಗಳಲ್ಲಿ ಭೇದವನ್ನು ನಾನು ಒಪ್ಪುವೆನೆಂದು ನೆನಸುತ್ತೀರಿ. ಅದು ಸಾಧ್ಯವಿಲ್ಲ. ಭೇದವಿರುವ ಕಡೆ ಭಿನ್ನಪದಾರ್ಥಗಳಲ್ಲಿ ಏಕಜಾತಿತ್ವ ವಿಷಯತ್ವ - ಇವು ನಿಯತವಾಗಿರಬೇಕು. ಏತದ್ವ್ಯಾಪ್ಯವೇ ಭೇದವು. ಹೇಗೆಂದರೆ ಘಟ, ಪಟ - ಈ ಎರಡೂ ವಿಷಯಗಳು, ಮತ್ತು ಅದೇ ಕಾರಣದಿಂದ ಏಕಜಾತೀಯವು. ಆದ್ದರಿಂದ ಅವುಗಳಿಗೆ ಭೇದವನ್ನು ವ್ಯವಹರಿಸಬಹುದು. ಆದರೆ ಜ್ಞಾನಕ್ಕೂ ವಿಷಯಕ್ಕೂ ವ್ಯಾಪಕವಾದ ವಿಷಯತ್ವವೇ ಆಗಲೀ, ಏಕಜಾತಿತ್ವವೇ ಆಗಲೀ ಇಲ್ಲದೇ ಇರುವುದ ರಿಂದ ಅಲ್ಲಿ ಸಂಬಂಧವೂ, ಸಂಖ್ಯೆಯೂ ಭೇದವೂ- ಮುಂತಾದವುಗಳ ಯಾವವೂ ಪ್ರವೇಶಿಸಲಾರವು. ಆದ್ದರಿಂದ ಜ್ಞಾನವಿಷಯಗಳ ಭೇದವೂ ಸಲ್ಲದು.

ವಾಸು :- ಸರಿ. ಹಾಗಾದರೆ ಜ್ಞಾನವೂ ವಿಷಯವೂ ಒಂದೇ ಆಗಿಬಿಟ್ಟಿತಲ್ಲವೆ? ಅದಕ್ಕೇ ಪ್ರಚ್ಛನ್ನಬೌದ್ಧರೆಂತ ನಿಮ್ಮನ್ನು ಕರೆಯುವುದು. ಕೋಪಿಸಕೂಡದು.

ನಾನು : - ಹ್ಯಾಗಾದೀತು ! ವಿಷಯವು ಜ್ಞಾನವಿಷಯಕಜ್ಞಾನದಲ್ಲಿ ಬದುಕುವುದಿಲ್ಲ ವಾದ್ದರಿಂದಲೂ, ಪರಂಪರೆಯಾಗಿ ವಿಷಯಗಳು ಬಂದಾಗ್ಯೂ ಜ್ಞಾನವು ಕೂಟಸ್ಥವಾಗಿರುವುದರಿಂದಲೂ, ಜ್ಞಾನವನ್ನು ಬಿಟ್ಟು ವಿಷಯದ ಇರುವಿಕೆಯು ಸಿದ್ಧಿಸಲಾರದಾದ್ದರಿಂದಲೂ, ಕೂಟಸ್ಥನಿತ್ಯವಾಗಿರತಕ್ಕಂಥ ಜ್ಞಾನವೇ ನಿತ್ಯಶುದ್ಧಬುದ್ಧ ಮುಕ್ತಸ್ವರೂಪವಾದ ಬ್ರಹ್ಮವೆಂತಲೂ, ತದ್ವ್ಯತಿರಿಕ್ತವಾಗಿ ಕಾಲಾದಿಗಳು ಇಲ್ಲವೆಂತಲೂ ನಮ್ಮ ಮತವಾಗಿರುವುದರಿಂದ ಪ್ರತಿನಿಮಿಷವೂ ಬೇರೆಯಾಗುವ ಜ್ಞಾನವನ್ನು ಇಟ್ಟುಕೊಳ್ಳುವ ಬೌದ್ಧನಿಗೂ ಕಾಲದೇಶನಿಮಿತ್ತಾತೀತವಾದ ಅಖಂಡಜ್ಞಾನವನ್ನು ಇಟ್ಟುಕೊಳ್ಳುವ ಅದ್ವೈತಿಗಳಿಗೂ ಇರುವ ಅಂತರವು ಮಿಂಚಿನ ಹುಳುವಿಗೂ ಸೂರ್ಯನಿಗೂ ಇರುವಷ್ಟೇ ಅಂತರವೆಂದು ಸಿದ್ಧವಾಗುವುದು.

ಕೇಶವ :- ಅದು ಹಾಗಿರಲಿ; ಬೌದ್ಧರ ಸಮಾಚಾರ ನಮಗೇಕೆ? ನಾವು ಶ್ರುತಿ ಶರಣರಾಗಿರುವದರಿಂದ ಶ್ರುತಿಯಲ್ಲಿ 'ಅಂತರ್ಯಾಮಿಬ್ರಾಹ್ಮಣ'ದಲ್ಲಿ ಉಕ್ತವಾದ ರೀತ್ಯಾ ಪರಮಾತ್ಮನು ಶರೀರಿಯೆಂದೂ ಅವನಿಗೆ ಜೀವನು ಮತ್ತು ಜಡಪ್ರಪಂಚವು ಶರೀರವಾಗಿ ಇರುವವೆಂದೂ ತಿಳಿಯಬರುತ್ತದೆ. ಆಗ ಎಲ್ಲವೂ ಬ್ರಹ್ಮವೆಂತಲೂ ಎಲ್ಲವೂ ತತ್ಸಂಬಂಧದಿಂದ ಸತ್ಯವೆಂತಲೂ ಆಗುತ್ತದೆ; ಜಗತ್ತು ಸುಳ್ಳೆಂಬುದಾಗಿಯೂ, ಜೀವನು ಸರ್ವಥಾ ಬ್ರಹ್ಮವೆಂಬುದಾಗಿಯೂ ಆಗುವದಿಲ್ಲವಷ್ಟೆ? ಪ್ರತ್ಯಕ್ಷವಾಗಿ ನಾವು ಕಾಣುವ ಭೇದವನ್ನೇ ಆಗಲಿ ನಾವು ಅನುಭವಿಸುವ ಅಜ್ಞಾನ ಮುಂತಾದವುಗಳನ್ನೇ ಆಗಲಿ ಯೋಚಿಸಿದರೆ ಸರ್ವಾತ್ಮೈಕ್ಯವು ಮನೋರಾಜ್ಯವೇ ಸರಿ.

ಅಪ್ಪ:- ಅಷ್ಟೇ ಬೇರೇನು?

ನಾನು :- ಹಾಗಲ್ಲ, ಶ್ರುತಿಗಳ ಪ್ರಾಮಾಣ್ಯದಿಂದಲೇ ಐಕ್ಯವೂ ಸಿದ್ಧಿಯಾಗುವದು. **'ಮಾಯಾಮಾತ್ರಮಿದಂ ದ್ವೈತಮದ್ವೈತಂ, ಪರಮಾರ್ಥತಃ', 'ನೇಹ ನಾನಾಸ್ತಿ ಕಿಂಚನ', 'ಏಕಮೇವಾದ್ವಿತೀಯಮ್' 'ನ ತು ತದ್ದ್ವಿತೀಯಮಸ್ತಿ' 'ಅಯಮಾತ್ಮಾ ಬ್ರಹ್ಮ', 'ತತ್ತ್ವಮಸಿ', 'ಸರ್ವಂ ಖಲ್ವಿದಂ ಬ್ರಹ್ಮ'** - ಎಂಬ ವಾಕ್ಯಗಳಿಂದ ಅನ್ವಯದಿಂದಲೂ ವ್ಯತಿರೇಕದಿಂದಲೂ ಇರುವುದು ಬ್ರಹ್ಮವೊಂದೇ, ತೋರುವ ಜಗತ್ತು ಮಾಯಾಮಾತ್ರವೇ ಎಂದು ಸ್ಪಷ್ಟವಾಗುವುದು. ಇದಕ್ಕೆ ವ್ಯತಿರಿಕ್ತವಾಗಿ ಜಗತ್ತು ಸತ್ಯವೆಂತಲೂ ಐಕ್ಯವು ಭ್ರಾಂತಿಯೆಂತಲು ಶ್ರುತಿಯಲ್ಲಿ ಹೇಳಿರುವುದು ಎಲ್ಲಿಯೂ ಕಂಡುಬರುವುದಿಲ್ಲ, ಆದರೆ ನಾವು ಇದಿರಾಗಿ ನೋಡುವ ಭೇದದ ತತ್ತ್ವವೇನು?- ಎಂದು ವಿಚಾರಿಸಿದಲ್ಲಿ ಆ ತತ್ತ್ವವು ಕೂಡ ದ್ವೈತವಾಗಿದ್ದರೆ ದ್ವೈತವು

ನಿಸ್ತತ್ವವಾಗುವುದು. ಆಗ ಶೂನ್ಯವಾದವೇ ಜಯಿಸುವುದು ಮತ್ತು ಇಂದ್ರಿಯ ಗೋಚರವಾಗಿರುವ ದ್ವೈತವೇ ತತ್ತ್ವವೆಂದರೆ ಅದು ಇಂದ್ರಿಯಾಧೀನತೆಯನ್ನು ತಪ್ಪಿಸಿಕೊಳ್ಳಲಾರದು. ತತ್ತ್ವವೆಂಬುದು ಸ್ವತಂತ್ರವಾಗಿರಬೇಕಲ್ಲವೇ?

ಶ್ರೀ :- ಸ್ವಾಮಿ, ತಮ್ಮ ತತ್ತ್ವೋಪದೇಶವನ್ನು ಸಾಕುಮಾಡಿ. ಅಂತು ಹೇಗೆ ಬಿದ್ದಾಗ್ಯೂ ಅದೊಂದು ವರಸೆ ಎಂದು ಸಾಧಿಸುವ ಶುಷ್ಕಯುಕ್ತಿಯಿಂದ ಫಲವೇನು? ಶ್ರುತಿ, ಶಾಸ್ತ್ರ ಸಂಪ್ರದಾಯ, ಇವುಗಳೆಲ್ಲಾ ಭೇದವನ್ನು ಮುಂದಿಟ್ಟು ಕೊಂಡೇ ಪ್ರವರ್ತಿಸುವವು. ಹಾಗಿಲ್ಲದಿದ್ದರೆ ನಿಮ್ಮ ಭಾವವೈಚಿತ್ರ್ಯವನ್ನು ಯಾವ ಶಬ್ದದಿಂದ ಹೊರಗೆ ಹೊರಪಡಿಸುವಿರಿ? ಇಲ್ಲಿಗೆ ವಾದವು ಸಾಕು. ಅಂತು ನೀವೆಲ್ಲರೂ ಇಲ್ಲಿ ಸೇರಿದ್ದರಿಂದ ಕಾಲವು ಬಹು ಸ್ವಾರಸ್ಯವಾಗಿ ಕಳೆಯಿತು. ಈಗ ಸಂಧ್ಯಾಕಾಲವಾದ್ದರಿಂದ ಸಂಧ್ಯಾವಂದನೆಯನ್ನು ತೀರಿಸಿಕೊಂಡು ದೇವರಗುಡಿಗೆ ಹೋಗಿ ಬರೋಣ. ಈ ಹೊತ್ತು ಒಳ್ಳೆಯ ಹರಿಕಥೆಯಂತೆ; ಅದನ್ನೂ ಕೇಳಿಕೊಂಡು ಬರೋಣ.

ನಾನು :- ಸ್ವಾಮಿ, ನಾನು ಈ ಹೊತ್ತು ಮನೆಯನ್ನು ಬಿಟ್ಟು ಬಂದವನು ಇದುವರೆಗೂ ಇಲ್ಲೇ ನಿಂತುಬಿಟ್ಟೆನು. ಮೋಟಾರ್‌ಕಾರಿನ ಗತಿ ಏನಾಯಿತೋ ಅದನ್ನು ನಡೆಸುವವನು ಇದ್ದಾನೋ ಅಥವಾ ಹಿಂತಿರುಗಿಯೇಬಿಟ್ಟನೋ ಏನೂ ತಿಳಿಯಲಿಲ್ಲ, ಆದುದರಿಂದ ದಯವಿಟ್ಟು ನನ್ನನ್ನು ಕಳುಹಿಸಿಬಿಡಿ.

ವಾಸು :- ಇಷ್ಟು ಹೊತ್ತಿನಲ್ಲಿ ಕಳುಹಿಸುವುದು ಹೇಗೆ? ಆ ಪುಸ್ತಕಭಂಡಾರಕ್ಕೆ ಬಂದವರು ಯಾರಿಗೂ ಯಾವ ಅನಾನುಕೂಲಗಳೂ ಆಗಕೂಡದೆಂಬ ನಿಬಂಧನೆ ಯಿದೆ. ಆದ್ದರಿಂದ ನೀವು ಯೋಚಿಸಬೇಕಾದುದು ಏನೂ ಇಲ್ಲ, ಇದೂ ಅಲ್ಲದೆ ಈ ಗ್ರಾಮದ ಸೊಬಗನ್ನೂ ವಿಚಿತ್ರರಚನೆಯನ್ನೂ ಕಾರುಬಾರುಗಳನ್ನೂ ನೀವು ತಿಳಿಯಬೇಕಾದುದು ಅವಶ್ಯಕವು. ಊರಿಗೆ ಹೋಗುವ ಸಂಕಲ್ಪವನ್ನು ಈಗ್ಗೆ ನಿಲ್ಲಿಸಿ. ಮನೆ, ಬಾಗಿಲು, ಹೆಂಡಿರು, ಮಕ್ಕಳು - ಈ ಚಿಂತೆ ಬಿಟ್ಟಿದ್ದಲ್ಲ. ಹೊತ್ತು ಆಯಿತು. ತೆರಳೋಣ.

ಈ ಹೊಸ ಸ್ನೇಹಿತರ ಪ್ರೀತಿಯಿಂದಲೂ ವಿನಯದಿಂದಲೂ ಶಾಂತೋಕ್ತಿ ಯಿಂದಲೂ ಬೆರಗಾಗಿ ಅಲ್ಲಿಯೇ ನಿಲ್ಲಲು ಸಮ್ಮತಿಸಿದೆನು.

ಕೂಡಲೆ ಹೊರಟು ಸಮೀಪದಲ್ಲಿದ್ದ ನದಿಯಲ್ಲಿ ಶೌಚಾದಿಗಳನ್ನು ತೀರಿಸಿಕೊಂಡು ಸಂಧ್ಯೋಪಾಸನೆಯನ್ನು ಮುಗಿಸಿ ಊರಿನೊಳಗೆ ಪ್ರವೇಶಿಸಿದೆವು. ಅಲ್ಲಿ

ನಾನು ಕಂಡು ಕೇಳಿದ ವೈಚಿತ್ರ್ಯಗಳನ್ನು ತಕ್ಕಷ್ಟು ಇಲ್ಲಿ ಸೂಚಿಸುವೆನು. ಪ್ರಥಮದಲ್ಲಿ ಆ ಊರಿನ ರಕ್ಷಣೆಗಾಗಿ ಯಾವ ಉದ್ಯೋಗಸ್ಥರೇ ಆಗಲಿ ಪೋಲೀಸಿನವರೇ ಆಗಲಿ ನ್ಯಾಯಾಧಿಪತಿಗಳೇ ಆಗಲಿ ಸರ್ಕಾರಿ ನೌಕರಿಗಳು ಎನ್ನಿಸಿಕೊಂಡವರು ಯಾರೂ ಇರಲಿಲ್ಲ, ಆದಾಗ್ಯೂ ಎಲ್ಲೆಲ್ಲಿಯೂ ಬೀದಿಗಳೂ ಮನೆಗಳೂ ಇತರ ಪ್ರದೇಶಗಳೂ ಶುದ್ಧವಾಗಿಯೂ ಶಾಂತವಾಗಿಯೂ ಇದ್ದವು. ಮತದ್ವೇಷಗಳೂ ವ್ಯಾಜ್ಯಗಳೂ ಕಕ್ಷಿಗಳು ಯಾವುವೂ ಅಲ್ಲಿ ಇಲ್ಲ, ಇದೇನು ಅದ್ಭುತವೆಂದು ವಿಚಾರಿಸಲು ಈ ಊರು ನವನಾಗರಿಕತೆಯ ಮಾದರಿಯ ಗ್ರಾಮವೆಂದು ತಿಳಿಯಬಂದಿತು. ವಿವಿಧ ಮತಸ್ಥರೂ ಕೋಮುವಾರಾಗಿ ಬೇರೆ ಬೇರೆ ಭಾಗದಲ್ಲಿ ವಾಸವಾಗಿದ್ದರು. ಅವರವರಿಗೆ ಬೇಕಾದ ಅನುಕೂಲಗಳು ಅಂದರೆ ಗುಡಿಗಳೂ ಅಂಗಡಿಗಳೂ ಇತರ ಅನುಕೂಲಗಳೂ ಅಲ್ಲಲ್ಲಿಯೇ ಏರ್ಪಡಿಸಲ್ಪಟ್ಟಿದ್ದವು. ಅಲ್ಲಿ ಕೋಮಿಗೆ ಒಬ್ಬೊಬ್ಬ ಪ್ರತಿನಿಧಿಗಳು
ಅಲ್ಲಲ್ಲಿಯೇ ಏರ್ಪಡಿಸಲ್ಪಟ್ಟಿದ್ದವು. ಅಲ್ಲಿ ಕೋಮಿಗೆ ಒಬ್ಬೊಬ್ಬ ಪ್ರತಿನಿಧಿಗಳು
ಪ್ರತಿಸಂವತ್ಸರವೂ ಆರಿಸಲ್ಪಟ್ಟು ಅವರೆಲ್ಲರೂ ಸೇರಿದ ಗ್ರಾಮಮಹಾಸಭೆಯೊಂದು ಏರ್ಪಾಡಾಗಿತ್ತು. ಆ ಸಭೆಯಲ್ಲಿಯೂ ಒಬ್ಬರನ್ನು ಆ ಸಂವತ್ಸರಕ್ಕೆ ಗ್ರಾಮಾಧಿಪತಿ ಯನ್ನಾಗಿ ಆರಿಸಿ ಆತನಿಗೆ ಸಹಾಯವಾಗಿ ಬೇರೆ ಬೇರೆ ಇಲಾಖೆಗಳಿಗೆ ಬೇರೆ ಬೇರೆ ಜನರನ್ನುಬುದ್ಧಿವಂತಿಕೆ, ಯೋಗ್ಯತೆ- ಇವುಗಳನ್ನನುಸರಿಸಿ ನೇಮಿಸುವರಂತೆ. ಇದರಿಂದಲೇ ಗ್ರಾಮಕಾರ್ಯವೂ ನಡೆಸಲ್ಪಡುವದು. ಪ್ರತಿಯೊಂದು ಕೋಮಿನವರೂ ತಮ್ಮತಮ್ಮವರಲ್ಲಿಯೇ ಗ್ರಾಮರಕ್ಷಣೆಗೆ, ಬೇಕಾದವರನ್ನು ಆರಿಸಿಕೊಳ್ಳಬೇಕು. ಅವರಿಗೆ ಕೋಮಿನ ನಾಯಕನೇ ಅಧಿಪತಿಯು. ಹಾಗೆಯೇ ಮನೆ ಮನೆಗೆ ಕಂದಾಯವನ್ನು ಹಾಕಿ ಅದನ್ನು ವಸೂಲು ಮಾಡುವದಕ್ಕೂ, ನ್ಯಾಯವನ್ನು ತೀರಿಸುವದಕ್ಕೂ ಒಂದೊಂದು ಕೋಮಿನಲ್ಲಿಯೂ ಒಂದೊಂದು ಪಂಚಾಯಿತಿ ಯುಂಟು. ಇವರೆಲ್ಲಾ ವಸೂಲಾದ ಹಣದಲ್ಲಿ ಕೋಮಿನ ಯೋಗಕ್ಷೇಮಕ್ಕೂ ಮತ್ತು ಸರಕಾರಕ್ಕೆ ತೆರಬೇಕಾದ ಹಣಕ್ಕೂ ಬೇಕಾದಷ್ಟನ್ನು ಉಳಿಸಿಕೊಂಡು ಮಿಕ್ಕದ್ದರಲ್ಲಿ ಅರ್ಧವನ್ನು ಊರಿನ ಕೆಲಸ ನಡೆಸುವವರಿಗೆ ಪಾರಿತೋಷಕವಾಗಿ ಕೊಡುವರಂತೆ. ಆ ಊರಿ ನಲ್ಲಿ ಎಲ್ಲಾ ಹುಡುಗರೂ ಹುಡುಗಿಯರೂ ವಿದ್ಯಾಭ್ಯಾಸಮಾಡಿಯೇ ತೀರಬೇಕು; ಆದರೆ ಪರೀಕ್ಷೆಗಳು ಯಾವವೂ ಇಲ್ಲ, ಮತಾವಲಂಬಿಗಳು ಅವರವರ ಮತಾನುಷ್ಠಾನವನ್ನು ಅವರವರ ಕೋಮಿನಲ್ಲಿಯೇ ಮಾಡಬೇಕಾದ್ದರಿಂದ ವ್ಯಾಜ್ಯಗಳು ಉಂಟಾಗುವದಕ್ಕೆ ಅವಕಾಶವೇ ಇಲ್ಲ, ಗ್ರಾಮಮಹಾಸಭೆಯಲ್ಲಿ ಎಲ್ಲರೂ ಸಮರಾಗಿ

ಭಾವಿಸಲ್ಪಡುತ್ತಾರೆ. ಇಪ್ಪತ್ತು ವಯಸ್ಸಿನೊಳಗಾಗಿ ಪ್ರತಿಯೊಬ್ಬ ಹುಡುಗನೂ ಮೂರು ವರ್ಷಗಳು ಯೋಧಕೂಟದಲ್ಲಿ ಅಭ್ಯಾಸಮಾಡಬೇಕು. ಇಪ್ಪತ್ತೈದು ವಯಸ್ಸಿನ ಮೇಲೆ ಯಾವ ಕಸಬೂ ಇಲ್ಲದವರನ್ನು ಊರಿನಿಂದ ಹೊರಪಡಿಸುವರಂತೆ. ಒಬ್ಬೊಬ್ಬನೂ ಒಂದೊಂದು ಕಸಬನ್ನು ಏರ್ಪಡಿಸಿಕೊಂಡಹೊರತು ಮದುವೆ ಆಗಕೂಡದು. ಈ ಗ್ರಾಮದವರಿಗೆ ಊರಿನ ಸುತ್ತಲೂ ಐವತ್ತು ಸಾವಿರ ಎಕರೆ ಜಮೀನು ಸೇರಿರುತ್ತದೆ. ಆದ್ದರಿಂದ ವ್ಯವಸಾಯವು ಮುಖ್ಯವಾಗಿ ನಡೆಯುವದು. ಇದರ ಜೊತೆಗೆ ನೆಯ್ಗೆ, ಮರಗೆಲಸ, ಲೋಹದಕೆಲಸ, ವೈದ್ಯ, ಸಂಗೀತ, ಚಿತ್ರ, ಉಪಾಧ್ಯಾಯತ್ವ ಮುಂತಾದ ಕಸಬುಗಳೂ ಉಂಟು. ಈ ಗ್ರಾಮಕ್ಕೆ ಸ್ವಲ್ಪ ದೂರದಲ್ಲಿ ಅನೇಕ ಕಟ್ಟಡಗಳು ಇವೆ. ಅವುಗಳಲ್ಲಿ ಕೆಲವು ವೈದ್ಯಶಾಲೆಗಳು; ವಿದ್ಯಾಶಾಲೆಗಳು, ನ್ಯಾಯಾಸ್ಥಾನಗಳು, ಛತ್ರಗಳು- ಇವೇ ಹೆಚ್ಚು. ಇಲ್ಲಿ ಯಾರೂ ಭಿಕ್ಷುಗಾರರು ಇಲ್ಲ, ಬ್ರಾಹ್ಮಣರು ಕೂಡ ಪೌರೋಹಿತ್ಯವೋ, ಶಾಸ್ತ್ರಪಾಠವೋ, ವ್ಯವಸಾಯವೋ, ಶಿಲ್ಪಿಯೋ - ಯಾವುದಾದರೊಂದನ್ನು ಅನುಸರಿಸಿ ಜೀವನ ಮಾಡುವರು. ಯಾರೂ ಹೆಚ್ಚಾಗಿ ಖರ್ಚುಮಾಡಲು ಅಥವಾ ದಾಂಭಿಕವಾಗಿ ಇರಲು ಅವಕಾಶವಿಲ್ಲ. ಇಂಡಿಯಾರಾಜ್ಯದಲ್ಲಿ ಇದೂ ಒಂದು ಭಾಗವಾಗಿದ್ದದ್ದರಿಂದ ವರ್ಷಕ್ಕೆ ಒಂದು ಸಲ ಸರ್ಕಾರಕ್ಕೆ ಪೊಗದಿಕಟ್ಟಬೇಕು. ಮತ್ತು ಯುದ್ಧ ಕಾಲಗಳಲ್ಲಿ ಶೇಕಡ ಒಂದರಂತೆ ತಯಾರಾದ ಸೈನಿಕರಿಗೆ ವಿಶೇಷ ದ್ರವ್ಯ ಸಹಾಯವನ್ನು ಮಾಡಬೇಕು. ಇದಕ್ಕಾಗಿ ರಾಜ್ಯಸಭೆಯಲ್ಲಿ ಈ ಗ್ರಾಮಪರವಾಗಿ ಚುನಾಯಿಸಲ್ಪಟ್ಟ ಒಬ್ಬ ಪ್ರತಿನಿಧಿಯು ಇರುವನು. ಒಂದೊಂದು ಗ್ರಾಮವೂ ಇದೇ ರೀತಿ ಏರ್ಪಟ್ಟಿರುವದರಿಂದ ಗ್ರಾಮ ಗ್ರಾಮಕ್ಕೆ ಒಬ್ಬರ ಮೇಲೊಬ್ಬರಿಗೆ ಅಸೂಯಾದ್ವೇಷಗಳಿರಲು ಅವಕಾಶವಿಲ್ಲ; ಅಥವಾ ಹಾಗುಂಟಾದರೆ ಮಹಾ ರಾಜ್ಯದ ಸಭೆಯು ಅವುಗಳನ್ನು ಖಂಡಿಸಿ ತಿದ್ದುಪಾಟು ಮಾಡುವದಂತೆ. ಈ ಗ್ರಾಮದಲ್ಲಿಯೂ ಇದಕ್ಕೆ ಸೇರಿದ ಸುತ್ತಲಿರುವ ಪ್ರದೇಶ ಗಳಲ್ಲಿಯೂ ಸೇರಿ ಒಟ್ಟು ಐದುಸಹಸ್ರ ಜನಸಂಖ್ಯೆ.

ಈ ಅತಿಶಯಗಳನ್ನೆಲ್ಲಾ ನೋಡುತ್ತಾ ಕೇಳುತ್ತಾ ದೇವರಗುಡಿಗೆ ಹೋಗಿ, ಹರಿಕಥೆಯನ್ನು ಕೇಳಿ ಸಂತುಷ್ಟನಾಗಿ ರಾತ್ರಿ ಹತ್ತುಘಂಟೆಗೆ ಶ್ರೀನಿವಾಸಾಚಾರ್ಯರ ಮನೆಗೆ ಬಂದು, ಆ ರಾತ್ರಿಯನ್ನು ಅಲ್ಲಿ ಕಳೆದು, ಮರುದಿನ ಪ್ರಾತಃಕಾಲದಲ್ಲಿ ಎದ್ದು, ಶೌಚಾದಿಗಳನ್ನು ತೀರಿಸಿಕೊಂಡು, ಪುಸ್ತಕಭಂಡಾರದ ಸಮೀಪಕ್ಕೆ ಬಂದೆನು. ಮೋಟಾರುಕಾರು, ಇನ್ನೂ ಅಲ್ಲಿಯೇ ಇದ್ದಿತು. ಕಾರು ನಡೆಸುವವನು ನನ್ನನ್ನು

ನೋಡಿದ ಕೂಡಲೆ ಯಾವ ಮಾತನ್ನೂ ಆಡದೆ ಬಾಗಿಲನ್ನು ತೆಗೆದನು. ನಾನು ತತ್‌ಕ್ಷಣವೇ ಒಳಗೆ ಹೋಗಿ ಕುಳಿತುಕೊಳ್ಳಲು ಕಾರನ್ನು ಅತಿವೇಗವಾಗಿ ಬಿಟ್ಟನು. ನಾನು ಒಂದೆರಡು ಘಂಟೆಯೊಳಗೇ ಮನೆಯನ್ನು ಸೇರಿದೆನು. ಕಾಲ ವಿಳಂಬ ವಾದ್ದರಿಂದ ಇನ್ನೂ ಒಂದು ಐದುರೂಪಾಯಿ ನೋಟನ್ನು ಕಾರು ನಡೆಸುವವನಿಗೆ ಹೆಚ್ಚಾಗಿ ಕೊಟ್ಟು ಅವನನ್ನು ''ಏನಯ್ಯ, ನಿನ್ನೆಯ ದಿವಸ ಎಲ್ಲಿ ಊಟ ಮಾಡಿದೆ? ನಾವು ಹೋದ ಪ್ರದೇಶದ ಹೆಸರೇನು? ಇಲ್ಲಿಗೆ ಎಷ್ಟು ದೂರ? ನಿನ್ನ ಹೆಸರೇನು? ಎಲ್ಲಿ ಇದ್ದೀಯೆ?''ಎಂದು ಕೇಳಲು ಅವನು ಯಾವುದಕ್ಕೂ ಉತ್ತರ ಕೊಡಲಿಲ್ಲ. ''ಏಕಯ್ಯ, ಮಾತನಾಡುವುದಿಲ್ಲ?''ಎಂದು ನಾನು ಕೇಳಲು ಅವನು ಬಾಯಿಯನ್ನು ಸನ್ನೆಯಿಂದ ತೋರಿಸಿ ಕಾರನ್ನು ನಡೆಸಿಕೊಂಡು ಹೋಗಿಯೇ ಬಿಟ್ಟನು.

ವಾಚಕರೆ, ಇದು ಏನು ವಿಚಿತ್ರ! ಒಂದು ದಿನವನ್ನೆಲ್ಲಾ ಕಳೆದು ಎಷ್ಟೋ ವಿಷಯಗಳನ್ನೆಲ್ಲಾ ಅನುಭವಿಸಿ ಕಡೆಗೂ ಎಲ್ಲಿ ಹೋಗಿದ್ದೇನು? ನನ್ನನ್ನು ಕರೆದು ಕೊಂಡು ಹೋದವರಾರು? ಎಂಬುವುದು ಯಾವುದೂ ತಿಳಿಯದೆ ನಡೆದದ್ದೆಲ್ಲವನ್ನೂ ನೆನೆನೆನೆದು ಭಗವದ್ವಿಲಾಸಕ್ಕೆ ಭ್ರಮಿಸಿ ಪರವಶನಾದೆನು.

*****

# 10. ಶ್ರೀರಾಮಾನುಜಾಚಾರ್ಯರ ಸಿದ್ಧಾಂತ [1]

ರಾಮಾನುಜಾಚಾರ್ಯರು ಬ್ರಹ್ಮಸೂತ್ರಕ್ಕೆ ಭಾಷ್ಯವನ್ನು ಮಾಡಿದಂದಿನಿಂದ, ಬಹುಕಾಲದಿಂದಲೂ, ನಡೆದುಕೊಂಡು ಬಂದಿದ್ದ ಶಂಕರಮತದಲ್ಲಿ ಒಡಕುಂಟಾಗುವದಕ್ಕೆ ಮೊದಲಾಯಿತು. ಇವರ ತರುವಾಯ ಬಂದ ಮಧ್ವಾಚಾರ್ಯರಂತೆಯೇ ಇವರೂ ಮಾಯಾವಾದವನ್ನು ತಿರಸ್ಕರಿಸಿ ವ್ಯವಹಾರದಲ್ಲಿ ಕಂಡುಬರುವ ವಸ್ತು ಗಳೂ ಅವುಗಳಲ್ಲಿರುವ ಭೇದವೂ ಸತ್ಯವೆಂದು ತೋರಿಸುವದಕ್ಕೆ ಹೋರಾಡಿದರು. ಎಷ್ಟೋ ಜನರಿಗೆ ಮಾಯಾವಾದವೆಂಬುದು ಒಂದು ಕೆಟ್ಟಕನಸಿನಂತೆ ಆಗಿಬಿಟ್ಟಿತ್ತು. ಒಂದು ಕಡೆ ನೋಡಿದರೆ ವೇದಗಳಲ್ಲಿ ಬ್ರಹ್ಮವು ಒಂದೇ ಎಂದು ಘಂಟಾ ಘೋಷವಾಗಿ ಸಾರಿರುತ್ತದೆ. ಸರ್ವವೂ ಬ್ರಹ್ಮವೇ ಎಂಬುದೇ ಸಾಂಪ್ರದಾಯಿಕವಾದ ಮತವಾಗಿ ಕಾಣುತ್ತದೆ; ಮತ್ತೊಂದು ಕಡೆ ನೋಡಿದರೆ ನಮ್ಮೆದುರಿಗೆ ಇರುವ ಪ್ರಪಂಚದಲ್ಲಿ ನಾನಾತ್ವವೂ ಸತ್ಯಭೇದಗಳೂ ಇದ್ದೇ ತೀರಬೇಕೆಂದು ಕಾಣುತ್ತಿದೆ ಏನುಮಾಡುವುದು? ಈ ಸಮಯಕ್ಕೆ ಮಾಯಾವಾದದ ಹಿಡಿತದಿಂದ ಜನರನ್ನು ತಪ್ಪಿಸಿ ಪ್ರಪಂಚಕ್ಕೆ ಆನಂದವನ್ನೂ ಸೌಂದರ್ಯವನ್ನೂ ಮತ್ತೆ ತಂದುಕೊಡುವ ಒಬ್ಬ ಆಚಾರ್ಯರ ಆವಶ್ಯಕತೆಯು ಬಹಳವಾಗಿತ್ತು. ವೇದವಚನಗಳನ್ನೂ ತಳ್ಳಬಾರದು, ಸರ್ವಜನರಿಗೂ, ಇರುವ ಅನುಭವವನ್ನೂ ತಿರಸ್ಕರಿಸಬಾರದು - ಇಂಥದ್ದೊಂದು ಉಪದೇಶವನ್ನು ಮಾಡುವ ಆಚಾರ್ಯರೊಬ್ಬರು ಬೇಕಾಗಿತ್ತು. ರಾಮಾನುಜಾಚಾರ್ಯರು ಈ ಕಾರ್ಯವನ್ನು ನೆರವೇರಿಸುವದಕ್ಕಾಗಿ ಬಂದರು. ಅವರು ತಮ್ಮ ಅಸಾಧಾರಣವಾದ ಬುದ್ಧಿಕೌಶಲದಿಂದಲೂ ತರ್ಕದಲ್ಲಿದ್ದ ಜಾಣ್ಮೆಯಿಂದಲೂ ವಿಸ್ತಾರವಾದ ಶಾಸ್ತ್ರಪಾಂಡಿತ್ಯದಿಂದಲೂ ವೇದದ ಉಪದೇಶಕ್ಕೆ ಒಂದು ಹೊಸ ರೂಪವನ್ನೇ ಕೊಟ್ಟರು. ಅವರ ಅಸಾಧಾರಣ ಬುದ್ಧಿಯ ಫಲವಾಗಿ ಶ್ರೀಭಾಷ್ಯವು ಹೊರಕ್ಕೆ ಬಂದಿತು. ಉಪನಿಷತ್ತುಗಳಲ್ಲಿ ಏಕತ್ವವನ್ನೇ ಹೇಳಿದೆಯೆಂಬುದನ್ನು ಶಂಕರಾಚಾರ್ಯರಂತೆಯೇ ಇವರೂ ಒಪ್ಪಿದರು; ಆದರೆ ಅದ್ವೈತದ ಬೆನ್ನಂಟಿಕೊಂಡೇ ಇರುವ ಮಾಯಾವಾದವನ್ನು ತಿರಸ್ಕರಿಸಿಬಿಟ್ಟರು.

---

1. ಇದು ಶ್ರೀಯುತ ಕೃಷ್ಣಸ್ವಾಮಿಅಯ್ಯರ್‌ರವರು ಮೈಸೂರಿನಲ್ಲಿ ನಡೆದ ಭರತಖಂಡದ ತತ್ತ್ವಶಾಸ್ತ್ರಜ್ಞರ ಸಮಾಜದ ಎಂಟನೆಯ ಸಮ್ಮೇಳನದಲ್ಲಿ ಓದಿದ ಪ್ರಬಂಧದಿಂದ ಆರಿಸಿ ಕನ್ನಡಿಸಿದ ಭಾಗ - ಶ್ರೀ ಶ್ರೀ ಸಚ್ಚಿದಾನಂದೇಂದ್ರಸರಸ್ವತೀಸ್ವಾಮಿ

ಸಂ.

ದಕ್ಷಿಣಭಾರತದಲ್ಲಿ ಈ ಕಾಲಕ್ಕೆ ಧರ್ಮಶ್ರದ್ಧೆಯು ಮಿತಿಮೀರಿ ಉಕ್ಕಿ ಹರಿಯುತ್ತಿತ್ತೆಂಬುದು ಇತಿಹಾಸದಿಂದ ತಿಳಿಯಬರುತ್ತದೆ. ಶಂಕರಾಚಾರ್ಯರ ಉಪದೇಶಗಳು ಸಾಮಾನ್ಯಜನರ ಬುದ್ಧಿಗೆಟುಕದಷ್ಟು ಸೂಕ್ಷ್ಮವಾಗಿದ್ದದ್ದರಿಂದ, ಅವನ್ನು ಜನರು ಸರಿಯಾಗಿ ತಿಳಿದುಕೊಳ್ಳಲಾರದೆ ತಪ್ಪುಹಾದಿಗೆ ಹೋಗುತ್ತಿದ್ದರು. ಎಲ್ಲಿಯೋ ಒಂದೊಂದು ಕಡೆಯಲ್ಲಿ ವಿದ್ವಾಂಸರು ಮೂಲೆಯಲ್ಲಿ ಕುಳಿತು ಏಕತ್ವ ವಿಚಾರವನ್ನು ಮಾಡಿ ಮಾಡಿ ಬುದ್ಧಿಯನ್ನು ಮಸುಳಿಸಿಕೊಳ್ಳುತ್ತಿದ್ದರು. ವೇದಾಂತ ತತ್ವಗಳನ್ನು ನ್ಯಾಯಪ್ರಯೋಗಗಳ ರೂಪಕ್ಕೆ ಕೆಡವಿ ಬರಿಯ ತರ್ಕದ ಕಲ್ಪನೆಗಳನ್ನಾಗಿ ಮಾಡಿಕೊಳ್ಳಹತ್ತಿದ್ದರು. ಭಕ್ತಿಶ್ರದ್ಧೆಯುಳ್ಳವರಿಗೆ ಇವುಗಳಿಂದ ಉತ್ಸಾಹವಾಗಲಿ ಚಿತ್ತ ಸಮಾಧಾನವಾಗಲಿ ಉಂಟಾಗುವಂತೆಯೇ ಇರಲಿಲ್ಲ. ಆದ್ದರಿಂದ ಜನರ ಮನಸ್ಸು ಮತ್ತೊಂದು ಕಡೆಗೆ ತಿರುಗಿತು. ಪುರಾಣಗಳನ್ನೂ ಇತಿಹಾಸಗಳನ್ನೂ ಶ್ರದ್ಧಾ ಪೂರ್ವಕವಾಗಿ ಎಲ್ಲರೂ ಓದಲಾರಂಭಿಸಿದರು. ಮೂರ್ತಿಪೂಜೆ, ದೇವಾಯಲಗಳು- ಇವುಗಳಲ್ಲಿ ಜನರಿಗೆ ಹೆಚ್ಚಿನ ಆದರವುಂಟಾಯಿತು. ವಿಚಾರವಿಲ್ಲದೆ ಮಾಹಾತ್ಮ್ಯಗಳನ್ನು ನಂಬುವದು ಹೆಚ್ಚಾಯಿತು. ಪ್ರತಿಯೊಂದು ದೇವತೆಗಳೂ ಭಕ್ತರು ತಮತಮಗೆ ಇಷ್ಟವಾದ ಗುಣಗಳನ್ನು ಆರೋಪಿಸುವದಕ್ಕೆ ಮೊದಲು ಮಾಡಿದರು. ತಟಸ್ಥೇಶ್ವರವಾದದ ಜಯದುಂದುಭಿಯು ಎಲ್ಲೆಲ್ಲಿಯೂ ಮೊಳಗಿತು; ವೇದಾಂತವಿಚಾರವೆಂಬುದು ಎಲ್ಲಿಯೋ ಮೂರು ನಾಲ್ಕು ಪಂಡಿತರ ವಿನೋದ ಕಾಲಕ್ಷೇಪಕ್ಕೆಂದಾಗಿಬಿಟ್ಟಿತು.

ಈಗ ಭಾಗವತರೆಂಬ ಜನರ ಒಂದು ಹೊಸ ಸಮಾಜವು ತಟ್ಟನೆ ಮುಂದಕ್ಕೆ ಬಂದು ಜನಾನುರಾಗವನ್ನು ಸಂಪಾದಿಸಿಕೊಂಡಿತು. ಈ ಸಮಾಜವು ಬಹುಕಾಲದಿಂದಲೂ ಎಲ್ಲಿಯೋ ಅಜ್ಞಾತವಾಸವನ್ನು ಅನುಭವಿಸಿಕೊಂಡಿದ್ದಿರಬೇಕು. ಆ ಸಮಾಜಕ್ಕೆ ಇನ್ನೂ ಬಹುಜನರು ಸೇರಿರಲಿಲ್ಲವಾದರೂ ಬಹುಕಡೆಗಳಲ್ಲಿ ಈ ಜನರು ಇರುತ್ತಿದ್ದರು. ಇವರಲ್ಲಿ ಜಾತ್ಯಾಚಾರಗಳ ಕಟ್ಟು ಇರಲಿಲ್ಲ. ಕಂಚಿ, ಶ್ರೀರಂಗ-ಮುಂತಾದ ಕ್ಷೇತ್ರಗಳಲ್ಲಿ ಇವರು ಸಂಘಗಳನ್ನು ಮಾಡಿಕೊಂಡು ಆಗಾಗ್ಗೆ ಸಗುಣೇಶ್ವರಭಕ್ತಿಯನ್ನು ಬೋಧಿಸುವದು, ಭಜನೆಗಳನ್ನೂ ಕೀರ್ತನೆಗಳನ್ನೂ ಏರ್ಪಡಿಸುವದು, ಭಕ್ತಿಯಿಂದುಂಟಾದ ಅದ್ಭುತವಾದ ಅನುಭವ ವಿಶೇಷಗಳನ್ನು ತಿಳಿಸುವದು- ಹೀಗೆಲ್ಲ ಮಾಡುತ್ತಿದ್ದರು; ಪ್ರತಿಯೊಬ್ಬನೂ ಈಶ್ವರನೊಡನೆ ಸಂಭಾಷಣೆ ಮಾಡಬಹುದೆಂದು ಅವರು ಜನರನ್ನು ಹುರಿದುಂಬಿಸುತ್ತಿದ್ದರು. ಪ್ರತಿಯೊಬ್ಬನಿಗೂ ತಾನು ಆರಾಧಿಸುವ ದೇವರು ತನ್ನನ್ನು ರಕ್ಷಿಸುತ್ತಾನೆಂಬ ನಂಬಿಕೆಯು ಹೆಚ್ಚಿತು. ಸ್ವಲ್ಪ ದಿನಗಳಲ್ಲಿಯೇ ಈ ಜನರೆಲ್ಲ ಒಂದು ಸಮಾಜಕ್ಕೆ ಸೇರಿದವರಾದರು.

ಇವರೆಲ್ಲರೂ ಬಡವರೇ ಆದರೂ ಯಾವನಾದರೂ ತಮ್ಮವನು ಕಷ್ಟದಲ್ಲಿ ಸಿಕ್ಕಿದ್ದರೆ ಅವನಿಗೆ ಸಹಾಯಮಾಡುವದಕ್ಕೆ ಅಲ್ಲದೆ ತಮ್ಮ ಮತಕ್ಕಾಗಿ ಪ್ರಾಣವನ್ನೇ ಒಪ್ಪಿಸುವದಕ್ಕೆ ಸಿದ್ಧರಾದರು. ಮಿಕ್ಕ ಜನರು ಇವರನ್ನು ವೈಷ್ಣವರೆಂದು ಕರೆಯುತ್ತಿದ್ದರು.

ಈ ಮತಕ್ಕೆ ಸೇರಿದ್ದವರಲ್ಲಿ ತಿರುಕಚ್ಚಿನಂಬಿ ಎಂಬ ಒಬ್ಬ ಬಡ ಬ್ರಾಹ್ಮಣ ಭಕ್ತನು ಕಾಂಚೀನಗರದಲ್ಲಿರುತ್ತಿದ್ದನು. ಪರಿಶುದ್ಧವಾದ ನಡತೆಯಿಂದಲೂ ಉದಾತ್ತವಾದ ತತ್ತ್ವೋಪದೇಶದಿಂದಲೂ ಅವನ ಪ್ರಖ್ಯಾತಿಯು ಎಲ್ಲೆಲ್ಲಿಯೂ ಹರಡಿತ್ತು. ಅವನು ತುಂಬ ಪವಿತ್ರಾತ್ಮನಾಗಿದ್ದದ್ದರಿಂದ ಕಂಚಿಯ ವರದರಾಜಸ್ವಾಮಿಯೊಡನೆ ನೇರಾಗಿ ಮಾತನಾಡುತ್ತಾನೆಂಬ ವಾರ್ತೆಯು ಹಬ್ಬಿತು. ರಾಮಾನುಜಾಚಾರ್ಯರು ಶ್ರದ್ಧಾಭಕ್ತಿಯ ಸ್ವಭಾವದವರಾದ್ದರಿಂದ ಜಾತಿಕುಲಗಳನ್ನು ಲೆಕ್ಕಿಸದೆ ಭಕ್ತರಾದವರಲ್ಲೆಲ್ಲ ಸಹಾನುಭೂತಿಯನ್ನು ತೋರಿಸುತ್ತಿದ್ದರು; ಆದ್ದರಿಂದ ಅವರಿಗೆ ಈತನಲ್ಲಿ ಬೇಗನೆ ಗೌರವವುಂಟಾಗಿ ಅವರು ಈ ರಹಸ್ಯಸಮಾಜಕ್ಕೆ ಸೇರಿದ್ದೇನೂ ಆಶ್ಚರ್ಯವಲ್ಲ. ಆದ್ದರಿಂದಲೇ ವೇದದಲ್ಲಿದ್ದ ಶ್ರದ್ಧೆ, ಪ್ರಪಂಚವು ಸತ್ಯವೆಂಬುದನ್ನು ಸ್ಥಾಪಿಸಬೇಕೆಂಬ ಕುತೂಹಲ- ಈ ಎರಡು ಭಾವನೆಗಳಿಗೆ ಅವರಲ್ಲಿ ಒಳತೋಟಿಯುಂಟಾಗಿ ಅವರು ತಮ್ಮ ಸಂದೇಹಗಳನ್ನು ಈ ನಂಬಿಗೆ ತಿಳಿಸಿದರು. ಆಗ ಆತನು ಈ ವಿಷಯವನ್ನು ವರದರಾಜನನ್ನು ಕೇಳಿ ಆತನ ಅಪ್ಪಣೆಯನ್ನು ನಿಮಗೆ ತಿಳಿಸುವೆನು - ಎಂದು ವಾಗ್ದಾನವಿತ್ತನು. ಇದರಂತೆ ಆತನು ಕೂಡಲೆ ನಡೆಸಿಯೂ ಕೊಟ್ಟನು. ಪ್ರಪಂಚ ದಲ್ಲಿರುವ ಭೇದವು ಸತ್ಯವೆಂಬುದೂ ಜೀವನು ಬ್ರಹ್ಮನಿಗಿಂತ ಬೇರೆಯೆಂಬುದೂ ದೇವರಿಗೆ ಅಭಿಮತವಾಗಿರುವದೆಂಬುದನ್ನು ಕೇಳಿದಮೇಲೆ ರಾಮಾನುಜರಿಗೆ ಎಷ್ಟೋ ಮನಸ್ಸು ಸಮಾಧಾನವಾಯಿತು. ರಾಮಾನುಜರ ಜೀವನಚರಿತ್ರೆಯಲ್ಲಿ ಈ ಘಟನೆ ಗೇನೂ ಅಷ್ಟು ಬೆಲೆಯಿಲ್ಲವೆಂದು ಈಗಿನವರು ಭಾವಿಸಬಹುದು. ಆದರೆ ಆಗಿನ ಕಾಲದ ಸಂದರ್ಭವೇ ಬೇರೆಯಾಗಿದ್ದಿತು. ಆಗ ಈಶ್ವರಭಕ್ತಿಯನ್ನು ಉಜ್ಜೀವನ ಗೊಳಿಸುವ ಶ್ರದ್ಧೆಯು ಎಲ್ಲಾ ಕಡೆಯಲ್ಲಿಯೂ ತುಂಬಿ ತುಳುಕುತ್ತಲಿತ್ತು; ದರ್ಶನಗಳು, ಭವಿಷ್ಯ, ದೇವರಪ್ಪಣೆಗಳು, ಸ್ವಪ್ನಗಳು, ಪವಾಡಗಳು- ಇವುಗಳಲ್ಲಿಯೇ ಆಗಿನ ಜನರಿಗೆ ಹೆಚ್ಚಿನ ನಂಬಿಕೆಯಿತ್ತು.

ಇಷ್ಟು ಹೊತ್ತಿಗೆ ಶ್ರೀರಂಗದಲ್ಲಿ ಒಂದು ಹೊಸ ಘಟನೆಯಾಯಿತು. ಅಲ್ಲಿದ್ದ ವೈಷ್ಣವ ಗುರುಗಳಾದ ಯಾಮುನಾಚಾರ್ಯರು ತಮ್ಮ ಉತ್ಕ್ರಾಂತಿಯ ಕಾಲದಲ್ಲಿ ರಾಮಾನುಜರನ್ನು ನೋಡಬೇಕೆಂದು ಹೇಳಿ ಕಳುಹಿಸಿದರು. ರಾಮಾನುಜರ ಅಸಾಧಾರಣವಾದ ಬುದ್ಧಿಶಕ್ತಿಯನ್ನು ಶ್ರೀವೈಷ್ಣವಮತಪ್ರಸಾರಕ್ಕೆ ಉಪಯೋಗಿಸಿ

ಕೊಳ್ಳಬೇಕೆಂಬುದು ಅವರ ಉದ್ದೇಶವು; ಈ ಕಾರ್ಯವನ್ನು ರಾಮಾನುಜಾಚಾರ್ಯರಿಗೆ ಒಪ್ಪಿಸಿದರೆ ಸಮರ್ಪಕವಾಗಿ ನಡೆಯುವದೆಂದು ಅವರಿಗೆ ಭರವಸೆಯುಂಟಾಗಿತ್ತು. ರಾಮಾನುಜರು ಶೀಘ್ರವಾಗಿಯೇ ಶ್ರೀರಂಗಕ್ಕೇನೋ ಬಂದರು. ಆದರೆ ಪಾಪ ! ಅವರು ಬರುವ ಹೊತ್ತಿಗೆ ಆ ಮಹಾತ್ಮರು ದೇಹವನ್ನು ಬಿಟ್ಟಿದ್ದರು. ಅವರು ಬದುಕಿರುವಾಗಲೇ ಅವರ ಸಮಾಗಮವು ತಮಗೆ ಆಗಲಿಲ್ಲವಲ್ಲ! ಎಂದು ರಾಮಾನುಜರಿಗೆ ತುಂಬ ಪಶ್ಚಾತ್ತಾಪವುಂಟಾಯಿತು. ಆದರೆ ಅಲ್ಲಿ ಒಂದು ವಿಶೇಷವು ಅವರ ಕಣ್ಣಿಗೆ ಬಿತ್ತು. ಶವದ ಬಲಗೈ ಬೆರಳುಗಳಲ್ಲಿ ಮೂರು ಇನ್ನೂ ಮಡಿಸಿಕೊಂಡೇ ಇದ್ದವು. ರಾಮಾನುಜರು ''ಇದರಭಿಪ್ರಾಯವೇನು? ನಾನು ನೆರವೇರಿಸಬೇಕಾದ ಮೂರು ಕಾರ್ಯಗಳು ಇವರ ಮನಸ್ಸಿನಲ್ಲಿದ್ದಿರಬಹುದೇ?'' ಎಂದು, ಒಂದು ವೇಳೆ ಹೀಗೇ ಇದ್ದರೂ ಇರಬಹುದೆಂಬ ನಂಬಿಕೆಯ, ಶ್ರದ್ಧಾಭರದಿಂದ ''ಮಹನೀಯರೇ, ನಿಮ್ಮ ಅಪ್ಪಣೆಯಂತೆ ನಡೆಯಲು ನಾನು ಸಿದ್ಧನಾಗಿರುವೆನು. ಇಗೋ, ಎಲ್ಲರ ಮುಂದೆಯೂ ಆಣೆಮಾಡಿ. ಹೇಳಿರುತ್ತೇನೆ. ಭಾಗವತಮತಕ್ಕೆ ಅನುಸಾರವಾಗಿ ಬ್ರಹ್ಮಸೂತ್ರಕ್ಕೆ ಭಾಷ್ಯವನ್ನು ಬರೆಯಬೇಕೆಂಬುದೇ ತಮ್ಮ ಒಂದು ಉದ್ದೇಶವೇನು?'' ಎಂದು ಗಟ್ಟಿಯಾಗಿ ಕೂಗಿ ಕೇಳಿದರು. ಸ್ವಲ್ಪ ಹೊತ್ತಿನಲ್ಲಿ ಒಂದು ಬೆರಳು ಮೆಲ್ಲಗೆ ಬಿಟ್ಟುಕೊಂಡು ನೆಟ್ಟಗಾಯಿತು. ಆಮೇಲೆ ಇಂಥ ಇನ್ನೆರಡು ಪ್ರಶ್ನೆಗಳನ್ನು ಹಾಕಲು ಮಿಕ್ಕೆರಡು ಬೆರಳುಗಳೂ ಹೀಗೆಯೇ ಬಿಟ್ಟುಕೊಂಡವು. ರಾಮಾನುಜಾಚಾರ್ಯರ ಪರಮೋದ್ದೇಶವು ಈಗ ನೆರವೇರಿದಂತಾಯಿತು. ಭಾಗವತ ಜನರಿಗೆಲ್ಲ ಈಗ ಅವರು ಗುರುಗಳಾದರು; ತಮ್ಮ ಉತ್ಸಾಹವೆಲ್ಲವನ್ನೂ ಉಪಯೋಗಿಸಿ ಪೂರ್ಣಶ್ರದ್ಧೆಯಿಂದ ಅವರಿಗೆ ಉಪಕಾರಮಾಡ ಬಹುದೆಂದು ಅವರಿಗೆ ಸಂತೋಷವಾಯಿತು. ತಮ್ಮ ಪ್ರತಿಭೆಯನ್ನೂ ಪಾಂಡಿತ್ಯ ವನ್ನೂ ಈ ಜನರ ಕಾರ್ಯಕ್ಕಾಗಿ ಅವರು ಪೂರ್ಣವಾಗಿ ಉಪಯೋಗಿಸಿದರು. ಇವರ ಮಹಾಫಲವಾಗಿ ಶ್ರೀಭಾಷ್ಯವು ರೂಪುಗೊಂಡಿತು.

ರಾಮಾನುಜರು ವ್ಯವಹಾರದಲ್ಲಿ ತೋರುವ ದ್ವೈತವೇ ಪರಮಾರ್ಥವೆಂದು ಸ್ಥಾಪಿಸುವದಕ್ಕೆ ಹೊರಟರಾದರೂ ಅದನ್ನು ಯುಕ್ತಿಯ ಆಧಾರದಿಂದ ಸ್ಥಾಪಿಸುವದಕ್ಕೆ ಹೊಸ ವಿಚಾರಮಾರ್ಗಗಳನ್ನು ಯಾವದನ್ನೂ ಅವರು ತೆಗೆದು ತೋರಿಸಲಿಲ್ಲ. ವೇದಗಳು, ಲೋಕಬುದ್ಧಿ- ಇವೆರಡನ್ನೇ ಅವರು ನಂಬಿಕೊಂಡಿರುವದರಿಂದ ಅವರ ಮಾತಿಗೆ ತತ್ತ್ವಶಾಸ್ತ್ರದ ದೃಷ್ಟಿಯಿಂದ ಏನೂ ಬೆಲೆಯಿಲ್ಲದಂತಾಯಿತು; ಭ್ರಾಂತಿ ಯೆಂಬುದೇ ಜಗತ್ತಿನಲ್ಲಿಲ್ಲವೆಂಬು ಅವರು ಹೇಳಿರುವದನ್ನು ಕೇಳಿದರಂತೂ ಯಾರಾದರೂ ಬೆಪ್ಪಾಗಿ 'ಇದೇನು ಎದೆಯಪ್ಪ!' ಎನ್ನುವಂತಾಗುತ್ತದೆ.

ವ್ಯವಹಾರದಲ್ಲಿ ಭೇದವಿದ್ದೇ ಇದೆ. ಅದು ನಿಜವೆಂದು ನಾವು ಇಟ್ಟುಕೊಳ್ಳುತ್ತಲೂ ಇದ್ದೇವೆ. ಆದರೆ ಈ ನಂಬಿಕೆಯನ್ನೇ ತೋರಿಸಿಬಿಟ್ಟಮಾತ್ರದಿಂದ ಇದೆಲ್ಲ ಯುಕ್ತಿ ಸಿದ್ಧವೆಂದಾಗಲಾರದು. ವಿಷಯಗಳನ್ನು ಇಂದ್ರಿಯಗಳಿಂದ ಅರಿಯುತ್ತೇವೆಂಬುದೂ ಸಾಮಾನ್ಯವಾಗಿ ಇಂದ್ರಿಯಗಳು ನಮ್ಮನ್ನು ಮೋಸಗೊಳಿಸುವದಿಲ್ಲವೆಂಬುದೂ ನಿಜವೆ. ಆದರೆ ಭ್ರಾಂತಿಗಳಾಗುವವಲ್ಲ ಅವಕ್ಕೇನು ಗತಿ? ತಪ್ಪು ತಿಳಿವಳಿಕೆಯೇ ಇಲ್ಲ, ಭ್ರಾಂತಿಯೇ ಇಲ್ಲ- ಎನ್ನುವದು ದೃಷ್ಟವಿರುದ್ಧವಾಗಿದೆ. ಇದೂ ಅಲ್ಲದೆ ಕನಸೆಂಬುದು ನಾವು ಕಂಡ ಹಾಗೆಯೇ ಎಲ್ಲರಿಗೂ ಆಗುವ ವ್ಯಾಮೋಹವು; ಅದಕ್ಕೆ ನಮ್ಮನ್ನು ಬಿಟ್ಟರೆ ಮತ್ತೆ ಯಾವ ಆಶ್ರಯವೂ ಇಲ್ಲ. ಅದು ಮತ್ತೆಲ್ಲಿಯೂ ಇರುವದಕ್ಕೂ ಆಗುವದಿಲ್ಲ. ಕನಸುಗಳೆಂಬವು ದಿನದಿನವೂ ಆಗುತ್ತಿರುವವು, ಅವುಗಳಲ್ಲಿ ಕಾಣುವ ವಸ್ತುಗಳನ್ನು ಸತ್ಯವೆನ್ನುವದಕ್ಕೆ ಬರುವ ಹಾಗೆಯೇ ಇಲ್ಲ. ಆ ಕಾಲಕ್ಕೆ ಈಶ್ವರನು ಅವುಗಳನ್ನು ಸೃಷ್ಟಿಮಾಡುವನೆಂಬುದು ಈಶ್ವರವಾದಿಯು ಹೂಡುವ ಹಂಚಿಕೆಯಾದೀತೇ ಹೊರತು ತತ್ತ್ವವಿಚಾರಕನು ಹೇಳತಕ್ಕ ಮಾತಾಗಲಾರದು. ಪ್ರಮಾಣವಾಕ್ಯಗಳನ್ನು ಉದಾಹರಿಸುವದೂ ಅವುಗಳಿಗೆ ತನಗೆ ಬೇಕಾದಂತೆ ಅರ್ಥಮಾಡುವದೂ ಈ ಸಂದರ್ಭಕ್ಕೆ ಹೊಂದುವದಿಲ್ಲ; ಕನಸಿನನುಭವವೆಂಬುದುಂಟೆಂಬ ವಿಷಯಕ್ಕೆ ಯಾವ ಸಂದೇಹವೂ ಇಲ್ಲವಾದ್ದರಿಂದ ಅದನ್ನು ಆಚೆಗೆ ತಳ್ಳಿದರೆ ತತ್ತ್ವವಿಚಾರದಲ್ಲಿ ಏಕವಾಕ್ಯತೆಯೆ ಇಲ್ಲದೆ ಹೋಗುತ್ತದೆ. ಇದರಂತೆ ಇಂದ್ರಿಯಗಳು ಹೇಳುವದೆಲ್ಲ ಪ್ರಮಾಣವೆಂಬುದು ನಿರಾಕ್ಷೇಪವಾಗಬೇಕಾದರೆ ಜಾಗ್ರದವಸ್ಥೆಯಲ್ಲಿ ನಮಗೆ ಆಗುವ ಭ್ರಾಂತಿಗಳನ್ನೇನು ಮಾಡಬೇಕೆಂಬುದನ್ನು ಯೋಚಿಸಬೇಕಾಗುವದು.

ಭ್ರಾಂತಿಗಳನ್ನಾಗಲಿ ವ್ಯಾಮೋಹಗಳನ್ನಾಗಲಿ ಅವು ನಮಗಾಗುತ್ತಿರುವಾಗ ಇಂಥವೆಂದು ಗೊತ್ತುಪಡಿಸುವದಾಗುವದಿಲ್ಲ; ಅವು ಸತ್ಯವಾಗಿ ಸ್ವಾಭಾವಿಕವಾಗಿ ಆಗುತ್ತಿರುವಂತೆಯೇ ತೋರುತ್ತಿರುವದು. ಅವುಗಳ ನಿಜವಾದ ಸ್ವರೂಪವೇನೆಂಬುದನ್ನು ಆಮೇಲೆ ಕಂಡುಕೊಳ್ಳುತ್ತೇವೆ; ಅವು ಆಗುವ ಬಗೆಯು ಹೇಗೆಂಬುದನ್ನು ನಾವು ವಿವರಿಸುವದೂ ಆಮೇಲೆಯೆ. ನಿಜವಾದ ಅರಿವು ಉಂಟಾಗುವಾಗಲೂ ತಪ್ಪಾದ ಅರಿವು ಉಂಟಾಗುವಾಗಲೂ ಇಂದ್ರಿಯ ಮನಸ್ಸುಗಳು ಒಂದೇ ಬಗೆಯಲ್ಲಿಯೇ ವರ್ತಿಸುತ್ತವೆ; ಅವುಗಳ ಶಕ್ತಿಯು ಒಂದು ಸಂದರ್ಭದಲ್ಲಿ ಬಲವಾಗುವದೆಂಬುದಾಗಲಿ ಮತ್ತೊಂದು ಸಂದರ್ಭದಲ್ಲಿ ಕುಗ್ಗುವದೆಂಬುದಾಗಲಿ ಇಲ್ಲ. ಇದೂ ಅಲ್ಲದೆ, ಅರಿವನ್ನುಂಟುಮಾಡುವದಕ್ಕೆ ಸಾಧನಮಾತ್ರವಾಗಿರುವ ಕರಣಗಳು ತಮಗೆ ಸಿಕ್ಕುವ ವಿಷಯಗಳೂ ತಾವೂ ಸತ್ಯವೆಂಬ ನಂಬಿಕೆಯನ್ನೂ ನಮಗೆ ಕೊಡುವದೆಂತೆಂಬುದನ್ನು

ನಾವು ಯೋಚಿಸಬೇಕು. ಸತ್ಯವೆಂದರೇನೆಂಬುದನ್ನು ಒಂದು ಶಾಸ್ತ್ರೀಯತತ್ತ್ವದ ಆಧಾರದ ಮೇಲೆ ಗೊತ್ತುಪಡಿಸಬೇಕೇ ಹೊರತು ಅರಿವಿಗೆ ಸಹಾಯವನ್ನೂ ಮಾಡುವದು, ಅರಿವು ಸತ್ಯವೆಂದೂ, ನಿರ್ಧರಿಸುವದು - ಈ ಎರಡು ಕಾರ್ಯಗಳ ಭಾರವನ್ನೂ ಇಂದ್ರಿಯಗಳ ತಲೆಯ ಮೇಲೆಯೇ ಹೇರತಕ್ಕದ್ದಲ್ಲ. ರಾಮಾನುಜರಿಗೆ ಇಂಥ ಯಾವದೊಂದು ತತ್ತ್ವವನ್ನೂ ತಂದೊದಗಿಸುವದು ಆಗಲಿಲ್ಲ; ಅವರಿಗೆ ಸೋಲಾದ ಈ ವಿಷಯದಲ್ಲಿ ಮಧ್ವಾಚಾರ್ಯರಿಗೂ ಜಯವು ಕೈಗೂಡಲಿಲ್ಲ.

ರಾಮಾನುಜಾಚಾರ್ಯರು ವಿಜ್ಞಾನವಾದವನ್ನು ಖಂಡಿಸಿದರೆಂದೂ ಹೇಳುವದಕ್ಕೆ ಆಗುವದಿಲ್ಲ. ವ್ಯವಹಾರದಲ್ಲಿ ಕಾಣುವ ವಸ್ತುಗಳಿಗೆಲ್ಲ ಅವುಗಳ ಅರಿವೇ ಆಧಾರವು; ಏಕೆಂದರೆ ಅರಿವಿಗೆ ಸಂಬಂಧಪಟ್ಟೇ ಅವು ವಿಷಯಗಳಾಗಿ ನಮಗೆ ತೋರುತ್ತಿವೆ. ವಿಷಯಗಳಿಗೆ ವಿಷಯಿಯೊಂದು ಇರಲೇಬೇಕು. ಹೀಗೆ ನೋಡಿದರೆ ಅವುಗಳಿಗೆ ವಿಜ್ಞಾನಕ್ಕಿಂತ ಬೇರೆಯಾದ ಸತ್ತೆಯಿಲ್ಲವೆಂದಾಗುವುದು ಮತ್ತು ಅವುಗಳಲ್ಲಿ ವ್ಯಕ್ತಿತ್ವವೂ ಭೇದಗಳೂ ಅನೇಕತ್ವವೂ ಇರುವದರಿಂದಲ್ಲವೆ ಅವನ್ನು ಸತ್ಯವೆನ್ನಬೇಕು? ಆದರೆ ಈ ವ್ಯಕ್ತಿತ್ವಾದಿಗಳು ಸಾಪೇಕ್ಷವಾಗಿರುವದೇ ಹೊರತು ನಿರಪೇಕ್ಷವಾಗಿರುವದಿಲ್ಲ. ಜೆಂಟೈಲ್ ಎಂಬಾತನು ಅಭಿಪ್ರಾಯಪಟ್ಟಿರುವ ಹಾಗೆ, ವಸ್ತುವಿನ ವ್ಯಕ್ತಿತ್ವವೆಂಬುದು ಕಾಲದೇಶಗಳಿಂದ, ಅದು ಎಲ್ಲಿರುವದು ಯಾವಾಗ ಇರುವದು- ಎಂಬುದರಿಂದ. ಉಂಟಾಗಿರುವದೇ ಹೊರತು ಅದರ ಸ್ವಭಾವದಿಂದ ಆಗಿರುವದಿಲ್ಲ (ಪುಟ 324 Vedanta or the Science of Reality)[1] ಅದಕ್ಕೂ ಮಿಕ್ಕವಸ್ತುಗಳಿಗೂ ಇರುವ ಭೇದವೆಂಬುದು ಅದರಲ್ಲಿರುವ ಗುಣಗಳಿಂದ; ಆ ಗುಣಗಳೆಲ್ಲವೂ ಒಂದೊಂದು ಸಾಮಾನ್ಯವು, ಒಂದೊಂದು ಜಾತಿಗೆ ಸಂಬಂಧಪಟ್ಟದ್ದು. ಆದ್ದರಿಂದ ಅವು ಗುಂಪಿಗೆ ಸೇರತಕ್ಕವುಗಳಾಗಿವೆ. ಒಬ್ಬ ಮನುಷ್ಯನು ಎತ್ತರವಾಗಿದ್ದಾನೆ ಎಂದರೆ ಅವನು ಎತ್ತರವೆಂಬುದು ಸಾಪೇಕ್ಷವಾಗಿರುತ್ತದೆ; ಎಲ್ಲರಿಗೂ ನಿರಪೇಕ್ಷವಾಗಿ ಎತ್ತರವಿದ್ದರೆ ಆಮೇಲೆ ಭೇದಗಳೇ ಇರುತ್ತಿರಲಿಲ್ಲ.

---

1. ಇದು ಶ್ರೀಯುತ ಕೆ.ಎ.ಕೃಷ್ಣಸ್ವಾಮಿ ಅಯ್ಯರ್‌ರವರಿಂದಲೇ ಇಂಗ್ಲಿಷು ಭಾಷೆಯಲ್ಲಿ ರಚಿತವಾಗಿರುವ ಅಮೋಘವಾದ ವೇದಾಂತಗ್ರಂಥವು. ಕಾರ್ಯಾಲಯ ದಲ್ಲಿ ದೊರಕುತ್ತದೆ. - ಸಂ.ಅ.ಪ್ರ.

ಕೇರ್ಡ್ ಎಂಬಾತನು ಹೇಳಿರುವಂತೆ ''ನಿರಪೇಕ್ಷಭೇದವೆಂಬುದರ ಸ್ವಭಾವ ವನ್ನು ಪರ್ಯಾಲೋಚಿಸಿದರೆ ಇದು ತನಗೆ ತಾನೇ ವಿರುದ್ಧವಾದ ಮಾತೆಂಬುದು ಗೊತ್ತಾಗುವದು; ಏಕೆಂದರೆ ಅದು ಯಾವ ವಸ್ತುಗಳನ್ನು ಬೇರ್ಪಡಿಸಬೇಕೋ ಅವುಗಳಿಗಿರುವ ಸಂಬಂಧವನ್ನೆಲ್ಲ ಅಳಿಸಿಹಾಕಬೇಕಾಗುವದು. ಭೇದವೆಂಬ ಮಾತಿನಲ್ಲಿ ಅಡಗಿರುವ ಸಂಬಂಧವನ್ನೇ ಅದು ನಾಶಗೊಳಿಸುವದು, ಆಗ ಭೇದವನ್ನೇ ನಾಶ ಗೊಳಿಸಿದಂತಾಗುವದು.''(ಪುಟ. 135, Hegel) ಇದರಂತೆ ಅನೇಕತ್ವವೆಂಬುದರಲ್ಲಿ ಸಂಖ್ಯೆಯು ಸೇರಿಕೊಂಡಿದೆಯಷ್ಟೆ; ಈ ಸಂಖ್ಯೆಯೆಂಬುದು ಒಂದು ಜಾತಿಗೆ ಸೇರಿದ ವ್ಯಕ್ತಿಗೆ ಮಾತ್ರ ಸೇರಿದ್ದಾಗಿರುವದು, ಆದ್ದರಿಂದ ಅವು ಗಳೆರಡಕ್ಕೂ ಸಮಾನಧರ್ಮವು ಇರಬೇಕೆಂದಾಗುವದು. ಉದಾಹರಣೆಗೆ ಕುದುರೆಯೂ ನಾಯಿಯೂ ಎರಡು ಪ್ರಾಣಿಗಳು; ನಾಯಿಯೂ ಕೋಲೂ ಎರಡು ವಸ್ತುಗಳು, ಪದಾರ್ಥಗಳು, ಇರವುಗಳು. ಹೀಗೆ ಅನೇಕತ್ವವೆಂಬುದೂ ಸ್ವತಂತ್ರಭಾವನೆಯಲ್ಲ, ಒಂದು ಗುಂಪನ್ನು ಅವಲಂಬಿಸಿರುತ್ತದೆ ಎಂದು ಸಿದ್ಧ ವಾಯಿತು. ಈ ರೀತಿಯಲ್ಲಿ ಬೇರೆಬೇರೆಯಾಗಿರುವ ವಸ್ತುಗಳು ಅನೇಕವಾಗಿರುವವೆಂದ ಮಾತ್ರಕ್ಕೆ ಅವು ಪರಮಾರ್ಥವಾಗಿಯೂ ಸತ್ಯ ವಾಗಿರುವವೆಂಬುದಕ್ಕೆ ಪ್ರಮಾಣವೇನೂ ದೊರಕಿದಂತಾಗುವದಿಲ್ಲ; ಅವು ವ್ಯವಹಾರದಲ್ಲಿ ಮಟ್ಟಿಗೆ ಸತ್ಯವಾಗಿರುವ ವೆಂದಾಗುತ್ತದೆ. ವ್ಯಕ್ತಿಗಳು ಸಂಪೂರ್ಣವಾಗಿ ಬೇರೆಬೇರೆಯೇ ಆಗಿರುತ್ತಿದ್ದರೆ ಅವುಗಳು ಅನೇಕವಾಗಿವೆ ಎಂಬ ಮಾತಿಗೆ ಅರ್ಥವೇ ಇರುತ್ತಿರಲಿಲ್ಲ, ರಾಮಾನುಜರು ಹೇಳುವ ಹಾಗೆ ಬೇರೆಬೇರೆ ಬಗೆಯ ಸತ್ಯಗಳಿಲ್ಲವೇ ಇಲ್ಲವೆಂಬುದೂ ಪ್ರಪಂಚ, ಆತ್ಮ, ಈಶ್ವರ- ಎಲ್ಲವೂ ಒಂದೇ ರೀತಿಯಲ್ಲಿ ಸತ್ಯವಾಗಿರುವ ವೆಂಬುದೂ ನಿಜವಾದರೆ, ಆಗ ಈಶ್ವರನೇ ಮುಂತಾದವುಗಳ ಸತ್ಯತ್ವವು ಒಂದನ್ನೊಂದು ಅವಲಂಬಿಸಿರು ವದೆಂದೂ ಸಾಪೇಕ್ಷವೆಂದೂ ಆಗುವದೇ ಹೊರತು ಅವು ನಿರಪೇಕ್ಷವಾಗಿ ಪರಮಾರ್ಥ ಸತ್ಯ ವಾಗಿರುವದೆಂದು ಎಂದಿಗೂ ಸಿದ್ಧಿಸುವದಿಲ್ಲ.

ರಾಮಾನುಜಾಚಾರ್ಯರು ಹೀಗೆ ಹೇಳಬಹುದು: ಪ್ರಪಂಚ, ಜೀವ, ಈಶ್ವರ- ಈ ಮೂರೂ ಒಂದೇ ; ಏಕೆಂದರೆ ಈಶ್ವರನಿಗೆ ಮಿಕ್ಕೆರಡೂ ಶರೀರವಾಗಿರುತ್ತದೆ. ಈಶ್ವರನು ಪರಮಾರ್ಥಸತ್ಯವಾಗಿರುವದರಿಂದ ಮಿಕ್ಕೆರಡರಲ್ಲಿಯೂ ಅವನ ಸ್ವಭಾವವು ಇರಲೇಬೇಕು. ಅವೂ ಸತ್ಯವಾಗಿರಲೇಬೇಕು. ಇಲ್ಲೀಗ ಈಶ್ವರನು ಶರೀರಿಯೆಂಬ ಅವರ ಮತ್ತೊಂದು ಮನೋಭಾವವು ನಮ್ಮೆದುರಿಗೆ ಬಂದು ನಿಲ್ಲುವದು. ಉಪನಿಷತ್ತುಗಳಲ್ಲಿ ಹೇಳಿರುವ ಏಕತ್ವವನ್ನೂ ವ್ಯವಹಾರದಲ್ಲಿ ಕಂಡುಬರುವ

ಅನೇಕತ್ವವನ್ನೂ ಹೊಂದಿಸುವದಕ್ಕಾಗಿ ಅವರು ಜೀವರೂ ಜಡರಾಶಿಯೂ ಶರೀರರೂಪದಿಂದ ಈಶ್ವರನಲ್ಲಿಯೇ ಅಡಕವಾಗಿರುತ್ತಾರೆಂಬ ಹಂಚಿಕೆಯನ್ನು ತೆಗೆದಿರುತ್ತಾರೆ. ಹೀಗೆ ಕ್ಲೇಶವನ್ನು ಬಗೆಹರಿಸಿಕೊಳ್ಳುವದರಿಂದ ಸಾಮಾನ್ಯಬುದ್ಧಿಯೇ ಕೊನೆಗೂ ಗೆದ್ದಂತಾಗುವದೆಂದು ಅವರ ಭಾವನೆ.

ಆದರೆ ಇಲ್ಲೊಂದು ಅಪರಿಹಾರ್ಯವಾದ ಅಡಚಣೆಯಿದೆ. ಶರೀರಕ್ಕಿಂತ ಬೇರೆಯಾಗಿ ಒಬ್ಬ ಜೀವನೂ, ಪ್ರಪಂಚದಲ್ಲಿ ಧರ್ಮಾಧರ್ಮಗಳ ವ್ಯವಸ್ಥೆಯನ್ನು ನೋಡಿಕೊಳ್ಳುವ ಒಬ್ಬ ಈಶ್ವರನೂ ಇದಾರೆಂದು ನಿರ್ದುಷ್ಟವಾದ ಯುಕ್ತಿಯಿಂದ ತೋರಿಸಿಕೊಟ್ಟ ಹೊರತು ರಾಮಾನುಜಾಚಾರ್ಯರ ಅಭಿಪ್ರಾಯವು ಯುಕ್ತಿಸಿದ್ಧ ವೆಂಬುದನ್ನು ಒಪ್ಪಲಾಗುವದೇ ಇಲ್ಲ. ಮೊದಲು ನೋಡಿ; ಶರೀರಕ್ಕೂ ಜೀವನಿಗೂ ಸಂಬಂಧವೇನು? ಸಂಬಂಧವೆಂಬುದು ಒಂದೇ ಜಾತಿಯ ಎರಡು ವಸ್ತುಗಳಿಗೆ ಇರುತ್ತದೆ, ಒಂದು ಜಡವಸ್ತುವಿಗೂ ಮತ್ತೊಂದು ಜಡವಸ್ತುವಿಗೂ ಇರುತ್ತದೆ- ಎಂದು ಅನುಭವದಲ್ಲಿ ಕಂಡುಬಂದಿರುತ್ತದೆ. ಆದರೆ ಜೀವಕ್ಕೂ ಶರೀರಕ್ಕೂ ಅನಿತ್ಯವಾಗಿ ಸಂಬಂಧವಿದೆಯೆಂದರೂ ಈ ಸಂಬಂಧವನ್ನು ಕಲ್ಪಿಸುವದಕ್ಕೇ ಬರುವ ಹಾಗಿಲ್ಲ. ಒಂದು ವೇಳೆ ಈ ಎರಡಕ್ಕೂ ಇಂಥ ಸಂಬಂಧವೊಂದಿದೆಯೆಂದು ಒಪ್ಪಿಕೊಂಡರೂ ಇದೇ ಸಂಬಂಧವು ಈಶ್ವರನಿಗೂ ಜೀವಜಡಗಳಿಗೂ ಇರುವದೆಂದು ಕಲ್ಪಿಸಿಕೊಳ್ಳುವ ದಾದರೂ ಹೇಗೆ ಸಾಧ್ಯ? ಶರೀರವೆಂದರೆ ಜೀವನು ಅರಿಯಬಹುದಾದ ವಿಷಯವು; ಜೀವನು ತನಗೆ ತಾನು ವಿಷಯನಾದರೂ ಆಗಲಿ, ಮತ್ತೆ ಯಾವದಕ್ಕೂ ವಿಷಯನಾಗಲೇ ಆರನು. ಅವನ ಶರೀರ- ಎಂಬ ಮಾತುಗಳನ್ನು ಯಾವರ್ಥದಲ್ಲಿ ಉಪಯೋಗಿಸುತ್ತಿದ್ದೇವೋ ಅದೇ ಅರ್ಥದಲ್ಲಿ ಜೀವನು ಈಶ್ವರನ ಶರೀರವಾಗಿರುವ ನೆಂದರೆ ಶರೀರವೆಂಬ ಮಾತಿಗೆ ಅರ್ಥವಿಲ್ಲದೆ ಹೋಗುವದು. ಈಶ್ವರನನ್ನು ನನ್ನ ಧ್ಯಾನಕ್ಕೆ ಅಥವಾ ಜ್ಞಾನಕ್ಕೆ ವಿಷಯನೆಂದು ಎಣಿಸುವದಕ್ಕೆ ಆಗುತ್ತದೆ, ಆದರೆ ಎಂದೆಂದಿಗೂ ವಿಷಯಿಯಾಗಿ ಇದ್ದೇತೀರಬೇಕಾಗಿರುವ ನಾನು ನನ್ನ ಆತ್ಮನನ್ನು ಈಶ್ವರನಿಗೆ ವಿಷಯವೆಂದು ಎಣಿಸುವದು ಆಗುವ ಹಾಗೇ ಇಲ್ಲ; ಒಂದು ವೇಳೆ ಇಂಥ ಭಾವನೆಯನ್ನು ಎಣಿಸುವದು ಆಗುವ ಹಾಗೇ ಇಲ್ಲ; ಒಂದು ವೇಳೆ ಇಂಥ ಭಾವನೆಯನ್ನು ಮನಸ್ಸಿಗೆ ಬಲತ್ಕಾರದಿಂದ ತಂದುಕೊಂಡರೂ ಅದು ಆ ಬಲತ್ಕಾರವನ್ನೊಲ್ಲದೆ ಮತ್ತೂ ತಾನು ವಿಷಯಿಯೇ ಆಗಿಬಿಡುವದು. ಈಶ್ವರ, ನಾನು ಆತನ ವಿಷಯನಾಗಿರುವೆನೆಂಬ ಕಲ್ಪನೆ- ಈ ಎರಡೂ ಈಗಿನ ನನ್ನ ಅರಿವಿಗೆ ವಿಷಯವಾಗಿಬಿಡುವವು. ನಾನು ಆಗದ್ದನ್ನು ಕಲ್ಪಿಸುವದಕ್ಕೆ ವ್ಯರ್ಥಪ್ರಯತ್ನವನ್ನು

ಮಾಡಿದೆನೆಂಬುದು ಇದರಿಂದ ವ್ಯಕ್ತವಾಗುವದು. ಸಂಬಂಧವೆಂಬುದು ಎರಡು ಬೇರೆಬೇರೆಯಾಗಿರುವ ಕೋಟಿಗಳಿಗೆ ಅಥವಾ ವಿಷಯಗಳಿಗೆ ಮಾತ್ರ ಇರಬಹುದು; ಆದರೆ ಜೀವನಿಗೂ ಸರ್ವವ್ಯಾಪಕವಾದ ಈಶ್ವರನಿಗೂ ಯಾವ ಸಂಬಂಧವನ್ನೂ ಕಲ್ಪಿಸುವದಕ್ಕೆ ಬರುವದಿಲ್ಲ, ಏಕೆಂದರೆ ಇವರಿಬ್ಬರಲ್ಲಿ ಯಾರೂ ವಿಷಯ ಸ್ವಭಾವದವರಲ್ಲ.

ರಾಮಾನುಜರು 'ಶರೀರ'ವೆಂಬ ಮಾತಿಗೆ ಇರುವ ಬೇರೆ ಬೇರೆ ಅರ್ಥಗಳನ್ನು ಪ್ರಯತ್ನಪೂರ್ವಕವಾಗಿ ಚರ್ಚೆಗೆ ತಂದು (1) ಸಂಪೂರ್ಣವಾಗಿ ಅಧೀನದಲ್ಲಿದ್ದು ಕೊಂಡಿರುವದು (2) ಶರೀರಿಯಾದ ಜೀವನ ಪ್ರವೃತ್ತಿಗೂ ಭೋಕ್ತೃತ್ವಕ್ಕೂ ಸಾಧನವಾಗಿರುವದು - ಎಂಬರ್ಥದಲ್ಲಿ ಅದನ್ನುಪಯೋಗಿಸುವದಾಗಿ ನಿಶ್ಚಯಿಸಿ ಕೊಂಡಿರುತ್ತಾರೆ. ಆದರೆ ಈಶ್ವರನಿಗೂ ಶರೀರಿಗೂ ಈ ರೀತಿಯಾಗಿ ಹೋಲಿಕೆಯನ್ನು ಕೊಟ್ಟಿರುವದರಿಂದಲೂ ಕೆಲವು ಅನರ್ಥಗಳುಂಟು. ಏಕೆಂದರೆ ಶರೀರಿಗೆ ಆಯಾ ಅವಯವವು ಇದ್ದಾಗ ಮಾತ್ರವೇ ಕೆಲಸದಲ್ಲಿ ತೊಡಗುವದಕ್ಕೆ ಆಗುತ್ತದೆ; ಅದರ ಸೌಖ್ಯವೂ ರಕ್ಷಣೆಯೂ ಅದರ ಅವಯವಗಳನ್ನೇ ಹೊಂದಿಕೊಂಡಿರುತ್ತವೆ ಮತ್ತು ಹೊರಗಿನಿಂದ ನೋಡಿದಾಗ ಶರೀರಿಯು ತನ್ನ ಅವಯವಗಳನ್ನು ವಶದಲ್ಲಿಟ್ಟು ಕೊಂಡಿರುವದೆಂದು ಕೊಚ್ಚಿಕೊಳ್ಳಬಹುದೇ ಹೊರತು ಆಹಾರವನ್ನು ಅರಗಿಸಿಕೊಳ್ಳು ವದು, ರಕ್ತವನ್ನು ಸಂಚರಿಸುವಂತೆ ಮಾಡಿಕೊಳ್ಳುವದು, ಜೀರ್ಣ ರಸಗಳನ್ನು ಸಿದ್ಧಗೊಳಿಸುವದು - ಇವುಗಳು ಯಾವವನ್ನೂ ಅದು ಮಾಡಿಕೊಳ್ಳಲು ಅರಿಯದು. ಇವೆಲ್ಲ ಪ್ರಕೃತಿಯೆಂಬ ಮತ್ತೊಂದು ಹೆಚ್ಚಿನ ಶಕ್ತಿಗೆ ಒಳಪಟ್ಟಿರುತ್ತವೆ; ಆ ಶಕ್ತಿಗೆ ಶರೀರಿಯು ಕಂ ಕಿಂ ಎನ್ನದೆ ದಾಸನಾಗಿದ್ದುಕೊಂಡಿರುವದು. ಅನುಭವದಲ್ಲಿ ಕಂಡುಬರುವ ಈ ವಿಷಯಗಳನ್ನು ಆಧಾರವಾಗಿಟ್ಟುಕೊಂಡು ವಿಚಾರಮಾಡುವದಕ್ಕೆ ಹೊರಟರೆ ಈಶ್ವರನು ತನ್ನ ಶರೀರವಾಗಿರುವ ಜೀವಜಡಗಳನ್ನು ಆಳುವದು ಹೇಗೆ, ಆ ಸಂದರ್ಭದಲ್ಲಿ ಶರೀರಕ್ಕೆ ಹೊಂದಿಕೊಂಡೇ ಅವನ ವ್ಯಕ್ತಿತ್ವವು ಇರಬೇಕಾಗುವದರಿಂದ ಅವನಿಗೆ ಸ್ವಾತಂತ್ರ್ಯವು ಅಳಿಯದೆ ಉಳಿಯುವ ಬಗೆಯಾದರೂ ಹೇಗೆ?- ಎಂಬುದು ತಿಳಿಯುವ ಹಾಗಿಲ್ಲ. ಇದೂ ಅಲ್ಲದೆ, ಈಶ್ವರನು ಸಚೇತನನಾಗಿದ್ದರೆ ಜೀವನು ಅವನಿಗೆ ವಿಷಯನಾಗಿ ಮಾತ್ರ ಇರಬೇಕು; ಹೀಗಿದ್ದರೂ ಜೀವನು ಅವನಿಗೆ ಶರೀರ ವಾಗಿರುವದಾದರೆ ಇದೇ ಯುಕ್ತಿಯಿಂದ ಜೀವನೂ ದೇವರನ್ನು ತನ್ನ ಶರೀರವೆನ್ನ ಬಹುದಾಗುವದು. ಏಕೆಂದರೆ ಆತನೂ ತನಗೆ ವಿಷಯವಾಗಿರುತ್ತಾನೆ. ಹೇಗೇ ಆಗಲಿ, ಈಶ್ವರನಿಗೆ ಜೀವನ ವಿಷಯಿತ್ವವೆಂಬುದು ಎಂದಿಗೂ ದಕ್ಕುವ ಹಾಗಿಲ್ಲ. ಜೀವನು ತನಗೆ

ತಾನು ಹೇಗಿರುವನೋ ಹಾಗೆ ಜೀವನಿಗೆ ಆತನು ಎಂದಿಗೂ ಆಗಲಾರನು. ಮತ್ತೂ ಒಂದು ವಿಚಾರ. ಶರೀರವೆಂಬುದು ಚೇತನಕ್ಕೆ ವ್ಯಕ್ತಿತ್ವವನ್ನು ಕೊಟ್ಟು ಅದರ ಸ್ವಾತಂತ್ರ್ಯಕ್ಕೆ ಅಡ್ಡಿಯಾಗಿಬಿಡುತ್ತದೆ; ಇದನ್ನು ರಾಮಾನುಜಾಚಾರ್ಯರವರೇ (ಬ್ರಹ್ಮಸೂತ್ರ 3-2-5ರ ಭಾಷ್ಯದಲ್ಲಿ) ಒಪ್ಪಿಕೊಂಡಿರುತ್ತಾರೆ. ಇದರಿಂದ ಜೀವವು ವ್ಯಕ್ತಿಗಳ ನಡುವೆ ತಾನೂ ಒಂದು ವ್ಯಕ್ತಿಯಾಗುವದಿಲ್ಲವೆ? ಇದರಂತೆ ಈಶ್ವರನೂ ಶರೀರವುಳ್ಳಾತನಾದರೆ ಆತನೂ ವ್ಯಕ್ತಿಯಾಗಬೇಕಾಯಿತು. ಆದರೆ ಅವನು ಈ ಶರೀರದಿಂದ ತಾನೊಬ್ಬ ಅನೇಕ ಭಾಗಗಳಿಂದ ಕೂಡಿದನೆನಿಸಿಕೊಂಡಾನೇ ಹೊರತು ಒಟ್ಟಾಗಿರುವ ಆ ತನ್ನಂತೆ ಇರುವ ಬೇರೆ ವ್ಯಕ್ತಿಗಳ ಜೊತೆಯಲ್ಲಿರುವವನಾಗುವದೇ ಇಲ್ಲವಲ್ಲ!

ಇದಲ್ಲದೆ ಈ ಪಕ್ಷದಲ್ಲಿ ಈಶ್ವರನಲ್ಲಿ ಎಲ್ಲವೂ ಅಂತರ್ಗತವಾಗುವ ಅವಕಾಶವೇ ಇರುವದಿಲ್ಲ; ಏಕೆಂದರೆ ಆತನು ನನಗೆ ವಿಷಯನಾಗಿರುವದರಿಂದ ನನ್ನನ್ನು ತನ್ನಲ್ಲಿ ಅಂತರ್ಭೂತನಾಗಿ ಮಾಡಿಕೊಳ್ಳಲಾರನು. ಹೀಗೆ ಎಲ್ಲವೂ ಸೇರಿ ಒಂದಾಗಿರುವ ದೆಂಬುದು ಆಲಂಕಾರಿಕಭಾಷೆಯಾಯಿತೇ ಹೊರತು ಯುಕ್ತಿಸಿದ್ಧವಾಗಲಿಲ್ಲ. ಏಕೆಂದರೆ ದೇವರಿಗೆ ಶರೀರವುಂಟೆಂಬ ಈ ಕಲ್ಪಿತಸಂಬಂಧವನ್ನು ಕರಗಿಸಿ, ಮೇಲ್ಮುಸುಕನ್ನು ತೆಗೆದು ಹಾಕಿದರೆ ರಾಮಾನುಜರ ಸಿದ್ಧಾಂತಕ್ಕೂ ಮಧ್ವಾಚಾರ್ಯರ ಶುದ್ಧ ನಾನಾತ್ವವಾದಕ್ಕೂ ಐಕ್ಯವೇ ಇರುವದೆಂಬುದು ನಿಸ್ಸಂದಿಗ್ಧವಾಗಿ ಹೊರಬೀಳುವದು; ಆಮೇಲೆ ಉಳಿಯುವ ಈಶ್ವರ, ಜೀವರು, ಜಡಪ್ರಕೃತಿ- ಇವು ನಿತ್ಯವಾಗಿ ನಿಸ್ಸಹಾಯವಾಗಿ ಎಂದೆಂದಿಗೂ ಒಂದರ ಮುಖವನ್ನು ಒಂದು ಅತ್ಯಂತ ವಿರುದ್ಧದೃಷ್ಟಿಯಿಂದ ನೋಡುತ್ತಾ ಕುಳಿತು ಕೊಳ್ಳುವವು. ಇವುಗಳನ್ನು ಕೂಡಿಸುವದಕ್ಕೆ ಯಾವದೊಂದೂ ತತ್ತ್ವವಿರುವದಿಲ್ಲ. ಒಂದೊಂದೂ ಸ್ವತಂತ್ರವಾಗಿ ಅನೇಕತ್ವವೇ ಸಿದ್ಧವಾಗಿ ಕೊನೆಗೆ ಅವ್ಯವಸ್ಥೆಯೇ ನಿಲ್ಲುವದು.

ಈಶ್ವರನಿಗೂ ಅವನ ಶರೀರಕ್ಕೂ ಇರುವ ಈ ನಿತ್ಯಸಂಬಂಧವು ಈಶ್ವರನಿಗೇ ಅನನುಕೂಲವಾಗಿರುತ್ತದೆ. ಏಕೆಂದರೆ ಶರೀರವು ತನ್ನ ಇರವಿಗಾಗಿ ಈಶ್ವರನನ್ನು ನಂಬಿಕೊಂಡಿರುತ್ತದೆಯಾದರೆ ಈಶ್ವರನೂ ತನ್ನ ಬಾಳು ಮಾಡುವದಕ್ಕೆ ತನ್ನ ಶರೀರವನ್ನು ನಂಬಿಕೊಂಡೇ ಇರಬೇಕಾಗುವದು. ನಿಷ್ಪಕ್ಷಪಾತವಾಗಿ ನೋಡಿದರೆ ಸಂಬಂಧ ವೆಂಬುದು ಸಂಬಂಧಿಗಳೆರಡಕ್ಕೂ ಒಂದೇ ಬಗೆಯಲ್ಲಿ ಸೇರಿರತಕ್ಕದ್ದು. ಶರೀರವೆಂಬುದು ಈಶ್ವರನ ಒಂದು ಪ್ರಕಾರ ಮಾತ್ರವಾಗಿದ್ದು ಆ ಪ್ರಕಾರವು ಸತ್ಯವಾಗಿದ್ದರೆ, ಆ ಪ್ರಕಾರದಲ್ಲಿ ಆಗುವ ಮಾರ್ಪಾಡುಗಳೆಲ್ಲ ದೇವರಿಗೂ ಆಗಿಯೇ ತೀರಬೇಕು. ಈ

ಯುಕ್ತಿ ಸಿದ್ಧವಾದ ತೀರ್ಪನ್ನು ತಪ್ಪಿಸಿಕೊಳ್ಳುವದಕ್ಕೆ ಯಾವ ಹಾದಿಯೂ ಇಲ್ಲ. ಸ್ಪಿನೋಸನು ದೇವರಿಗೆ ಎರಡು ಪ್ರಕಾರಗಳಿರುವವೆಂದು ಹೇಳಿರುವದು ನಿಜ; ಆದರೆ ಅವು ಕಲ್ಪಿತಪ್ರಕಾರಗಳಾಗಿರುತ್ತವೆ, ನಾವು ದೇವರಲ್ಲಿ ಕಲ್ಪಿಸುವ ಪರಿಚ್ಛೇದಗಳೇ ಆ ಪ್ರಕಾರಗಳಾಗಿವೆ.

ಸೃಷ್ಟಿಪ್ರಲಯಗಳೆಂಬಿವು ದೇವರ ಶರೀರದ ಸಂಕೋಚವಿಕಾಸಗಳಿಂದಾಗುವ ವೆಂದು ರಾಮಾನುಜಾಚಾರ್ಯರು ವಿವರಿಸಿರುವದರಲ್ಲಿಯೂ ಒಂದು ಸಹಜ ದೌರ್ಬಲ್ಯವಿದೆ. ಮೊದಲು ನೋಡಿ; ಆತನ ಶರೀರವಾದ ಜೀವಜಡಗಳಲ್ಲಿ ಜೀವರುಗಳು ಸಂಕೋಚವಿಕಾಸವಾಗುವದೆಂಬುದು ಆಗದ ಮಾತು. ಏಕೆಂದರೆ ಈ ವಿಕಾರಗಳು ಜಡವಸ್ತುಗಳಿಗೆ ಮಾತ್ರ ಸಂಬಂಧಪಟ್ಟವುಗಳಾಗಿವೆ. ಎರಡನೆಯದಾಗಿ, ದೇವರಿಗೂ ಆತನ ಶರೀರಕ್ಕೂ ಒಂದು ಸಂಬಂಧವಿದೆಯೆಂದು ಒಪ್ಪಿಕೊಂಡ ಮೇಲೆ ದೇವರ ಶರೀರದಲ್ಲಿ ಆಗುವ ಮಾರ್ಪಾಡುಗಳ ಫಲವು ಆತನಿಗೆ ಆಗುವ ಹಾಗಿಲ್ಲವೆಂದು ಹೇಳುವದಕ್ಕೂ ಬರುವದಿಲ್ಲ. ಈ ಸಂಬಂಧವನ್ನಾದರೂ ತೀರ ಸಣ್ಣದು ಮಾಡಿ ಇಲ್ಲವಾಗಿಸಿಬಿಡಬೇಕು, ಇಲ್ಲವೆ ದೇವರ ಸ್ವಭಾವವು ನಿರ್ವಿಕಾರ ವಾದದ್ದೆಂಬುದನ್ನಾದರೂ ಪೂರ್ತಿಯಾಗಿ ಕೈಬಿಡಬೇಕು. ಮೂರನೆಯದಾಗಿ, ದೇವರಿಗೆ ಶರೀರವೆಂಬುದು ಸ್ವಾಭಾವಿಕವಾಗಿಯಾದರೂ ಇರಬೇಕು. ಇಲ್ಲವೆ ಆವಶ್ಯಕವಾಗಿರಬೇಕು; ಆವಶ್ಯಕವಾಗಿದ್ದರೆ ಅವನು ಅಪೂರ್ಣನೆಂದಾಗುವದು. ಸ್ವಾಭಾವಿಕವಾದರೆ ಅದರ ಕೈಗೆ ಸಿಕ್ಕಿ ನರಳುತ್ತಾನೆಂದಾಗುವದು. ಹೇಗಾದರೂ ದೇವರಲ್ಲಿ ನಮಗೆ ಮರುಕ ಹುಟ್ಟುವದೇ ಹೊರತು ಮೆಚ್ಚಿಕೆಯಾಗಲಿ ಪೂಜ್ಯ ಬುದ್ಧಿಯಾಗಲಿ ಉಂಟಾಗಲಾರದು.

ಇದಲ್ಲದೆ ರಾಮಾನುಜರ ಕಲ್ಪನೆಗೆ ಆಧಾರವಾಗಿ ದೃಷ್ಟಾಂತವಾಗಿರುವ ಶರೀರಿಯೆಂಬುವದು ದೇಶದಲ್ಲಿದ್ದುಕೊಂಡು ಕಾಲದಲ್ಲಿ ಬೆಳೆಯುತ್ತಾ ಹೋಗುತ್ತಿರು ವದು; ಎಂದರೆ ಶರೀರಿಯಾದದ್ದು ದೇಶಕಾಲಗಳಲ್ಲಿ ಬಾಳುಮಾಡಿಕೊಂಡಿರುವದು. ದೇವರು ಶರೀರಿಯಾದರೆ ಹೀಗೆಯೇ ಆತನೂ ದೇಶಕಾಲಪರಿಚ್ಛಿನ್ನನಾಗಿರ ಬೇಕಾಗುವದು, ರಾಮಾನುಜಸಿದ್ಧಾಂತವು ಈ ಪರಿಸ್ಥಿತಿಗೆ ಕಟ್ಟುಬಿದ್ದೇ ತೀರಬೇಕು; ಏಕೆಂದರೆ ಅವರ ಮತದಲ್ಲಿ ಜೀವರೂ ಜಡವೂ ಪರಮೇಶ್ವರನ ಅಂಶಗಳಾಗಿವೆ. ಅಂಶಗಳೆಂದರೆ ದೇಶಪರಿಚ್ಛೇದವಿದೆಯೆಂದರ್ಥ, ಸಂಕೋಚವಿಕಾಸಗಳೆಂದರೆ ಕಾಲ ಪರಿಚ್ಛೇದವಿದೆಯೆಂದರ್ಥ. ರಾಮಾನುಜರು ಕಾಲದೇಶಗಳನ್ನು ವಿಚಾರಕ್ಕೇ ತೆಗೆದು ಕೊಳ್ಳದೆ ಇರುವದು ಶೋಚನೀಯವಾಗಿದೆ. ಅವುಗಳು ಪ್ರಪಂಚಕ್ಕೆ

ಹೊರಬ್ಬಾಗಿರುವವೆಂತಲೂ ಅವುಗಳ ತತ್ತ್ವವನ್ನು ವಿವರಿಸುವ ಆವಶ್ಯಕತೆಯೇನೂ ಇರುವುದಿಲ್ಲ ವೆಂತಲೂ ಅವರು ಭಾವಿಸಿರುವಂತೆ ತೋರುವದು. ಸೃಷ್ಟಿಪ್ರಲಯ ಗಳೆಂಬಿವು ಈಶ್ವರನ ಲೀಲೆಯೆಂದೂ ಈ ಲೀಲೆಯು ಕಾರ್ಯಕಾರಣ ನಿಯಮವನ್ನು ಲೆಕ್ಕಕ್ಕೆ ತರುವದಿಲ್ಲವೆಂದೂ ಅವರು ಹೇಳಿರುತ್ತಾರೆ.

(ಇಲ್ಲಿಂದ ಮುಂದಿನ ಸ್ವಲ್ಪ ಭಾಗವನ್ನು ಕನ್ನಡಿಸಿಲ್ಲ. ಇಂದ್ರಿಯಗಳು ತೋರಿಸುವದೇ ಸತ್ಯ, ಅರ್ಥಕ್ರಿಯಾಕಾರಿಯಾದದ್ದೇ ಸತ್ಯ, ದೇಶಕಾಲಗಳಲ್ಲಿರುವದೇ ಸತ್ಯ. ಬಾಧಿತವಾಗಿದ್ದು ಸತ್ಯ- ಎಂಬ ನಾಲ್ಕು ಪಕ್ಷಗಳನ್ನು ಇದರಲ್ಲಿ ಖಂಡಿಸಿರುತ್ತದೆ.)

ಹೊರಗಿನ ಪ್ರಪಂಚವು ಸತ್ಯವೆಂಬುದಕ್ಕೆ ಮಧ್ವಾಚಾರ್ಯರು ಕೂಡ ಯಾವ ಹೊಸ ಯುಕ್ತಿಗಳನ್ನೂ ಕೊಟ್ಟಿರುವದಿಲ್ಲ; ರಾಮಾನುಜಸಿದ್ಧಾಂತದ ವಿಷಯದಲ್ಲಿ ಹೇಳಿರುವದನ್ನೆಲ್ಲ ಒಂದಿಷ್ಟೂ ಹೆಚ್ಚು ಕಡಿಮೆಮಾಡದೆ ಅವರ ಸಿದ್ಧಾಂತಕ್ಕೂ ಅನ್ವಯಿಸಬಹುದಾಗಿರುತ್ತದೆ.

ರಾಮಾನುಜಾಚಾರ್ಯರಾಗಲಿ ಮಧ್ವಾಚಾರ್ಯರಾಗಲಿ ದುಃಖವೆಂಬುದು ಕರ್ಮದ ಫಲವೆಂದು ಹೇಳಿರುವದು ವಾದಕ್ಕೆ ಸರಿಹೋಗುವದಾದರೂ ತೃಪ್ತಿಕರ ವೆಂದು ಹೇಳುವಂತಿಲ್ಲ. ಈಶ್ವರನೆಂದರೆ ಸಗುಣನೇ ಎಂದು ಪಟ್ಟುಹಿಡಿದಿರುವ ಈ ಸಿದ್ಧಾಂತದಲ್ಲಿ ಇದೊಂದು ದೋಷವು. ಈಶ್ವರನ ಯೋಗಕ್ಷೇಮವನ್ನು ನೋಡಿಕೊಳ್ಳುವದು, ಎಂದರೆ ಈಶ್ವರನು ಸರ್ವಶಕ್ತನು, ಸರ್ವಜ್ಞನು, ದಯಾ ಘನನು- ಎಂಬುದನ್ನು ಗಟ್ಟಿಭದ್ರವಾಗಿ ನಿಲ್ಲಿಸಿಕೊಳ್ಳುವದು, ಪ್ರತಿಯೊಬ್ಬ ತಟಸ್ಥೇಶ್ವರ ವಾದಿಯ ಕರ್ತವ್ಯವಾಗಿರುತ್ತದೆ. ಆದರೆ ಮನುಷ್ಯನ ಬಾಳಿನಲ್ಲಿ ದುಃಖಕ್ಕೆ ಅವಕಾಶವನ್ನು ಕೊಟ್ಟಿರುವದೆಂಬುದು ಈಶ್ವರನ ಶಕ್ತಿಗೆ, ಅಥವಾ ದಯೆಗೆ, ಅಥವಾ ಈ ಎರಡಕ್ಕೂ ಕಲಂಕವನ್ನೊಡ್ಡುವಂಥದ್ದಾಗಿರುತ್ತದೆ. ಈಶ್ವರನ ಈ ಸ್ವಭಾವಶಕ್ತಿಗಳನ್ನು ಉಪಯೋಗಿಸದಂತೆ ಕರ್ಮವೆಂಬ ತಪ್ಪಿಸಿಕೊಳ್ಳಲಶಕ್ಯವಾದ ಹೊರಗಿನ ಲಗಾಮನ್ನು ತಂದು ಬಗಿಯುವದೆಂದರೆ ಈಶ್ವರನನ್ನು ಆತನ ಗದ್ದುಗೆಯಿಂದ ಇಳಿಸಿ ಬಡಮಾನವನ ಭರವಸೆಯನ್ನೆಲ್ಲ ಮಣ್ಣುಪಾಲು ಮಾಡಿದಂತೆಯೇ ಸರಿ. ಶಂಕರಾಚಾರ್ಯರೂ ಈ ಕರ್ಮವಾದವನ್ನು ಸ್ವಲ್ಪದೂರ ಅಂಗೀಕರಿಸಿರುತ್ತಾರೆ; ಆದರೆ ನಿಜವಾಗಿ ಇದು ಸಾಲದೆಂದು ಅವರಿಗೆ ಕಂಡುಬಂದಕೂಡಲೆ ಅವರು ಇದನ್ನು ಕೈಬಿಟ್ಟುಬಿಟ್ಟರು. (ಬ್ರ॥ಸೂ॥2-1-33ರ ಭಾಷ್ಯವನ್ನು ನೋಡಿ.)

ಹೀಗಿದ್ದರೂ ಸಂಸಾರದಲ್ಲಿ ಕಂಗೆಟ್ಟಿರುವ ಜೀವರಿಗೆ ಶಾಂತಿಯೊದಗಲೆಂದು ತಂದೊದಗಿಸಿರುವ ಧರ್ಮಪಂಥವೆಂಬ ದೃಷ್ಟಿಯಿಂದ ನೋಡಿದರೆ, ರಾಮಾನುಜರ ಸಿದ್ಧಾಂತವು ಮನುಷ್ಯ ಕಲ್ಪಿತವಾದ ಮತ್ತೆ ಯಾವ ಪಂಥಕ್ಕೂ ಕಡಿಮೆಯೆನಿಸಿ ರುವದಿಲ್ಲವೆಂದು ಒಪ್ಪಲೇಬೇಕು. ಶರಣಾಗತಿ, ಕೈಂಕರ್ಯ - ಎಂಬ ಸಾಧನಗಳನ್ನು ಇದರಲ್ಲಿ ಒತ್ತಿ ಹೇಳಿರುವದರಿಂದ ಇದು ಜೀವನವನ್ನು ಘನತೆಗೇರಿಸಿ ಪವಿತ್ರ ಗೊಳಿಸುವಂತಿದೆ. ಜಾತಿಕುಲಗಳನ್ನು ಲೆಕ್ಕಿಸದೆ ಎಲ್ಲರಲ್ಲಿಯೂ ಅವರು ತೋರಿಸಿದ ಪ್ರೇಮ, ಸಹಾನುಭೂತಿ, ಸರ್ವರೂ ಸಹೋದರರೆಂಬ ಭಾವನೆಯಿಂದ ತುಂಬಿ ತುಳುಕುವ ಅವರ ಉಪದೇಶಗಳು, ತಮ್ಮನ್ನು ಜನರು ಎಷ್ಟೇ ಹಿಂಸಿಸಿ ಕಷ್ಟಕ್ಕೀಡು ಮಾಡಿದರೂ ಬಿಡದೆ ಮಾನವರ ಉದ್ಧಾರಕ್ಕೆಂದು ಅವರು ಮಾಡಿರುವ ಅಸ್ವಾರ್ಥ ಪ್ರಯತ್ನಗಳು - ಇವನ್ನೆಲ್ಲ ನೋಡಿದರೆ ಮಾನವಜಾತಿಗೆ ಉಪಕಾರವೆನ್ನಸಗಿದವರಲ್ಲಿ ಅವರಿಗೆ ಅಗ್ರಸ್ಥಾನವು ದೊರೆಯುವಂತಿರುವದು. ಅವರ ಸಿದ್ಧಾಂತದಲ್ಲಿ ಕಾಣಬರುವ ಕೊರತೆಗಳು ಅವರ ದೃಷ್ಟಿಮಾಂದ್ಯದಿಂದೇನೂ ಆದವುಗಳಲ್ಲ - ಏಕೆಂದರೆ ಅವರ ಬುದ್ಧಿಶಕ್ತಿಯು ಅತ್ಯಂತ ಮೇಲ್ತರದ್ದಾಗಿತ್ತು; ಅವರು ಬಿಚ್ಚುವದಕ್ಕೆಂದು ಹೊರಟ ಸಮಸ್ಯೆಯ ಸ್ವಾಭಾವಿಕ ದೋಷದಿಂದಲೇ ಆ ಕೊರತೆಗಳುಂಟಾಗಿರುವವು, ತಟಸ್ಥೇಶ್ವರ ವಾದವನ್ನೂ ಯುಕ್ತಿಯನ್ನೂ ಹೊಂದಿಸಬೇಕೆಂಬುದು ಅವರ ಪ್ರಯತ್ನವು; ಇದು ಎಂದಿಗೂ ಆಗತಕ್ಕದ್ದಲ್ಲ; ಏಕೆಂದರೆ ಈಶ್ವರವಾದವು ಶ್ರದ್ಧೆಯ ರಾಜ್ಯಕ್ಕೆ ಸೇರಿದ್ದಾಗಿದೆ. ಅವರು ತಮ್ಮ ಪ್ರಯತ್ನದಲ್ಲಿ ಜಯಶೀಲರಾಗಲಿಲ್ಲವೇಕೆಂದರೆ ಅದರಲ್ಲಿ ಯಾರಿಗೂ ಜಯವಾಗುವ ಸಂಭವವೇ ಇಲ್ಲ. ಆದರೆ ಇಷ್ಟುಮಾತ್ರದಿಂದ ಅವರ ಜೀವನದ ಅಥವಾ ಅವರ ಪ್ರಯತ್ನದ ಘನತೆಗೆ ಎಳ್ಳಷ್ಟೂ ಕುಂದುಂಟಾಗುವ ಹಾಗಿಲ್ಲ.

*****

# ಪರಿಶಿಷ್ಟ

## ಗ್ರಂಥದಲ್ಲಿ ಪ್ರಕಾಶನಗೊಂಡಿರುವ ಲೇಖನಗಳ ವಿವರ

| ಸಂಖ್ಯೆ | ವಿಷಯ | ಸಂಪುಟ | ಸಂಚಿಕೆ | ಇಸವಿ |
|---|---|---|---|---|
| 1. | ಕೆ.ಎ.ಕೃಷ್ಣಸ್ವಾಮಿ ಅಯ್ಯರ್‌ರವರು | 14 | 7 | 1923 |
| 2. | ಅನಂತಪ್ಪ ಮಹಾರಾಜರು - 1 | 12 | 10 | 1941 |
| | ಅನಂತಪ್ಪ ಮಹಾರಾಜರು - 2 | 13 | 1 | 1941 |
| | ಅನಂತಪ್ಪ ಮಹಾರಾಜರು - 3 | 13 | 2 | 1941 |
| 3. | ಶಂಕರಭಗವತ್ಪಾದರವರು | 1 | 2 | 1923 |
| 4. | ಅಪ್ಪಂಭಟ್ಟರೂ ರಾಮುವೂ | 1 | 1 | 1923 |
| 5. | ಗೋಪಾಲಶೆಟ್ಟರ ಮನೆಯಲ್ಲಿ ಮದುವೆ | 1 | 3 | 1923 |
| 6. | ವೃಷಭಾಲಯ -1 | 1 | 4 | 1923 |
| | ವೃಷಭಾಲಯ -2 | 1 | 5 | 1923 |
| 7. | ರೈಲುಪ್ರಯಾಣ-1 | 1 | 8 | 1923 |
| | ರೈಲುಪ್ರಯಾಣ-2 | 1 | 10 | 1923 |
| 8. | ಗವೀಪುರದ ಮಾಹಾತ್ಮ್ಯ-1 | 2 | 1 | 1924 |
| | ಗವೀಪುರದ ಮಾಹಾತ್ಮ್ಯ-2 | 2 | 2 | 1924 |
| | ಗವೀಪುರದ ಮಾಹಾತ್ಮ್ಯ-3 | 2 | 3 | 1924 |
| | ಗವೀಪುರದ ಮಾಹಾತ್ಮ್ಯ-4 | 2 | 4 | 1924 |
| 9. | ಮನೋರಾಜ್ಯ-1 | 3 | 1 | 1931 |
| | ಮನೋರಾಜ್ಯ-2 | 3 | 2 | 1931 |
| | ಮನೋರಾಜ್ಯ-3 | 3 | 3 | 1931 |
| 10. | ಶ್ರೀ ರಾಮಾನುಜಾಚಾರ್ಯರ ಸಿದ್ಧಾಂತ -1 | 4 | 9/10 | 1933 |
| | ಶ್ರೀ ರಾಮಾನುಜಾಚಾರ್ಯರ ಸಿದ್ಧಾಂತ -2 | 4 | 11 | 1933 |
| | ಶ್ರೀ ರಾಮಾನುಜಾಚಾರ್ಯರ ಸಿದ್ಧಾಂತ -3 | 4 | 12 | 1933 |

*****

# VEDANTA OR SCIENCE OF REALITY

## ಪರಮಾರ್ಥ ತತ್ತ್ವಶಾಸ್ತ್ರ

ದಿವಂಗತ ಕೆ. ಎ. ಕೃಷ್ಣಸ್ವಾಮಿಅಯ್ಯರ್‌ರವರು ತಮ್ಮ ಜೀವನದಲ್ಲಿ ಪಕ್ವವಾದ ಯುಕ್ತ್ಯನುಭವಗಳ ಫಲವಾಗಿ ಲೋಕಕ್ಕೆ ನೀಡಿದ ಅಮೋಘ ಕೊಡುಗೆಯಿದು. ಅವಸ್ಥಾತ್ರಯ ಸಾಕ್ಷಿಯನ್ನು ಕುರಿತ ಮನನ ಮಾತ್ರದಿಂದಲೇ ಹೇಗೆ ಬ್ರಹ್ಮಸಾಕ್ಷಾತ್ಕಾರವನ್ನು ಹೊಂದಿ ಕೃತಾರ್ಥರಾಗಬಹುದೆಂಬುದನ್ನು ಮನಗಾಣಿಸುವ ಅಮೂಲ್ಯ ಗ್ರಂಥ. ಈ ಅಮೋಘಗ್ರಂಥದಲ್ಲಿ ವೇದಾಂತಪ್ರಕ್ರಿಯೆಯಾದ ಅಧ್ಯಾರೋಪಾಪವಾದದ ಅವಾಂತರಪ್ರಕ್ರಿಯೆ ಯಾದ ಅವಸ್ಥಾತ್ರಯಪರೀಕ್ಷೆಯ ಸಾರಸರ್ವಸ್ವವೂ ಇರುತ್ತದೆ. ಜೀವನದ ಜಟಿಲವಾದ ಪ್ರಶ್ನೆಗಳನ್ನೆಲ್ಲ ಸುಲಭವಾಗಿ ಬಿಡಿಸಿಕೊಂಡು ಪರಮ ಪುರುಷಾರ್ಥವನ್ನು ಪಡೆದುಕೊಳ್ಳುವ ರೀತಿಯನ್ನು ಅತ್ಯಂತಹೃದಯಂಗಮವಾದ ಪ್ರಕಾರದಿಂದ ಬೋಧಿಸುವ ಗ್ರಂಥವೆಂದರೆ ಇದೊಂದೇ.

ಪಾಶ್ಚಾತ್ಯವಿಚಾರಕ್ರಮದಲ್ಲಿಯೇ ಮುಳುಗಿ ತೇಲುತ್ತಿರುವ ನಮ್ಮ ಸಕಲ ವಿದ್ಯಾನಿಲಯಗಳ ಗ್ರಾಜುಏಟರುಗಳಿಗೂ ಪಾಶ್ಚಾತ್ಯತತ್ತ್ವವಿಚಾರಪದ್ಧತಿಗಳನ್ನು ಪರಿಪೂರ್ಣಗೊಳಿಸುವ ಉಪಾಯವನ್ನು ಹುಡುಕುತ್ತಿರುವ ಪಶ್ಚಿಮದೇಶದ ತತ್ತ್ವವಿಚಾರಕರುಗಳಿಗೂ ಅವಶ್ಯವಾಗಿ ಹತ್ತಿರವಿರಲೇಬೇಕಾದ ಕೈಪಿಡಿಯಿದು. ಈ ಗ್ರಂಥಕ್ಕೆ ರಾಷ್ಟ್ರಪತಿಗಳಾಗಿದ್ದ ಡಾ|| ರಾಧಾಕೃಷ್ಣನ್‌ರವರು ಪೀಠಿಕೆಯನ್ನು ಬರೆದಿರುತ್ತಾರೆ. 1930ರಲ್ಲಿ ಮೊದಲ ಮುದ್ರಣವಾಯಿತು. ಆ ಮುದ್ರಣದ ದೋಷಗಳನ್ನೆಲ್ಲ ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳವರು ಗ್ರಂಥವನ್ನು ಆಮೂಲಾಗ್ರವಾಗಿ ಸಂಶೋಧನೆಮಾಡಿ, ಒಂದು ಪೀಠಿಕೆಯನ್ನೂ, ಶಬ್ದಾನುಕ್ರಮಣಿಕೆಯನ್ನೂ ಬರೆದಿರುತ್ತಾರೆ. **ಪರಮಾರ್ಥದ ಮರ್ಮವನ್ನೆಲ್ಲ ಬಿಡಿಸಿ ಹೇಳುವ ಅಮೋಘ ಗ್ರಂಥವು.**

**(ಮೂರನೇ ಮುದ್ರಣ, 1/8 ಡೆಮ್ಮಿ, 551 ಪುಟ)**

# COLLECTED WORKS OF K. A. KRISHNASWAMI IYER

ಈ ಗ್ರಂಥದಲ್ಲಿ ಕೆ.ಎ. ಕೃಷ್ಣಸ್ವಾಮಿಅಯ್ಯರ್‌ರವರು ನೀಡಿರುವ ಉಪನ್ಯಾಸಗಳು ಮತ್ತು ಪತ್ರಿಕೆಯಲ್ಲಿ ಬರೆದಿರುವ ಲೇಖನಗಳು, ಪ್ರಕಟವಾಗದ ಲೇಖನಗಳನ್ನೆಲ್ಲ ಸಂಗ್ರಹಿಸಲಾಗಿದೆ. ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀ ಸ್ವಾಮಿಗಳವರು 1969ರಲ್ಲಿ ಪ್ರಕಟಿಸಿದ್ದರು. ವೇದಾಂತದ ಅನೇಕ ಸೂಕ್ಷ್ಮ ವಿಷಯಗಳನ್ನು ಕುರಿತ ಪ್ರಬುದ್ಧಲೇಖನಗಳ ಸಂಗ್ರಹ.

**(ದ್ವಿತೀಯ ಮುದ್ರಣ, ಕ್ರೌನ್, 330 ಪುಟ)**

ಶ್ರೀ ಕೆ.ಎ. ಕೃಷ್ಣಸ್ವಾಮಿಅಯ್ಯರ್ ಅವರು ಪ್ರೌಢಶಾಲೆಯ ಮುಖ್ಯೋಪಾಧ್ಯಾಯರಾಗಿ ಸೇವೆಸಲ್ಲಿಸುತ್ತಿದ್ದರು. ಚಿಕ್ಕಬಳ್ಳಾಪುರ, ತುಮಕೂರು, ಬೆಂಗಳೂರುಗಳಲ್ಲಿ ಸೇವೆಸಲ್ಲಿಸಿದ ಅವರು, ಕೊನೆಗೆ ಬೆಂಗಳೂರನ್ನು ತಮ್ಮ ವಾಸಸ್ಥಳವನ್ನಾಗಿ ಮಾಡಿಕೊಂಡಿದ್ದರು. ಅವರು ಸಂಸ್ಕೃತ, ತಮಿಳು, ತೆಲುಗು, ಇಂಗ್ಲಿಷ್ ಮತ್ತು ಕನ್ನಡ- ಎಂಬೀ ಪಂಚಭಾಷೆಗಳಲ್ಲಿ ಪ್ರವೀಣರಾಗಿದ್ದರು. ಪಾಂಡಿತ್ಯ, ಪ್ರತಿಭೆ, ಪರೋಪಕಾರ, ದಾನಶೀಲತೆ, ನಿರಾಡಂಬರತೆ ಮುಂತಾದ ಅನೇಕ ಸದ್ಗುಣಗಳು ಅವರಲ್ಲಿ ಮನೆಮಾಡಿಕೊಂಡಿದ್ದವು. ಶ್ರೀಸಚ್ಚಿದಾನಂದೇಂದ್ರ ಸರಸ್ವತೀಸ್ವಾಮಿಗಳವರು ಕೂಡ ಅವರ ಸಂಪರ್ಕಕ್ಕೆ ಬಂದು, ಅವರ ವ್ಯಕ್ತಿತ್ವದಿಂದ ಪ್ರಭಾವಿತರಾಗಿ ವೇದಾಂತಮಾರ್ಗದಲ್ಲಿ ಹೆಚ್ಚಿನದನ್ನು ಸಾಧಿಸಿದರು. ಕೃಷ್ಣಸ್ವಾಮಿಅಯ್ಯರ್ ಅವರು ಬೆಂಗಳೂರಿನಲ್ಲಿದ್ದ ಅನಂತಪ್ಪಮಹಾರಾಜರೆಂಬ ಸಾಧುಮಹಾತ್ಮರ ಸತ್ಸಂಗವನ್ನು ಪಡೆದುಕೊಂಡು ವೇದಾಂತದಲ್ಲಿ ತುಂಬಾ ಮುಂದುವರಿದರು. ಅಯ್ಯರ್ ಅವರು ರಚಿಸಿರುವ Vedanta or The Science of Reality ಎಂಬ ಗ್ರಂಥ ವೇದಾಂತಕ್ಷೇತ್ರದಲ್ಲಿ ವಿಶ್ವಮಾನ್ಯವಾಗಿದೆ.

'ವೇದಾಂತ ಲೇಖನಗಳು' ಎಂಬೀ ಗ್ರಂಥವು ತನ್ನ ಹೊಸತನದಿಂದಾಗಿ, ಅಪೂರ್ವವಾದ ಕಲ್ಪನಾಲೋಕದಲ್ಲಿ ಜಿಜ್ಞಾಸುಗಳನ್ನು ವಿಹಾರಮಾಡಿಸಿರುವ ದೆಸೆಯಿಂದಾಗಿ ವೇದಾಂತದರಂಗದಲ್ಲೊಂದು ಮೈಲಿಗಲ್ಲಾಗಿದೆ. ಕೃಷ್ಣಸ್ವಾಮಿಅಯ್ಯರ್ ಅವರ ಪ್ರತಿಭಾವಿಲಾಸಕ್ಕೂ ಕವಿಹೃದಯಸಂಪನ್ನತೆಗೂ ಈ ಗ್ರಂಥ ಸಾಕ್ಷಿ ನುಡಿಯುತ್ತಿದೆ. ಕನ್ನಡ ಭಾಷೆಯ ಮೇಲೆ ಅಯ್ಯರ್ ಅವರಿಗಿದ್ದ ಪ್ರೀತಿ, ಪರಿಣತಿಗಳಿಗೂ ಈ ಗ್ರಂಥವು ಪ್ರತಿನಿಧಿಯಾಗಿದೆ. 'ಶ್ರೀರಾಮಾನುಜಾಚಾರ್ಯರ ಸಿದ್ಧಾಂತ' ಎಂಬ ಅವರ ಲೇಖನವನ್ನಂತೂ ಉಸಿರು ಬಿಗಿಹಿಡಿದುಕೊಂಡೇ ಓದಬೇಕು. ಏನು ಪಾಂಡಿತ್ಯ ಏನು ಧೈರ್ಯ ! 'ಅಧ್ಯಾತ್ಮ ಪ್ರಕಾಶ'ದ ಪುರಾತನ ಸಂಪುಟಗಳಲ್ಲಿ ಬಚ್ಚಿಟ್ಟುಕೊಂಡು ಕುಳಿತಿದ್ದ ಈ ಲೇಖನಗಳು ಗ್ರಂಥಶರೀರವನ್ನು ತೊಟ್ಟು ವೇದಾಂತಜಿಜ್ಞಾಸುಳಿಗೆ ಮಾರ್ಗದರ್ಶಿಯಾಗಿವೆ.

**ಬೆಲೆ ರೂ. 30/-**